ಬುಧವಾರ, ಡಿಸೆಂಬರ್ 11, 2024 | ₹ 7.00
www.prajavani.net
prajavani.net prajavani prajavani prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿಶ್ವದಾಖಲೆ...
ಹ್ಯಾಂಡಲ್ ಹಿಡಿಯದೇ, ಅತಿ ದೂರ ಬೈಕ್ ಚಾಲನೆ ಮಾಡುವ ಮೂಲಕ ಆರ್ಮಿ ಸರ್ವಿಸಸ್ ಕೋರ್‌ನ ಹವಾಲ್ದಾರ್ ಮನೀಶ್ ಬೆಂಗಳೂರಿನಲ್ಲಿ ಮಂಗಳವಾರ ವಿಶ್ವದಾಖಲೆ ನಿರ್ಮಿಸುವ ಯತ್ನ ನಡೆಸಿದರು

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಎಸ್.ಎಂ. ಕೃಷ್ಣ

ಜನನ: 01-05-1932 **ನಿಧನ: 10-12-2024**

ನವ ಕರ್ನಾಟಕದ ಆವಿಷ್ಕಾರಕ್ಕೆ ಮುನ್ನುಡಿ ಬರೆದು, ವಿಶ್ವ ಭೂಪಟದಲ್ಲಿ ಬೆಂಗಳೂರಿನ ಹೆಗ್ಗುರುತು ಮೂಡಿಸಿದ, ಸರ್ವರಿಗೂ ಆದರ್ಶನೀಯರಾಗಿ ಭೌತಿಕವಾಗಿ ನಮ್ಮನ್ನಗಲಿದ ಅಮರ ಚೇತನ ಶ್ರೀ ಎಸ್.ಎಂ. ಕೃಷ್ಣ ರವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ: 11-12-2024 ರ ಬುಧವಾರ ಬೆಳಿಗ್ಗೆ 8:00 ಗಂಟೆಗೆ ಬೆಂಗಳೂರಿನ ಸದಾಶಿವನಗರದ ನಿವಾಸದಿಂದ ಶ್ರೀಯುತರ ಪಾರ್ಥೀವ ಶರೀರವನ್ನು ಟೌನ್‌ಹಾಲ್ ಮೂಲಕ ಮೈಸೂರು ಸರ್ಕಲ್, ಕೆಂಗೇರಿ, ಬಿಡದಿ, ರಾಮನಗರ, ಚನ್ನಪಟ್ಟಣ ಮುಖಾಂತರ ಹೊರಟು, ಬೆಳಿಗ್ಗೆ 10:30 ಗಂಟೆಗೆ ಸ್ವಗ್ರಾಮ ಸೋಮನಹಳ್ಳಿಯಲ್ಲಿ ಸಾರ್ವಜನಿಕರಿಗೆ ಅಂತಿಮ ದರ್ಶನವನ್ನು ಏರ್ಪಡಿಸಲಾಗಿದೆ. ಮಧ್ಯಾಹ್ನ ಸುಮಾರು 3:00 ಗಂಟೆಗೆ ಅಂತಿಮ ಸಂಸ್ಕಾರದ ವಿಧಿ ವಿಧಾನವನ್ನು ನೆರವೇರಿಸಲಾಗುತ್ತದೆ.

ಇಂತಿ ದುಃಖತಪ್ತರು

ಶ್ರೀಮತಿ ಪ್ರೇಮ ಎಸ್.ಎಂ. ಕೃಷ್ಣ ರವರು ಮತ್ತು ಕುಟುಂಬ ವರ್ಗದವರು

ಶ್ರೀಮತಿ ಉಷಾ ಮತ್ತು ಡಿ.ಕೆ. ಶಿವಕುಮಾರ್ ರವರು ಹಾಗೂ ಕುಟುಂಬ ವರ್ಗದವರು

(ಅಧ್ಯಕ್ಷರು:- ನ್ಯಾಷನಲ್ ಎಜುಕೇಶನ್ ಫೌಂಡೇಷನ್)

ಎಸ್.ಎಂ. ಕೃಷ್ಣ ರವರ ಅಭಿಮಾನಿಗಳು

ಹಿಯರ್‌ಜ್ಯಾಪ್™
47 YEARS OF TRUST
130+ EXPERIENCE CENTRES PAN INDIA
ಯಾವುದೇ ಸಂದರ್ಭದಲ್ಲಿಯೂ
ಸ್ಪಷ್ಟವಾಗಿ ಕೇಳಿ,
AI ಹಿಯರಿಂಗ್ ಏಡ್ ನೊಂದಿಗೆ
PHILIPS
ಖಾತರಿಪಡಿಸಿದ ರಿಯಾಯಿತಿ
ಹೆಚ್ಚಿನ ವಾರಂಟಿ
0% EMI ಸೌಲಭ್ಯ
ತಕ್ಷಣ ನಿಮ್ಮ ಮನೆಯಲ್ಲಿ ಶ್ರವಣ ಪರೀಕ್ಷೆಗಾಗಿ ಬುಕ್ ಮಾಡಿ
BOOK AN APPOINTMENT NOW
9659 455 455
PHILIPS Authorized dealer
Google Rating ★★★★★
Google Play
App Store
ಬೆಂಗಳೂರಿನಲ್ಲಿ ನಮ್ಮ ಶಾಖೆಗಳು:
ಈಸ್ಟ್ ಪಾಯಿಂಟ್ ಹಾಸ್ಪಿಟಲ್ • ಎಚ್‌ಎಸ್‌ಆರ್ ಲೇಔಟ್ • ಇಂದಿರಾ ನಗರ • ಜಯ ನಗರ
ಕಲ್ಯಾಣ ನಗರ • ನಾಗರಬಾವಿ • ಆರ್‌ಆರ್ ನಗರ • ಸದಾಶಿವ ನಗರ • ವಿಜಯನಗರ • ವೈಟ್‌ಫೀಲ್ಡ್ • ಯಲಹಂಕ
ಕರ್ನಾಟಕ | ಮಹಾರಾಷ್ಟ್ರ | ಕೇರಳ | ತಮಿಳುನಾಡು | ಆಂಧ್ರ ಪ್ರದೇಶ | ತೆಲಂಗಾಣ | ಪಶ್ಚಿಮ ಬಂಗಾಳ | ಬಿಹಾರ | ಜಾರ್ಖಂಡ್ | ಛತ್ತೀಸ್ಗಢ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಎಐನ ದೊಡ್ಡ ಹೊಟ್ಟೆಗೆ ಈಗಿನ ಡೇಟಾ ಸಾಲದೆ ಸಿಂಥೆಟಿಕ್ ಡೇಟಾವನ್ನು ಉಣಿಸಲಾಗುತ್ತಿದೆಯಂತೆ!

ಬಸ್ ಹರಿದು ಏಳು ಮಂದಿ ಸಾವ 13

‘ಸಂಸದೀಯ ಪ್ರಜಾಪ್ರಭುತ್ವಕ್ಕಾಗಿ ಹೋರಾಟ’ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,510	24,610	₹80,950 (ಬೆಂಗಳೂರು)	₹99,100 (ಬೆಂಗಳೂರು)	84.85

ಕೊನೆಗೊಂಡ ಕೃಷ್ಣ ಪರ್ವ

ಬೆಂಗಳೂರಿನ ಸದಾಶಿವನಗರದ ನಿವಾಸದಲ್ಲಿ ಇರಿಸಲಾಗಿದ್ದ, ಹಿರಿಯ ಮುತ್ಸದ್ದಿ ಎಸ್.ಎಂ.ಕೃಷ್ಣ ಅವರ ಪಾರ್ಥಿವ ಶರೀರಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಂಗಳವಾರ ನಮಿಸಿದರು ಪ್ರಜಾವಾಣಿ ಚಿತ್ರ

• ವೈ.ಗ. ಜಗದೀಶ್

ಬೆಳೆಯುವ ಮಕ್ಕಳಿಂದ ಹೊಳೆಯುವ ಬೆಂಗಳೂರಿನ ವರೆಗೆ, ಮಹಿಳೆಯರ ಭವಿಷ್ಯದಿಂದ ಉದ್ಯಮಿಗಳ ಹಿತದವರೆಗೆ, ಆಡಳಿತ ಸುಧಾರಣೆಯ ಜತೆಗೆ ಹಿಂದುಳಿದ ಪ್ರದೇಶಗಳ ಉದ್ಧಾರದವರೆಗಿನ ಸುವಿಶಾಲ ಕನಸನ್ನು ಸಾಕಾರಗೊಳಿಸಿ ‘ಕರ್ನಾಟಕ ಮಾದರಿ’ ರೂಪಿಸಿದ ದ್ರಷ್ಟಾರ ಎಸ್.ಎಂ. ಕೃಷ್ಣ ‘ಯುಗ’ದ ಪರದೆ ಸರಿದಿದೆ.

ಆಕರ್ಷಕ ವ್ಯಕ್ತಿತ್ವ, ಅದಕ್ಕೆ ತಕ್ಕಂತೆ ದಿರಿಸು, ಅಳೆದು ತೂಗಿದ ಪದಗಳಷ್ಟನ್ನೇ ಹರಿಯಬಿಡುವ ಮಾತಿನ ನಯ, ಕಡು ವಿರೋಧಿಗಳ ಬಗ್ಗೆಯೂ ಕಿಡಿಯಾಡದ ಸಂಭಾವಿತ ಮುತ್ಸದ್ದಿ ಕೃಷ್ಣ. ಹುಟ್ಟು ಶ್ರೀಮಂತಿಕೆ–ವಿದೇಶದಲ್ಲಿ ವ್ಯಾಸಂಗ ಮಾಡಿ, ಮೈಗೂಡಿಸಿಕೊಂಡಿದ್ದ ನಾಜೂಕುತನದಿಂದಾಗಿ ಈ ನೆಲದ ಸೊಗಡಿನ ರಾಜಕೀಯ ಶೈಲಿಗೆ ಒಗ್ಗಿಕೊಳ್ಳಲಾಗದೇ ‘ವೈಟ್ ಕಾಲರ್’ ಆಗಿಯೇ ಉಳಿದು, ಬೆಳೆದವರು.

ಪ್ರಜಾ ಸೋಷಿಯಲಿಸ್ಟ್ ಪಕ್ಷದಿಂದ ಮೊದಲ ಬಾರಿಗೆ ಗೆದ್ದು ಶಾಸನಸಭೆ ಪ್ರವೇಶಿಸಿದರು. ತರುವಾಯ, ಕಾಂಗ್ರೆಸಿಗರಾಗಿ ಇಂದಿರಾ ಗಾಂಧಿ, ದೇವರಾಜ ಅರಸು, ರಾಜೀವ್ ಗಾಂಧಿ, ಸೋನಿಯಾ ಗಾಂಧಿಯವರ ಹತ್ತಿರದ ಒಡನಾಟದ ಫಲವಾಗಿ, ಪ್ರಧಾನಿ ಮತ್ತು ರಾಷ್ಟ್ರಪತಿಯಂತಹ ಸ್ಥಾನಗಳನ್ನು ಬಿಟ್ಟು ರಾಜಕಾರಣದಲ್ಲಿ ಉತ್ತುಂಗ ಎನ್ನಬಹುದಾದ ಎಲ್ಲ ಪಟ್ಟಗಳನ್ನೂ ನಿರ್ವಹಿಸಿದ ಕೀರ್ತಿಯನ್ನು ಮುಡಿಗೆ ಏರಿಸಿಕೊಂಡವರು.

4ನೇ ಪುಟ ನೋಡಿ

ಎಸ್.ಎಂ. ಕೃಷ್ಣ ನಿಧನ



ಬೆಂಗಳೂರು: ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ (93) ಅವರು ಸದಾಶಿವನಗರದ ಸ್ವಗೃಹದಲ್ಲಿ ಮಂಗಳವಾರ ಬೆಳಗಿನ ಜಾವ 2.45ಕ್ಕೆ ನಿಧನರಾದರು.

ವಯೋಸಹಜ ಅನಾರೋಗ್ಯದಿಂದಾಗಿ ಕೆಲಕಾಲದಿಂದ ಬಳಲುತ್ತಿದ್ದ ಅವರು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದರು. ಪತ್ನಿ ಪ್ರೇಮಾ, ಇಬ್ಬರು ಪುತ್ರಿಯರು ಇದ್ದಾರೆ.

ಕೃಷ್ಣ ಅವರ ಸದಾಶಿವನಗರದ ನಿವಾಸದಲ್ಲೇ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಬುಧವಾರ ಬೆಳಿಗ್ಗೆ 8 ಗಂಟೆಯವರೆಗೆ ಇಡಲಾಗಿದೆ. ಹುಟ್ಟೂರಾದ ಮಂಡ್ಯ ಜಿಲ್ಲೆಯ ಮದ್ದೂರಿನ ಸೋಮನಹಳ್ಳಿಯಲ್ಲಿ ಸಂಜೆ 4 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ.

ಜನನ: 1-5-1932 ಮರಣ:10-12-2024

ಇಂದು ಸರ್ಕಾರಿ ರಜೆ: 3 ದಿನ ಶೋಕಾಚರಣೆ

ಎಸ್.ಎಂ. ಕೃಷ್ಣ ನಿಧನದ ಕಾರಣದಿಂದ ರಾಜ್ಯದಾದ್ಯಂತ ಎಲ್ಲ ಸರ್ಕಾರಿ ಕಚೇರಿಗಳು, ಶಾಲೆ ಕಾಲೇಜುಗಳಿಗೆ ಬುಧವಾರ (ಡಿ.11) ಸಾರ್ವಜನಿಕ ರಜೆ ಘೋಷಿಸಲಾಗಿದೆ. ಅಲ್ಲದೆ, ಮೂರು ದಿನಗಳ ಶೋಕಾಚರಣೆಯನ್ನೂ ರಾಜ್ಯ ಸರ್ಕಾರ ಘೋಷಿಸಿದೆ.

ಶೋಕಾಚರಣೆ ಸಮಯದಲ್ಲಿ ಸಾರ್ವಜನಿಕ ಮನೋರಂಜನಾ ಕಾರ್ಯಕ್ರಮಗಳನ್ನು ನಿಷೇಧಿಸಲಾಗಿದೆ. ರಾಜ್ಯ ಸರ್ಕಾರದ ಎಲ್ಲ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧಮಟ್ಟದಲ್ಲಿ ಹಾರಿಸಲಾಗುವುದು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ತಿಳಿಸಿದೆ.

ನುಡಿನಮನ 9 11

ಬೆಳಗಾವಿಯ ಸುವರ್ಣ ವಿಧಾನಸೌಧದ ಎದುರು ಮಂಗಳವಾರ ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ಪೊಲೀಸರು ಲಾಠಿ ಬೀಸಿದರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

2ಎ ಮೀಸಲಾತಿಗೆ ಪಟ್ಟು ಹಿಡಿದ ಪಂಚಮಸಾಲಿಗರು

ಸಂಘರ್ಷಕ್ಕೆ ತಿರುಗಿದ ಮೀಸಲು ಹೋರಾಟ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪಂಚಮಸಾಲಿ ಸಮಾಜದ ಸದಸ್ಯರು 2ಎ ಮೀಸಲಾತಿಗೆ ಆಗ್ರಹಿಸಿ ಇಲ್ಲಿನ ಸುವರ್ಣ ವಿಧಾನಸೌಧದ ಎದುರು ಮಂಗಳವಾರ ನಡೆಸಿದ ಹೋರಾಟ ಹಿಂಸಾರೂಪ ಪಡೆಯಿತು. ರಾಷ್ಟ್ರೀಯ ಹೆದ್ದಾರಿ ಮೇಲೆ ಪೊಲೀಸರು ಹಾಗೂ ಹೋರಾಟಗಾರರ ಮಧ್ಯೆ ಘರ್ಷಣೆ ಉಂಟಾಯಿತು. ಲಾಠಿ ಏಟು, ಕಲ್ಲು ತೂರಾಟದಿಂದ 30ಕ್ಕೂ ಹೆಚ್ಚು ಜನ ಗಾಯಗೊಂಡರು.

ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಸುಮಾರು 20 ಸಾವಿರಕ್ಕೂ ಹೆಚ್ಚು ಜನ ಸಮಾವೇಶಗೊಂಡರು. 5,000 ಟ್ರ್ಯಾಕ್ಟರ್‌ಗಳ ರ‍್ಯಾಲಿಗೆ ಜಿಲ್ಲಾಡಳಿತ ಅನುಮತಿ ನೀಡದ ಕಾರಣ, ಸುವರ್ಣ ವಿಧಾನಸೌಧ ಎದುರಿನ ಕೊಂಡಸಕೊಪ್ಪ ಬೆಟ್ಟದ ಮೇಲೆ ಪ್ರತಿಭಟನಾ ಸಮಾವೇಶ ಮಾಡಲಾಯಿತು.

4ನೇ ಪುಟ ನೋಡಿ

ಯಾರು ಏನು ಹೇಳಿದರು?

ಹೋರಾಟ ಹತ್ತಿಕ್ಕಲು ಕಾಂಗ್ರೆಸ್ ಸರ್ಕಾರದಲ್ಲಿರುವ ನಮ್ಮದೇ ಸಮಾಜದ ಕಿಡಿಗೇಡಿಗಳು ಮಾಡಿಸಿದ ಕೆಲಸವಿದು. ಹೋರಾಟ ಹತ್ತಿಕ್ಕಲಾಗದು
ಬಸನಗೌಡ ಪಾಟೀಲ ಯತ್ನಾಳ, ಶಾಸಕ

ಲಾಠಿಚಾರ್ಜ್ ಮಾಡಿದ್ದು ದೌರ್ಜನ್ಯದ ಪರಮಾವಧಿ. ಸಂವಿಧಾನಕ್ಕೆ ಮಾಡಿದ ಅಪಮಾನ. ಮುಖ್ಯಮಂತ್ರಿ ಕ್ಷಮೆ ಕೇಳಬೇಕು
ಬಸವಜಯ ಮೃತ್ಯುಂಜಯ ಸ್ವಾಮೀಜಿ
ಲಿಂಗಾಯತ ಪಂಚಮಸಾಲಿ ಪೀಠ, ಕೂಡಲಸಂಗಮ

ಮುಖ್ಯಮಂತ್ರಿ ಅವರು ಸಮಾಜಕ್ಕೆ ಗೌರವ ನೀಡಿ ಮನವಿ ಪಡೆಯಬೇಕಿತ್ತು. ನಾವೇ ಭೇಟಿಯಾಗಲು ಬರುತ್ತೇವೆ ಎಂದರೂ ಲಾಠಿಯಿಂದ ನಮ್ಮನ್ನು ಹೊಡೆಸಿದ್ದು ಖಂಡನೀಯ
ಈರಣ್ಣ ಕಡಾಡಿ, ರಾಜ್ಯಸಭೆ ಸದಸ್ಯ

ಸರ್ಕಾರ ಮಾಡಿದ ಈ ಕೃತ್ಯ ರಾಜ್ಯದ ಇತಿಹಾಸದಲ್ಲಿ ಕಪ್ಪುಚುಕ್ಕೆ. ಹೋರಾಟಗಾರರ ಮೇಲೆ, ಸ್ವಾಮೀಜಿ ಮೇಲೇಯೇ ಲಾಠಿ ಬೀಸಿದ್ದಾರೆ
ಅರವಿಂದ ಬೆಲ್ಲದ, ವಿಧಾನಸಭೆ ಉಪನಾಯಕ

ದಾಳಿ: ₹48.55 ಕೋಟಿ ಅಕ್ರಮ ಸಂಪತ್ತು ಪತ್ತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 10 ಅಧಿಕಾರಿಗಳಿಗೆ ಸೇರಿದ 50 ಸ್ಥಳಗಳಲ್ಲಿ ‘ಲೋಕಾ’ ದಾಳಿ
- ಅಧಿಕಾರಿ ಮನೆಯಲ್ಲಿ ₹50 ಲಕ್ಷ ವೈದ್ಯಕೀಯ ಸೀಟುಗಳ ಪಟ್ಟಿ, ರಸೀದಿ ಪತ್ತೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆ ಮತ್ತು ಸಂಸ್ಥೆಗಳ ಹತ್ತು ಅಧಿಕಾರಿಗಳಿಗೆ ಸೇರಿದ ಮನೆ, ಆಪ್ತರ ಮನೆಗಳು ಸೇರಿ ಒಟ್ಟು 50 ಸ್ಥಳಗಳಲ್ಲಿ ಮಂಗಳವಾರ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಒಟ್ಟು ₹48.55 ಕೋಟಿ ಮೌಲ್ಯದ ಅಕ್ರಮ ಸಂಪತ್ತು ಪತ್ತೆ ಮಾಡಿದ್ದಾರೆ.

ಕಲಬುರ್ಗಿ ನಗರಪಾಲಿಕೆಯ ಉಪ ಆಯುಕ್ತ ರಾಮಪ್ಪ ಪಾಂಡು ಜಾಧವ್ ಅವರ ಮನೆಯಲ್ಲಿ ₹50 ಲಕ್ಷ ಮೌಲ್ಯದ ವೈದ್ಯಕೀಯ ಸೀಟುಗಳ ಪಟ್ಟಿ ಮತ್ತು ಅವುಗಳಿಗೆ ಹಣ ಪಾವತಿ ಮಾಡಿರುವ ರಸೀದಿಗಳು ಪತ್ತೆಯಾಗಿವೆ. ಯಾರಿಗಾಗಿ ಆ ಸೀಟುಗಳನ್ನು ಖರೀದಿ ಮಾಡಲಾಗಿದೆ ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಲೋಕಾಯುಕ್ತ ಪೊಲೀಸರು ಹೇಳಿದ್ದಾರೆ. ಉನ್ನತ ಶಿಕ್ಷಣ ಇಲಾಖೆಯ ಉಪ ಕಾರ್ಯದರ್ಶಿ ಏಕೇಶ್ ಬಾಬು ಮತ್ತು ಆಪ್ತರ ಮನೆಗಳಲ್ಲಿ ಒಟ್ಟು ₹22.15 ಲಕ್ಷ ನಗದು ಮತ್ತು ನೋಟು ಎಣಿಸುವ ಯಂತ್ರ ಪತ್ತೆಯಾಗಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಂ.ಸಿ.ಸುನಿಲ್ ಕುಮಾರ್ ಅವರ ಮನೆಯಲ್ಲಿ ಐಷಾರಾಮಿ ಹೋಂ ಥಿಯೇಟರ್ ಇರುವುದು ಪತ್ತೆಯಾಗಿದೆ. ಅಧಿಕಾರಿಗಳ ವಿರುದ್ಧ ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಸಂಪಾದಿಸಿದ ಪ್ರರಣಗಳು ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಇನ್ನಷ್ಟು ಸುದ್ದಿ 8

ಧನಕರ್ ಪದಚ್ಯುತಿಗೆ ‘ಕೈ’ ನೇತೃತ್ವದಲ್ಲಿ ನೋಟಿಸ್

ಜಗದೀಪ್ ಧನಕರ್

ನವದೆಹಲಿ (ಪಿಟಿಐ): ರಾಜ್ಯಸಭೆಯ ಸಭಾಪತಿಯೂ ಆಗಿರುವ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು, ಸದನವನ್ನು ಪಕ್ಷಪಾತಿಯಾಗಿ ನಡೆಸುತ್ತಿರುವ ಆರೋಪದ ಅಡಿಯಲ್ಲಿ ಪದಚ್ಯುತಗೊಳಿಸುವ ಗೊತ್ತುವಳಿ ಮಂಡಿಸಲು ವಿರೋಧ ಪಕ್ಷಗಳು ಮಂಗಳವಾರ ನೋಟಿಸ್ ನೀಡಿವೆ.

ಕಾಂಗ್ರೆಸ್ ಸಂಸದರಾದ ಜೈರಾಮ್ ರಮೇಶ್ ಮತ್ತು ನಾಸೀರ್ ಹುಸೇನ್ ಅವರು ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿ ಪಿ.ಸಿ. ಮೋದಿ ಅವರಿಗೆ ನೋಟಿಸ್ ಸಲ್ಲಿಸಿದ್ದಾರೆ. ಕಾಂಗ್ರೆಸ್, ಆರ್‌ಜೆಡಿ, ಟಿಎಂಸಿ, ಸಿಪಿಐ, ಸಿಪಿಎಂ, ಜೆಎಂಎಂ, ಎಎಪಿ, ಡಿಎಂಕೆ ಪಕ್ಷದ ಅಂದಾಜು 60 ಸದಸ್ಯರು ನೋಟಿಸ್‌ಗೆ ಸಹಿ ಮಾಡಿದ್ದಾರೆ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್ ಹಾಗೂ ಅದರ ಕೆಲವು ಮಿತ್ರಪಕ್ಷಗಳು ಸಲ್ಲಿಸಿರುವ ನೋಟಿಸ್ ತಿರಸ್ಕೃತ ವಾಗುತ್ತದೆ. ತನ್ನ ಕುಕೃತ್ಯಗಳನ್ನು ಮರೆಮಾಚಲು ಕಾಂಗ್ರೆಸ್ ನೋಟಿಸ್ ಸಲ್ಲಿಸಿದೆ.
ಕಿರಣ್ ರಿಜಿಜು, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

ಸಾಂವಿಧಾನಿಕ ಹುದ್ದೆಯನ್ನು ಹೊಂದಿರುವ ಕಾಂಗ್ರೆಸ್ಸಿನ ಪ್ರಮುಖ ನಾಯಕರು ಈ ನೋಟಿಸ್‌ಗೆ ಸಹಿ ಮಾಡಿಲ್ಲ ಎಂದು ಗೊತ್ತಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಬೇರೆ ಬೇರೆ ಪಕ್ಷಗಳ ನಾಯಕರು ಕೂಡ ನೋಟಿಸ್‌ಗೆ ಸಹಿ ಮಾಡಿಲ್ಲ ಎಂದು ಮೂಲಗಳು ಹೇಳಿವೆ.

ವಿರೋಧ ಪಕ್ಷಗಳು ಹಾಗೂ ಧನಕರ್ ನಡುವಿನ ಸಂಬಂಧ ಚೆನ್ನಾಗಿ ಇಲ್ಲದ ವೇಳೆ ಕಾಂಗ್ರೆಸ್ ನೇತೃತ್ವದಲ್ಲಿ ಈ ನೋಟಿಸ್ ಸಲ್ಲಿಸಲಾಗಿದೆ.

ಇನ್ನೊಂದು ಸುದ್ದಿ 8

ಒಳಪುಟಗಳಲ್ಲಿ

ಪ್ರತಿಭಟನೆ, ಕೋಲಾಹಲ; ನಡೆಯದ ಕಲಾಪ 8
ಆರ್‌ಬಿಐ: ಹಣದುಬ್ಬರ ಸವಾಲು 12

180 ವರ್ಷ ಹಳೆಯ ಮಸೀದಿ ಭಾಗಶಃ ಧ್ವಂಸ

• ಸಂಜಯ್ ಪಾಂಡೆ

ಲಖನೌ: ಉತ್ತರ ಪ್ರದೇಶದ ಹಲವು ಮಸೀದಿಗಳಿಗೆ ಸಂಬಂಧಿಸಿದಂತೆ ವಿವಾದಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿ ಇರುವಾಗಲೇ, ಫತೇಪುರ ಜಿಲ್ಲೆಯ 180 ವರ್ಷಗಳಷ್ಟು ಹಳೆಯ ಮಸೀದಿಯೊಂದರ ಒಂದು ಭಾಗವನ್ನುಮಂಗಳವಾರಕೆಡವಲಾಗಿದೆ.

ಫತೇಪುರದಿಂದ 125 ಕಿ.ಮೀ. ದೂರದ ಲಲೌಲಿ ಎಂಬ ಪಟ್ಟಣದ ನೂರಿ ಜಾಮಾ ಮಸೀದಿಯ ಹಿಂಬದಿಯ ಒಂದಿಷ್ಟು ಭಾಗವನ್ನು ಮಂಗಳವಾರ ಬುಲ್ಡೋಜರ್‌ಗಳಿಂದ ಕೆಡವಿಹಾಕಲಾಯಿತು. ಪೊಲೀಸರು ಹಾಗೂ ಪ್ರಾದೇಶಿಕ ಸಶಸ್ತ್ರ ದಳದ ಸಿಬ್ಬಂದಿಯ ಸಮ್ಮುಖದಲ್ಲಿ ಈ ಕಾರ್ಯ ನಡೆಯಿತು.

ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಮಸೀದಿಯ ಹಿಂಬದಿಯ ಗೋಡೆಯನ್ನು ನಿರ್ಮಿಸಲಾಗಿತ್ತು. ರಸ್ತೆ ವಿಸ್ತರಣೆ ಕಾಮಗಾರಿ ನಡೆಯುತ್ತಿರುವುದರಿಂದ ಆ ಭಾಗವನ್ನು ಕೆಡವಲಾಗಿದೆ ಎಂದು ಫತೇಪುರದ ಅಧಿಕಾರಿಯೊಬ್ಬರು ತಿಳಿಸಿದರು.

8ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸುಧಾ, ಮಯೂರ, ಸ್ಪರ್ಧಾವಾಣಿ ಓದಿರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಚೇರಿ, ಅನೆಕ್ಸ್ ಕಟ್ಟಡ-1, ನರಸಿಂಹರಾಜ ಚೌಕ, ಬೆಂಗಳೂರು-560002.

No: BBMP/C.Comm/PSR(G)/ 2593/2024-25 — ದಿನಾಂಕ: 07.12.2024

ನಮೂನೆ- III

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಪಟ್ಟಣ ಮತ್ತು ದೇಶ ಯೋಜನೆ ಕಾಯಿದೆ 1961ರ ಸೆಕ್ಷನ್ 14-ಬಿ ರಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ ಈ ಕೆಳಗಿನ ಷೆಡ್ಯೂಲ್‌ನಲ್ಲಿ ನಮೂದಿಸಿರುವ ರಾಹೆ-35ರ ವರ್ತೂರು ಕೋಡಿಯಿಂದ ವರ್ತೂರು ಸೇತುವೆವರೆಗಿನ ಗುಂಜೂರು ಫೇಸ್-1ರ ಮಾರ್ಗವಾಗಿ ವರ್ತೂರು ರಸ್ತೆಯಿಂದ ಸರ್ಜಾಪುರ ರಸ್ತೆಯವರೆಗೆ ರಸ್ತೆ ಅಗಲೀಕರಣ ಕಾಮಗಾರಿಗೆ ಅನುಮೋದಿತ ಮಾಸ್ಟರ್ ಪ್ಲಾನ್ 2015ರ ಪ್ರಸ್ತಾವನೆಯನ್ನು ಅನುಷ್ಠಾನಗೊಳಿಸಲು 45.00 ಮೀಟರುಗಳಿಗೆ ಅಗಲೀಕರಣಕ್ಕಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಅವಶ್ಯಕವಿರುತ್ತದೆ.

ಈ ಕೆಳಗಿನ ಭೂ/ಕಟ್ಟಡ ಮಾಲೀಕರು ನ್ಯಾಯಯುತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ಮರುವಸತಿ ಕಾಯಿದೆ 2013ರಲ್ಲಿ ಪಾರದರ್ಶಕತೆ ಹಕ್ಕಿನ ಅಡಿಯಲ್ಲಿ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳನ್ನು ಆರಿಸಿಕೊಂಡಿದ್ದಾರೆ. ಭೂ ವಿಸ್ತೀರ್ಣಕ್ಕಿಂತ ಎರಡು ಪಟ್ಟು ಹೆಚ್ಚು ಒಪ್ಪಿಸಿದ ಭೂ ಪ್ರದೇಶಕ್ಕೆ ಮತ್ತು ಎರಡು ಪಟ್ಟು ಒಪ್ಪಿಸಿದ ಕಟ್ಟಡ ಪ್ರದೇಶಕ್ಕೆ ಮತ್ತು ಒಪ್ಪಿಸಿದ ಕಟ್ಟಡದ ಪ್ರದೇಶದ ಮೌಲ್ಯದಿಂದ ಅಂದಾಜಿಸಿದಂತೆ (ಪಿಡಬ್ಲ್ಯೂಡಿ ಮಾನದಂಡಗಳ ಪ್ರಕಾರ) ಕಟ್ಟಡವನ್ನು ನಿರ್ಮಿಸಿದ ಭೂಮಿಯ ಭಾಗಿಸಲಾದ ಮಾರುಕಟ್ಟೆ ಮೌಲ್ಯದ ಅಭಿವೃದ್ಧಿ ಹಕ್ಕುಗಳನ್ನು ಪ್ರಾಧಿಕಾರವು ನೀಡಲಿದೆ.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ಡೆಪ್ಯೂಟಿ ಕಮೀಷನರ್‌ರವರ ಕಚೇರಿ (ಭೂಸ್ವಾಧೀನ & ಟಿಡಿಆರ್), ಮುಖ್ಯ ಕಚೇರಿ, ಬಿಬಿಎಂಪಿ, ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗೆ ಸಂಪರ್ಕಿಸಬಹುದು.

ಡಿಆರ್‌ಸಿ ನೀಡಬೇಕಾದ ಭೂಮಿ/ಕಟ್ಟಡದ ಪ್ರದೇಶ ಮತ್ತು ಭೂ ಮಾಲೀಕರ ಪಟ್ಟಿ.

ಜಿಲ್ಲೆಯ ಹೆಸರು : ಬೆಂಗಳೂರು ನಗರ — ತಾಲ್ಲೂಕಿನ ಹೆಸರು : ಬೆಂಗಳೂರು ಪೂರ್ವ — ಗ್ರಾಮದ ಹೆಸರು : ರಾಮಗೊಂಡನಹಳ್ಳಿ

Sy. No./ Khatha No.	Type of Land		Nature of Land			Dimension of the land/ plot and Extent in Sq.m.		Boundaries of the Land / Plot				Building details			Present activity on Land/Building (Specially specific activity such as Shop, Office, Factory, Apartment, Individual house etc.,	Market (guide-lines) value of the land per Sq.m	Name and address of the owner of the plot/land for which DRC is to be issued/ already issued.
	Vacant	Built-up	Agriculture	Converted Undeveloped	Approved Layout/ Developed Land Building Site	Dimension	Extent	North	South	East	West	Extension in Sq.m	Type of Construction and N. of Floor	Floor Area Ratio			
ಸರ್ವೆ ನಂ. 26/2, ಬಬಿಎಂಪಿ ಖಾತಾ ಕ್ರ.ಸಂ. 1146, ಮುನಿಸಿಪಲ್ ನಂ. 759	ಖಾಲಿ ಜಾಗ			ಪರಿವರ್ತಿತ ಭೂಮಿ		939.37 ಚದರ ಮೀ.		ಸರ್ವೆ ನಂ. 26/1	ಸರ್ವೆ ನಂ. 26/2ರ ಉಳಿಕೆ ಭಾಗ	ಸರ್ವೆ ನಂ. 26/2ರ ಉಳಿಕೆ ಭಾಗ	ರಸ್ತೆ	ಇಲ್ಲ	ಇಲ್ಲ	ಇಲ್ಲ	ಖಾಲಿ	ರೂ. 97,200/-	ಮೆ॥ ಎಸ್6 ಇನ್ಫ್ರಾ, ಪಾಲುದಾರಿಕೆ ಸಂಸ್ಥೆಯಾಗಿದ್ದು, ಇದರ ನೋಂದಾಯಿತ ಕಚೇರಿ ನಂ. 230, ಶ್ರೀ ಸಾಯಿ ಪದ್ಮ ಆರ್ಕೇಡ್, ರಾಮಗೊಂಡನಹಳ್ಳಿ, ವರ್ತೂರು ರಸ್ತೆ, ಬೆಂಗಳೂರು-560066. ಸಂಸ್ಥೆಯ ಪ್ಯಾನ್: ABPFS9916B. ವ್ಯವಸ್ಥಾಪಕ ಪಾಲುದಾರರಾದ ಶ್ರೀ ಟಿ.ವಿ. ಪ್ರಸಾದ್ ಮತ್ತು ಶ್ರೀ ಎನ್. ರಮೇಶ್ ಬಾಬು ಅವರು ಪ್ರತಿನಿಧಿಸುವರು.
ಸರ್ವೆ ನಂ. 26/2, ಬಬಿಎಂಪಿ ಖಾತಾ ಕ್ರ.ಸಂ. 1147, ಮುನಿಸಿಪಲ್ ನಂ. 760	ಖಾಲಿ ಜಾಗ			ಪರಿವರ್ತಿತ ಭೂಮಿ		1023.88 ಚದರ ಮೀ.		ಸರ್ವೆ ನಂ. 26/2ರ ಉಳಿಕೆ ಭಾಗ	ಸರ್ವೆ ನಂ. 26/3	ಸರ್ವೆ ನಂ. 26/2ರ ಉಳಿಕೆ ಭಾಗ	ರಸ್ತೆ	ಇಲ್ಲ	ಇಲ್ಲ	ಇಲ್ಲ	ಖಾಲಿ	ರೂ. 97,200/-	

- ಈ ಆಸ್ತಿಯು ಮಾರುಕಟ್ಟೆ ಮಾರ್ಗಸೂಚಿಗಳ ಮೌಲ್ಯವನ್ನು ಶಾಸನಬದ್ಧ ಸೆಸ್/ಸರ್‌ಚಾರ್ಜ್‌ನ ಪಾವತಿ ಮತ್ತು ಪರಿವರ್ತನೆ ಪ್ರತಿಯನ್ನು ಸಲ್ಲಿಸುವ ಸರ್ಕಾರದ ಆದೇಶ ಸಂಖ್ಯೆ: ನಅಇ 137 ಎಂಎನ್‌ಯು 2024(ಇ), ದಿನಾಂಕ: 09.09.2024 ಮತ್ತು ಸುತ್ತೋಲೆ ಸಂಖ್ಯೆ: ಆಯುಕ್ತರು/ಪಿ.ಎಸ್.ಆರ್.ಜಿ/1802/2024-25, ದಿನಾಂಕ: 21.09.2024 ರ ಪ್ರಕಾರ ಷರತ್ತುಗಳಿಗೆ ಒಳಪಟ್ಟಿರುತ್ತದೆ.
- ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಕೆಳಗೆ ನಿರ್ದಿಷ್ಟಪಡಿಸಿದ ವಿಳಾಸದಲ್ಲಿ ಸಲ್ಲಿಸಬೇಕು:

ವಿಭಾಗೀಯ/ಉಪ-ವಿಭಾಗೀಯ/ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ:
ಉಪ ಆಯುಕ್ತರು, ಭೂಸ್ವಾಧೀನ & ಟಿಡಿಆರ್, 2ನೇ ಮಹಡಿ, ಕೊಠಡಿ ನಂ. 208, ಅನೆಕ್ಸ್ ಕಟ್ಟಡ-3, ಎನ್.ಆರ್. ಚೌಕ, ಬಿಬಿಎಂಪಿ, ಬೆಂಗಳೂರು-560002.

ಸಹಿ/- ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಗ್ರ ವಿ.ವಿ: ಐಐಎಸ್‌ಸಿಗೆ ಸ್ಥಾನ

ಕ್ಯೂಎಸ್ ಶ್ರೇಯಾಂಕ ಪಟ್ಟಿ • ಪರಿಸರ ಶಿಕ್ಷಣದಲ್ಲಿ ಸಾಧನೆ

ನವದೆಹಲಿ (ಪಿಟಿಐ): ಪರಿಸರ ಶಿಕ್ಷಣಕ್ಕೆ ಸಂಬಂಧಿಸಿ ಅಗ್ರಸ್ಥಾನದಲ್ಲಿರುವ ವಿಶ್ವದ 50 ಶಿಕ್ಷಣ ಸಂಸ್ಥೆಗಳಲ್ಲಿ ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್‌ಸಿ) ಒಂದಾಗಿದೆ ಎಂದು ಕ್ಯೂಎಸ್ ಶ್ರೇಯಾಂಕ ಪಟ್ಟಿ ಮಂಗಳವಾರ ತಿಳಿಸಿದೆ.

ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಸುಸ್ಥಿರತೆಗೆ ಸಂಬಂಧಿಸಿ ದೇಶದಲ್ಲಿ ಅಗ್ರ ಸ್ಥಾನದಲ್ಲಿದ್ದು, ಜಾಗತಿಕ ಮಟ್ಟದ 255 ಸಂಸ್ಥೆಗಳ ಪಟ್ಟಿಯಲ್ಲಿ 171ನೇ ಸ್ಥಾನವನ್ನು ಪಡೆದುಕೊಂಡಿದೆ.

ಭಾರತೀಯ ವಿಜ್ಞಾನ ಸಂಸ್ಥೆ

2025ರ ಕ್ಯೂಎಸ್ ಶ್ರೇಯಾಂಕ ಪಟ್ಟಿಯಲ್ಲಿ ಭಾರತದ 78 ವಿಶ್ವವಿದ್ಯಾಲಯಗಳು ಸ್ಥಾನ ಗಳಿಸಿವೆ. ಅದರಲ್ಲಿ 10 ವಿ.ವಿಗಳು ಹಿಂದಿನ ವರ್ಷಗಳಿಗಿಂತ ಸುಧಾರಣೆ ಕಂಡಿದ್ದು, 21 ಸಂಸ್ಥೆಗಳು ಹೊಸದಾಗಿ ಸೇರ್ಪಡೆಗೊಂಡಿವೆ.

ಪರಿಸರ ಸಂಬಂಧಿತ ವಿಚಾರದಲ್ಲಿ ದೆಹಲಿ ಮತ್ತು ಕಾನ್ಪುರ ಐಐಟಿಗಳು ವಿಶ್ವದ ಅಗ್ರ 100 ಶಿಕ್ಷಣಸಂಸ್ಥೆಗಳ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿವೆ.

'ಭಾರತೀಯ ಉನ್ನತ ಶಿಕ್ಷಣ ವಲಯವು ಉತ್ತಮ ಸಾಧನೆ ಮಾಡಿದೆ. ಭಾರತದ ವಿ.ವಿಗಳು ಸುಸ್ಥಿರ ಪರಿಸರದ ಗುರಿಯೊಂದಿಗೆ ಮುನ್ನುಗ್ಗುತ್ತಿವೆ' ಎಂದು ಲಂಡನ್ ಮೂಲದ ಕ್ಯೂಎಸ್ ಸಂಸ್ಥೆಯ ಉಪಾಧ್ಯಕ್ಷ ಬೆನ್ ಸೌಟರ್ ಅವರು ತಿಳಿಸಿದ್ದಾರೆ.

ನಿಮ್ಹಾನ್ಸ್ ಪಾಲಿಟ್ರಾಮಾ ಕೇಂದ್ರಕ್ಕೆ ಅನುಮೋದನೆ ನೀಡಲು ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ನಿಮ್ಹಾನ್ಸ್‌ನ ಬೆಂಗಳೂರು ಉತ್ತರ ಕ್ಯಾಂಪಸ್‌ನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 300 ಹಾಸಿಗೆಗಳ ಸಾಮರ್ಥ್ಯದ ಪಾಲಿಟ್ರಾಮಾ ಕೇಂದ್ರದ ಪ್ರಸ್ತಾವಕ್ಕೆ ಶೀಘ್ರವೇ ಅನುಮೋದನೆ ನೀಡಬೇಕು ಎಂದು ಒತ್ತಾಯಿಸಿ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್. ಮಂಜುನಾಥ್ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸಂಸದ ಡಾ.ಸಿ.ಎನ್.ಮಂಜುನಾಥ್ ಅವರು ನವದೆಹಲಿಯಲ್ಲಿ ಮನವಿ ಸಲ್ಲಿಸಿದರು

'ನಿಮ್ಹಾನ್ಸ್ ಆರಂಭವಾದಾಗ ಪ್ರತಿದಿನ ಅಲ್ಲಿಗೆ ಬರುವ ರೋಗಿಗಳ ಸಂಖ್ಯೆ 250ರಷ್ಟು ಇತ್ತು. ಆದರೆ, ಈಗ ಆ ಸಂಖ್ಯೆ 2,500ಕ್ಕಿಂತಲೂ ಹೆಚ್ಚು. ದೇಶದಲ್ಲಿ ಸಂಭವಿಸುವ ಸಾವುಗಳಿಗೆ ರಸ್ತೆ ಅಪಘಾತವು ಐದನೇ ಅತಿದೊಡ್ಡ ಕಾರಣವಾಗಿದೆ. ಲಕ್ಷಾಂತರ ಜನರು ರಸ್ತೆ ಅಪಘಾತಗಳಲ್ಲಿ ಸಾಯುತ್ತಿದ್ದಾರೆ. ಅಪಘಾತಗಳಲ್ಲಿ ತೀವ್ರವಾಗಿ ಗಾಯಗೊಂಡವರಿಗೆ 'ಗೋಲ್ಡನ್ ಅವರ್'ನಲ್ಲಿಯೇ ಚಿಕಿತ್ಸೆ ನೀಡಿದರಷ್ಟೇ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ, ಜಾಗದ ಕೊರತೆ ಮತ್ತು ಪಾಲಿಟ್ರಾಮಾ ಕೇಂದ್ರ ಇಲ್ಲದೇ ಇರುವುದರಿಂದ ಹಲವು ರೋಗಿಗಳನ್ನು ಬೇರೆ ಆಸ್ಪತ್ರೆಗೆ ಕಳುಹಿಸಲಾಗುತ್ತಿದೆ. ಹೀಗಾಗಿ, ಕೇಂದ್ರ ಸ್ಥಾಪನೆಗೆ ಶೀಘ್ರ ಅನುಮೋದನೆ ನೀಡಬೇಕು' ಎಂದು ಅವರು ಆಗ್ರಹಿಸಿದರು.

'ಈ ಕೇಂದ್ರದ ಸ್ಥಾಪನೆಗೆ ರಾಜ್ಯ ಸರ್ಕಾರವು ಈಗಾಗಲೇ ಭೂಮಿ ಮಂಜೂರು ಮಾಡಿದೆ. ಪಾಲಿಟ್ರಾಮಾ ಕೇಂದ್ರದ ವಿನ್ಯಾಸವನ್ನು ಒಳಗೊಂಡ ಪ್ರಸ್ತಾವವನ್ನು ಹಲವು ಬಾರಿ ಪರಿಷ್ಕರಿಸಲಾಗಿದೆ. ಅದಕ್ಕೆ ಸಂಸ್ಥೆಯ ಆಡಳಿತ ಮಂಡಳಿಯೂ ಒಪ್ಪಿಗೆ ನೀಡಿದೆ. ಕಡತವು ಕೇಂದ್ರ ಹಣಕಾಸು ಸಚಿವಾಲಯದ ಮುಂದಿದೆ' ಎಂದು ಅವರು ತಿಳಿಸಿದರು. 'ಕೇಂದ್ರ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

WALKIN INTERVIEW Bus Captain-Intercity Smart Bus Interview Timings -4pm to 7pm10th, 12th, Graduate candidates can apply Salary-15K to 20K Whatsapp-9962345676

Multiple Vacancy

SESHADRIPURAM INSTITUTIONS
Bengaluru | Mysuru | Tumakuru | Mandya
27, Nagappa Street, Seshadripuram
Bengaluru-560 020. Phone: 22955350.
Website: www.set.edu.in E-mail : info@set.edu.in

Require

Seshadripuram Institute of Technology
Campus No. 4, 5, 6A, 6B & 7A, Kadakola Industrial Area, Kadakola Village, Jaipura Hobli, Mysuru Taluk, Mysuru-571 311

ACCOUNTANT
B. Com with at least 2 years experience with Computer knowledge and Tally

LIBRARY ASSISTANT
Diploma Course offered by the Board of Technical Education. Minimum 1 year working experience in an academic Library. Basic knowledge of using computer and Library Software

OFFICE ASSISTANT
Graduate with at least 2 years experience with Computer knowledge

Eligible candidates may apply in handwritten application along with a detailed resume, passport size photo & copies of testimonials etc., to the **Honorary General Secretary, Seshadripuram Educational Trust, Bengaluru - 560 020 within 7 days through E-mail: info@set.edu.in**

N. R. Pandith Aradhya, President — Dr. Wooday P. Krishna, Honorary General Secretary

Teachers / Professors

BHS HIGHER EDUCATION SOCIETY
No. 35/1, 11th Main, Jayanagar 4th Block, Bangalore - 11.
bhshes_mc@rediffmail.com/Mail ID: 1993.bils@gmail.com
Phone No:080-26933227 Mobile No:8277117926

RECRUITMENT
ASSISTANT PROFESSORS OF LAW (Full Time) for its Bangalore Institute of Legal Studies, R.V. Road, Bangalore-04.

:: QUALIFICATION ::
Masters degree in LAW with minimum 55%. Candidates with teaching experience and NET/SLET/Ph.D have an added advantage.

Interested candidates may send their detailed Cvs along with photocopies of Marks cards / Certificates of work experience etc., to the above address by post or by email to 1993.bils@gmail.com/ bhshes_mc@rediffmail.com within 7 days from the date of this notification. Copy of the application must also be sent to The Registrar, Karnataka State Law University, Navanagar, Hubballi.

Sd/- Secretary

Accounts & Finance

WANTED: CHARTERED ACCOUNTANTS/CA INTER/ ARTICLES COMPLETED; Experienced AUDIT OFFICERS; Graduates with working knowledge of Tally, MS-Word and MS-Excel for a Chartered Accountants' firm. Apply: rangaraju.associates@gmail.com; nkrishnappa@rangaraju-associates.com . Contact-7338454835

Hotel

WANTED RESTAURANT MANAGER, COOKS, ASSISTANT COOKS, WAITERS, CASHIERS. Good Salary + Accommodation. UNCLE'S KITCHEN, Bannerghatta Road. 99000-54468

Drivers

WANTED (YOUNGSTER) DRIVER CUM OFFICE ASSISTANT, FOR REAL ESTATE DEVELOPER OFFFICE LOCATED AT SANJAYNAGAR RMV 2ND STAGE: 9035883017

WANTED: DRIVERS staying around Hebbal & Yeshwanthpur, Basic English and Google Maps, minimum of 5+ yrs exp, for Japanese travels(company duty) Salary CTC-30000+ benefits, PF, ESIC, Bonus, Gratuity, and lunch* Call:9606968866/9606490968.

Wanted

PERSONAL ASSISTANT FEMALE WANTED Experienced. Salary Rs. 50,000 + Incentive. Bangalore. Contact: 8660118916.

DH Classifieds — More value, more impact — ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD
ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036 | +91 9731810277 | +91 9886213331 | 080- 45557163/164

JANATHA EDUCATION SOCIETY®
VIVEKANANDA EDUCATIONAL INSTITUTIONS
Applications are invited for
PHYSICAL EDUCATION DIRECTOR (Male) : M.P.Ed. with 2 - 3 years experience in educational institution.
OFFICE ASSISTANT : Any Degree / Diploma CS/IS/EC Min 3 years experience with computer knowledge.
CARPENTER & PLUMBER (Male) : with Min. 7 years exp.
ACCOUNTS ASSISTANT : (4 posts) - B.Com / M.Com with Min 3 years experience in educational institution.
COMPUTER LAB ASSISTANT (Male) : BCA / B.Sc / Diploma in CS with 2-3 years experience in educational institution.
PA to PRINCIPAL : Any Degree 5-10 years experience with computer knowledge.
Eligible candidates may send their BIO-DATA along with 2 passport-size photos through registered post or in person to The Hon. Secretary to reach him within 10 days or email to jobs@jes-edu.in.
Dr. RAJKUMAR ROAD RAJAJINAGAR, IIND STAGE, BANGALORE - 560055.
Ph.no. – 080 - 23371952 / 6366733434
Sd/- Sri H.C Balakrishna, Hon.President — Sd/- Sri H. G Balagopal, Secretary

REAL ESTATE SELLING

Farm House/ Land/ Resorts

Out-Station

BEAUTIFUL LOCATION Land for sale at Yelagiri Hills. Best suitable for Resorts & villas area. 3.26 Acres. Interested persons may contact:- 8610051071/ 9442894574.

AGRICULTURE LAND and Godown for Sale: 8 Acars @ Gadag Road, Hubli and 1,43,600 sq.ft. Godown @ Harihar. 9481928895

Residential/ Commercial

Srirampura

SALE 30X100 north facing, 2mins from Srirampuram metro, clear title, 18000/sqft, 9739732433

Sites

Banashankari

FOR SALE Banashankari 6th Stage,4th H'Block 30x40,North 2nd Block 40x60,West 4th Block 40x60,North: 9844216344

J P Nagar

SALE SECOND Phase site 20'x50' 2 floor, Four houses 'A' Khatha. Call:- 9886019240/ 080-26623994.

Magadi Road

FOR SALE: 50X90 (4500 Sft) South facing site with oldbuilding at 1-A Main Road, Govindarajanagar (M.C. Layout) Near Hotel Swathi Green Land (Jaimunirao Circle) Bengaluru. Broker's excuse. Contact: 9343432456

7020 & 15300 Sft for Sale at Gollarahatti, Magadi Main Road, North Facing Contact: 9844017031

BUILDERS ESSENTIAL

Doors & Windows

STEEL DOORS with Hardware now available at 13000 contact 9482111666

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager, The Printers (Mysore) Pvt. Ltd. Bengaluru

AUTOMOTIVE

Four Wheelers Selling

Others

COMPANY USED VEHICLES FOR SALE
1) Innova - 3 nos.
2) Maruti Swift Vxi, Omini, Ertigavdi, WagonR
3) Mercedes Benz S class,
4) Volkswagen Polo
Interested persons can share quotations to
Mysore Intercontinental Hotels Pvt Ltd / Bindu Construction.
Reg. Office: JP Corp. # 219/11, 4th Floor, Sadashivanagar, Bangalore-80
Ph: 080 - 35429330

BUSINESS

Business to Business

Finance

WE ARRANGE Mortgage, Purchase, Construction & Completion of Construction, Takeover Loans from Banks. Contact: 9353705002

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

WE arrange Mortgage/ Purchase-Construction & Business loan, from Schedule Banks. Mrs Jyothi 8971132289/ 9380509779.

PUBLIC NOTICE

PUBLIC NOTICE
I, "MUZZAMMIL KHAN @ MUZAMMIL PASHA @ MUZUMIL PASHA @ MUZUMAL PASHA" S/o Late C.L.Habibulla Khan, aged about 51 years, R/ at No.9, Lakshmi Road, Shanthinagar, Bangalore-27, represents that he is the absolute owner of property bearing No.9, Old No.14, Lakshmi Road, Shanthinagar, Bengaluru, bounded on : **East by:** Private Property formerly site No.12, **West by :** Private Property, **North by :** Kariyappa's land and **South by:** Private Road, measuring East to West (71 + 70) /2 feet and North to South 47 feet, totally measuring 3313.5 sq.ft. has agreed to enter into Joint Development Agreement with my clients to develop the Schedule Property into a residential apartments. My client is intending to develop the said property, if any person has any objections for the development and sale of apartments / flats to be constructed in the above said property or such other claim over it, the same may be lodged in writing with supporting documents at the following address **within FIFTEEN DAYS** from the date of publication of this Notice. If there are no objections or claims, etc. received within the time stipulated above it would deems that there is no objections for entering Joint Development Agreement by my client and is free from all encumbrances.
P. Reddy Nagendra Kumar, Advocate,
No.1/4, 1st Floor, Appu Rao Road, Chamarajpet, Bangalore-18.

OTHERS

Auction Sale

UNDER INSTRUCTION from National Institute of Animal Nutrition & Physiology, Adugodi, Bangalore-560030, auction will be held on 12-12-2024 at 11:30 AM, for Harvesting Coconut from 118 coconut bearing Trees auction in NIANP Campus by Auctioneers.

TRAVEL CORNER

ದುಬೈ ಅಬುದಾಬಿ ಶಾರ್ಜ
ದುಬೈ ಶಾಪಿಂಗ್ ಫೆಸ್ಟಿವಲ್
ಜನವರಿ 2025
Orchid
ಆರ್ಕಿಡ್ ಟ್ರಾವಲ್ & ಟೂರ್ಸ್
9900080793 / 9900093613

PERSONAL

Change of Name

I, TANMAY JOGENDRA SHAH F/o.TISHA SHAH R/a#T4-9B, SNN Clermont, Nagawara Kasaba Hobli Bangalore 560045 have changed my minor Daughter's Name from TISHA TANMAY SHAH to TISHA SHAH (DOB:12.10.2007) vide`affidavit dated:10.12.2024 before`Notary J.Anandkumar Bangalore

CHANGE OF NAME
I, **Pallavi B Patil,** R/at Flat No.17123, Prestige Tranquility, Budigere Cross, Off Old Madras Road, Bengaluru 560049, have changed my name from **"Pallavi B Patil"** to **"PALLAVI SRIHARI MALAGI"** after my marriage with **Mr Srihari K. Malagi on 06.12.2024 at Bengaluru, Karnataka,** through an Affidavit sworn before the Notary BV Nagabhushana, Bengaluru on 09.12.2024. Hence, I am known as **"Pallavi Srihari Malagi"** and/or **"Pallavi S. Malagi** for all purposes.

I, VIKAS S/o.Sivashankar (DOB:13.1.1994) R/a.Survey No.97,Plot No.16 and 17,DSR Layout, RameshNagar Behind Government College, Kaggalipura Bengaluru 560116 have changed my`Name to VIKAS SHANKAR vide`affidavit dated:5.12.2024 before`Notary Chethana Bangalore

CHANGE OF NAME
I, **SALMA SULTHANA,** resident of Yadiyur Hobli, Magadi Palya, Kunigal Taluk Tumkur-572142, have changed my name to **FARHATH KHANUM** Vide affidavit dated 07.12.2024 sworn before Notary Gangaraja C B., Bangalore.

Lost

I, VIDYA JS, D/O Siddegowda JM, residing #1269/5, 9th Main, KN Extn, Yeshwantpur, Bangalore 560022 have lost my Diploma Convocation Certificate (ECE) near Majestic. Certificate details: Reg #110EC07058, Certificate #A086480 issued by Department of Technical Education Bangalore. If found contact:- 9986989070

ನಗರದ ಶಾಲಾ ಪ್ರದೇಶಗಳಲ್ಲೇ ಸಾಂದ್ರತೆ ಅಧಿಕ; 2,730 ಮಕ್ಕಳಲ್ಲಿ ಅಸ್ತಮಾಗೂ ಕಾರಣ!

ವಿಷಕಾರಿ ಎನ್‌ಒ2 ಪ್ರಮಾಣ ಹೆಚ್ಚಳ

• ಆರ್. ಮಂಜುನಾಥ್

ಬೆಂಗಳೂರು: ಮಾನವನ ಆರೋಗ್ಯಕ್ಕೆ ಅತಿ ಹಾನಿಕಾರಕವಾದ ನೈಟ್ರೋಜನ್ ಡಯಾಕ್ಸೈಡ್ (ಎನ್‌ಒ2) ಪ್ರಮಾಣ, ವಿಶ್ವ ಆರೋಗ್ಯ ಸಂಸ್ಥೆ ನಿಗದಿಪಡಿಸಿರುವ ಪ್ರಮಾಣಕ್ಕಿಂತ ನಗರದ ಹಲವು ಪ್ರದೇಶಗಳಲ್ಲಿ ಅತಿ ಹೆಚ್ಚಾಗಿದೆ. ಶಾಲಾಗಳಿರುವ ಸ್ಥಳಗಳಲ್ಲೇ ಎನ್‌ಒ2 ಅಧಿಕವಾಗಿದೆ.

ಗ್ರೀನ್ ಪೀಸ್ ಇಂಡಿಯಾ ಸೊಸೈಟಿ ಬಿಡುಗಡೆ ಮಾಡಿರುವ ವರದಿಯ ಪ್ರಕಾರ, 'ವಿಶ್ವಸಂಸ್ಥೆಯ ಮಾರ್ಗಸೂಚಿಯಂತೆ ನಗರದಲ್ಲಿರುವ 13 ಗಾಳಿಗುಣಮಟ್ಟ ಮಾಪನ ಕೇಂದ್ರಗಳ ದತ್ತಾಂಶವನ್ನು ವಿಮರ್ಶೆ ಮಾಡಲಾಗಿದ್ದು, ಎಲ್ಲವೂ ನಿಗದಿಪ್ರಮಾಣಕ್ಕಿಂತ ಹೆಚ್ಚಿವೆ.

ನಗರದ ಇತರೆ ಪ್ರದೇಶಗಳಿಗೆ ಹೋಲಿಸಿದರೆ ನಗರ ರೈಲು ನಿಲ್ದಾಣದಲ್ಲಿ ಮಾಲಿನ್ಯ ಅಧಿಕವಾಗಿದೆ. ವರ್ಷದ 295 ದಿನ ಎನ್‌ಒ2 ಸಾಂದ್ರತೆ ಅತಿಹೆಚ್ಚಾಗಿರುತ್ತದೆ. ಅಲ್ಲದೆ, ಐದು ಶಾಲೆಗಳಿಂದ 500 ಮೀಟರ್ ದೂರವಿರುವ ಗಾಳಿ ಗುಣಮಟ್ಟ ಮಾಪನ ಕೇಂದ್ರಗಳಲ್ಲಿ ಎನ್‌ಒ2 ಪ್ರಮಾಣ ಅಧಿಕವಾಗಿದೆ. 2019ರಲ್ಲಿ 2,730 ಮಕ್ಕಳಲ್ಲಿ ಪತ್ತೆಯಾಗಿರುವ ಅಸ್ತಮಾಗೆ ನಗರದ ವಾತಾವರಣದಲ್ಲಿರುವ ಎನ್‌ಒ2 ಮಾಲಿನ್ಯವೂ ಕಾರಣವಾಗಿದೆ ಎಂದು ವರದಿ ಹೇಳಿದೆ.

ಬಿಟಿಎಂ ಲೇಔಟ್ ಮತ್ತು ಸಿಲ್ಕ್ ಬೋರ್ಡ್‌ನಲ್ಲಿರುವ ಗಾಳಿ ಗುಣಮಟ್ಟ ಮಾಪನ ಕೇಂದ್ರಗಳಲ್ಲಿ ಅತಿಹೆಚ್ಚು ಮಾಲಿನ್ಯ ದಾಖಲಾಗಿದ್ದು, ಈ ಪ್ರದೇಶಗಳಲ್ಲಿ ಎನ್‌ಒ2 ಹೆಚ್ಚಾಗಲು ಸಂಚಾರ ದಟ್ಟಣೆ ಮಾಲಿನ್ಯವೂ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.

ಬೆಂಗಳೂರಿನಲ್ಲಿರುವ 13 ನಿರಂತರ ಆಂಬಿಯೆಂಟ್ ಗಾಳಿ ಗುಣಮಟ್ಟ ಮೇಲ್ವಿಚಾರಣೆ (ಸಿಎಎಕ್ಯುಎಂ) ಕೇಂದ್ರಗಳಲ್ಲಿ ದಾಖಲಾಗಿರುವ ದತ್ತಾಂಶದ ಪ್ರಕಾರ, ಗಾಳಿ ಅತ್ಯಂತ ಕಲುಷಿತಗೊಂಡಿದೆ. ಅದರಲ್ಲಿನ ಎನ್‌ಒ2 ಸಾಂದ್ರತೆ ಅತ್ಯಂತ ಹೆಚ್ಚಾಗಿದ್ದು, ಮಾನವನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಕಳೆದ ಐದು ವರ್ಷಗಳಲ್ಲಿ ನಗರದಲ್ಲಿ ಎನ್‌ಒ2 ಸಾಂದ್ರತೆ ಪ್ರಮಾಣ ಕಡಿಮೆಯಾಗುವ ಯಾವ ಲಕ್ಷಣಗಳೂ ಕಂಡುಬಂದಿಲ್ಲ. ಉಪಗ್ರಹ ಕೇಂದ್ರಿತ ವಿಮರ್ಶೆಯಿಂದ ಎನ್‌ಒ2 ಪ್ರಮಾಣ ವಾತಾವರಣದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ವಾಯುಮಾಲಿನ್ಯದ ದುಷ್ಪಪರಿಣಾಮ ತಡೆಗಟ್ಟಲು ಭಾರತದಲ್ಲಿನ ಮಾನದಂಡಗಳು ಅತ್ಯಂತ ಹಿಂದುಳಿದಿವೆ. ಎನ್‌ಒ2 ನಂತಹ ವಿಷಕಾರಿ ಅಂಶಗಳಿಗೆ ಜಾಗತಿಕವಾಗಿರುವ ಮಾನದಂಡಗಳಿಗಿಂತ ಇಲ್ಲಿ ಕಡಿಮೆ ಕಟ್ಟುನಿಟ್ಟಾಗಿವೆ. ಭಾರತದ ವಾಯುಮಾಲಿನ್ಯ ಮಾನದಂಡಗಳನ್ನು (ಎನ್‌ಎಎಕ್ಯೂಎಸ್) 15 ವರ್ಷದಿಂದ ನವೀಕರಿಸಿಲ್ಲ.

ಗ್ರೀನ್ ಪೀಸ್ ಇಂಡಿಯಾ ಸೊಸೈಟಿ ಬಿಡುಗಡೆ ಮಾಡಿರುವ 'ಬಿಯಾಂಡ್ ನಾರ್ಥ್' ವರದಿಯಲ್ಲಿ, ದೇಶದ ಏಳು ನಗರಗಳಲ್ಲಿನ ಎನ್‌ಒ2 ಪ್ರಮಾಣವನ್ನು ವಿಮರ್ಶಿಸಿ, ಅದರ ಪರಿಣಾಮವನ್ನು ವಿವರಿಸಿದೆ. ವಿಶ್ವ ಆರೋಗ್ಯ ಸಂಸ್ಥೆ ನಿಗದಿಪಡಿಸಿರುವ ಎನ್‌ಒ2 ಪ್ರಮಾಣ 10ಎಂಜಿ/ಎಂ3 ಆಗಿದ್ದು, ಪುಣೆಯಲ್ಲಿ ಇದರ ಪ್ರಮಾಣ 37 ಆಗಿದೆ. ಜೈಪುರದಲ್ಲಿ 36, ಕೋಲ್ಕತ್ತದಲ್ಲಿ 28, ಮುಂಬೈನಲ್ಲಿ 26, ಬೆಂಗಳೂರಿನಲ್ಲಿ 23, ಹೈದರಾಬಾದ್‌ನಲ್ಲಿ 23, ಚೆನ್ನೈನಲ್ಲಿ 15 ಆಗಿದೆ.

ಎಲ್ಲೆಲ್ಲಿ ಎಷ್ಟೆಷ್ಟು ಎನ್‌ಒ$_2$ ಪ್ರಮಾಣ ದಾಖಲು? (ಎಂಜಿ/ಎಂ^{3})



(ವಿಶ್ವ ಆರೋಗ್ಯ ಸಂಸ್ಥೆ ನಿಗದಿಪಡಿಸಿರುವ ಪ್ರಮಾಣ 10 ಎಂಜಿ/ಎಂ3)

- ಐದು ವರ್ಷಗಳಿಂದ ಹೆಚ್ಚುತ್ತಲೇ ಇರುವ ಎನ್‌ಒ2
- 15 ವರ್ಷದಿಂದ ಬದಲಾಗದ ಮಾನದಂಡ
- ಗ್ರೀನ್ ಪೀಸ್ ಇಂಡಿಯಾ ಸೊಸೈಟಿ ವರದಿ
- 13 ಮಾಪನ ಕೇಂದ್ರಗಳ ದತ್ತಾಂಶ ವಿಮರ್ಶೆ

ವರ್ಷದ ಎಷ್ಟು ದಿನ ಎನ್‌ಒ2 ಸಾಂದ್ರತೆ ಹೆಚ್ಚು?
(ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ಒಂದು ದಿನವೂ ಹೆಚ್ಚಿರಬಾರದು)



ಎನ್‌ಒ2 ದುಷ್ಪರಿಣಾಮ

- ಎನ್‌ಒ2 ಮಾನವ ದೇಹ ಸೇರುವುದರಿಂದ ಉಸಿರಾಟದ ವ್ಯವಸ್ಥೆಗೆ ಹಾನಿ ಉಂಟುಮಾಡಲಿದ್ದು, ಕೆಮ್ಮು, ಉಬ್ಬಸ, ಉಸಿರಾಟಕ್ಕೆ ತೊಂದರೆಯುಂಟು ಮಾಡುತ್ತದೆ. ಅಸ್ತಮಾವನ್ನು ವೃದ್ಧಿಸಲಿದ್ದು, ಮಕ್ಕಳಲ್ಲಿ ಉಸಿರಾಟದ ಸೋಂಕುಗಳು ಹೆಚ್ಚಾಗಲಿವೆ
- ದೀರ್ಘಕಾಲ ಎನ್‌ಒ2 ಸೇವನೆಯಿಂದ ಶ್ವಾಸಕೋಶದ ಸೋಂಕುಗಳು ಹೆಚ್ಚಾಗಲಿವೆ. ಶ್ವಾಸಕೋಶದ ಕಾರ್ಯಾಚರಣೆಯನ್ನೂ ಇದು ಕಡಿತಗೊಳಿಸುತ್ತದೆ
- ಎನ್‌ಒ2ದಿಂದ ಹಲವು ರೀತಿಯ ಅಲರ್ಜಿ ಸೋಂಕುಗಳು ಉಂಟಾಗುತ್ತವೆ. ಅಕಾಲಿಕ ಮರಣಕ್ಕೂ ಕಾರಣವಾಗುತ್ತದೆ
- ಕಣ್ಣು ಮತ್ತು ಚರ್ಮದ ಸೋಂಕಿಗೆ ಕಾರಣವಾಗುವುದಲ್ಲದೆ, ವ್ಯಕ್ತಿಯ ವಾಸನೆ ಗ್ರಹಿಸುವ ಸಾಮರ್ಥ್ಯ ಕಳೆಯುತ್ತದೆ

ಎಂದಿನಂತೆ ಮೆಟ್ರೊ ಕಾರ್ಯಾಚರಣೆ

ಬೆಂಗಳೂರು: 'ನಮ್ಮ ಮೆಟ್ರೊ' ಸೇವೆ ಬುಧವಾರವೂ ಎಂದಿನಂತೆ ಇರಲಿದೆ ಬಿಎಂಆರ್‌ಸಿಎಲ್ ಪ್ರಕಟಣೆಯಲ್ಲಿ ತಿಳಿಸಿದೆ.

ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ನಿಧನದ ಕಾರಣ ಸರ್ಕಾರ ರಜೆ ಘೋಷಣೆ ಮಾಡಿದೆ. ಮೆಟ್ರೊ ಸಂಚಾರ ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ವದಂತಿ ಹರಡಿದೆ. 'ಮೆಟ್ರೊ ಸೇವೆ'ಯಲ್ಲಿ ಯಾವುದೇ ವ್ಯತ್ಯಯ ಇರುವುದಿಲ್ಲ. ವೇಳಾಪಟ್ಟಿಯಂತೆ ಮೆಟ್ರೊ ಚಲಿಸುತ್ತದೆ' ಎಂದು ಹೇಳಿದೆ.

ಕಣಿಮಿಣಿಕೆ: 14ರಂದು ಫ್ಲ್ಯಾಟ್ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮೈಸೂರು ರಸ್ತೆಯಲ್ಲಿರುವ ಕಣಿಮಿಣಿಕೆ ಬಡಾವಣೆಯಲ್ಲಿ ಡಿ. 14ರಂದು ಫ್ಲ್ಯಾಟ್‌ಗಳ ಮೇಳ ಆಯೋಜಿಸಿದೆ.

ಕಣಿಮಿಣಿಕೆ ಮತ್ತು ತಿಪ್ಪಸಂದ್ರ ವಸತಿ ಯೋಜನೆಗಳಲ್ಲಿ ಲಭ್ಯವಿರುವ 2 ಮತ್ತು 3 ಬಿಎಚ್‌ಕೆ ಫ್ಲ್ಯಾಟ್‌ಗಳನ್ನು ಹಂಚಿಕೆ ಮಾಡಲು ಮೇಳವನ್ನು ಆಯೋಜಿಸಲಾಗಿದೆ. ಬೆಳಿಗ್ಗೆ 9 ರಿಂದ 5ರವರೆಗೆ ಮೇಳ ನಡೆಯಲಿದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ವಸತಿ ಯೋಜನೆಯು 1, 2, 3, 4 ಮತ್ತು 5ನೇ ಹಂತವನ್ನು ಒಳಗೊಂಡಿದೆ. ಫ್ಲ್ಯಾಟ್ ಖರೀದಿಸಲು ಬಯಸುವವರು ಠೇವಣಿ ಮೊತ್ತವನ್ನು ಡಿಡಿ ಅಥವಾ ಆನ್‌ಲೈನ್ ಮೂಲಕ ಪಾವತಿಸಿ ತಾತ್ಕಾಲಿಕವಾದ ಹಂಚಿಕೆ ಪತ್ರವನ್ನು ಪಡೆಯಬಹುದು. ಸ್ಥಳದಲ್ಲೇ ನಾನಾ ಬ್ಯಾಂಕ್‌ಗಳು ಸಾಲ ಸೌಲಭ್ಯ ನೀಡಲಿವೆ. ಗ್ರಾಹಕರು ಖಾಲಿಯಿರುವ ಫ್ಲ್ಯಾಟ್‌ಗಳನ್ನು ಖರೀದಿಸಬಹುದಾಗಿದೆ.

ಫ್ಲ್ಯಾಟ್‌ನ ಮಾರಾಟ ಮೊತ್ತದ ಮೇಲೆ ಮುಂಗಡವಾಗಿ ಶೇಕಡ 1 ರಷ್ಟು ನಿರ್ವಹಣಾ ಶುಲ್ಕ ಪಡೆಯಲಾಗುತ್ತದೆ. ಬೆಂಗಳೂರು–ಮೈಸೂರು ಹೆದ್ದಾರಿಯಿಂದ 1 ಕಿ.ಮೀ. ಮತ್ತು ಚಲ್ಲಘಟ್ಟ 'ನಮ್ಮ ಮೆಟ್ರೊ' ನಿಲ್ದಾಣದಿಂದ 3 ಕಿ.ಮೀ.ಗೆ ದೂರವಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಆಂಧ್ರಪ್ರದೇಶ: ಸಂಪುಟಕ್ಕೆ ಡಿಸಿಎಂ ಪವನ್ ಕಲ್ಯಾಣ್ ಅಣ್ಣ?

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರ ಅಣ್ಣ ನಾಗಬಾಬು ಅವರು ಸದ್ಯದಲ್ಲೇ ರಾಜ್ಯ ಸಚಿವ ಸಂಪುಟಕ್ಕೆ ಸೇರ್ಪಡೆಯಾಗಲಿದ್ದಾರೆ.

ಟಿಡಿಪಿ ಹಾಗೂ ಬಿಜೆಪಿ ಒಕ್ಕೂಟವು ಸಚಿವ ಸ್ಥಾನವನ್ನು ನಾಗಬಾಬು ಅವರಿಗೆ ನೀಡಲು ಮುಂದಾಗಿದೆ.

ನಾಗಬಾಬು

ನಾಗಬಾಬು ಅವರು ಅನಕಾಪಲ್ಲಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಯಸಿದ್ದರು. ಆದರೆ ಅವರಿಗೆ ಅವಕಾಶ ಸಿಕ್ಕಿರಲಿಲ್ಲ. ಈಗ ಸಚಿವ ಸ್ಥಾನ ದೊರೆತರೆ ಅವರು ವಿಧಾನ ಪರಿಷತ್ ಸದಸ್ಯ ಆಗಲಿದ್ದಾರೆ.

12,13 ರಂದು ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲ ವಿಭಾಗದ ದೇವರಬೀಸನಹಳ್ಳಿ ಮತ್ತು ಆಡುಗೋಡಿ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ನಡೆಯುತ್ತಿರುವ ಕಾರಣ, ಕೇಂದ್ರ ವ್ಯಾಪ್ತಿಯಲ್ಲಿ ಬುಧವಾರ ಮತ್ತು ಗುರುವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ಬೆಳ್ಳಂದೂರು, ಆರ್‌ಎಂಜೆಡ್, ಎಕೊಸ್ಪೇಸ್ ಎಕೊ ವರ್ಲ್ಡ್, ದೇವರಬೀಸನಹಳ್ಳಿ, ಕರಿಯಮ್ಮನ ಅಗ್ರಹಾರ, ಸಕ್ರ ಆಸ್ಪತ್ರೆ, ಪಾಸ್‌ಪೋರ್ಟ್ ಆಫೀಸ್, ಶೋಭ ಅಪಾರ್ಟ್‌ಮೆಂಟ್, ಹೊರ ವರ್ತುಲ ರಸ್ತೆ, 5ನೇ ಇಂಡಸ್ಟ್ರಿಯಲ್ ಲೇಔಟ್, ಕೋರಮಂಗಲ, ಮಡಿವಾಳ, ವೆಂಕಟೇಶ್ವರ ಬಡಾವಣೆ, ಚಿಕ್ಕ ಆಡುಗೋಡಿ, ಜೋಗಿ ಕಾಲೊನಿ, ಈಸ್ಟ್ ಲ್ಯಾಂಡ್ ಹೋಲ್ಡಿಂಗ್ ಬಿಲ್ಡಿಂಗ್, ಸೇಂಟ್ ಜಾನ್ ಸ್ಟಾಫ್ ಕ್ವಾಟ್ರಸ್, ಮಾರುತಿನಗರ, ಆಡುಗೋಡಿ 7 ಮತ್ತು 8ನೇ ಬ್ಲಾಕ್, ಸಿ.ಎ.ಆರ್. ಪೊಲೀಸ್ ಕ್ವಾಟ್ರಸ್, ಆಡುಗೋಡಿ ಮುಖ್ಯ ರಸ್ತೆ, ಸೇಂಟ್ ಜಾನ್ ಆಸ್ಪತ್ರೆ, ಮಡಿವಾಳ, ಮಾರುತಿ ನಗರ, ಡಾಲರ್ಸ್ ಕಾಲೊನಿ, 100 ಅಡಿ ರಿಂಗ್ ರಸ್ತೆ, ಆರ್ಯಾಕ್ ಕಂಪನಿ, ಬಿ.ಜಿ.ರಸ್ತೆ, ಕೆ.ಹೆಚ್.ಬಿ. ಕಾಲೊನಿ, 5ನೇ ಬ್ಲಾಕ್ ಇಂಡಸ್ಟ್ರಿಯಲ್ ಏರಿಯಾ ಕೋರಮಂಗಲ, ಮೈಕೊ 3, 4, 5 ಮತ್ತು 6ನೇ ಬ್ಲಾಕ್ ಕೋರಮಂಗಲ, ಭುವನಪ್ಪ ಕಾವೇರಿ ಬಡಾವಣೆ, ಕೃಷ್ಣಾ ನಗರ ಇಂಡಸ್ಟ್ರಿಯಲ್ ಲೇಔಟ್, ಎಸ್.ಜಿ.ಪಾಳ್ಯ, 2ನೇ ಬ್ಲಾಕ್ ಧವನ್ ಜ್ಯೂಯಲರಿ, ಮಡಿವಾಳ ಸಂತೆ, ಸಿದ್ದಾರ್ಥ ಕಾಲೊನಿ, ಹ್ಯಾಪಿ ಮೈಂಡ್ ಕಂಪನಿ ಮತ್ತು ಸುತ್ತಲಿನ ಪ್ರದೇಶಗಳು.

13ರಂದು ವಿದ್ಯುತ್ ವ್ಯತ್ಯಯ

ಬೆಂಗಳೂರು ಉತ್ತರ ಸರ್ಕಲ್‌ನ ಅಟ್ಟೂರು ಯಲಯಂಕ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ನಡೆಯುತ್ತಿರುವುದರಿಂದ ಶುಕ್ರವಾರ (ಡಿ.13) ಬೆಳಿಗ್ಗೆ 11 ರಿಂದ ಸಂಜೆ 5ರವರೆಗೆ ಕೇಂದ್ರ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಕೋರಮಂಗಲ, ಕೆ.ಎಂ.ಎಫ್, ಮದರ್ ಡೇರಿ, ಎಸ್.ಎಫ್.ಎಸ್ 208, ಎಸ್.ಎಫ್.ಎಸ್ 407, ಉನ್ನಿಕೃಷ್ಣನ್ ರಸ್ತೆ, ಬಿ–ಸೆಕ್ಟರ್, ಎನ್.ಇ.ಎಸ್ ರಸ್ತೆ, ಸಿ.ಎಂ ಎನ್‌ಕ್ಲೇವ್, ಮಾತೃ ಲೇಔಟ್, ಸೋಮೇಶ್ವರನಗರ, ಕನಕನಗರ, ನ್ಯಾಯಾಂಗ ಬಡಾವಣೆ, ಯಲಹಂಕ ಓಲ್ಡ್ ಟೌನ್, ಗಾಂಧಿ ನಗರ, ಹಳೆಯ ಪಟ್ಟಣ ಬಿಬಿಎಂಪಿ ರಸ್ತೆ, ಕೋಡಿ ರೋಡ್, ಪುರವಂಕರ ಅಪಾರ್ಟ್ ಮೆಂಟ್ ಆರ್.ಎಂ.ಝೆಡ್ ಮಾಲ್, ಆರ್.ಎಂ.ಝೆಡ್ ರೆಸಿಡೆನ್ಸಿಯಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು

ವಿಷಯ ಆಯ್ಕೆ: ಹೆಚ್ಚಿನ ಅವಕಾಶ

ನವದೆಹಲಿ (ಪಿಟಿಐ): ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ದೇಶದಾದ್ಯಂತ ನಡೆಯುವ 'ಕಾಮನ್ ಯುನಿವರ್ಸಿಟಿ ಎಂಟ್ರೆನ್ಸ್ ಟೆಸ್ಟ್'ಅನ್ನು (ಸಿಯುಇಟಿ-ಯುಜಿ) 2025ರಿಂದ ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ) ಮಾದರಿಯಲ್ಲಿ ನಡೆಸಲಾಗುವುದು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಜಗದೀಶ್ ಕುಮಾರ್ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ 12ನೇ ತರಗತಿಯಲ್ಲಿ ಅಧ್ಯಯನ ಮಾಡದ ವಿಷಯಗಳ ಹೊರತಾಗಿಯೂ ಬೇರೆ ಯಾವುದೇ ವಿಷಯದಲ್ಲಿ ಪರೀಕ್ಷೆಗೆ ಹಾಜರಾಗುವ ಅವಕಾಶವನ್ನು ಪರಿಷ್ಕೃತ ನಿಯಮದಲ್ಲಿ ನೀಡಲಾಗಿದೆ.

ಯುಜಿಸಿ ರಚಿಸಿದ್ದ ತಜ್ಞರ ಸಮಿತಿಯು ಪರೀಕ್ಷೆಯ ನಿಯಮಗಳಲ್ಲಿ ಹಲವು ಬದಲಾವಣೆಗಳನ್ನು ತರುವ ಶಿಫಾರಸು ಮಾಡಿದೆ ಎಂದು ಪಿಟಿಐ ಜತೆಗಿನ ಸಂವಾದದಲ್ಲಿ ಅವರು ಹೇಳಿದ್ದಾರೆ.

'ಕಳೆದ ವರ್ಷ ಪರೀಕ್ಷೆಯನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸಿದ್ದರೆ, ಮುಂದಿನ ಬಾರಿ ಸಿಬಿಟಿ ಮಾದರಿಯಲ್ಲಿ ನಡೆಸಲಾಗುವುದು. ಪರೀಕ್ಷೆಯ ವಿಷಯಗಳ ಸಂಖ್ಯೆಯನ್ನು 63 ರಿಂದ 37ಕ್ಕೆ ಕಡಿತಗೊಳಿಸಿದ್ದೇವೆ. ಕೈಬಿಡಲಾದ ವಿಷಯಗಳಿಗೆ ಸಂಬಂಧಿಸಿದ ಪ್ರವೇಶವನ್ನು ಜನರಲ್ ಆಪ್ಟಿಟ್ಯೂಡ್ ಪರೀಕ್ಷೆಯ (ಜಿಎಟಿ) ಅಂಕಗಳ ಆಧಾರದಲ್ಲಿ ನೀಡಲಾಗುವುದು' ಎಂದಿದ್ದಾರೆ.

'12ನೇ ತರಗತಿಯಲ್ಲಿ ಕಲಿಯದ ವಿಷಯಗಳನ್ನು ಆಯ್ಕೆ ಮಾಡಿ ಸಿಯುಇಟಿ-ಯುಜಿ ಪರೀಕ್ಷೆ ಎದುರಿಸಲು ಅನುಮತಿ ನೀಡುವುದರಿಂದ ವಿದ್ಯಾರ್ಥಿಗಳಿಗೆ ತಮ್ಮ ಆಸಕ್ತಿಯ ವಿಷಯದಲ್ಲಿ ಉನ್ನತ ಶಿಕ್ಷಣ ಪಡೆಯಲು ಅನುವು ಮಾಡಿಕೊಡಲಿದೆ' ಎಂದು ಹೇಳಿದ್ದಾರೆ.

ಇತರ ಬದಲಾವಣೆಗಳು...

- ವಿದ್ಯಾರ್ಥಿಗಳಿಗೆ ಗರಿಷ್ಠ ಐದು ವಿಷಯಗಳಲ್ಲಿ ಪರೀಕ್ಷೆಗೆ ಹಾಜರಾಗಬಹುದು. ಇದುವರೆಗೆ, ಆರು ವಿಷಯಗಳಲ್ಲಿ ಪರೀಕ್ಷೆ ಬರೆಯುವ ಅವಕಾಶ ಇತ್ತು
- ಎಲ್ಲ ಪರೀಕ್ಷೆಗಳಿಗೆ 60 ನಿಮಿಷಗಳ ಅವಧಿ ನಿಗದಿಪಡಿಸಲಾಗಿದೆ. ಈ ಹಿಂದೆ, ಪರೀಕ್ಷೆಯ ಅವಧಿಯು ವಿಷಯದ ಆಧಾರದ ಮೇಲೆ 45ರಿಂದ 60 ನಿಮಿಷಗಳವರೆಗೆ ಇರುತ್ತಿತ್ತು
- ಐಚ್ಛಿಕ ಪ್ರಶ್ನೆಗಳ ಪರಿಕಲ್ಪನೆಯನ್ನು ತೆಗೆದುಹಾಕಲಾಗಿದ್ದು, ಎಲ್ಲಾ ಪ್ರಶ್ನೆಗಳು ಈಗ ಕಡ್ಡಾಯವಾಗಿರುತ್ತವೆ

ರಾಜ್ಯದಲ್ಲಿ ಅತ್ಯಾಚಾರ ಪ್ರಕರಣ: ಶಿಕ್ಷೆ ಪ್ರಮಾಣ ಕಡಿಮೆ

ಮೂರು ವರ್ಷಗಳಲ್ಲಿ 1,673 ಅತ್ಯಾಚಾರ: ಆರು ಮಂದಿಗಷ್ಟೇ ಶಿಕ್ಷೆ

• ಕೆ.ಎಸ್.ಸುನಿಲ್

ಬೆಂಗಳೂರು: ರಾಜ್ಯದಲ್ಲಿ ಅತ್ಯಾಚಾರ ಪ್ರಕರಣಗಳಲ್ಲಿ ಏರಿಕೆಯಾಗುತ್ತಲೇ ಇದ್ದರೂ, ಈ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ತೀರಾ ಕಡಿಮೆ.

ರಾಜ್ಯದಲ್ಲಿ 2022 ರಿಂದ 2024ರ ಅಕ್ಟೋಬರ್‌ವರೆಗೆ ದಾಖಲಾದ 1,673 ಅತ್ಯಾಚಾರ ಪ್ರಕರಣಗಳಲ್ಲಿ ಕೇವಲ ಆರು ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದ್ದು, 74 ಪ್ರಕರಣಗಳು ಖುಲಾಸೆಗೊಂಡಿವೆ. ಒಟ್ಟು 298 ಪ್ರಕರಣಗಳು ತನಿಖೆಯಲ್ಲಿದ್ದು, 1,187 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. 108 ಪ್ರಕರಣಗಳು ಸುಳ್ಳು ಎಂಬುದು ತನಿಖೆ ವೇಳೆ ಗೊತ್ತಾಗಿದೆ.

2024ರಲ್ಲಿ ಬೆಂಗಳೂರು ನಗರವೊಂದರಲ್ಲೇ 131 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ತುಮಕೂರು 20, ಚಿಕ್ಕಬಳ್ಳಾಪುರ ಮತ್ತು ಹಾಸನದಲ್ಲಿ ತಲಾ 17 ಪ್ರಕರಣಗಳು ದಾಖಲಾಗಿವೆ.

ರಾಜ್ಯ ಅಪರಾಧ ದಾಖಲೆಗಳ ಬ್ಯೂರೊ (ಎಸ್‌ಸಿಆರ್‌ಬಿ) ಪ್ರಕಾರ, ಪ್ರಸಕ್ತ ವರ್ಷ ಜನವರಿಯಿಂದ ಸೆಪ್ಟೆಂಬರ್‌ವರೆಗೆ 300 ಅತ್ಯಾಚಾರ ಪ್ರಕರಣಗಳು ಪರಿಚಿತ ವ್ಯಕ್ತಿಗಳಿಂದಲೇ ನಡೆದಿದೆ. 34 ಸಂತ್ರಸ್ತರ ಸಂಬಂಧಿಕರು, 37 ಅವರ ನೆರೆ ಹೊರೆಯವರು, 8 ಅಪರಿಚಿತ ವ್ಯಕ್ತಿಗಳು ಮತ್ತು 11 ಸಾಮೂಹಿಕ ಅತ್ಯಾಚಾರ ಪ್ರಕರಣಗಳು ನಡೆದಿವೆ.

ರಾಜ್ಯದಲ್ಲಿ ವರದಿಯಾದ ಅತ್ಯಾಚಾರ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣವು ಶೇಕಡ 0.36 ರಷ್ಟಿದೆ. ಸಾಕ್ಷ್ಯಾಧಾರಗಳ ಕೊರತೆ, ಸುಳ್ಳು ಪ್ರಕರಣಗಳು, ತನಿಖೆ ಹಾಗೂ ವಿಚಾರಣೆ ವಿಳಂಬವಾಗುವುದು ಇದಕ್ಕೆ ಕಾರಣ ಎಂದು ವಿಶ್ಲೇಷಿಸಲಾಗಿದೆ.

'ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತರ ಹೇಳಿಕೆ ಅತಿ ಮುಖ್ಯ. ಕೆಲವು ಪ್ರಕರಣಗಳಲ್ಲಿ ಕುಟುಂಬ ಅಥವಾ ಬೇರೆಯವರ ಒತ್ತಡದಿಂದ ಅಥವಾ ಸಾಮಾಜಿಕ ಕಳಂಕದ ಭೀತಿಯಿಂದ ತಮ್ಮ ಹೇಳಿಕೆಗಳನ್ನು ಬದಲಿಸಿಬಿಡುತ್ತಾರೆ. ಹಾಗಾಗಿ ನ್ಯಾಯಾಧೀಶರ ಮುಂದೆ ಸ್ವಯಂಪ್ರೇರಣೆಯಿಂದ ಹೇಳಿಕೆ ದಾಖಲಿಸುವಂತೆ ಮನವಿ ಮಾಡುತ್ತೇವೆ. ಅನೇಕ ಸಂತ್ರಸ್ತೆಯರು ಸ್ವಯಂಪ್ರೇರಿತ ಹೇಳಿಕೆ ನೀಡಲು ನಿರಾಕರಿಸುತ್ತಾರೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಹಲವು ಪ್ರಕರಣಗಳಲ್ಲಿ ಸಂತ್ರಸ್ತೆಯೇ ಪ್ರತಿಕೂಲ ಸಾಕ್ಷಿಯಾಗಿ ಬದಲಾಗುತ್ತಾರೆ. ಹೀಗಾಗಿ ಪ್ರಕರಣ ನ್ಯಾಯಾಲಯದಲ್ಲಿ ಬಿದ್ದು ಹೋಗುತ್ತದೆ' ಎಂದು ಅವರು ಅಸಹಾಯಕತೆ ವ್ಯಕ್ತಪಡಿಸಿದರು.

'ಅತ್ಯಾಚಾರ ಆದ 24 ಗಂಟೆಗಳ ಒಳಗಾಗಿ ಸಂತ್ರಸ್ತೆಯ ವೈದ್ಯಕೀಯ ಪರೀಕ್ಷೆ ಆಗಬೇಕು. ಘಟನೆ ಸ್ಥಳದಲ್ಲಿ ವಿಧಿವಿಜ್ಞಾನ ತಂಡ ಸಾಕ್ಷ್ಯಾಧಾರ ಸಂಗ್ರಹಿಸಬೇಕು. ನ್ಯಾಯಾಧೀಶರ ಮುಂದೆ ಸಂತ್ರಸ್ತೆಯ ಹೇಳಿಕೆ ದಾಖಲಿಸಬೇಕು. ಆದರೆ, ಬಹುತೇಕ ಪ್ರಕರಣಗಳಲ್ಲಿ ತನಿಖಾ ತಂಡಗಳು ಸೂಕ್ತ ಸಾಕ್ಷ್ಯಾಧಾರಗಳನ್ನು ಕಲೆ ಹಾಕುವಲ್ಲಿ ವಿಫಲವಾಗುತ್ತವೆ' ಎಂದು ವಕೀಲೆ ಆರ್. ಮಂಜುಳಾ ದೇವಿ ಹೇಳಿದರು.

'ವಿಚಾರಣೆ 3-5 ವರ್ಷಗಳವರೆಗೆ ತೆಗೆದುಕೊಳ್ಳುತ್ತದೆ. ವಿಚಾರಣೆ ವಿಳಂಬವಾದಷ್ಟು ನೆನಪಿನ ಶಕ್ತಿ ಕಡಿಮೆ ಆಗುತ್ತದೆ. ಸಾಕ್ಷಿಗಳು ಉಲ್ಟಾ ಹೊಡೆಯುತ್ತಾರೆ. ಕೆಲವು ಪ್ರಕರಣಗಳಲ್ಲಿ ಆರೋಪಿಯನ್ನು ಮದುವೆಯಾಗುವಂತೆ ಸಂತ್ರಸ್ತೆಯನ್ನು ಒತ್ತಾಯಿಸಲಾಗುತ್ತದೆ. ಸಂತ್ರಸ್ತೆ ಅಥವಾ ದೂರುದಾರರು ದೂರು ನೀಡುವಾಗಲೇ ಹಲವು ಲೋಪದೋಷಗಳಿರುತ್ತವೆ. ಇದನ್ನೇ ಆರೋಪಿ ಪರ ವಕೀಲರು ಲಾಭದಾಯಕವಾಗಿ ಪರಿಗಣಿಸುತ್ತಾರೆ. ಇದರಿಂದಲೂ ಸಂತ್ರಸ್ತೆಗೆ ನ್ಯಾಯ ಮರೀಚಿಕೆಯಾಗುತ್ತದೆ' ಎಂದರು.

ಮುಖ್ಯಾಂಶಗಳು

- 108 ಪ್ರಕರಣಗಳು ಸುಳ್ಳು
- 300 ಪ್ರಕರಣ: ಪರಿಚಿತರಿಂದಲೇ ಕೃತ್ಯ
- ಸಂತ್ರಸ್ತೆಯರಿಂದಲೇ ಪ್ರತಿಕೂಲ ಸಾಕ್ಷಿ

ವರ್ಷ	ಅತ್ಯಾಚಾರ	ಶಿಕ್ಷೆ ಪ್ರಕರಣ
2022	537	6
2023	600	0
2024 (ಅಕ್ಟೋಬರ್‌ವರೆಗೆ)	536	0

ಸುದ್ದಿ 2 ನಿಮಿಷ

ಹಠಾತ್ ಸಾವುಗಳಿಗೆ ಕೋವಿಡ್ ಲಸಿಕೆ ಕಾರಣವಲ್ಲ: ಸಚಿವ ನಡ್ಡಾ

ನವದೆಹಲಿ (ಪಿಟಿಐ): ಯುವ ವಯಸ್ಕರ ಹಠಾತ್ ಸಾವಿಗೆ ಕೋವಿಡ್ ಲಸಿಕೆ ಕಾರಣವಲ್ಲ ಎಂದು ಐಸಿಎಂಆರ್ ಅಧ್ಯಯನದಿಂದ ತಿಳಿದುಬಂದಿರುವುದಾಗಿ ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಮಂಗಳವಾರ ರಾಜ್ಯಸಭೆಗೆ ತಿಳಿಸಿದರು.

ಕೋವಿಡ್‌ಗೂ ಮೊದಲು ಆಸ್ಪತ್ರೆಗೆ ದಾಖಲಾಗಿದ್ದುದು, ದಿಢೀರ್ ಸಾವುಗಳು ಆಗಿರುವ ಕೌಟುಂಬಿಕ ಹಿನ್ನೆಲೆ ಮತ್ತು ಜೀವನಶೈಲಿ ಬದಲಾವಣೆಗಳು ಹಠಾತ್ ಸಾವಿನ ಸಾಧ್ಯತೆ ಹೆಚ್ಚಿಸಿವೆ ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

ಕಳೆದ ವರ್ಷ ಮೇ-ಆಗಸ್ಟ್ ಅವಧಿಯಲ್ಲಿ 19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ 47 ಆಸ್ಪತ್ರೆಗಳಲ್ಲಿ 'ಭಾರತದಲ್ಲಿ 18-45 ವರ್ಷದೊಳಗಿನ ವಯಸ್ಕರಲ್ಲಿ ವಿವರಿಸಲಾಗದ ದಿಢೀರ್ ಸಾವುಗಳಿಗೆ ಸಂಬಂಧಿಸಿದ ಅಂಶಗಳು' ಶೀರ್ಷಿಕೆಯಡಿ ಐಸಿಎಂಆರ್-ಸಾಂಕ್ರಾಮಿಕ ರೋಗ ವಿಜ್ಞಾನ ರಾಷ್ಟ್ರೀಯ ಸಂಸ್ಥೆಗಳು ಅಧ್ಯಯನ ನಡೆಸಿರುವುದಾಗಿ ಐಸಿಎಂಆರ್ ತಿಳಿಸಿದೆ ಎಂದು ಹೇಳಿದರು.

2021ರ ಅ.1 ಮತ್ತು 2023ರ ಮಾ.31ರ ನಡುವೆ ದಿಢೀರ್ ಸಾವನ್ನಪ್ಪಿದ ಆರೋಗ್ಯವಂತ ವ್ಯಕ್ತಿಗಳ (24 ತಾಸುಗಳ ಒಳಗೆ ಆಸ್ಪತ್ರೆಗೆ ಸೇರಿದವರು ಅಥವಾ ಸಾವಿಗಿಂತ ಮುನ್ನ ಆರೋಗ್ಯವಂತರಾಗಿದ್ದ ವ್ಯಕ್ತಿಗಳು) ಪ್ರಕರಣಗಳ ಕುರಿತ ಅಧ್ಯಯನ ಇದಾಗಿದೆ ಎಂದು ನಡ್ಡಾ ತಿಳಿಸಿದರು.

ಕುಂಭ ಮೇಳ: ಯಾತ್ರಿಗಳ ಎಣಿಕೆಗೆ ಎ.ಐ ಕ್ಯಾಮೆರಾ

ಮಹಾಕುಂಭ ನಗರ (ಉತ್ತರ ಪ್ರದೇಶ) (ಪಿಟಿಐ): 'ಮಹಾ ಕುಂಭಮೇಳ-2025'ಕ್ಕೆ ಭೇಟಿ ನೀಡುವ ಯಾತ್ರಿಕರ ನಿಖರ ಸಂಖ್ಯೆಯನ್ನು ತಿಳಿದುಕೊಳ್ಳಲು, ಉತ್ತರ ಪ್ರದೇಶ ಸರ್ಕಾರವು ಕೃತಕ ಬುದ್ಧಿಮತ್ತೆ (ಎ.ಐ) ಆಧಾರಿತ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲು ನಿರ್ಧರಿಸಿದೆ.

'ಪ್ರಯಾಗರಾಜ್‌ನಲ್ಲಿ ನಡೆಯುವ ಕುಂಭಮೇಳ ಹಾಗೂ ಮಹಾಕುಂಭಕ್ಕೆ ಕೋಟ್ಯಂತರ ಯಾತ್ರಿಕರು ಭೇಟಿ ನೀಡುವುದು ವಾಡಿಕೆ. ಆದರೆ ಸುಧಾರಿತ ತಂತ್ರಜ್ಞಾನದ ಕೊರತೆಯಿಂದಾಗಿ, ಮೇಳಕ್ಕೆ ಭೇಟಿ ನೀಡುವ ಯಾತ್ರಿಕರ ಸಂಖ್ಯೆಯನ್ನು ಲೆಕ್ಕ ಹಾಕುವುದು ಈವರೆಗೆ ಸವಾಲಾಗಿತ್ತು. ಹಾಗಾಗಿ, ಉತ್ತರ ಪ್ರದೇಶ ಸರ್ಕಾರವು ಈ ಬಾರಿ ಎ.ಐ ಆಧಾರಿತ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲು ಮುಂದಾಗಿದ್ದು, ಯಾತ್ರಿಕರ ಸಂಖ್ಯೆಯನ್ನು ನಿಖರವಾಗಿ ತಿಳಿಯಲು ಸಾಧ್ಯವಾಗಲಿದೆ' ಎಂದು ಪ್ರಕಟಣೆ ತಿಳಿಸಿದೆ.

ಪ್ರತಿ ನಿಮಿಷಕ್ಕೊಮ್ಮೆ ಪರಿಷ್ಕೃತ ಮಾಹಿತಿಯನ್ನು ಒದಗಿಸಲಿದ್ದು, ಶೇ 95ರಷ್ಟು ನಿಖರತೆ ಸಾಧಿಸುವ ನಿರೀಕ್ಷೆಯಿದೆ ಎಂದು ತಿಳಿಸಿದೆ.

ಕೊನೆಗೊಂಡ ಕೃಷ್ಣ ಪರ್ವ

ಒಂದನೇ ಪುಟದಿಂದ....

ವಿಧಾನ ಪರಿಷತ್, ವಿಧಾನಸಭೆ, ರಾಜ್ಯಸಭೆ, ಲೋಕಸಭೆ ಹೀಗೆ ನಾಲ್ಕೂ ಮನೆಗಳನ್ನು ಪ್ರತಿನಿಧಿಸಿದ ಕರ್ನಾಟಕದ ಕೆಲವೇ ರಾಜಕಾರಣಿಗಳಲ್ಲಿ ಒಬ್ಬರಾದ ಅವರು, ವಿಧಾನಸಭಾಧ್ಯಕ್ಷ, ಮುಖ್ಯಮಂತ್ರಿಯಾಗಿ ರಾಜ್ಯವನ್ನು ಮುನ್ನಡೆಸಿದವರು. ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಮನಮೋಹನ ಸಿಂಗ್ ಸರ್ಕಾರಗಳಲ್ಲಿ ಸಚಿವರಾಗಿಯಷ್ಟೇ ಅಲ್ಲದೆ, ಮಹಾರಾಷ್ಟ್ರದ ರಾಜ್ಯಪಾಲರಾಗಿಯೂ ಕರ್ತವ್ಯವನ್ನು ನಿರ್ವಹಿಸಿದವರು. ವಿರೋಧ ಪಕ್ಷದ ನಾಯಕರಾಗಿಲ್ಲವೆಂಬುದನ್ನು ಬಿಟ್ಟರೆ ಉಳಿದೆಲ್ಲವೂ ಅವರಿಗೆ ದಕ್ಕಿದೆ.

ಕರ್ನಾಟಕ ರಾಜಕಾರಣಕ್ಕೆ ಹೊಸತನವನ್ನು ತಂದ ದೇವರಾಜ ಅರಸು ಅವರು, ಜಾತಿಯನ್ನು ಲೆಕ್ಕಿಸದೇ ಅನೇಕ ಪ್ರತಿಭಾವಂತವನ್ನು ಎಳೆ ತಂದು, ರಾಜಕೀಯ ಪಡಸಾಲೆಗೆ ನವಚೈತನ್ಯ ತುಂಬಿದರು. ಅರಸರು ಮುಖ್ಯಮಂತ್ರಿ ಆಗುತ್ತಿದ್ದಂತೆ, ಪ್ರಧಾನಿ ಇಂದಿರಾ ಗಾಂಧಿಯವರಿಗೆ ಹೇಳಿ ಆಗ ಲೋಕಸಭಾ ಸದಸ್ಯರಾಗಿದ್ದ ಎಸ್.ಎಂ. ಕೃಷ್ಣರವರನ್ನು ನಾಡಿಗೆ ಕರೆಯಿಸಿಕೊಂಡರು. ಹೀಗೆ, ಅರಸು ಗರಡಿಯಲ್ಲಿ ಪಳಗಿದ ಕೃಷ್ಣ, ಕರ್ನಾಟಕದ ಭವಿಷ್ಯವನ್ನು ತಮ್ಮ ನೇತಾರನಂತೆಯೇ ಮಗದೊಂದು ಎತ್ತರಕ್ಕೆ ಕೊಂಡೊಯ್ದರು. ತಮಗಿಂತ ಕಿರಿಯರಾದವರೆಲ್ಲ ಮುಖ್ಯಮಂತ್ರಿಯಾದರೂ, ಸಂಯಮ-ತಾಳ್ಮೆಯಿಂದ ಕಾದರು. ಮುಖ್ಯಮಂತ್ರಿಯಾಗುವ ಅವಕಾಶವನ್ನು ಅವರೇ ಸೃಷ್ಟಿಸಿಕೊಂಡರು.

ಬಹುತ್ವ ಭಾರತದ ಆಶಯವನ್ನು ಮನಗಂಡು, ಸುದೀರ್ಘ ರಾಜಕೀಯ ಪಯಣದಲ್ಲಿ ಅದನ್ನೇ ಪಾಲಿಸಿದ್ದ ಕೃಷ್ಣ, ತಮ್ಮ ಇಳಿಗಾಲದಲ್ಲಿ ಕುಟುಂಬದ ಒತ್ತಡದ ಕಾರಣಕ್ಕೆ ಬಿಜೆಪಿ ಸೇರಿದರು ಎಂಬ ಮಾತುಗಳೂ ಇವೆ. ಹಾಗೆ ಮಾಡಿದರೂ ತಮ್ಮ ಅಳಿಯ ಸಿದ್ಧಾರ್ಥ ಅವರನ್ನು ಉಳಿಸಿಕೊಳ್ಳಲು ಆಗಲೇ ಇಲ್ಲ ಎಂಬ ನೋವು ಅವರನ್ನು ಕೊನೆ ಗಳಿಗೆಯವರೆಗೂ ಕಾಡಿದ್ದಿರಬಹುದು.

ಮಾತು ಆಡಲೇಬೇಕಾದಾಗ ಮೌನಕ್ಕೆ ಶರಣಾಗಿ, ಕ್ರಿಯೆಯ ಮೂಲಕವೇ ಉತ್ತರ ನೀಡುವ ಛಾತಿ; ಎಂದಿಗೂ ವಾಚಾಳಿಯಾಗದೇ, ಅತ್ಯುತ್ತಮ ಸಂಸದೀಯ ಪಟು ಹೇಗಿರಬೇಕೆಂದು ತೋರಿದವರು ಕೃಷ್ಣ.

ರಾಜಕೀಯದ ಮೆಟ್ಟಿಲು:

ಇಂದಿರಾ ಗಾಂಧಿ ಕುಟುಂಬದ ನಿಕಟ ನಂಟಿದ್ದರೂ ದಶಕಗಳ ಕಾಲ ಅವರಿಗೆ ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆಗೇರಲು ಸಾಧ್ಯವಾಗಲಿಲ್ಲ. 1989ರಲ್ಲಿ ಭಾರಿ ಬಹುಮತದಿಂದ ಕಾಂಗ್ರೆಸ್ ಗೆದ್ದರೂ, ಲಿಂಗಾಯತ ಹಾಗೂ ಹಿಂದುಳಿದ ಜಾತಿ ಸಮೀಕರಣದ ಕಾರಣಕ್ಕೆ ಸಭಾಧ್ಯಕ್ಷ ಸ್ಥಾನಕ್ಕೆ ಸೀಮಿತರಾಗಬೇಕಾಯಿತು. ಆ ವಿಧಾನಸಭೆ ಅವಧಿಯ ಕೊನೆಯಲ್ಲಿ ವೀರಪ್ಪ ಮೊಯಿಲಿ ನೇತೃತ್ವದ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಸ್ಥಾನವನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಯಿತು.

1994ರಲ್ಲಿ ಎಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಜನತಾದಳ ಭರ್ಜರಿ ವಿಜಯ ಸಾಧಿಸಿತು. ತಮ್ಮ ರಾಜಕೀಯ ಕಡು ವೈರಿ ಗೌಡರು ಮುಖ್ಯಮಂತ್ರಿಯಾದ ಬಳಿಕ, ಕರ್ನಾಟಕದಲ್ಲಿದ್ದು ಏನು ಮಾಡುವುದು ಎಂಬ ಚಿಂತೆ ಕೃಷ್ಣ ಅವರನ್ನು ಕಾಡಿತು. ಮತ್ತೆ ರಾಷ್ಟ್ರ ರಾಜಕಾರಣಕ್ಕೆ ಹೋಗುವ ಮನಸ್ಸು ಮಾಡಿದ ಅವರು, ರಾಜ್ಯಸಭೆಯತ್ತ ಮುಖ ಮಾಡಿದರು. ಆದರೆ, ಕಾಂಗ್ರೆಸ್ ಪಕ್ಷದಲ್ಲಿ ಅಷ್ಟು ಸದಸ್ಯ ಬಲ ಇರಲಿಲ್ಲ. ದೇವೇಗೌಡರಿಗೂ ಅದು ಬೇಕಿತ್ತು. ಹೀಗಾಗಿ, ಜನತಾದಳದ ಅಡ್ಡ ಮತ ಪಡೆದೇ ಅವರು ರಾಜ್ಯಸಭೆ ಪ್ರವೇಶಿಸಿದರು.

ಆ ಖುಷಿಯೂ ಬಹುಕಾಲ ಉಳಿಯಲಿಲ್ಲ. 1996ರಲ್ಲಿ ನಡೆದ ಲೋಕಸಭೆ ಚುನಾವಣೆ ಬಳಿಕ ಸೃಷ್ಟಿಯಾದ ರಾಜಕೀಯ ವಿದ್ಯಮಾನದಲ್ಲಿ ದೇವೇಗೌಡರೇ ಪ್ರಧಾನಿಯಾದರು. ತಮ್ಮ ಎದುರಾಳಿಯನ್ನೇ ಮತ್ತೆ ಮುಖಾಮುಖಿಯಾಗುವುದನ್ನು ನಿರೀಕ್ಷಿಸದ ಕೃಷ್ಣ, ಅಲ್ಲಿಯೂ ಚಡಪಡಿಸಿದರು. 'ಸೆಂಟ್ರಲ್ ಹಾಲ್‌ನಲ್ಲಿ ಬ್ರೆಡ್ ಟೋಸ್ಟ್ ತಿನ್ನುತ್ತಾ -ಟೀ ಕುಡಿಯುತ್ತಾ ಎಷ್ಟು ದಿನ ಹೀಗೆ ಕಾಲ ಕಳೆಯಲಿ' ಎಂದು ತಮ್ಮ ಆಪ್ತರ ಬಳಿ ಅವರು ಹೇಳಿಕೊಂಡಿದ್ದುಂಟು. 'ನೀವು ಬಿಟ್ಟು ಬಂದ ಕರ್ನಾಟಕದಲ್ಲಿ ಮತ್ತೆ ಕಾಂಗ್ರೆಸ್‌ಗೆ ಹುಲುಸು ಬೆಳೆ ತೆಗೆಯುವ ನೆಲ ಹದವಾಗಿದೆ. ನೀವೇ ಬೆಳೆಸಿದವರೊಬ್ಬರು ಅಣಿಯಾಗಿದ್ದಾರೆ. ಮತ್ತೆ ಏಕೆ ವಾಪಸ್ ಆಗಬಾರದು ಎಂದು ಹಿತೈಷಿಗಳು ನೀಡಿದ ಸಲಹೆಯನ್ನು ಕೃಷ್ಣ ತಳ್ಳಿ ಹಾಕಿದರು. ಕೆಲವು ತಿಂಗಳ ಬಳಿಕ, ಮತ್ತೆ ಅದಕ್ಕೆ ಅಣಿಯಾದರು. ರಾಜ್ಯಕ್ಕೆ ಮರಳಿ 'ಪಾಂಚಜನ್ಯ ಯಾತ್ರೆ' ಕೈಗೊಂಡ ಕೃಷ್ಣ, ಅಧಿಕಾರದ ಗದ್ದುಗೆ ಏರಿಯೇ ಬಿಟ್ಟರು.

ಆಡಳಿತದ ಬಗೆಗಿನ ಜನರ ನಾಡಿಮಿಡಿತಗಳನ್ನು ಅರಿಯದೇ, ಮಾಧ್ಯಮಗಳನ್ನು ಬಳಸಿ ಸೃಷ್ಟಿಸಿದ್ದು ಎನ್ನಲಾದ 'ಜನಪ್ರಿಯತೆ'ಯ ಗುಂಗಿನಲ್ಲಿ ಕೃಷ್ಣ ಇದ್ದರು. ಹೀಗಾಗಿ, ಮತ್ತೊಮ್ಮೆ ಮುಖ್ಯಮಂತ್ರಿಯಾಗಬೇಕೆಂಬ ತವಕದಲ್ಲಿ ಅವಧಿಪೂರ್ವ ಚುನಾವಣೆಗೆ ಹೋದರು. ಅದು ಫಲ ನೀಡಲಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರ ಬಂದಾಗ, ಇಲ್ಲಿರಬಾರದು ಎಂಬ ಕಾರಣಕ್ಕೆ ಕೃಷ್ಣ ಅವರನ್ನು ಮಹಾರಾಷ್ಟ್ರದ ರಾಜ್ಯಪಾಲರನ್ನಾಗಿ ಮಾಡಲಾಯಿತು. 'ಗಾಜಿನಮನೆ'ಯ ಸುಖಭೋಗ ಅವರಿಗೆ ಸಮಾಧಾನ ತರಲಿಲ್ಲ. 2007ರಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಸರ್ಕಾರ ಪತನಗೊಂಡು, ರಾಜಕೀಯ ವಿಪ್ಲವ ರಾಜ್ಯದಲ್ಲಿ ತಲೆ ಎತ್ತಿತ್ತು. ಆ ಹೊತ್ತಿಗೆ ರಾಜ್ಯಪಾಲರ ಸ್ಥಾನ ತೊರೆದು, ಕರ್ನಾಟಕಕ್ಕೆ ಬರಲು ತಯಾರಿ ನಡೆಸಿದ್ದರು. ಗಡಿಭಾಗದಿಂದಲೇ ಯಾತ್ರೆ ಆರಂಭಿಸಿ, ಮತ್ತೆ ಮುಖ್ಯಮಂತ್ರಿಯಾಗಬಹುದೆಂಬ ಆಕಾಂಕ್ಷೆಯೂ ಇತ್ತು. ಅಷ್ಟರಲ್ಲಿ ರಾಜಕೀಯ ವಾತಾವರಣ ಬದಲಾಗಿತ್ತು. ಯಾತ್ರೆಗೆ ಕಾಂಗ್ರೆಸ್ ಹೈಕಮಾಂಡ್ ಒಪ್ಪಿಗೆ ಸೂಚಿಸಲಿಲ್ಲ. ಅದೇ, ಅವರ ರಾಜಕೀಯ ಮಹತ್ವಾಕಾಂಕ್ಷೆಯ ಕೊನೆಯಾಯಿತು. ಆದರೆ, ರಾಜ್ಯಪಾಲ ಹುದ್ದೆ ತೊರೆದ ಅವರನ್ನು ರಾಜ್ಯಸಭೆಗೆ ಆಯ್ಕೆ ಮಾಡಿಸಿಕೊಂಡ ಕಾಂಗ್ರೆಸ್ ವರಿಷ್ಠರು, ಮನಮೋಹನ ಸಿಂಗ್ ಸಂಪುಟದಲ್ಲಿ ವಿದೇಶಾಂಗ ಸಚಿವ ಸ್ಥಾನ ನೀಡಿದರು. ನಾನಾ ಕಾರಣಗಳಿಂದ 2012ರಲ್ಲಿ ಅವರು ಆ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು.

ಕೃಷ್ಣ ಪುತ್ಥಳಿ ಚರ್ಚಿಸಿ ತೀರ್ಮಾನ: ಸಿ.ಎಂ

ಸುವರ್ಣ ವಿಧಾನಸೌಧ (ಬೆಳಗಾವಿ): 'ವಿಧಾನಸೌಧದ ಆವರಣದಲ್ಲಿ ಎಸ್.ಎಂ. ಕೃಷ್ಣ ಅವರ ಪುತ್ಥಳಿ ನಿರ್ಮಿಸುವ ಬಗ್ಗೆ ಚರ್ಚಿಸಿ ತೀರ್ಮಾನಿಸುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಎಸ್.ಎಂ. ಕೃಷ್ಣ ಅವರ ಪುತ್ಥಳಿ ನಿರ್ಮಿಸುವಂತೆ ಶಾಸಕರು ಆಗ್ರಹಿಸುತ್ತಿರುವ ಬಗ್ಗೆ ಸುದ್ದಿಗಾರರು ಮಂಗಳವಾರ ಗಮನ ಸೆಳೆದಾಗ ಅವರು ಈ ರೀತಿ ಪ್ರತಿಕ್ರಿಯಿಸಿದರು.

ನಟ ಶಿವರಾಜ್‌ಕುಮಾರ್ ಅವರು ಎಸ್‌.ಎಂ. ಕೃಷ್ಣ ಅವರ ಅಂತಿಮ ದರ್ಶನ ಪಡೆದರು. ಪ್ರೇಮಾ ಕೃಷ್ಣ ಇದ್ದರು

ಹುಟ್ಟೂರಿನಲ್ಲಿ ಅಂತ್ಯಕ್ರಿಯೆ ಇಂದು: ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ): ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಅಂತ್ಯಕ್ರಿಯೆಯು ಅವರ ಹುಟ್ಟೂರು ಸೋಮನಹಳ್ಳಿಯಲ್ಲಿ ಡಿ.11ರಂದು ಸಂಜೆ 4 ಗಂಟೆಗೆ ಸರ್ಕಾರಿ ಸಕಲ ಗೌರವದೊಂದಿಗೆ ನಡೆಯಲಿದೆ. ಇಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಸೋಮನಹಳ್ಳಿ ಹೊರವಲಯದಲ್ಲಿ ಅವರ ಕುಟುಂಬಕ್ಕೆ ಸೇರಿದ 'ಕೆಫೆ ಕಾಫಿ ಡೇ' ಪಕ್ಕದ ಎರಡು ಎಕರೆ ಜಾಗದಲ್ಲಿ ಒಕ್ಕಲಿಗ ಸಂಪ್ರದಾಯದಂತೆ, ಶ್ರೀಗಂಧದ ಮರಗಳನ್ನು ಬಳಸಿ ಅಗ್ನಿಸ್ಪರ್ಶ ಮಾಡಲು ಸಿದ್ಧತೆ ಕೈಗೊಳ್ಳಲಾಗಿದೆ. ಶ್ರೀರಂಗಪಟ್ಟಣದ ಭಾನುಪ್ರಕಾಶ್ ಶರ್ಮಾ ನೇತೃತ್ವ ವಹಿಸಲಿದ್ದಾರೆ.

ಗ್ರಾಮಕ್ಕೆ ಮಂಗಳವಾರ ಭೇಟಿ ನೀಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಥಳ ಪರಿಶೀಲನೆ ನಡೆಸಿ, ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗೆ ಸಲಹೆ, ಸೂಚನೆಗಳನ್ನು ನೀಡಿದರು. ನಂತರ ಮಾಧ್ಯಮದವರೊಂದಿಗೆ ಮಾತನಾಡಿ, 'ಡಿ.11ರಂದು ಬೆಳಿಗ್ಗೆ 8 ಗಂಟೆಗೆ ಬೆಂಗಳೂರಿನ ಸದಾಶಿವನಗರದಿಂದ ಪಾರ್ಥಿವ ಶರೀರವನ್ನು ಮೆರವಣಿಗೆ ಮೂಲಕ ಸೋಮನಹಳ್ಳಿಗೆ ಬೆಳಿಗ್ಗೆ 10 ಗಂಟೆಗೆ ತರಲಾಗುತ್ತದೆ' ಎಂದರು.

'ಕೆಂಗೇರಿ, ಬಿಡದಿ, ರಾಮನಗರ, ಚನ್ನಪಟ್ಟಣ ಬಸ್ ನಿಲ್ದಾಣಗಳ ಬಳಿ ತಲಾ 5 ನಿಮಿಷ ಅಂತಿಮ ದರ್ಶನಕ್ಕೆ ಅವಕಾಶ ನೀಡಲಿದ್ದೇವೆ. ದಾರಿ ಮಧ್ಯೆ ಯಾರೂ ಅಡ್ಡಗಟ್ಟದಂತೆ ನೋಡಿಕೊಳ್ಳಲು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಮಂಡ್ಯ ನಗರಕ್ಕೆ ಪಾರ್ಥಿವ ಶರೀರ ತರಬೇಕು ಎಂಬ ಒತ್ತಡವಿದೆ. ಆದರೆ, ಕುಟುಂಬಸ್ಥರ ಆಶಯದಂತೆ ಸೋಮನಹಳ್ಳಿಯ ಅವರ ಸ್ವಂತ ಜಾಗದಲ್ಲಿಯೇ ಅಂತಿಮದರ್ಶನ ಮತ್ತು ಅಂತ್ಯಕ್ರಿಯೆ ನಡೆಯಲಿದೆ' ಎಂದರು.

'ಕೃಷ್ಣ ಅವರ ಸಹೋದರನ ಮಗ ಗುರುಚರಣ್ ಮತ್ತು ಮೊಮ್ಮಗ ಅಮರ್ತ್ಯ ಜತೆಯಾಗಿ ಅಗ್ನಿಸ್ಪರ್ಶ ಮಾಡಲಿದ್ದಾರೆ. ಒಂದು ಟನ್ ಶ್ರೀಗಂಧದ ಮರಗಳನ್ನು ಬಳಸಲಾಗುವುದು. 15 ಮಂದಿ ವೈದಿಕರ ತಂಡ ಪಾಲ್ಗೊಳ್ಳಲಿದೆ' ಎಂದು ಭಾನುಪ್ರಕಾಶ್ ಶರ್ಮಾ ತಿಳಿಸಿದ್ದಾರೆ.

2 ಎಕರೆ ಜಾಗದಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು ಜೆಸಿಬಿ ಯಂತ್ರದಿಂದ ತೆರವುಗೊಳಿಸುವ ಕಾರ್ಯ ನಡೆಯಿತು. 30ಕ್ಕೂ ಹೆಚ್ಚು ಪೌರಕಾರ್ಮಿಕರು ಬೆಳಿಗ್ಗೆಯಿಂದಲೇ ಸ್ವಚ್ಛತಾ ಕಾರ್ಯ ಕೈಗೊಂಡಿದ್ದರು.

'300ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಿ, ಟ್ರಾಫಿಕ್ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳುತ್ತೇವೆ. ವಿವಿಐಪಿ, ವಿಐಪಿಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಿದ್ದೇವೆ. ಅಗತ್ಯಬಿದ್ದರೆ, ಬೆಂಗಳೂರು-ಮೈಸೂರು ಹಳೇ ಹೆದ್ದಾರಿ ಸಂಚಾರಕ್ಕೆ ಪರ್ಯಾಯ ಮಾರ್ಗ ಸೂಚಿಸುತ್ತೇವೆ' ಎಂದು ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಸೋಮನಹಳ್ಳಿಯ ಹೊರವಲಯದ 'ಕೆಫೆ ಕಾಫಿ ಡೇ' ಆವರಣದಲ್ಲಿ ಕೃಷ್ಣ ಅವರ ಅಂತ್ಯಕ್ರಿಯೆ ನಡೆಯಲಿರುವ ಸ್ಥಳವನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಂಗಳವಾರ ಪರಿಶೀಲಿಸಿದರು. ಶಾಸಕ ಕೆ.ಎಂ.ಉದಯ್, ಜಿಲ್ಲಾಧಿಕಾರಿ ಕುಮಾರ, ಐಜಿಪಿ ಬೋರಲಿಂಗಯ್ಯ, ಜಿಲ್ಲಾ ಪಂಚಾಯಿತಿ ಸಿಇಒ ಶೇಖ್ ತನ್ವೀರ್ ಆಸಿಫ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಇದ್ದರು — ಪ್ರಜಾವಾಣಿ ಚಿತ್ರ

ಸ್ವಗ್ರಾಮದಲ್ಲಿ ಮಡುಗಟ್ಟಿದ ಶೋಕ

ಎಸ್.ಎಂ. ಕೃಷ್ಣ ಅವರ ಸ್ವಗ್ರಾಮ ಮದ್ದೂರು ತಾಲ್ಲೂಕು ಸೋಮನಹಳ್ಳಿಯಲ್ಲಿ ಮಂಗಳವಾರ ಶೋಕ ಮಡುಗಟ್ಟಿತ್ತು. ನಿಧನ ಸುದ್ದಿ ಕೇಳಿದ ಜನ ಕೃಷ್ಣ ಅವರು ಜಿಲ್ಲೆಗೆ ನೀಡಿರುವ ಕೊಡುಗೆಗಳನ್ನು ಸ್ಮರಿಸುತ್ತಾ ಊರಿನ ಮಗನ ಗುಣಗಾನ ಮಾಡಿದರು.

ಕೃಷ್ಣ ಅವರು ಹುಟ್ಟಿದ ಮನೆಯ ಅಂಗಳದಲ್ಲಿ ಕುಟುಂಬಸ್ಥರು, ಸಂಬಂಧಿಕರು ಭಾವಚಿತ್ರವನ್ನಿಟ್ಟು, ದೀಪ ಹಚ್ಚಿ ಪೂಜೆ ಸಲ್ಲಿಸಿದರು. ಆಗಾಗ್ಗೆ ಮನೆಗೆ ಬರುತ್ತಿದ್ದ ಕೃಷ್ಣ ಅವರ ನೆನಪುಗಳನ್ನು ಮೆಲುಕು ಹಾಕುತ್ತಾ, ಸುಜಯಮ್ಮ ಮತ್ತು ಬಾನು ಮಹೇಶಗೌಡ ಕಣ್ಣೀರು ಹಾಕಿದರು.

'ತಾತನ ಜೀವನ ಮತ್ತು ಸಾಧನೆ ನಮಗೆ ದಾರಿದೀಪ. ಅವರೊಂದಿಗೆ ಕಳೆದ ಕ್ಷಣಗಳು ಮನದಲ್ಲಿ ಹಸಿರಾಗಿವೆ' ಎಂದು ಎಸ್.ಎಂ.ಕೃಷ್ಣ ಅವರ ತಮ್ಮನ ಮೊಮ್ಮಗ ಅನೀಶ್ ಪಟೇಲ್ ಹೇಳುತ್ತಾ, 12 ಅಡಿ ಎತ್ತರದ ತಾತನ ಕಟೌಟ್ ನಿಲ್ಲಿಸುವಲ್ಲಿ ನಿರತರಾದರು.

ದೇಗುಲ ಜೀರ್ಣೋದ್ಧಾರಕ್ಕೆ ನೆರವು

'ಗ್ರಾಮದಲ್ಲಿ ಅಭಯ ಆಂಜನೇಯಸ್ವಾಮಿ, ಮಾರಮ್ಮ, ಬೋರೇದೇವರ ದೇವಸ್ಥಾನಗಳನ್ನು ಎಸ್.ಎಂ.ಕೃಷ್ಣ ಅವರು ಈಚೆಗೆ ₹45 ಲಕ್ಷ ವೆಚ್ಚದಲ್ಲಿ ಜೀರ್ಣೋದ್ಧಾರ ಮಾಡಿಸಿದ್ದರು. ದೇಗುಲದಲ್ಲಿ 48 ದಿನಗಳ ಮಂಡಲ ಪೂಜೆ ನೆರವೇರಿದ ಬಳಿಕವೇ ಕೊನೆಯುಸಿರೆಳೆದಿದ್ದಾರೆ' ಎಂದು ಗ್ರಾಮಸ್ಥರು ತಿಳಿಸಿದರು.

'ಮಂಡಲ ಪೂಜೆ ನಡೆಯುವ ವೇಳೆ ತೀವ್ರ ಅನಾರೋಗ್ಯಕ್ಕೀಡಾಗಿದ್ದರು. ದೇವರ ಇಚ್ಛೆ ಎಂಬಂತೆ ಪೂಜೆ ಸುಸೂತ್ರವಾಗಿ ನೆರವೇರಿದ ಬಳಿಕ ನಿಧನರಾಗಿದ್ದಾರೆ. ಸಾವಿನ ಸಂದರ್ಭದಲ್ಲೂ ಗ್ರಾಮಕ್ಕೆ ಒಳಿತನ್ನೇ ಬಯಸಿದ್ದಾರೆ' ಎಂದು ಕೊಂಡಾಡಿದರು.

ಸಂಘರ್ಷಕ್ಕೆ ತಿರುಗಿದ ಮೀಸಲು ಹೋರಾಟ

ಒಂದನೇ ಪುಟದಿಂದ...

ಮಧ್ಯಾಹ್ನದವರೆಗೆ ಕಾದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಥಳಕ್ಕೆ ಬರಲಿಲ್ಲ.

ಸಚಿವರಾದ ಎಚ್.ಸಿ.ಮಹದೇವಪ್ಪ, ಲಕ್ಷ್ಮಿ ಹೆಬ್ಬಾಳಕರ, ಕೆ.ವೆಂಕಟೇಶ್ ಹಾಗೂ ಡಾ.ಎಂ.ಸಿ. ಸುಧಾಕರ ಅವರು ಮುಖ್ಯಮಂತ್ರಿ ಪರವಾಗಿ ಬಂದರು. ಇದಕ್ಕೆ ಒಪ್ಪದ ಜನ 'ಮುಖ್ಯಮಂತ್ರಿಯೇ ಬರಬೇಕು, ಇಲ್ಲದಿದ್ದರೆ ನಾವೇ ಸುವರ್ಣ ಸೌಧಕ್ಕೆ ಹೋಗುತ್ತೇವೆ' ಎಂದು ಕೂಗಾಟ ಶುರು ಮಾಡಿದರು. ಸಚಿವರ ಮಾತಿನ ಮಧ್ಯೆಯೇ ಮೈಕ್ ಎತ್ತಿಕೊಂಡ ಸ್ವಾಮೀಜಿ, 'ನಡೆಯಿರಿ. ನಾವು ಸಂಘರ್ಷ ಯಾತ್ರೆ ಮಾಡೋಣ' ಎಂದು ಕರೆ ನೀಡಿದರು. ಹುಮ್ಮಸ್ಸಿನಿಂದ ಜೈಕಾರ ಹಾಕುತ್ತ ಎದ್ದ ಜನಸ್ತೋಮ ಸುವರ್ಣ ಸೌಧದತ್ತ ನುಗ್ಗಿತು.

ರಾಷ್ಟ್ರೀಯ ಹೆದ್ದಾರಿಯಲ್ಲಿ ಸಿದ್ಧವಾಗಿ ನಿಂತಿದ್ದ 3,000ಕ್ಕೂ ಹೆಚ್ಚು ಪೊಲೀಸರು ಪ್ರತಿಭಟನಕಾರರನ್ನು ತಡೆದರು. ಹೋರಾಟದ ಮುಂಚೂಣಿ ವಹಿಸಿದ್ದ ವಕೀಲರು ಬ್ಯಾರಿಕೇಡ್ ಕಿತ್ತೆಸೆದು, ಪೊಲೀಸ್ ವಾಹನಗಳನ್ನು ಬದಿಗೆ ತಳ್ಳಿದರು. ಆಗ ಪೊಲೀಸರು ಲಾಠಿ ಪ್ರಹಾರ ಮಾಡಿದರು.

ಇದರಿಂದ ರೊಚ್ಚಿಗೆದ್ದ ಜನ ಪೊಲೀಸರ ಮೇಲೆ ಕಲ್ಲು, ಚಪ್ಪಲಿಗಳನ್ನು ತೂರಿದರು. ಹತ್ತಕ್ಕೂ ಹೆಚ್ಚು ಪೊಲೀಸರಿಗೆ ಗಾಯಗಳಾದವು. ಪೊಲೀಸ್ ವಾಹನಗಳು ಜಖಂಗೊಂಡವು. ವಾತಾವರಣ ಉದ್ವಿಗ್ನಗೊಂಡಿತು. ಪೊಲೀಸರು ಮತ್ತೊಮ್ಮೆ ಲಾಠಿ ಬೀಸಿದರು. ಈ ವೇಳೆ ಕೆಲವು ಕಾರ್ಯಕರ್ತರ ತಲೆ ಒಡೆದು, ರಕ್ತ ಬಂತು. ಹಲವರ ಕೈ-ಕಾಲು, ಬೆನ್ನಿನ ಮೇಲೆ ಲಾಠಿ ಪೆಟ್ಟಿನ ಬಾಸುಂಡೆ ಮೂಡಿದವು.

ಸ್ವಾಮೀಜಿ ಸೇರಿ ಹಲವರ ವಶ: ಲಾಠಿ ಚಾರ್ಜ್ ವಿಷಯ ತಿಳಿದು ಬಸವಜಯ ಮೃತ್ಯುಂಜಯ ಸ್ವಾಮೀಜಿ, ಶಾಸಕ ಬಸನಗೌಡ ಪಾಟೀಲ ಯತ್ನಾಳ, ವಿಧಾನಸಭೆ ಉಪನಾಯಕ ಅರವಿಂದ ಬೆಲ್ಲದ, ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ ಮುಂತಾದ ನಾಯಕರು ಹೆದ್ದಾರಿಗೆ ನುಗ್ಗಿ ಪೊಲೀಸ್ ವಾಹನಗಳನ್ನು ಅಡ್ಡಗಟ್ಟಿದರು. ಹೆದ್ದಾರಿಯಲ್ಲೇ ಧರಣಿ ಕುಳಿತರು.

'ಸ್ವಾಮೀಜಿ ಅವರ ಮೇಲೆಯೇ ಲಾಠಿ ಬೀಸಿದ್ದಾರೆ' ಎಂಬ ವದಂತಿ ಸ್ಥಳದಲ್ಲಿ ಹರಡಿತು. ಪರಿಸ್ಥಿತಿ ಮತ್ತಷ್ಟು ಬಿಗುವಿನಿಂದ ಕೂಡಿತು. ಸ್ಥಳಕ್ಕೆ ಧಾವಿಸಿದ ಹಿರಿಯ ಪೊಲೀಸ್ ಅಧಿಕಾರಿಗಳು ಧರಣಿ ಕೈಬಿಡುವಂತೆ ಮನವಿ ಮಾಡಿದರು. ಅದಕ್ಕೆ ಒಪ್ಪದೆ ಇದ್ದಾಗ ಎಲ್ಲರನ್ನೂ ವಶಕ್ಕೆ ಪಡೆದು ವಾಹನಗಳಲ್ಲಿ ಹತ್ತಿಸಿಕೊಂಡು ಹೋದರು.

ಆ ನಂತರವೂ ಹಲವರು ಹೆದ್ದಾರಿ ತಡೆ ಮುಂದುವರಿಸಿದರು. ಎಲ್ಲರನ್ನೂ ಬೇರೆಬೇರೆ ದಿಕ್ಕುಗಳಿಗೆ ಚದುರಿಸಿದ ಪೊಲೀಸರು, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ರಾಷ್ಟ್ರೀಯ ಹೆದ್ದಾರಿಯನ್ನು ಎರಡು ತಾಸಿಗೂ ಹೆಚ್ಚು ಬಂದ್ ಮಾಡಿದ್ದರಿಂದ 30 ಕಿ.ಮೀ ದೂರದವರೆಗೆ ವಾಹನಗಳು ಸಾಲಾಗಿ ನಿಂತವು.

ದೂರು ದಾಖಲು: 'ಘಟನೆಯಲ್ಲಿ 14 ಪೊಲೀಸರು, 10 ಹೋರಾಟಗಾರರು ಗಾಯಗೊಂಡಿದ್ದಾರೆ. ಹೋರಾಟಗಾರರು ಕಾನೂನು ಕೈಗೆತ್ತಿಕೊಂಡಿದ್ದರಿಂದ ಕನಿಷ್ಠ ಬಲಪ್ರಯೋಗ ಮಾಡಿ ಹತೋಟಿಗೆ ತರಲಾಗಿದೆ. ಉದ್ವಿಗ್ನ ವಾತಾವರಣ ಸೃಷ್ಟಿಸಿದವರ ಮೇಲೆ ದೂರು ದಾಖಲಿಸಿಕೊಳ್ಳಲಾಗಿದೆ. 70 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ' ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಪ್ರತಿಕ್ರಿಯಿಸಿದ್ದಾರೆ.

ಬೆಳಗಾವಿಯ ಸುವರ್ಣ ವಿಧಾನಸೌಧದ ಎದುರು ನಡೆದ ಹೋರಾಟದಲ್ಲಿ ಜನಸ್ತೋಮ ಉದ್ದೇಶಿಸಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿದರು

ಹಿಟ್ಲರ್ ಮಾರ್ಗ: ಎಚ್‌ಡಿಕೆ ಕಿಡಿ

ನವದೆಹಲಿ: ಪಂಚಮಸಾಲಿ ಸಮುದಾಯದವರ ಹೋರಾಟ ಹತ್ತಿಕ್ಕಲು ಕಾಂಗ್ರೆಸ್ ಸರ್ಕಾರ ಅಡಾಲ್ಫ್ ಹಿಟ್ಲರ್ ಮಾರ್ಗವನ್ನು ಆಯ್ಕೆ ಮಾಡಿಕೊಂಡಿರುವುದು ಅತ್ಯಂತ ದುರದೃಷ್ಟಕರ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಪಂಚಮಸಾಲಿ ಸಮುದಾಯದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರನ್ನು ಅತ್ಯಂತ ಹೇಯವಾಗಿ ನಡೆಸಿಕೊಂಡಿರುವುದು ಅತೀವ ನೋವುಂಟು ಮಾಡಿದೆ. ಇದು ಶಿಲಾಯುಗ ಕಾಲದ ಮನಃಸ್ಥಿತಿಯ ಸರ್ಕಾರ ಎಂದಿದ್ದಾರೆ. ಸರ್ಕಾರವೇ ಶಾಂತಿ ಕದಡುವ ಯತ್ನ ಮಾಡಿದೆ. ಕೂಡಲೇ ಸ್ವಾಮೀಜಿ ಹಾಗೂ ಸಮುದಾಯದ ಕ್ಷಮೆ ಕೇಳಬೇಕು ಹಾಗೂ ಅವರ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ತುರ್ತು ಕ್ರಮ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಬಾಯಲ್ಲಿ ಬಸವಣ್ಣನ ವಚನ, ಕೈಯಲ್ಲಿ ಲಾಠಿ: ಅಶೋಕ

'ಪಂಚಮಸಾಲಿ ಹೋರಾಟಗಾರರ ಮೇಲೆ ಪೊಲೀಸರು ಅಮಾನುಷವಾಗಿ ಲಾಠಿ ಚಾರ್ಜ್ ಮಾಡಿರುವುದು ಖಂಡನೀಯ. ಸರ್ಕಾರ ತನ್ನ ಹಿಟ್ಲರ್ ಧೋರಣೆ ಮೂಲಕ ಹೋರಾಟ ಹತ್ತಿಕ್ಕಲು ಪ್ರಯತ್ನಿಸುತ್ತಿದೆ' ಎಂದು ವಿಪಕ್ಷ ನಾಯಕ ಆರ್.ಅಶೋಕ ಪ್ರತಿಕ್ರಿಯಿಸಿದ್ದಾರೆ.

'ಎಕ್ಸ್'ನಲ್ಲಿ ಖಂಡಿಸಿದ ಅವರು, 'ಸಿ.ಎಂ ಅವರೇ, ನಿಮ್ಮ ಹಿಟ್ಲರ್ ಆಡಳಿತದಲ್ಲಿ ರಾಜ್ಯದ ಜನತೆ ತಮ್ಮ ಹಕ್ಕುಗಳಿಗಾಗಿ ಶಾಂತಿಯುತ ಪ್ರತಿಭಟನೆ ಮಾಡಲೂ ಅವಕಾಶವಿಲ್ಲವೇ? ಬಾಯಲ್ಲಿ ಬಸವಣ್ಣನ ವಚನ ಹೇಳಿ, ಕೈಯಲ್ಲಿ ಲಾಠಿ ಪ್ರಹಾರ ಮಾಡುವ ತಮ್ಮದು ಯಾವ ಸೀಮೆ ಸಿದ್ಧಾಂತ ಸ್ವಾಮಿ? ಪ್ರತಿಭಟನಕಾರರಿಗೆ ರಕ್ತ ಬರುವಂತೆ ಪೊಲೀಸರು ಲಾಠಿಯಿಂದ ಹೊಡೆದಿದ್ದಾರಲ್ಲ, ಪೊಲೀಸರು ಯಾರ ಆಣತಿಯಂತೆ ಈ ದುಸ್ಸಾಹಸ ಮಾಡಿದ್ದಾರೆ' ಎಂದು ಪ್ರಶ್ನಿಸಿದ್ದಾರೆ.

'ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ಮಾಡುವುದು ಜನರ ಹಕ್ಕು. ಜನರ ಸಮಸ್ಯೆ ಆಲಿಸಿ ಅವರಿಗೆ ಸಮಾಧಾನ ಹೇಳಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾಗಿರುವುದು ಸರ್ಕಾರದ ಕರ್ತವ್ಯ. ಈ ರೀತಿ ಮುತ್ಸದ್ದಿತನ ತೋರುವುದು ಬಿಟ್ಟು, ಏಕಾಏಕಿ ಲಾಠಿ ಚಾರ್ಜ್ ಮಾಡುವ ಮೂಲಕ ಒಂದು ಸಮುದಾಯವನ್ನು ಪ್ರಚೋದನೆ ಮಾಡಿ ರೊಚ್ಚಿಗೇಳಿಸುವುದು ಯಾವ ಸೀಮೆ ಆಡಳಿತ? ಯಾವ ಸೀಮೆ ನಾಯಕತ್ವ' ಎಂದೂ ಕೇಳಿದ್ದಾರೆ.

'ಪ್ರತಿಭಟನಕಾರರನ್ನು ಕರೆಯಿಸಿ ಮಾತನಾಡಿ. ಅವರ ಮೀಸಲಾತಿ ಬೇಡಿಕೆ ಬಗ್ಗೆ ತಮ್ಮ ನಿಲುವೇನು ಎನ್ನುವುದನ್ನು ಸ್ಪಷ್ಟಪಡಿಸಿ. ಪರಿಸ್ಥಿತಿ ಕೈಮೀರಿಹೋಗುವ ಮುನ್ನ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ' ಎಂದು ಅಶೋಕ ಆಗ್ರಹಿಸಿದ್ದಾರೆ.

ವಿಜಯೇಂದ್ರ ವಿರುದ್ಧ ಘೋಷಣೆ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು, ಪಂಚಮಸಾಲಿ ಹೋರಾಟದ ಸ್ಥಳಕ್ಕೆ ಬಂದು ಬೆಂಬಲ ಸೂಚಿಸಿದರು. ಆಗ ಪಂಚಮಸಾಲಿ ಸಮುದಾಯದ ಕೆಲವು ಕಾರ್ಯಕರ್ತರು ವಿಜಯೇಂದ್ರ ವಿರುದ್ಧ ಘೋಷಣೆ ಕೂಗಿದರು. ಇದರಿಂದ ಕೋಪಗೊಂಡ ಶಾಸಕ ಸಿದ್ದು ಸವದಿ ಕಾರ್ಯಕರ್ತರನ್ನು ಹೊಡೆಯಲು ಮುಂದಾದರು. ವಾಗ್ವಾದ, ತಳ್ಳಾಟ-ನೂಕಾಟ ನಡೆಯಿತು.

ಇದಕ್ಕೂ ಮುನ್ನ, ವಿಜಯೇಂದ್ರ ಭಾಷಣ ಮಾಡುವಾಗಲೂ ಕೆಲವರು ಧಿಕ್ಕಾರ ಕೂಗಿದರು. 'ನಿಮ್ಮ ತಂದೆ ಮುಖ್ಯಮಂತ್ರಿ ಇದ್ದಾಗ, ನಮಗಾಗಿ ಏನೂ ಮಾಡಲಿಲ್ಲ. ಇಷ್ಟು ದಿನ ಪಂಚಮಸಾಲಿ ಸಮಾಜ ಮರೆತಿರುವಿರಿ. ಚುನಾವಣೆ ಸಂದರ್ಭ ಮಾತ್ರ ನಾವು ನಿಮಗೆ ಬೇಕು' ಎಂದು ಆಕ್ರೋಶ ವ್ಯಕ್ತಪಡಿಸಿದರು. ಧಿಕ್ಕಾರ ಕೂಗಿದ ಬೆನ್ನಲ್ಲೇ ವಿಜಯೇಂದ್ರ ಗಡಿಬಿಡಿಯಲ್ಲೇ ಭಾಷಣ ಮಾಡಿ ಮುಗಿಸಿದರು.

ಸಚಿವೆ, ಶಾಸಕರೂ ಭಾಗಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಶಾಸಕರಾದ ಬಾಬಾಸಾಹೇಬ ಪಾಟೀಲ, ಭರಮಗೌಡ (ರಾಜು) ಕಾಗೆ, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಮಾಜಿ ಸಚಿವ ಎ.ಬಿ.ಪಾಟೀಲ ಮುಂತಾದ ಕಾಂಗ್ರೆಸ್ ನಾಯಕರೂ ಪ್ರತಿಭಟನೆಗೆ ಬೆಂಬಲ ಸೂಚಿಸಿದರು.

ನಾಳೆ ರಾಜ್ಯದಾದ್ಯಂತ ಪ್ರತಿಭಟನೆ

ಲಾಠಿಚಾರ್ಜ್ ಮಾಡಿದ ಸರ್ಕಾರದ ಕ್ರಮ ಖಂಡಿಸಿ ಡಿ.12ರಂದು ರಾಜ್ಯದಾದ್ಯಂತ ಹೋರಾಟ ಮಾಡಲು ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಕರೆ ನೀಡಿದರು.

ಮಂಗಳವಾರ ರಾತ್ರಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ಹೋರಾಟ ಹತ್ತಿಕ್ಕಲು ಸಾಧ್ಯವಿಲ್ಲ. ನೀವು ಮಾಡಿದ ದಬ್ಬಾಳಿಕೆಯಿಂದ ಈ ಹೋರಾಟ ರಾಜ್ಯದಾದ್ಯಂತ ತೀವ್ರ ಸ್ವರೂಪ ಪಡೆಯಲಿದೆ. ತಡೆದು ತೋರಿಸಿ' ಎಂದೂ ಸವಾಲು ಹಾಕಿದರು.

ಆಳ್ವಾಸ್ ವಿರಾಸತ್: ಕಲಾತಂಡಗಳಿಂದ ಪ್ರದರ್ಶನ

ಸಾಂಸ್ಕೃತಿಕ ವೈಭವದ ಸೊಬಗು

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ವೀರಗಾಸೆ ಅಬ್ಬರ, ಕೋಲಾಟದ ವಯ್ಯಾರ, ಚೆಂಡೆ ವಾದನ ರೌದ್ರತೆ, ಜೋಗಿ ಕುಣಿತದ ಗೇಯತೆ, ಕಂಸಾಳೆಯ ಕಸರತ್ತು, ಬಣ್ಣದ ಗಾರುಡಿ ಗೊಂಬೆಗಳು, ಝಗಮಗಿಸುವ ಪ್ರಭಾವಳಿಯೊಂದಿಗೆ ಚಿತ್ರೈಸಿದ ಕೇರಳದ ದೇವರ ಬೊಂಬೆಗಳು...

ಮಂಗಳವಾರ ಇಲ್ಲಿ ಆರಂಭವಾದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಳ್ವಾಸ್ ವಿರಾಸತ್ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವದ 30 ನೇ ವರ್ಷದ ಉದ್ಘಾಟನಾ ಸಮಾರಂಭದಲ್ಲಿ ಸಾಗಿ ಬಂದ ಮೆರವಣಿಗೆ ದೇಶದ ಸಾಂಸ್ಕೃತಿಕ ಸಿರಿವಂತಿಕೆಯ ದರ್ಶನ ಮಾಡಿಸಿತು.

ಜಾನಪದ ಕಲಾಪ್ರಕಾರಗಳು, ಧಾರ್ಮಿಕ ಉತ್ಸವಗಳ ಸಂದರ್ಭದಲ್ಲಿ ಪ್ರದರ್ಶಿಸುವ ಕಲಾಪ್ರಕಾರಗಳು ಕಣ್ಣಿಗೆ ಹಬ್ಬವನ್ನುಂಟು ಮಾಡಿದವು. 150ಕ್ಕೂ ಅಧಿಕ ಕಲಾತಂಡಗಳ 4,000ಕ್ಕೂ ಅಧಿಕ ಕಲಾವಿದರು ಸುಮಾರು ಎರಡು ಗಂಟೆಗಳ ಕಾಲ ನೀಡಿದ ಪ್ರದರ್ಶನ ನೀಡಿದವು.

ಬಾನಂಚಿನಲ್ಲಿ ಮಿಂಚುತ್ತಿದ್ದ ಮಿನುಗು ದೀಪಗಳ ನಡುವೆ ಕಂಗೊಳಿಸುತ್ತಿದ್ದ ಬಯಲು ರಂಗಮಂದಿರದಲ್ಲಿ ಸೇರಿದ್ದ ಸಾವಿರಾರು ಸಹೃದಯರು ತದೇಕ ಚಿತ್ತದಿಂದ ಈ ಭವ್ಯ ಪ್ರದರ್ಶನವನ್ನು ಕಣ್ತುಂಬಿಕೊಂಡರು.

ದಾಸಯ್ಯರ ಶಂಖನಾದ, ಕೊಂಬು, ಕಹಳೆಗಳ ನಿನಾದದೊಂದಿಗೆ ಶುರುವಾದ ಕಲಾ ತಂಡಗಳ ಮೆರವಣಿಗೆ ರಥ ಸಂಚಲನದೊಂದಿಗೆ ಮುಕ್ತಾಯವಾಯಿತು.

'ಆಳ್ವಾಸ್ ವಿರಾಸತ್' ಅನ್ನು ಡಿ.ವೀರೇಂದ್ರ ಹೆಗ್ಗಡೆ ಅವರು ದೀಪ ಬೆಳಗಿಸಿ ಉದ್ಘಾಟಿಸಿದರು. ಡಾ.ಮೋಹನ್ ಆಳ್ವ,ಕೆ. ಪ್ರಕಾಶ್ ಶೆಟ್ಟಿ, ಪಿ.ಜಿ.ಆರ್‌ಸಿಂಧ್ಯಾ ಪಾಲ್ಗೊಂಡಿದ್ದರು

ಕಿರು ರಥದಲ್ಲಿ ಗಣಪತಿ, ಪಲ್ಲಕ್ಕಿಯಲ್ಲಿ ಲಕ್ಷ್ಮಿ, ಸರಸ್ವತಿ ವಿಗ್ರಹಗಳ ಮೆರವಣಿಗೆ ನಡೆಯಿತು. ಕೊನೆಯಲ್ಲಿ ಶ್ರೀರಾಮ ಹಾಗೂ ಶ್ರೀಕೃಷ್ಣನ ವಿಗ್ರಹಗಳಿದ್ದ ರಥವನ್ನು ಎಳೆಯಲಾಯಿತು.

ವಾರಾಣಸಿಯ ವಿಪುಲ್ ಶರ್ಮಾ ನೇತೃತ್ವದಲ್ಲಿ ವಿಪ್ರ ಬಳಗದವರು ರಥಾರತಿ ನೆರವೇರಿಸಿದರು. ಬಾನಂಗಳದಲ್ಲಿ ಬಾಣ ಬಿರುಸುಗಳ ಚಿತ್ತಾರ ಕಾರ್ಯಕ್ರಮಕ್ಕೆ ಮೆರುಗು ತುಂಬಿತು.

ವಿಶ್ವವನ್ನೇ ಹೃದಯದಲ್ಲಿ ತುಂಬುವ 'ವಿರಾಸತ್'- ಹೆಗ್ಗಡೆ: ಆಳ್ವಾಸ್ ವಿರಾಸತ್ ಉದ್ಘಾಟಿಸಿ ಮಾತನಾಡಿದ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, 'ವಿಶ್ವವನ್ನೇ ಹೃದಯದಲ್ಲಿ ತುಂಬುವ ಹಬ್ಬ ವಿರಾಸತ್. ಇದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಹೆಮ್ಮೆಯ, ಸಾಹಿತ್ಯ ಮತ್ತು ಸಂಸ್ಕೃತಿ ಜೊತೆಯಾಗಿ ಮೇಳೈಸಿದ ಕಾರ್ಯಕ್ರಮ' ಎಂದು ಬಣ್ಣಿಸಿದರು.

ಅಧ್ಯಕ್ಷತೆ ವಹಿಸಿದ್ದ ಎಂ.ಜಿ.ಆರ್. ಗ್ರೂಪ್ ಅಧ್ಯಕ್ಷ ಕೆ. ಪ್ರಕಾಶ್ ಶೆಟ್ಟಿ, 'ಮೋಹನ್ ಆಳ್ವ ದೃಷ್ಟಿಯೇ ಕ್ರಿಯೆಯಾಗಿ ಇಲ್ಲಿ ರೂಪುಗೊಂಡಿದೆ' ಎಂದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ, 'ಅಂದು ಊರಿಗೆ ಸೀಮಿತವಾಗಿದ್ದ ವಿರಾಸತ್ ಇಂದು ರಾಷ್ಟ್ರೀಯ ಹಬ್ಬವಾಗಿದೆ. ನಮ್ಮ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕಾಗಿ ಕ್ರೀಡೆ, ಸಾಂಸ್ಕೃತಿಕ ತರಬೇತಿ ನೀಡುತ್ತಿದ್ದೇವೆ. ಮಂಗಳೂರು ವಿಶ್ವವಿದ್ಯಾನಿಲಯದ 49 ಅಥ್ಲೆಟಿಕ್ಸ್ ದಾಖಲೆ ಆಳ್ವಾಸ್ ಹೆಸರಿನಲ್ಲಿವೆ. ನಮ್ಮ ಸಂಸ್ಥೆಯಲ್ಲಿ ಪ್ರತಿವರ್ಷ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಾಂಸ್ಕೃತಿಕ ತರಬೇತಿ ಪಡೆದು, ರಾಷ್ಟ್ರ ಮಟ್ಟದಲ್ಲಿ ಕಾರ್ಯಕ್ರಮ ನೀಡುತ್ತಾರೆ' ಎಂದರು.

ಇದೇ 15ರವರೆಗೆ ವಿರಾಸತ್ ನಡೆಯಲಿದೆ. ವಿವಿಧ ಮೇಳಗಳೂ ಇವೆ.

'ಪ್ರಜಾವಾಣಿ' ರಸಪ್ರಶ್ನೆ

ಬಾಗಲಕೋಟೆ ನವನಗರದ ಕಲಾ ಭವನದಲ್ಲಿ ಮಂಗಳವಾರ ನಡೆದ ಬಾಗಲಕೋಟೆ ವಲಯ ಮಟ್ಟದ 'ಪ್ರಜಾವಾಣಿ' ರಸಪ್ರಶ್ನೆ ಚಾಂಪಿಯನ್‌ಷಿಪ್‌ನಲ್ಲಿ ವಿಜೇತರಾದ ಲೋಕಾಪುರದ ಸರ್ಕಾರಿ ಆದರ್ಶ ಶಾಲೆಯ ಸಮರ್ಥ ನಲವಡೆ ಮತ್ತು ರಾಹತ್ ಅಲಿ ಡಂಗಿ ಅವರಿಗೆ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಶಿಧರ ಕುರೇರ ಬಹುಮಾನ ವಿತರಿಸಿದರು. ಕ್ಯೂರಿಯಾಸಿಟಿ ನಾಲೆಜ್ ಸಲ್ಯೂಷನ್ಸ್ ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಇದ್ದಾರೆ ಪ್ರಜಾವಾಣಿ ಚಿತ್ರ

ವಿದ್ಯಾರ್ಥಿನಿ ಸಮುದ್ರ ಪಾಲು; ಮೂವರು ಕಣ್ಮರೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮುರುಡೇಶ್ವರಕ್ಕೆ ಪ್ರವಾಸಕ್ಕೆ ತೆರಳಿದ್ದ ವಿದ್ಯಾರ್ಥಿಗಳು
- ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮೂವರು

ಮುಳಬಾಗಿಲು (ಕೋಲಾರ) / ಭಟ್ಕಳ: ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಸಮೀಪದ ಮುರುಡೇಶ್ವರಕ್ಕೆ ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ಎಂ.ಕೊತ್ತೂರು ಬಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ಮಂಗಳವಾರ ಸಮುದ್ರದಲ್ಲಿ ಮುಳುಗಿ ಮೃತಪಟ್ಟಿದ್ದಾಳೆ.

ಮೂವರು ವಿದ್ಯಾರ್ಥಿನಿಯರು ಕಣ್ಮರೆಯಾಗಿದ್ದು ಶೋಧ ಕಾರ್ಯಾಚರಣೆ ನಡೆಯುತ್ತಿದೆ. ಮೂವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನೀರಿನಲ್ಲಿ ಆಟವಾಡಲು ಸಮುದ್ರಕ್ಕೆ ಇಳಿದಿದ್ದ 9ನೇ ತರಗತಿ ವಿದ್ಯಾರ್ಥಿನಿ ಶ್ರಾವಂತಿ ಗೋಪಾಲಪ್ಪ (15) ಮೃತಪಟ್ಟಿದ್ದಾಳೆ. ಆಕೆಯ ಮೂವರು ಸಹಪಾಠಿಗಳು ಅಲೆಯಲ್ಲಿ ಕೊಚ್ಚಿಹೋಗಿದ್ದು, ಶೋಧ ನಡೆಯುತ್ತಿದೆ.

ಮೂವರು ವಿದ್ಯಾರ್ಥಿನಿಯರನ್ನು ರಕ್ಷಿಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ.ಶಾಲೆಯ 54 ವಿದ್ಯಾರ್ಥಿಗಳು ಪ್ರವಾಸ ತೆರಳಿದ್ದರು. ಸಮುದ್ರದ ಅಲೆಗಳಿಗೆ ಕೊಚ್ಚಿ ಹೋಗಿದ್ದ ಏಳು ವಿದ್ಯಾರ್ಥಿನಿಯರ ಪೈಕಿ ಮೂವರನ್ನು ಸ್ಥಳೀಯರು ರಕ್ಷಿಸಿದ್ದಾರೆ.

ಸಮ್ಮೇಳನದ ಊಟ ವ್ಯವಸ್ಥೆ ಸಮಿತಿಗೆ ಬಿಟ್ಟದ್ದು: ಗೊ.ರು.ಚನ್ನಬಸಪ್ಪ

ಚಿಕ್ಕಮಗಳೂರು: 'ಸಾಹಿತ್ಯ ಸಮ್ಮೇಳನಕ್ಕೆ ಬರುವ ಜನರಿಗೆ ಯಾವ ರೀತಿಯ ಊಟ ಕೊಡಬೇಕು ಎಂಬುದು ಸಮ್ಮೇಳನ ಸ್ವಾಗತ ಸಮಿತಿ ಮತ್ತು ಆಹಾರ ಸಮಿತಿ ನಿರ್ಧಾರಕ್ಕೆ ಬಿಟ್ಟದ್ದು' ಎಂದು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಗೊ.ರು.ಚನ್ನಬಸಪ್ಪ ಹೇಳಿದರು.

ಚಿಕ್ಕಮಗಳೂರು ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಪ್ರತಿಕ್ರಿಯಿಸಿದ ಅವರು, 'ಯಾರದಾದರೂ ಮನೆಗೆ ಹೋದಾಗ ಅದೇ ಬೇಕು, ಇದೇ ಬೇಕು ಎಂದು ಕೇಳುವುದಿಲ್ಲ. ಅವರು ಕೊಡುವುದನ್ನು ಊಟ ಮಾಡಬೇಕಾಗುತ್ತದೆ ಅಲ್ಲವೇ' ಎಂದು ಪ್ರಶ್ನಿಸಿದರು. ಸಮ್ಮೇಳನದಲ್ಲಿ ಬಾಡೂಟವೂ ಇರಬೇಕೆಂದು ಮಂಡ್ಯದಲ್ಲಿ ಹೋರಾಟ ನಡೆದಿದ್ದನ್ನು ಇಲ್ಲಿ ಸ್ಮರಿಸಬಹುದು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರ ಪರವಾಗಿ ನಾವು, ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕೊಳತ್ತೂರ ಗ್ರಾಮದ ಸರ್ವೆ ನಂ. 219/2 ರಲ್ಲಿನ 3 ಎಕರೆ, 218/1 ರಲ್ಲಿನ 2 ಎಕರೆ, 218/2 ರಲ್ಲಿನ 2 ಎಕರೆ 1 ಗುಂಟಾ, 218/3 ರಲ್ಲಿನ 20 ಗುಂಟಾ, 218/4 ರಲ್ಲಿನ 20 ಗುಂಟಾ, 232/3 ರಲ್ಲಿನ 4 ಎಕರೆ 2 ಗುಂಟಾ, 232/16 ರಲ್ಲಿನ 1 ಎಕರೆ 38 ಗುಂಟಾ, 232/17 ರಲ್ಲಿನ 20 ಗುಂಟಾ, 232/18 ರಲ್ಲಿನ 6 ಗುಂಟಾ, 256/1 ರಲ್ಲಿನ 1 ಎಕರೆ 10 ಗುಂಟಾ, 256/2 ರಲ್ಲಿನ 1 ಎಕರೆ 25 ಗುಂಟಾ, 256/3 ರಲ್ಲಿನ 5 ಗುಂಟಾ, ಒಟ್ಟಾರೆ 17 (ಹದಿನೇಳು) ಎಕರೆ 27 (ಇಪ್ಪತ್ತೇಳು) ಗುಂಟಾ ವಿಸ್ತೀರ್ಣವುಳ್ಳ ಜಮೀನುಗಳನ್ನು (ಇಲ್ಲಿ ಇನ್ನುಮುಂದೆ, ಸಮಗ್ರವಾಗಿ **'ಷೆಡ್ಯೂಲ್ ಪ್ರಾಪರ್ಟಿ'** ಎನ್ನಲಾಗುವ) ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಖರೀದಿಸುವ ಉದ್ದೇಶಕ್ಕೆ ಸಂಬಂಧಿಸಿದಂತೆ, ಸದರಿ ಜಮೀನುಗಳ ಹಕ್ಕು ಮತ್ತು ಅಧಿಕಾರವನ್ನು ನಾವು ಪರಿಶೋಧಿಸುತ್ತಿದ್ದೇವೆ.

ಸದರಿ ಷೆಡ್ಯೂಲ್ ಪ್ರಾಪ್ಟಿಗಳಿಗೆ ಅಥವಾ ಪ್ರಾಪರ್ಟಿಗಳ ಯಾವುದೇ ಭಾಗಗಳಿಗೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತಿ/ಗಳಿಗೆ ಅಥವಾ ಸಂಸ್ಥೆ/ಗಳಿಗೆ ಯಾವುದೇ ರೀತಿಯ ಮಾರಾಟ, ವರ್ಗಾವಣೆ, ವಿನಿಮಯ, ಅಸೈನ್‌ಮೆಂಟ್, ಒಪ್ಪಂದ, ಗುತ್ತಿಗೆ, ಮಾರಾಟ, ಬಿಟ್‌ಗೋಯಿಂಗ್ಸ್, ಫ್ಲೋರ್ ಸ್ಪೇಸ್ ಇಂಡೆಕ್ಸ್, ಅಭಿವೃದ್ಧಿ ಸಾಧ್ಯತೆ, ಅಭಿವೃದ್ಧಿ ಹಕ್ಕುಗಳು, ಉಯಿಲು, ಬಿಡುಗಡೆ, ರೆಲಿಂಕ್ವಿಷ್‌ಮೆಂಟ್, ಯಾವುದೇ ಕಾನೂನು ನ್ಯಾಯಾಲಯದ ಡಿಕ್ರಿ ಅಥವಾ ಆದೇಶ, ಋಣಭಾರ, ಅಡಮಾನ (ಇಕ್ವಿಟೇಬಲ್ ಅಥವಾ ಇನ್ನಿತರೆ), ಭೋಗ್ಯ, ಲೀನ್, ಚಾರ್ಜ್, ನಿರ್ವಹಣೆ, ಪರವಾನಗಿ, ಉಡುಗೊರೆ, ಅನುವಂಶಿಕ, ಉತ್ತರದಾಯಿತ್ವ, ಹೈಪೊಥಿಕೇಶನ್, ಅವಿಭಜಿತ ಪಾಲು, ಸ್ವಾಧೀನ, ಈಸ್‌ಮೆಂಟ್, ಟ್ರಸ್ಟ್, ಬಿಕ್ವೆಸ್ಟ್, ಸಬ್-ಲೀಸ್, ಅಂಡರ್-ಲೀಸ್, ಟೆನನ್ಸಿ, ಸಬ್-ಟೆನನ್ಸಿ, ಲೀವ್ & ಲೈಸೆನ್ಸ್, ಈಸಮೆಂಟ್, ಆಪ್ಷನ್ಸ್, ಮೊದಲ ತಿರಸ್ಕಾರದ ಹಕ್ಕು ಅಥವಾ ಮೊದಲ ಆಫರ್ ಹಕ್ಕು ಅಥವಾ ಪ್ರಿಯಾಂಪ್ಷನ್ ಅಥವಾ ಯಾವುದೇ ಸ್ವರೂಪದ ಋಣಭಾರ, ಕೊವೆನಂಟ್ ಅಥವಾ ಕಂಡಿಷನ್, ಪಾಲುದಾರಿಕೆ, ಟ್ರಸ್ಟ್, ಕುಟುಂಬ ಒಪ್ಪಂದ/ಇತ್ಯರ್ಥ ಅಥವಾ ಇತರೆ ಡಿಸ್ಪೊಸಿಷನ್, ಅಥವಾ ಯಾವುದೇ ಲಿಸ್ಪೆಂಡೆನ್ಸ್ ಅಡಿಯಲ್ಲಿ, ಇಂಜಂಕ್ಷನ್, ಅಟ್ಯಾಚ್‌ಮೆಂಟ್, ಯಾವುದೇ ಕಾನೂನು ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ಕಂದಾಯ ಅಥವಾ ಶಾಸನಬದ್ಧ ಪ್ರಾಧಿಕಾರ ಅಥವಾ ತರ್ಪು ನೀಡುವ ಪ್ರಾಧಿಕಾರ ಹೊರಡಿಸಿರುವ ಡಿಕ್ರಿ ಅಥವಾ ಆದೇಶ ಅಥವಾ ಅವಾರ್ಡ್, ಅಥವಾ ಯಾವುದೇ ಒಪ್ಪಂದ, ಡೀಡ್, ಡಾಕ್ಯೂಮೆಂಟ್ ಅಥವಾ ಪವರ್ ಆಫ್ ಅಟಾರ್ನಿ ಅಥವಾ ಯಾವುದೇ ಸ್ವರೂಪದ ಆಕ್ಷೇಪಣೆಗಳ ರೀತಿಯಾಗಿ ಅಥವಾ ಅಡಿಯಲ್ಲಿ ಅಥವಾ ಇಂತಹವುಗಳ ಮುಖಾಂತರ, ಸದರಿ ಸ್ವತ್ತುಗಳ ಅಥವಾ ಸ್ವತ್ತುಗಳ ಭಾಗಗಳ ಮೇಲೆ ಯಾವುದೇ ಪಾಲು, ಹಕ್ಕು, ಅಧಿಕಾರ, ಕ್ಲೇಮ್, ಫಲಾನುಭ, ಲೀನ್, ಡಿಮಾಂಡ್ ಅಥವಾ ಹಿತಾಸಕ್ತಿ ಹೊಂದಿದ್ದಲ್ಲಿ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ 14 (ಹದಿನಾಲ್ಕು) ದಿನಗಳೊಳಗೆ, ಈ ಕೆಳಗಿನ ಸಹಿದಾರರ ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಮತ್ತು ಅಗತ್ಯ ಪೂರಕ ದಾಖಲಾತಿಗಳ ಮೂಲ ಪ್ರತಿಗಳ ನೋಟರಿ/ಸರ್ಟಿಫೈಡ್ ಪ್ರತಿಗಳ ಸಮೇತ ಮಾಹಿತಿ ನೀಡತಕ್ಕದ್ದು, ಇದಕ್ಕೆ ತಪ್ಪಿದಲ್ಲಿ, ಸದರಿ ಷೆಡ್ಯೂಲ್ ಪ್ರಾಪ್ಟಿಗಳಿಗೆ ಸಂಬಂಧಿಸಿದಂತೆ ಇನ್ನಿತರೆ ಯಾರದೂ ಹಕ್ಕು, ಅಧಿಕಾರ, ಕ್ಲೇಮ್, ಡಿಮಾಂಡ್ ಯಾವುದೂ ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ ಮತ್ತು ಸದರಿ ಷೆಡ್ಯೂಲ್ ಪ್ರಾಪರ್ಟಿಯ ಹಕ್ಕುಗಳು ಸ್ಪಷ್ಟವಾಗಿದೆ ಮತ್ತು ವ್ಯವಹಾರಕ್ಕೆ ಯೋಗ್ಯವಾಗಿವೆ ಎಂದು ಕೂಡ ಪರಿಗಣಿಸಲಾಗುತ್ತದೆ. ಪೂರಕ ದಾಖಲಾತಿಗಳು ಇಲ್ಲದಿರುವ ಯಾವುದೇ ಕ್ಲೇಮ್‌ಗಳನ್ನು ಪರಿಗಣಿಸಲಾಗುವುದಿಲ್ಲ.

ದಯವಿಟ್ಟು ನೀವು ರವಾನಿಸುವ ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ಬರೆಯಿರಿ

ದಿನಾಂಕ: 11/12/2024
ಸ್ಥಳ: ಬೆಂಗಳೂರು

ಅಭಿಲಾಷ್ ಪಿಳ್ಳೈ
ಪಾಲುದಾರರು
ಸಿರಿಲ್ ಅಮರಚಂದ್ ಮಂಗಲದಾಸ್
ವಕೀಲರು ಮತ್ತು ಸಾಲಿಸಿಟರ್ಸ್
ಪ್ರೆಸ್ಟೀಜ್ ಫಾಲ್ಕನ್ ಟವರ್
3ನೇ ಮಹಡಿ, ಬ್ರಂಟನ್ ರೋಡ್, ಎಂ.ಜಿ.ರೋಡ್ ಪಕ್ಕ
ಬೆಂಗಳೂರು 560 025
ಫೋನ್: 080 6792 2000

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಸೋಮನಹಳ್ಳಿ ಮಲ್ಲಯ್ಯ ಕೃಷ್ಣ (ಎಸ್.ಎಂ. ಕೃಷ್ಣ)
(1932 - 2024)

ಎಸ್.ಎಂ. ಕೃಷ್ಣ ಅವರು ಈ ನಾಡು ಮತ್ತು ದೇಶ ಕಂಡ ಅಪರೂಪದ ಮುತ್ಸದ್ದಿ. ಬೆಂಗಳೂರನ್ನು ಐ.ಟಿ. ತಂತ್ರಜ್ಞಾನದ ಸೋಪಾನವನ್ನಾಗಿ ಮಾಡಿದ ಕಾರಣ ಪುರುಷರು. ಅವರ ದೂರದೃಷ್ಟಿಯಿಂದಾಗಿ ಬೆಂಗಳೂರು 'ಭಾರತದ ಸಿಲಿಕಾನ್ ವ್ಯಾಲಿ'ಯಾಯಿತು. 25 ವರ್ಷಗಳ ನಂತರವೂ ಈ ಖ್ಯಾತಿ ಅಬಾಧಿತವಾಗಿದೆ.

ಮುಖ್ಯಮಂತ್ರಿಯಾಗಿ ಎಸ್.ಎಂ. ಕೃಷ್ಣ ಅವರು ಶಾಲಾ ಮಕ್ಕಳಿಗಾಗಿ ರೂಪಿಸಿದ ಮಧ್ಯಾಹ್ನದ ಬಿಸಿಯೂಟ ಯೋಜನೆಯು ದೇಶಕ್ಕೇ ಮಾದರಿಯಾಯಿತು. ಜೊತೆಗೆ ರೈತರಿಗೆ ಆರೋಗ್ಯ ವಿಮಾ ಸೌಲಭ್ಯದ 'ಯಶಸ್ವಿನಿ' ಯೋಜನೆ, ರೈತಪರವಾದ ಭೂಮಿ ಯೋಜನೆ, ಬೆಂಗಳೂರು-ಮೈಸೂರು ಚತುಷ್ಪಥ ಹೆದ್ದಾರಿ ಅಭಿವೃದ್ಧಿ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ದೃಢ ಹೆಜ್ಜೆ ಮತ್ತು ಕಾವೇರಿ ನೀರಾವರಿ ನಿಗಮದ ಸ್ಥಾಪನೆ... ಇವೆಲ್ಲವೂ ಕೃಷ್ಣ ಅವರ ಐತಿಹಾಸಿಕ ಸಾಧನೆಗಳಾಗಿವೆ.

ಅಭಿವೃದ್ಧಿಗೆ ಹೊಸ ದಿಕ್ಕು ಮತ್ತು ಆರ್ಥಿಕತೆಗೆ ಹೊಸ ಸ್ಪರ್ಶ ನೀಡಿದ ಹೆಗ್ಗಳಿಕೆ ಎಸ್.ಎಂ. ಕೃಷ್ಣ ಅವರದು. ವಿಧಾನಸಭೆ, ವಿಧಾನ ಪರಿಷತ್ತು, ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಸಂಸದೀಯ ಪಟುವಾಗಿದ್ದ ಕೃಷ್ಣ ಅವರು ಕಲೆ, ಕ್ರೀಡೆ, ಸಂಸ್ಕೃತಿ ಪ್ರೇಮಿಗಳೂ ಆಗಿದ್ದರು. ಜನಾನುರಾಗಿ ಆಗಿದ್ದ ಕೃಷ್ಣ ಅವರು ಮಂಗಳವಾರ ನಮ್ಮನ್ನು ಅಗಲಿದ್ದಾರೆ.

ಶ್ರೀಯುತರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ.

ಅಂತಿಮ ಯಾತ್ರೆಯ ಮಾರ್ಗ:

ಬೆಂಗಳೂರಿನ ಸದಾಶಿವ ನಗರ ➡ ಕೆಂಗೇರಿ ➡ ಬಿಡದಿ ➡ ರಾಮನಗರ ➡ ಚನ್ನಪಟ್ಟಣ ➡ ಸೋಮನಹಳ್ಳಿ
(ಮಧ್ಯಾಹ್ನ 3 ಗಂಟೆಗೆ ಸ್ವಗ್ರಾಮದಲ್ಲಿ ಸರಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ)

ಡಾ. ಸಿ.ಎನ್. ಅಶ್ವತ್ಥನಾರಾಯಣ
ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಶಾಸಕರು, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ

ತಂತ್ರಜ್ಞಾನ ಪುಟದ 'ಕೊಕ್ಕರೆ' ಡ್ರೋನು ಲೇಖನ ಓದಿರಿ...

This is only an advertisement for information purposes and not for publication, distribution, or release, directly or indirectly in the United States of America or otherwise outside India. This is not an announcement for the offer document. All capitalized terms used and not defined herein shall have the meaning assigned to them in the letter of offer dated June 12, 2024 filed with the Stock Exchanges, namely BSE Limited ("**BSE**") and the National Stock Exchange of India Limited ("**NSE**") ("BSE and NSE hereinafter together referred as "**Stock Exchanges**") and the Securities and Exchange Board of India ('**SEBI**').

SOBHA

SOBHA LIMITED
Corporate Identification Number: L45201KA1995PLC018475
Registered Office: SOBHA', Sarjapur – Marathahalli Outer Ring Road (ORR), Devarabisanahalli, Bellandur Post, Bangalore 560103;
Tel No.: +91 80-49320000; Email: investors@sobha.com; Website: www.sobha.com
Contact Person: Bijan Kumar Dash, Company Secretary and Compliance Officer

FIRST AND FINAL CALL NOTICE TO THE HOLDERS OF PARTLY PAID-UP EQUITY SHARES (ISIN: INE671H01015) OF SOBHA LIMITED ("COMPANY") HELD AS ON THE RECORD DATE i.e., FRIDAY, DECEMBER 06, 2024

The Board of Directors of the Company ("**Board**"), at its meeting held on November 14, 2024 approved to make the first and final call ("**First and Final Call**") of ₹825.50/- (Rupees Eight Hundred Twenty Five and Paise Fifty Only), (₹5 towards face value and ₹820.50/- towards the premium value) on partly paid-up equity shares of the Company and fixed Friday, December 06, 2024, as the record date for the purpose of ascertaining the holders of partly paid-up equity shares to whom the First and Final Call notice, would be sent. The same was intimated to the Stock Exchanges on November 14, 2024 and November 25, 2024.

In terms of provisions of the Companies Act, 2013 ('**Act**') read with the relevant rules made thereunder, and the Letter of Offer dated June 12, 2024 ('**Letter of Offer**'), the First and Final Call notice along with the detailed instructions, ASBA form and payment slip has been sent in electronic mode to the holders of partly paid-up equity shares ('Eligible Shareholders') whose e-mail addresses are registered with the Company or its Registrar and Share Transfer Agent ('RTA') or Depository Participant(s) as on the record date i.e., December 06, 2024. Further, physical copy of the First and Final Call Notice along with the detailed instructions, ASBA Form and payment slip have been sent vide permitted modes of dispatch, at the registered addresses of those Eligible Shareholders a) who have not registered their e-mail address with the Company or its RTA or Depository Participant(s); or b) who have specifically registered their request for the hard copy of the same. The Company has completed the dispatch on December 10, 2024.

Accordingly, the First and Final Call notice has been served as per the details given below:

Payment Period (Both days inclusive)	From	To	Duration
	Friday, December 27, 2024	Friday, January 10, 2025 (Latest by 5.00 p.m.)	15 Days
Acceptable Modes of Payment	a. Online ASBA	Through the website of the SCSBs[1]	
	b. Physical ASBA	By submitting physical application to the Designated Branch of SCSBs[2]	
	c. Online	Using the 3-in-1 online trading-demat-bank account wherever offered by brokers	
	d. Cheque/ Demand Draft with collection center of Axis Bank Limited (made payable to)	Sobha Limited Partly Paid First and Final Call Money-R (For Resident shareholders)	
		Sobha Limited Partly Paid First and Final Call Money-NR (For Non - Resident shareholders)	
	(1) Please visit https://www.sebi.gov.in/sebiweb/other/OtherAction.do?doRecognisedFpi=yes&intmId=35 to refer to the list of existing SCSBs [Self-Certified Syndicate Banks] *(2) Available only to resident shareholders*		

In accordance with the SEBI circular no. SEBI/HO/CFD/DIL1/CIR/238/2020 dated December 8, 2020, Eligible Shareholders can also make the First and Final Call Money payment by using the facility of linked online trading-demat-bank account [3-in-1 type accounts], provided by some of the brokers. Eligible Shareholders must log into their demat account and under the relevant section proceed with the payment for First and Final Call Money of Sobha Limited. Eligible Shareholders are requested to check with their respective brokers for exact process to be followed. Eligible Shareholders may please note that this payment method can be used only if the concerned broker has made this facility available to their customer. The Company, Lead Manager or Registrar to the Issue will not be responsible for non-availability of this payment method to the Eligible Shareholders.

In case the Eligible Shareholders opt to pay through cheque/demand, the payment slip (stating Full name of the Sole/First Joint Applicant, First and Final Call Notice No., DP ID / Client ID No. and No. of partly paid-up equity shares) along with the amount payable by cheque or demand draft must be presented at **Axis Bank Limited** ("**Bank**") branches at the following location on or before Friday, January 10, 2025:

For Resident Shareholders	**Ahmedabad**: Trishul – Opposite Samartheshwar Temple, Ahmedabad – 380006, Gujarat; **Bengaluru**: No.9 M.G. Road Block A, Bengaluru – 560001, Karnataka; **Chennai**: 82 Dr. Radhakrishnan Salaimylapore, Chennai – 600004, Tamil Nadu; **Delhi**: Statesman House,148, Barakhamba Road, New Delhi – 110001, Delhi; **Hyderabad**:6-3-879/B First Floor, G Pulla Reddy BlGreenlands, Begumpet Road, Hyderabad – 500016, Telangana; **Jaipur**: O-15, Green House, Ashok Marg, C-Scheme, Jaipur – 302001, Rajasthan; **Kolkata**: 7, Shakespeare Sarani, Kolkata – 700071, West Bengal; **Mumbai**: Jeevan Prakash Building, Ground Floor, Sir P M Road, Fort, Mumbai – 400001, Maharashtra; **Nagpur**: M. G. House, Rabindranath Tagore Road, Besides Board Office, Civil Lines, Nagpur – 440001, Maharashtra; **Noida**: B2-B3, Sector 16, Noida – 201301, Uttar Pradesh; **Pune**: Indra Pushti, Opposite Fergusson College Gate No 2,Pune – 411004, Maharashtra; **Rajkot**: Titan, Near K K V Circle, Kalawad Road, Rajkot – 360005, Gujarat; **Surat**: Digvijay Towers, Opp. St. Xavier's School, Ghod Dod Road, Surat – 395001, Gujarat; **Vadodara**: Vardhaman Complex, Opp. G.E.B Race Course Circle (North),Vadodara – 390007, Gujarat, **Panvel**: Raje Complex, Plot No 198 Ashivaji Chowk, Panvel – 410206, Maharashtra; **Chandigarh**: Sco 343-344,Sector 35-B,Chandigarh - 160022, Chandigarh; **Indore**: Kamal Palace, 1 Yeshwant Colonyyeshwant Niwas Road Indore – 452003, Madhya Pradesh; **Lucknow**: 31/93,Ground Floor, I & II Floor Lucknow – 226001, Uttar Pradesh; **Gurgaon**: Sco-29, Sector-14, Near Huda Office, Old Delhi - Gurgaon Rd Gurgaon – 122001, Haryana; **Thane**: Dhiraj Baug, (Near Hari Niwas Circle) LBS Marg, Thane (West).Thane - 400602, Maharashtra; **Vashi**: Vardhaman Chambers Co – Op - Soplot No 84, Sector 17, Vashi, Navi Mumbai – 400705, Maharashtra; **Kanpur**: 16/104 A , Civil Lines, Infront Of ICAI Bhawankanpur – 20800, Uttar Pradesh; **Jamnagar**: Jaidev Arcade, Grand FLR, Park Cly Mainmain RD, NR Joggers Parkjamnagar – 361008, Gujarat; **Faridabad**: Shop No.-6, Crown Complex, Neighbourhood No.2, 1-2 Chowk, N.I.T. ,Faridabad - 121001, Haryana; **Gandhinagar**: Gandhinagar Milk Consumerco-OP Union Lt plot No 436, Sector 16,Gandhinagar - 382016 Gujarat.
For Non-Resident Shareholders	**Delhi**: Statesman House,148, Barakhamba Road, New Delhi – 110001, Delhi. **Mumbai**: Jeevan Prakash Building, Ground Floor, Sir P M Road, Fort, Mumbai – 400001, Maharashtra.

Eligible Shareholders residing at locations where the ASBA facility or Bank's collection centres are not available, may send their First and Final Call Money along with the completed payment slip by registered post/speed post at the office of the Registrar to the Issue: **Link Intime India Private Limited, C-101, 1st Floor, 247 Park, L.B.S. Marg, Vikhroli (West), Mumbai - 400083, Maharashtra, India.** Tel No.: +91 810 811 4949, stating the requisite details along with Cheque/Demand Draft payable at Mumbai, such that the same are received on or before the last date of payment of the First and Final Call Money i.e. **Friday, January 10, 2025.**

Eligible Shareholders are requested to make the payment of the First and Final Call Money on or before **Friday, January 10, 2025.** Please also note the consequences of failure to pay First and Final Call, given below:

a. Interest @ 10.00 % (Ten per cent only) p.a. will be payable for delay in payment of First and Final Call beyond Friday, January 10, 2025 till the actual date of payment;
b. The Company shall be entitled to deduct from any dividend payable to you, all sums of money outstanding on account of calls and interest due thereon in relation to the partly paid-up equity shares of the Company; and
c. The partly paid-up Equity Shares of the Company currently held by you, including the amount already paid thereon are liable to be forfeited in accordance with the Articles of Association of the Company and the Letter of Offer.

Eligible Shareholders may also note that:

I. The ISIN 'IN9671H01013' partly paid-up equity shares of face value ₹5.00/- (Rupees Five Only) each at a call price of ₹825.50/- (Rupees Eight Hundred Twenty Five and Fifty Paise Only) paid-up has been suspended by the Stock Exchanges effective Friday, December 06, 2024.
II. The process of corporate action for converting the partly paid-up equity shares to the fully paid-up equity shares under the present ISIN INE671H01015 for the existing fully paid-up equity shares, allotted by the depositories, is estimated to be completed within a period of two to three weeks from the last date for making the payment of First and Final Call Money as stipulated under the First and Final Call notice. Upon completion of the corporate action, the partly paid-up equity shares shall be converted into fully paid-up equity shares and would be credited to ISIN INE671H01015, allotted by NSDL /CDSL.
III. FAQs on First and Final Call are available on the website of the Company: https://www.sobha.com/investor-relations/ or on the website of Link Intime India Private Limited. You may also seek clarifications on any query related to the payment of First & Final Call on the helpline number +91 8108114949 (Monday to Saturday from 9 AM to 5 PM).
IV. All Eligible Shareholders should mention in the Application, his/her PAN number allotted under the Income Tax Act, 1961. Applications without PAN will be considered incomplete and are liable to be rejected.

All capitalized terms not defined herein would have the same meaning as attributed to it in the Letter of Offer.
All correspondence in this regard may be addressed to Registrar to the Issue at below mentioned address:

LINKIntime

Link Intime India Private Limited
C-101, 1st Floor, 247 Park, Lal Bahadur Shastri Marg,
Vikhroli (West), Mumbai – 400 083, Maharashtra, India
Tel No.: +91 8108114949 | **Fax No.:** +91 22 49186060
E-mail ID: sobha.callmoney@linkintime.co.in
Website: www.linkintime.co.in
SEBI Registration No: INR000004058
Contact Person: Shanti Gopalkrishnan

For Sobha Limited
On Behalf of the Board of Directors

Sd/-
Bijan Kumar Dash
Company Secretary & Compliance Officer

Date : December 10, 2024
Place : Bangalore

SOBHA

ಸುಧಾ ಮಯೂರ ಓದಿರಿ...

ನೈರುತ್ಯ ರೈಲ್ವೆ

ಇ–(ಐಆರ್‌ಇಪಿಎಸ್) ಟೆಂಡರ್ ಪ್ರಕಟಣೆ ಸಂಖ್ಯೆ.
33 ಯುಬಿಎಲ್ 2024–25 ದಿನಾಂಕ: 05.12.2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಹರಾಜನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ:	ರೂ. 1,54,50,915/–
	ಉಪಕಾರ್ಯ i) ಧಾರವಾಡದಲ್ಲಿ ಆರ್‌ಪಿಎಫ್ ಹೊರಠಾಣೆಗಾಗಿ ನಿಗದಿಪಡಿಸಿದ ಕಟ್ಟಡದ ನಿರ್ಮಾಣದ ಪ್ರಸ್ತಾವನೆ. **ಉಪಕಾರ್ಯ ii)** ಹುಬ್ಬಳ್ಳಿ–ಹುಬ್ಬಳ್ಳಿಯಲ್ಲಿ ಎಸ್‌ಡಬ್ಲ್ಯುಆರ್‌ಡಬ್ಲ್ಯುಡಬ್ಲ್ಯುಓನಲ್ಲಿ ಜಿ+1 ಮಹಡಿಗೆ ಅನೆಕ್ಸ್ ಕಟ್ಟಡದ ವಿಸ್ತರಣೆ.	
2	ಹುಬ್ಬಳ್ಳಿ ವಿಭಾಗ:	ರೂ. 1,29,57,890/–
	ಹೊಸಪೇಟೆಯಲ್ಲಿ ಭೂಮಿಮಟ್ಟದಲ್ಲಿ ರಿಸರ್ವಾಯರ್ (ಜಿಎಲ್‌ಆರ್) ಜೊತೆಗೆ ಓವರ್ ಹೆಡ್ ಟ್ಯಾಂಕ್ (ಒಟಿಎಚ್) ನಿರ್ಮಾಣದ ಪ್ರಸ್ತಾವನೆ.	
3	ಹುಬ್ಬಳ್ಳಿ ವಿಭಾಗ:	ರೂ. 71,61,867/–
	ಖಾನಾಪುರದಲ್ಲಿ (ಕೆಎನ್‌ಪಿ) ಗ್ರೌಂಡ್ ಲೆವೆಲ್ ರಿಸರ್ವಾಯರ್ ಜೊತೆಗೆ ಓವರ್ ಹೆಡ್ ಟ್ಯಾಂಕ್ (ಒಟಿಎಚ್) ನಿರ್ಮಾಣದ ಪ್ರಸ್ತಾವಿತ.	
4	ಹುಬ್ಬಳ್ಳಿ ವಿಭಾಗ:	ರೂ. 1,26,26,945/–
	ಹಿರಿಯ ವಿಭಾಗೀಯ ಇಂಜನೀಯರ್/ಕೇಂದ್ರ/ ವ್ಯಾಪ್ತಿಯಲ್ಲಿ ಹೈಟ್ ಗೇಜ್‌ನ ದುರಸ್ತಿ/ ಸುಧಾರಣೆ	

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:
31.12.2024 ರಂದು 11.00 ಗಂಟೆಗಳವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ಇಂಜನೀಯರ್/ಸಮನ್ವಯ, ಹುಬ್ಬಳ್ಳಿ
ಪಿಯುಬಿ/620/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂಆರ್/2024–25
South Western Railway - SWR SWRRLY SWRRLY

ಕಲ್ಲು ಗಣಿಗಾರಿಕೆ: ನಿಯಮ ಸರಳಗೊಳಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಲು ಗಣಿಗಾರಿಕೆ ಮತ್ತು ಕ್ರಷರ್‌ಗಳಿಗೆ ವಿಧಿಸಿರುವ ಕಠಿಣ ನಿಯಮಗಳನ್ನು ಸರಳಗೊಳಿಸಬೇಕು. ಐದು ಪಟ್ಟು ದಂಡ ವಿಧಿಸುವ ಬದಲು ಹೆಕ್ಟೇರ್‌ಗೆ ₹ 5 ಲಕ್ಷದವರೆಗೆ ದಂಡ ನಿಗದಿಪಡಿಸಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕು ಎಂದು ಬೆಂಗಳೂರು ಯೂನಿಯನ್ ಆಫ್ ಕರ್ನಾಟಕ ಕ್ವಾರಿ ಆ್ಯಂಡ್ ಸ್ಟೋನ್ ಕ್ರಷರ್ ಓನರ್ಸ್ ಅಸೋಸಿಯೇಶನ್ ಒತ್ತಾಯಿಸಿದೆ.

ಅಸೋಸಿಯೇಶನ್ ಅಧ್ಯಕ್ಷ ಡಿ.ಸಿದ್ದರಾಜು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕಲ್ಲು ಗಣಿಗಾರಿಕೆ ಮೇಲೆ ರಾಜ್ಯ ಸಚಿವ ಸಂಪುಟ ಸಭೆ ಕೈಗೊಂಡ ನಿರ್ಣಯ ಹಲವು ಕಠಿಣ ನಿಯಮಗಳನ್ನು ಜಾರಿಗೊಳಿಸಲು ಮುಂದಾಗಿದೆ. ನಮ್ಮ ಸಂಘವು ದಂಡ ಪಾವತಿಸಲು ಸಿದ್ಧವಿದೆ. ವಿಪರೀತ ದಂಡ ವಿಧಿಸುವ ಈ ನಿಯಮವನ್ನು ಸರಳಗೊಳಿಸಬೇಕು ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಮನವಿ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

ಕ್ರಷರ್‌ಗಳಿಂದ ಅವೈಜ್ಞಾನಿಕವಾಗಿ ವಿದ್ಯುತ್ ಬಿಲ್ ಪಡೆಯುವುದನ್ನು ಸ್ಥಗಿತಗೊಳಿಸಬೇಕು. ಸರಕು ಸರಬರಾಜು ಮಾಡುವ ಕಲ್ಲು ಕ್ರಷರ್ ಲಾರಿಗಳಿಗೆ ಅಳವಡಿಸಿರುವ ಜಿಪಿಎಸ್ ರದ್ದುಮಾಡಬೇಕು. ರಾಜಧನ ಎರಡು ಹಂತಗಳಲ್ಲಿ ಕ್ರೋಢೀಕರಣವಾಗುತ್ತಿದ್ದು, ಸರ್ಕಾರಿ ಕಾಮಗಾರಿ ಗುತ್ತಿಗೆದಾರರು ಅಥವಾ ಕಲ್ಲು ಗಣಿ ಗುತ್ತಿಗೆದಾರರಿಂದ ಮಾತ್ರ ಸಂಗ್ರಹ ಮಾಡಬೇಕು ಎಂದು ಆಗ್ರಹಿಸಿದರು.

ಒಂದೇ ಹಂತದಲ್ಲಿ ಸರ್ಕಾರವೇ ಇಸಿ ವಿತರಣೆಯಂತಹ ಸರಳ ಕ್ರಮಗಳನ್ನು ಕೈಗೊಳ್ಳಬೇಕು. ಇಂದಿನ ಖನಿಜ ಮಟ್ಟವನ್ನು ಸರ್ಕಾರವೇ ನಿಗದಿ ಮಾಡಿ ವರದಿ ನೀಡಬೇಕು. ಸರ್ಕಾರಿ ಭೂಮಿಯಲ್ಲಿ ಗಣಿಗಾರಿಕೆ ಮಾಡುವವರಿಗೆ 10 ವರ್ಷದ ಬದಲು 30 ವರ್ಷಗಳವರೆಗೆ ಗುತ್ತಿಗೆ ನೀಡಬೇಕು. ಪಟ್ಟಾ ಭೂಮಿಯಲ್ಲಿ ಗಣಿಗಾರಿಕೆ ಮಾಡುವವರಿಗೆ ರಾಜಧನ ತೆಗೆದುಹಾಕಬೇಕು ಎಂದು ಆಗ್ರಹಿಸಿದರು.

ಅಸೋಸಿಯೇಷನ್ ಗೌರವ ಅಧ್ಯಕ್ಷ ಸಂಜೀವ್, ಉಪಾಧ್ಯಕ್ಷರಾದ ಮನೋಜ್ ಶೆಟ್ಟರ್, ಎಚ್. ವಾಗೀಶ್, ಉಮಾಶಕರ್, ಮೋಹನ್, ಪುರುಷೋತ್ತಮ ವಿರೂಪಾಕ್ಷಗೌಡ ಪಾಟೀಲ್, ಪ್ರವೀಣ್ ಬಿ.ಹಿರೇಮಠ್, ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಡಿ.ಆರ್. ಮಹೇಶ್ ಭಾಗವಹಿಸಿದ್ದರು.

ಕರ್ನಾಟಕ ಸರ್ಕಾರ
ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ರಾಮನಗರ ವಿಭಾಗ, ರಾಮನಗರ

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ: 23/ಕಾಅ/ಗ್ರಾಕು.ನೀ.&
ನೈ.ವಿ/ರಾ/ಟೆಂಡರ್/ಸ.ಇಂ–1/ಓ&ಎಂ/1882/2024–25 ದಿನಾಂಕ: 10.12.2024

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈ ವಿಭಾಗ, ರಾಮನಗರ ಇವರು ನೊಂದಾಯಿತ ಅರ್ಹ ಹಾಗೂ ಇ–ಪ್ರೋಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಾಮಾವಳಿಯ ಮೇರೆಗೆ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ. ಕಾಮಗಾರಿಯ ಹೆಸರು: ರಾಮನಗರ ಜಿಲ್ಲೆಯ ಕನಕಪುರ ತಾಲೂಕಿನ ಸಾತನೂರು ಮತ್ತು ಇತರೆ 33 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆಯ ವಾರ್ಷಿಕ ಕಾರ್ಯಾಚರಣೆ ಮತ್ತು ನಿರ್ವಹಣೆ.

ಪ್ರಿಬಿಡ್ ನಡೆಯುವ ದಿನಾಂಕ: 16.12.2024, ಕಾರ್ಯಪಾಲಕ ಅಭಿಯಂತರರ ಕಛೇರಿ, ರಾಮನಗರ ಬೆಳಿಗ್ಗೆ 11.00 ಘಂಟೆಗೆ

1. ಟೆಂಡರ್‌ಗಿಟ್ಟ ಮೊತ್ತ : ರೂ.49.72 ಲಕ್ಷಗಳು ಇ.ಎಂ.ಡಿ ಮೊತ್ತ : ರೂ. 1,00,000/–
2. ಕಾಲಾವಧಿ: 12 ತಿಂಗಳು, (ಒಟ್ಟು 5 ವರ್ಷಗಳವರೆಗೆ ಪ್ರತಿ ವರ್ಷ ನವೀಕರಿಸಲಾಗುವುದು.)
3. ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ 18.12.2024 ಸಂಜೆ 5.00 ಗಂಟೆಯವರೆಗೆ.
4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.12.2024 ಬೆಳಿಗ್ಗೆ 11.00 ಗಂಟೆಯ ನಂತರ
5. ಆರ್ಥಿಕ ಬಿಡ್ ತೆರೆಯುವ ದಿನಾಂಕ: 21.12.2024 ಬೆಳಿಗ್ಗೆ 11.00 ಗಂಟೆಯ ನಂತರ

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ/ವೆಬ್‌ಸೈಟ್ https://kppp.karnataka. gov.in/ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ರಾಮನಗರ ವಿಭಾಗ, ರಾಮನಗರ.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ — A Government of India Undertaking
ಸಿಂಡಿಕೇಟ್ Syndicate
ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310038

ಗುತ್ತಿಗೆಯ ಮೇಲೆ ಸ್ಥಳಾವಕಾಶ ಬೇಕಾಗಿದೆ

ಕೆಳಕಂಡ ಸ್ಥಳಗಳಲ್ಲಿ ಹಾಲಿ ಇರುವ ಶಾಖೆಗಳನ್ನು ಸ್ಥಳಾಂತರಿಸುವುದಕ್ಕಾಗಿ, ಮುಖ್ಯ ರಸ್ತೆಯಲ್ಲಿ ಆದ್ಯತೆಯಾಗಿ **ನೆಲಮಹಡಿಯಲ್ಲಿ** ಸ್ವತಂತ್ರ ಪ್ರವೇಶ, ಉತ್ತಮ ಮುಂಭಾಗ, ಪಾರ್ಕಿಂಗ್ ಸ್ಥಳವಿರುವ, ಆರ್‌ಬಿಐ ನಿರ್ದಿಷ್ಟತೆಗೆ ಅನುಸಾರವಾಗಿ ಸ್ಟ್ರಾಂಗ್ ರೂಮ್‌ನ್ನು ನಿರ್ಮಿಸಲು ಸಿದ್ಧವಿರುವ ಮತ್ತು ಅಗತ್ಯವಾದ ವಿದ್ಯುತ್ ಲೋಡ್‌ನೊಂದಿಗೆ ಬಳಕೆಗೆ ಸಿದ್ಧವಿರುವ ವಾಣಿಜ್ಯ ಸ್ಥಳವನ್ನು ಹೊಂದಿದ ಮಾಲೀಕರಿಂದ **ಎರಡು–ಬಿಡ್ ವ್ಯವಸ್ಥೆಯ ಅಡಿಯಲ್ಲಿ** ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಜಿಲ್ಲೆಯ ಹೆಸರು	ಜನ ಸಮುದಾಯ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಬೆಂಗಳೂರು – ಕುರುಬರಹಳ್ಳಿ	ಬೆಂಗಳೂರು ನಗರ	ಮಹಾನಗರ	2000 – 2500
ಬೆಂಗಳೂರು – ಕೆಂಗೇರಿ ಸ್ಯಾಟಲೈಟ್ ಟೌನ್	ಬೆಂಗಳೂರು ನಗರ	ಮಹಾನಗರ	2000 – 2500
ಬೆಂಗಳೂರು – ಪುಟ್ಟಣ್ಣ ಚೆಟ್ಟಿ ರಸ್ತೆ, ಚಾಮರಾಜಪೇಟೆ	ಬೆಂಗಳೂರು ನಗರ	ಮಹಾನಗರ	2000 – 2500
ಬೆಂಗಳೂರು – ಕತ್ರಿಗುಪ್ಪೆ	ಬೆಂಗಳೂರು ನಗರ	ಮಹಾನಗರ	2000 – 2500
ಕಡಬಗೆರೆ ಕ್ರಾಸ್, (ಮಾಚೋಹಳ್ಳಿ, ಮಾಗಡಿ ಮುಖ್ಯ ರಸ್ತೆ) (ಹೊಸ ಶಾಖೆ)	ಬೆಂಗಳೂರು ನಗರ	ಗ್ರಾಮೀಣ	1300 – 1500
ಗಂಗೊಂಡನಹಳ್ಳಿ (ಹೊಸ ಶಾಖೆ)	ಬೆಂಗಳೂರು ನಗರ	ಗ್ರಾಮೀಣ	1300 – 1500
ಕುಣಿಗಲ್ ಕ್ರಾಸ್, ನೆಲಮಂಗಲ	ಬೆಂಗಳೂರು ಗ್ರಾಮೀಣ	ಅರೆ ನಗರ	1700 – 1900
ಕಮ್ಮಸಂದ್ರ	ಬೆಂಗಳೂರು ಗ್ರಾಮೀಣ	ಗ್ರಾಮೀಣ	1300 – 1500
ಸಮಂದೂರು	ಬೆಂಗಳೂರು ಗ್ರಾಮೀಣ	ಗ್ರಾಮೀಣ	1300 – 1500

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ **http://www.canarabank.com** ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **18–12–2024 ರಂದು ಸಂಜೆ 3.00 ಗಂಟೆಯವರೆಗೆ.** ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"

ಸ್ಥಳ : ಬೆಂಗಳೂರು
ದಿನಾಂಕ : 10–12–2024

ಸಹಿ/–
ಸಹಾಯಕ ಮಹಾ ಪ್ರಬಂಧಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ (QA/QC) ವಿಭಾಗ, ದಕ್ಷಿಣ ವಲಯ,
ಕೊಠಡಿ ಸಂಖ್ಯೆ–101, ಪೂರಕ ಕಟ್ಟಡ–3, ಬಿಬಿಎಂಪಿ ಎನ್ ಆರ್ ಚೌಕ, ಬೆಂಗಳೂರು–02

ಸಂ: ಕಾಪಾಅ(ಕ್ಯೂಎ/ಕ್ಯೂಸಿ)/ದಕ್ಷಿಣ/ಟೆಂಡರ್/64/2024–25 ದಿನಾಂಕ: 10.12.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗವು ಕಾರ್ಯಪಾಲಕ ಅಭಿಯಂತರರು ಕ್ಯೂಎ/ಕ್ಯೂಸಿ, ದಕ್ಷಿಣ ವಲಯ, ಬಿಬಿಎಂಪಿಯಿಂದ ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯ ಮೂಲಕ ಕೆಳಕಂಡ ಕಾಮಗಾರಿಗಳಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನಾ ನಿರ್ವಹಣೆಗೆ ಸಲಹಾ ಸೇವೆಗಳಿಗಾಗಿ ಅದೇ ರೀತಿಯ ಕೆಲಸವನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಯನ್ನು ಆಹ್ವಾನಿಸಿದೆ.

ಕ್ರ.ಸಂ.	ಕೆಲಸದ ಹೆಸರು
1	ಆರ್‌ಐ–ದಕ್ಷಿಣ ವಿಭಾಗದ (ಪ್ಯಾಕೇಜ್ ಸಂಖ್ಯೆ. ಎಸ್–1) ಜಯನಗರ ಮತ್ತು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಸೆಲೆಕ್ಟಡ್ ಆರ್ಟೀರಿಯಲ್, ಸಬ್ ಆರ್ಟೀರಿಯಲ್‌ನ ಮೈಕ್ರೋ ಸರ್ಫೇಸಿಂಗ್, ರಸ್ತೆಗಳು, ಚರಂಡಿಗಳು, ಪಾದಚಾರಿ ಮಾರ್ಗಗಳು ಮತ್ತು ಇತರೆ ರಸ್ತೆಗಳ ಸುಧಾರಣೆಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನಾವೆಚ್ಚ:** ರೂ. 2,000.00 ಲಕ್ಷಗಳು. **ಇಎಂಡಿ:** ರೂ. 30,000/–
2	ಆರ್‌ಐ–ದಕ್ಷಿಣ ವಿಭಾಗದ (ಪ್ಯಾಕೇಜ್ ಸಂಖ್ಯೆ. ಎಸ್–2) ಬಸವನಗುಡಿ ಮತ್ತು ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲಿ ಸೆಲೆಕ್ಟಡ್ ಆರ್ಟೀರಿಯಲ್, ಸಬ್ ಆರ್ಟೀರಿಯಲ್‌ನ ಮೈಕ್ರೋ ಸರ್ಫೇಸಿಂಗ್, ರಸ್ತೆಗಳು, ಚರಂಡಿಗಳು, ಪಾದಚಾರಿ ಮಾರ್ಗಗಳು ಮತ್ತು ಇತರೆ ರಸ್ತೆಗಳ ಸುಧಾರಣೆಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನಾವೆಚ್ಚ:** ರೂ. 2,000.00 ಲಕ್ಷಗಳು. **ಇಎಂಡಿ:** ರೂ. 30,000/–
3	ಆರ್‌ಐ–ದಕ್ಷಿಣ ವಿಭಾಗದ (ಪ್ಯಾಕೇಜ್ ಸಂಖ್ಯೆ. ಎಸ್–3) ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಮಿಲ್ಲಿಂಗ್ ವೋಲ್ ಸರ್ಫೇಸ್, ಸೆಲೆಕ್ಟಡ್ ಆರ್ಟೀರಿಯಲ್, ಸಬ್ ಆರ್ಟೀರಿಯಲ್‌ನ ಮೈಕ್ರೋ ಸರ್ಫೇಸಿಂಗ್, ರಸ್ತೆಗಳು, ಚರಂಡಿಗಳು, ಪಾದಚಾರಿ ಮಾರ್ಗಗಳು, ಮತ್ತು ಇತರೆ ರಸ್ತೆಗಳ ಸುಧಾರಣೆಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನಾವೆಚ್ಚ:** ರೂ. 2,000.00 ಲಕ್ಷಗಳು. **ಇಎಂಡಿ:** ರೂ. 30,000/–
ಅವಧಿ: ಯೋಜನೆಯು ಪೂರ್ಣಗೊಳ್ಳುವವರೆಗೆ	

ವೇಳಾಪಟ್ಟಿ / ಕಾರ್ಯಕ್ರಮಗಳ ವಿವರಗಳು: (1) ಟೆಂಡರ್ ಡಾಕ್ಯುಮೆಂಟ್‌ನ್ನು **12.12.2024** ರಂದು ಇ–ಪೋರ್ಟಲ್ ಫಾರ್ಮ್ ಮೂಲಕ ಡೌನ್‌ಲೋಡ್ ಮಾಡಬಹುದು. (2) ಪೂರ್ವ – ಬಿಡ್ ಸಭೆ **ದಿನಾಂಕ 16.12.2024 ರಂದು ಬೆಳಿಗ್ಗೆ 11.30 ಗಂಟೆಗೆ** ಕಾರ್ಯಪಾಲಕ ಅಭಿಯಂತರರ ಕಚೇರಿ (QA/QC) ವಿಭಾಗ, ದಕ್ಷಿಣ ವಲಯ, ಕೊಠಡಿ ಸಂಖ್ಯೆ–101, ಪೂರಕ ಕಟ್ಟಡ–3, ಬಿಬಿಎಂಪಿ ಎನ್ ಆರ್ ಚೌಕ, ಬೆಂಗಳೂರು–02. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **21.12.2024 ರಂದು ಸಂಜೆ 4.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 23.12.2024 ರಂದು ಬೆಳಗ್ಗೆ 11.30 ಗಂಟೆಗೆ.** (5) ಟೆಂಡರ್‌ನ ಮಾನ್ಯತೆ ಟೆಂಡರ್‌ನ ಸ್ವೀಕೃತಿಯ ಕೊನೆಯ ದಿನಾಂಕದಿಂದ 90 ದಿನಗಳವರೆಗೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ **https://kppp.karnataka.gov.in** ಮೂಲಕ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
(QA/QC) – ದಕ್ಷಿಣ ವಲಯ, ಬಿಬಿಎಂಪಿ

ಸಾದಹಳ್ಳಿ ಟೋಲ್ ದಶಕದಲ್ಲೇ ಹೆಚ್ಚು ಟೋಲ್ ಸಂಗ್ರಹ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ತಾಲ್ಲೂಕಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಬೆಂಗಳೂರು–ಹೈದರಾಬಾದ್ ಹೆದ್ದಾರಿಯಲ್ಲಿ ಸಾದಹಳ್ಳಿ ಸಮೀಪ ನಿರ್ಮಿಸಿರುವ ಟೋಲ್ ಪ್ಲಾಜಾದಲ್ಲಿ ಕಳೆದ ಒಂದು ದಶಕದಲ್ಲಿ ಇದೇ ಮೊದಲ ಬಾರಿಗೆ ಅತಿಹೆಚ್ಚು ಟೋಲ್ ಸಂಗ್ರಹವಾಗಿದೆ.

ರಾಜ್ಯದ ಒಟ್ಟು 40 ಟೋಲ್ ಪ್ಲಾಜಾಗಳ ಪೈಕಿ ದೇವನಹಳ್ಳಿ ವಿಮಾನ ನಿಲ್ದಾಣದ ಟೋಲ್ ಪ್ಲಾಜಾದಲ್ಲಿ 2023–24ರಲ್ಲಿ ಒಟ್ಟು ₹308 ಕೋಟಿ ಟೋಲ್ ಸಂಗ್ರಹವಾಗಿದೆ.

ರಾಜ್ಯದ 40 ಟೋಲ್ ಪ್ಲಾಜಾಗಳಲ್ಲಿ 2023–24ರ ಆರ್ಥಿಕ ವರ್ಷದಲ್ಲಿ ಒಟ್ಟು ₹2,859.90 ಕೋಟಿ ಸಂಗ್ರಹವಾಗಿದ್ದು, ಈ ಪೈಕಿ ದೇವನಹಳ್ಳಿಯ ವಿಮಾನ ನಿಲ್ದಾಣದ ಟೋಲ್ ಪ್ಲಾಜಾದಿಂದ ಶೇ 10.76 ರಷ್ಟು ಪಾಲು ನೀಡಿದೆ.

ಕಳೆದ ಹತ್ತು ವರ್ಷದಲ್ಲಿ ರಾಜ್ಯದ ಟೋಲ್ ಬೂತ್‌ಗಳಿಂದ ಸಂಗ್ರಹಿಸಿದ ಟೋಲ್ ಶುಲ್ಕದ ವಿವರಗಳನ್ನು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ರಾಜ್ಯಸಭೆಗೆ ನೀಡಿದರು. ಇದರಲ್ಲಿ ದೇವನಹಳ್ಳಿಯ ವಿಮಾನ ನಿಲ್ದಾಣ ಟೋಲ್‌ನ ಕಳೆದ 10 ವರ್ಷದ ಟೋಲ್ ಸಂಗ್ರಹ ಶುಲ್ಕದ ಕುರಿತು ಮಾಹಿತಿಯನ್ನೂ ನೀಡಿದ್ದಾರೆ.

ಈ ದತ್ತಾಂಶದಿಂದ ದೇವನಹಳ್ಳಿ ವಿಮಾನ ನಿಲ್ದಾಣದ ಮಾರ್ಗವನ್ನು ಉಪಯೋಗಿಸುವ ವಾಹನ ಸವಾರರ ಸಂಖ್ಯೆಯೂ 10 ವರ್ಷಗಳಿಂದ ನಿರಂತರವಾಗಿ ಹೆಚ್ಚಳವಾಗಿದೆ.

ಪಿಎಸ್‌ಐ ನೇಮಕ ಶೇ 30 ಮೀಸಲಾತಿ ಕಲ್ಪಿಸಲು ಒತ್ತಾಯ

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿ.ಎಸ್.ಐ) ಹುದ್ದೆಗಳ ನೇಮಕಾತಿಯಲ್ಲಿ ಸೇವಾನಿರತ ಅಭ್ಯರ್ಥಿಗಳಿಗೆ ಈಗಿರುವ ಶೇ 10ರಷ್ಟು ಮೀಸಲಾತಿ ಪ್ರಮಾಣವನ್ನು ಶೇ 30ಕ್ಕೆ ಏರಿಸಬೇಕು' ಎಂದು ರಾಜ್ಯದ ವಿವಿಧ ಪೊಲೀಸ್ ಠಾಣೆಗಳ ಸಿಬ್ಬಂದಿ ಮನವಿ ಮಾಡಿದ್ದಾರೆ.

ಈ ಸಂಬಂಧ ಸೇವಾನಿರತ ಪಿಎಸ್‌ಐ ಹುದ್ದೆ ಆಕಾಂಕ್ಷಿಗಳು ಮುಖ್ಯಮಂತ್ರಿ, ಗೃಹ ಸಚಿವರು ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದ್ದು, ಇದೇ ವೇಳೆ ಮೀಸಲಾತಿ ಪ್ರಮಾಣ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದೂ ಕೋರಲಾಗಿದೆ.

'ಮಲ್ಲಿಕಾರ್ಜುನ ಖರ್ಗೆ ಅವರು ಗೃಹಸಚಿವರಾಗಿದ್ದ ಅವಧಿಯಲ್ಲಿ ಸೇವಾನಿರತ ಅಭ್ಯರ್ಥಿಗಳಿಗಾಗಿಯೇ ಪ್ರತ್ಯೇಕ ಪಿಎಸ್‌ಐ ನೇಮಕಾತಿಯ ಅಧಿಸೂಚನೆ ಹೊರಡಿಸಿದ್ದರು. ಅದರಂತೆ 2001-02 ಹಾಗೂ 2002-03ರಲ್ಲಿ 300ಕ್ಕೂ ಹೆಚ್ಚು ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಆ ನಂತರ ಇದುವರೆಗೂ ಅಂತಹ ಪ್ರತ್ಯೇಕ ನೇಮಕಾತಿ ಅಧಿಸೂಚನೆ ನಡೆದಿಲ್ಲ' ಎಂದು ಪತ್ರದಲ್ಲಿ ಬರೆಯಲಾಗಿದೆ.

'ಕರ್ನಾಟಕ ಹೊರತುಪಡಿಸಿ ಬೇರೆ ರಾಜ್ಯಗಳಲ್ಲಿ ಸೇವಾನಿರತ ಅಭ್ಯರ್ಥಿಗಳ ಮೀಸಲಾತಿ ಶೇ 20ರಿಂದ ಶೇ 30ರಷ್ಟು ಇದೆ. ಅದನ್ನು ರಾಜ್ಯದಲ್ಲೂ ಜಾರಿ ಮಾಡಿದರೆ ಕಳೆದ ಕೆಲವು ವರ್ಷಗಳಿಂದ ಇಲಾಖೆಯಲ್ಲಿ ಕಾನ್‌ಸ್ಟೆಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ಅವಕಾಶ ಲಭಿಸಿದಂತೆ ಆಗಲಿದೆ' ಎಂದು ಹೇಳಿದ್ದಾರೆ.

'ಸೇವಾನಿರತ ವಯಸ್ಸಿನ ಮಿತಿಯನ್ನು 40ರಿಂದ 45 ವರ್ಷಕ್ಕೆ ಹೆಚ್ಚಿಸಬೇಕು. 402 ಪಿಎಸ್‌ಐ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಅದರಲ್ಲಿ ಸೇವಾನಿರತ ಅಭ್ಯರ್ಥಿಗಳಿಗೆ ಕೇವಲ 40 ಹುದ್ದೆಗಳಿವೆ. ಅದನ್ನು 80ಕ್ಕೆ ಹೆಚ್ಚಿಸಬೇಕು' ಎಂದೂ ಒತ್ತಾಯಿಸಿದ್ದಾರೆ.

'2010ರಲ್ಲಿ ಸೇವಾನಿರತ ಅಭ್ಯರ್ಥಿಗಳಿಗೆ ಶೇ 30ರಷ್ಟು ಹುದ್ದೆಗಳನ್ನು ಮೀಸಲಿಡಲಾಗುವುದೆಂದು ಅಂದಿನ ಗೃಹ ಸಚಿವರು ಭರವಸೆ ನೀಡಿದ್ದರು. ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ' ಎಂದು ಸೇವಾನಿರತ ಪಿಎಸ್‌ಐ ಹುದ್ದೆಗಳ ಆಕಾಂಕ್ಷಿಗಳು ಹೇಳಿದ್ದಾರೆ.

ಅರಮನೆ ರಸ್ತೆ–ಟಿಡಿಆರ್ ನೀಡಿ: 'ಸುಪ್ರೀಂ' ಸೂಚನೆ

ಜಯಮಹಲ್ ರಸ್ತೆಯನ್ನು ಮೇಖ್ರಿ ವೃತ್ತದಿಂದ ಕಂಟೋನ್ಮೆಂಟ್ ರೈಲು ನಿಲ್ದಾಣದವರೆಗೆ ಹಾಗೂ ಬಳ್ಳಾರಿ ರಸ್ತೆಯನ್ನು ಬಿಡಿಎ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ವಿಸ್ತರಿಸಲು ಬಿಬಿಎಂಪಿ 2009ರಲ್ಲೇ ಯೋಜನೆ ರೂಪಿಸಿತ್ತು. ಈ ಕಾಮಗಾರಿಗಳಿಗೆ ಅರಮನೆ ಮೈದಾನದ ಆಸ್ತಿಯಲ್ಲಿ 15 ಎಕರೆ 39 ಗುಂಟೆ ಜಾಗದ ಅವಶ್ಯಕತೆ ಇರುತ್ತದೆ. ಈ ಭೂಮಿ ವಶಕ್ಕೆ ತೆಗೆದುಕೊಳ್ಳಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಇದಕ್ಕೆ ಪ್ರತಿಯಾಗಿ ಮೈಸೂರು ರಾಜವಂಶಸ್ಥರಿಗೆ ಸುಮಾರು ₹1,400 ಕೋಟಿ ಮೌಲ್ಯದಷ್ಟು ಟಿಡಿಆರ್ ನೀಡಲು ರಾಜ್ಯ ಸಚಿವ ಸಂಪುಟ ಮಾರ್ಚ್‌ನಲ್ಲಿ ಒಪ್ಪಿಕೊಂಡಿತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಜಯಮಹಲ್ ಹಾಗೂ ಬಳ್ಳಾರಿ ರಸ್ತೆ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಬೆಂಗಳೂರು ಅರಮನೆ ಮೈದಾನದ ಭೂಮಿಗೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ವಾರಸುದಾರರಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ ಪ್ರಕಾರ ಅಭಿವೃದ್ಧಿ ಹಕ್ಕುಗಳ ವರ್ಗಾವಣೆ (ಟಿಡಿಆರ್) ನೀಡುವಂತೆ ಕರ್ನಾಟಕ ಸರ್ಕಾರ ಮತ್ತು ಬಿಬಿಎಂಪಿಗೆ ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ನ್ಯಾಯಾಂಗ ನಿಂದನೆ ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಹಾಗೂ ಅರವಿಂದ ಕುಮಾರ್ ಅವರಿದ್ದ ಪೀಠವು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು. ಈ ಪ್ರಕರಣವನ್ನು ಇತ್ಯರ್ಥಪಡಿಸದೆ ಹಲವಾರು ವರ್ಷಗಳ ಕಾಲ ಉದ್ದೇಶಪೂರ್ವಕವಾಗಿ ವಿಳಂಬ ಮಾಡಲಾಗಿದೆ ಎಂದು ಪೀಠ ಅಭಿಪ್ರಾಯ ವ್ಯಕ್ತಪಡಿಸಿತು. 'ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಅಡಿಯಲ್ಲಿ ಮಾರುಕಟ್ಟೆ ಮೌಲ್ಯದ ಪ್ರಕಾರ ಟಿಡಿಆರ್ ನೀಡಬೇಕು' ಎಂದು ಪೀಠ ಸೂಚಿಸಿದೆ. ರಾಜ್ಯ ಸರ್ಕಾರ, ಬಿಬಿಎಂಪಿ ಅಧಿಕಾರಿಗಳನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿರುವ ಪೀಠವು, ಟಿಡಿಆರ್ ನೀಡಲು ಆರು ವಾರಗಳ ಕಾಲಾವಕಾಶ ನೀಡಿದೆ.

ಈ ಭೂಮಿಯನ್ನು ರಾಜ್ಯ ಸರ್ಕಾರದ ಅಧಿಕಾರಿಗಳು ರಸ್ತೆ ವಿಸ್ತರಣೆಗೆ ಬಳಸಿಕೊಳ್ಳಲು ಪ್ರಯತ್ನಿಸಿದ್ದಾರೆ ಹಾಗೂ ಅಂದಾಜು ಮೌಲ್ಯಗಳ ಮೇಲೆ ಟಿಡಿಆರ್ ನೀಡಲು ಪ್ರಯತ್ನಿಸಿದ್ದಾರೆ. ಇದು ಸ್ವೀಕಾರಾರ್ಹ ಅಲ್ಲ ಎಂದು ಪೀಠ ಹೇಳಿದೆ.

ಪ್ರತಿವಾದಿ ಅಧಿಕಾರಿಗಳ ಧೋರಣೆಯಿಂದ ಮುಜುಗರದ ಸನ್ನಿವೇಶ ಸೃಷ್ಟಿಯಾಗಿದ್ದು, ಈ ಪ್ರಕ್ರಿಯೆಗಳ ವೆಚ್ಚಕ್ಕಾಗಿ ಪ್ರತಿಯೊಬ್ಬ ಅರ್ಜಿದಾರರಿಗೆ ತಲಾ ₹1 ಲಕ್ಷ ಪಾವತಿಸುವಂತೆ ನ್ಯಾಯಾಲಯ ಆದೇಶಿಸಿದೆ. ಈ ಮೊತ್ತ ಪಾವತಿಗೆ ಹಣಕಾಸಿನ ತೊಂದರೆಗಳ ಬಗ್ಗೆ ರಾಜ್ಯದ ಅಧಿಕಾರಿಗಳು ಮನವಿ ಮಾಡಿದರು.

ಆದಾಗ್ಯೂ ಪೀಠವು, 'ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಈಗ ತನ್ನ ಕ್ರಮಗಳನ್ನು ಹಿಂಪಡೆಯಲು ಸಾಧ್ಯವಿಲ್ಲ. ಆಸ್ತಿಯ ಮೌಲ್ಯವನ್ನು ತನ್ನ ಇಚ್ಛೆ ಅಥವಾ ಕಲ್ಪನೆಗಳಿಗೆ ಅಥವಾ ಯಾವುದೇ ಕಾಲ್ಪನಿಕ ಮೌಲ್ಯದ ಮೇಲೆ ಟಿಡಿಆರ್ ನೀಡುವ ಉದ್ದೇಶಗಳಿಗಾಗಿ ನಿರ್ಧರಿಸಲು ಸಾಧ್ಯವಿಲ್ಲ' ಎಂದು ಸ್ಪಷ್ಟಪಡಿಸಿತು.

ಪ್ರಕರಣವೇನು: ಈ ಕಾಮಗಾರಿಗಾಗಿ ಸ್ವಾಧೀನಪಡಿಸಿಕೊಳ್ಳುವ ಜಾಗಕ್ಕೆ ಬದಲಿಯಾಗಿ ಟಿಡಿಆರ್ ನೀಡುವ ಪ್ರಸ್ತಾವವನ್ನು ಬಿಬಿಎಂಪಿಯ ಹಿಂದಿನ ಆಯುಕ್ತರೊಬ್ಬರು ಅರಮನೆಯ ಮಾಲೀಕತ್ವದ ಕುರಿತ ಹೈಕೋರ್ಟ್ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದ ಮೈಸೂರು ರಾಜವಂಶಸ್ಥರ ಮುಂದಿಟ್ಟಿದ್ದರು. ಎರಡೂ ಕಡೆಯವರು ಒಪ್ಪಿದ್ದರಿಂದ ರಸ್ತೆ ವಿಸ್ತರಣೆಗೆ ಬೇಕಾದ ಜಾಗವನ್ನು ಟಿಡಿಆರ್ ನೀಡಿ ಸ್ವಾಧೀನಪಡಿಸಿಕೊಳ್ಳಲು ಸುಪ್ರೀಂ ಕೋರ್ಟ್ ಸಮ್ಮತಿ ನೀಡಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಿಧ ಸರ್ಕಾರಗಳು ಈ ಹಿಂದಿನ ಆದೇಶಗಳನ್ನು ಮೂರು ಬಾರಿ ಮಾರ್ಪಾಡು ಮಾಡಿವೆ. ವಿವಾದಿತ ಜಾಗವನ್ನು ವಶಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ಹೆಚ್ಚುವರಿಯಾಗಿ 13.91 ಲಕ್ಷ ಚದರಡಿ ನಿರ್ಮಿಸಿದ ಪ್ರದೇಶ ಹಸ್ತಾಂತರಿಸುವ ಪ್ರಸ್ತಾಪವೂ ಒಳಗೊಂಡಿತ್ತು.

ಟಿಡಿಆರ್‌ನಿಂದಾಗಿ ಅನುಮತಿ ನೀಡಿದ ವ್ಯಾಪ್ತಿಯನ್ನು ಮೀರಿ ನಿರ್ಮಾಣ ಮಾಡುವುದಕ್ಕೆ ಡೆವಲಪರ್‌ಗಳಿಗೆ ಅವಕಾಶವಿರುತ್ತದೆ. ಸರ್ಕಾರ ಪರಿಹಾರವಾಗಿ ಹಣವನ್ನು ನೀಡಲು ಸಾಧ್ಯವಾಗದ ಸಂದರ್ಭಗಳಲ್ಲಿ ಟಿಡಿಆರ್ ಅವಕಾಶವನ್ನು ನೀಡುತ್ತದೆ. ರಸ್ತೆ ವಿಸ್ತರಣೆಗಾಗಿ ಅರಮನೆಗೆ ಸೇರಿದ 15.39 ಎಕರೆ ಭೂಮಿಯನ್ನು ಬಳಕೆ ಮಾಡಿಕೊಳ್ಳಲು ಮತ್ತು ಅದಕ್ಕೆ ಟಿಡಿಆರ್ ನೀಡಲು ಮಾರ್ಚ್‌ನಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಂಡಿತ್ತು.

2019ರಲ್ಲಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್‌–ಕಾಂಗ್ರೆಸ್ ಮೈತ್ರಿ ಸರ್ಕಾರ ರಸ್ತೆ ವಿಸ್ತರಣೆಗಾಗಿ ಅರಮನೆ ಭೂಮಿ ವಶಕ್ಕೆ ತೆಗೆದುಕೊಳ್ಳಲು ತೀರ್ಮಾನ ತೆಗೆದುಕೊಂಡು, ಆದೇಶ ಹೊರಡಿಸಿತ್ತು. ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ 2022ರ ಸೆಪ್ಟೆಂಬರ್‌ನಲ್ಲಿ ಆದೇಶವೊಂದನ್ನು ಹೊರಡಿಸಿ, ಎರಡೂ ಕಡೆಯ ರಸ್ತೆ ವಿಸ್ತರಣೆ ಯೋಜನೆಯನ್ನು ಕೈಬಿಟ್ಟಿತ್ತು. ವಶಪಡಿಸಿಕೊಳ್ಳುವ ಭೂಮಿಗೆ ಪರಿಹಾರಾರ್ಥವಾಗಿ ದೊಡ್ಡ ಮೊತ್ತದ ಟಿಡಿಆರ್ ನೀಡಬೇಕಾಗುತ್ತದೆ ಎಂಬ ಕಾರಣವನ್ನು ನೀಡಿತ್ತು.

ಮುಡಾಕ್ಕಿಂತ ದೊಡ್ಡ ಹಗರಣ: ಕೆಆರ್‌ಎಸ್

ರಾಜ್ಯ ಸರ್ಕಾರದ ಅಧಿಕಾರಿಗಳ ಗಂಭೀರ ಲೋಪದಿಂದಾಗಿ ಇಡೀ ಅರಮನೆ ಪ್ರದೇಶ ಸರ್ಕಾರದ ಕೈತಪ್ಪಲು ಕಾರಣವಾಗುತ್ತದೆ. ಇದರಲ್ಲಿ ಸರ್ಕಾರದಲ್ಲಿನ ರಿಯಲ್ ಎಸ್ಟೇಟ್ ಮಾಫಿಯಾದ ಕೈವಾಡ ಇದೆ. ಇದರಲ್ಲಿ ಬಹುದೊಡ್ಡ ಹಗರಣ ನಡೆದಿರುವುದು ಸ್ಪಷ್ಟ. ಇದು ಮುಡಾ ಹಗರಣಕ್ಕಿಂತ ದೊಡ್ಡ ಹಗರಣವಾಗಿದೆ. ಈ ವಿಷಯದ ಬಗ್ಗೆ ಪರಾಮರ್ಶೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಮಾರ್ಚ್‌ನಲ್ಲಿ ಪತ್ರ ಬರೆಯಲಾಗಿತ್ತು. ಅಧಿಕಾರಿಗಳ ಉದ್ದೇಶಪೂರ್ವಕ ಲೋಪದಿಂದಾಗಿ ರಾಜ್ಯ ಬೊಕ್ಕಸಕ್ಕೆ ಭಾರಿ ಹೊರೆ ಬಿದ್ದಿದೆ. ಈ ಬಗ್ಗೆ ತಕ್ಷಣವೇ ಸರ್ಕಾರ ಕ್ರಮ ವಹಿಸಬೇಕು ಮತ್ತು ಸಂಬಂಧಿತ ಸಚಿವರು ಹಾಗೂ ಅಧಿಕಾರಿಗಳ ಮೇಲೆ ಕ್ರಮ ವಹಿಸಬೇಕು.

ದೀಪಕ್ ಸಿ.ಎನ್., ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ರಾಜ್ಯ ಪ್ರಧಾನ ಕಾರ್ಯದರ್ಶಿ

ಮರುಚಿಂತನೆಗೆ ಸೂಚಿಸಿದ್ದ ಆಯುಕ್ತ

ಅಂದಿನ ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ್ ಪ್ರಸಾದ್ ಅವರು ಆದೇಶವನ್ನು ಜಾರಿ ಮಾಡದೆ, ಆದೇಶದ ಬಗ್ಗೆ ಮರುಚಿಂತನೆ ನಡೆಸುವುದು ಸೂಕ್ತ ಎಂದು ಸರ್ಕಾರಕ್ಕೆ ಪತ್ರ ಬರೆದಿದ್ದರು. ಅರಮನೆ ಮೈದಾನ ಪ್ರದೇಶ ಇನ್ನೂ ಕೃಷಿ ಭೂಮಿಯ ಸ್ಥಿತಿಯಲ್ಲೇ ಇದೆ. ಭೂಪರಿವರ್ತನೆಯೂ ಆಗಿಲ್ಲ. ಖಾತಾ ಕೂಡ ಆಗಿಲ್ಲ. ಭೂಮಿಯ ಮಾರ್ಗಸೂಚಿ ಮೌಲ್ಯದ ನಾಲ್ಕು ಪಟ್ಟನ್ನು ಮೌಲ್ಯವಾಗಿ ಪರಿಗಣಿಸಬೇಕಾಗುತ್ತದೆ. ಅಂದರೆ 13,91,742 ಚದರಡಿ ಅಥವಾ ₹1,396 ಕೋಟಿ ಮೌಲ್ಯದ್ದಾಗಿದೆ ಎಂದು ಪತ್ರದಲ್ಲಿ ತಿಳಿಸಿದ್ದರು.

472 ಎಕರೆ ವಿಸ್ತೀರ್ಣದ ಅರಮನೆ ಮೈದಾನವನ್ನೇ ವಶಕ್ಕೆ ತೆಗೆದುಕೊಳ್ಳುವುದು ಸೂಕ್ತ. ಇದಕ್ಕಾಗಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಮಂಜುನಾಥ್ ಪ್ರಸಾದ್ ಸಲಹೆ ನೀಡಿದ್ದರು. ಟಿಡಿಆರ್ ನೀಡಿ ಭೂ ಸ್ವಾಧೀನಪಡಿಸಿಕೊಳ್ಳುವ ಹಿಂದಿನ ನಿರ್ಣಯ ಕೈಬಿಟ್ಟು, ಸುಪ್ರೀಂ ಕೋರ್ಟ್‌ನಲ್ಲಿ ಮತ್ತೆ ಮಧ್ಯಂತರ ಅರ್ಜಿ ಸಲ್ಲಿಸುವುದಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿತ್ತು.

'ರಾಜ್ಯವನ್ನು ಸಮೃದ್ಧವಾಗಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕವನ್ನು ಅಭಿವೃದ್ಧಿ, ಪ್ರಗತಿಶೀಲ ಮತ್ತು ಸಾಮಾಜಿಕ ನೆಲಗಟ್ಟಿನಲ್ಲಿ ಸಮೃದ್ಧ ರಾಜ್ಯವನ್ನಾಗಿ ನಿರ್ಮಿಸಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಲ್ಲುತ್ತದೆ ಎಂದು ಸಾಹಿತಿ ಬಂಜಗೆರೆ ಜಯಪ್ರಕಾಶ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಹಿಂದುಳಿದ ವರ್ಗಗಳ ಕೋಶ ಮತ್ತು ಇತಿಹಾಸ, ಅರ್ಥಶಾಸ್ತ್ರ ವಿಭಾಗದ ಸಹಯೋಗದಲ್ಲಿ ನಡೆದ 'ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನ, ಸಾಧನೆ ಮತ್ತು ಸುಧಾರಣೆಗಳು' ಎಂಬ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ಬ್ರಿಟಿಷ ವಸಾಹತುಶಾಹಿ ಆಳ್ವಿಕೆಯ ಚೌಕಟ್ಟುಗಳು, ಮಿತಿಗಳು ಇದ್ದಾಗಲೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವೆಲ್ಲವೂಗಳನ್ನು ಮೀರಿ ಸಮೃದ್ಧ ರಾಜ್ಯವನ್ನು ನಿರ್ಮಿಸಿದ್ದಾರೆ. ಕೈಗಾರಿಕೆ, ಕಾರ್ಖಾನೆ, ರೈಲು ಮಾರ್ಗ, ವಿದ್ಯುತ್ ಸ್ಥಾವರ, ಅಣೆಕಟ್ಟುಗಳನ್ನು ನಿರ್ಮಿಸಿ ಅಭಿವೃದ್ಧಿ ಸಾಧಿಸಿದರು' ಎಂದರು.

'ದೇಶದಲ್ಲೆ ಮೊದಲ ಬಾರಿಗೆ ಜಾತಿ ಸಮೀಕ್ಷೆ ನಡೆಸಿ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಯೋಜನೆ ರೂಪಿಸಿದರು. ಮಹಿಳೆಯರ ವಿದ್ಯಾಭ್ಯಾಸಕ್ಕೆ ಸಾಕಷ್ಟು ಒತ್ತು ನೀಡಿದರು. ಅದರಲ್ಲೂ ದಲಿತ, ಹಿಂದುಳಿದ ವಿದ್ಯಾರ್ಥಿನಿಯರಿಗಾಗಿ ಮಹಿಳಾ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು ಎಂದು ಸ್ಮರಿಸಿದರು.

ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ನಾಲ್ವಡಿ ಅವರ ಕಾಲದ ಕೃಷಿ ಮತ್ತು ನೀರಾವರಿ ಅಭಿವೃದ್ಧಿಯ ಪರಿಕಲ್ಪನೆ, ಸಾಮಾಜಿಕ ಸುಧಾರಣೆಗಳು ಮತ್ತು ಮಹಿಳಾ ಪರ ಕಾಳಜಿಗಳು, ಆಡಳಿತಾತ್ಮಕ ಸುಧಾರಣೆ, ಪ್ರಜಾತಾಂತ್ರಿಕ ವ್ಯವಸ್ಥೆಯ ಅನುಷ್ಠಾನ, ಮೀಸಲಾತಿ ಪರಿಕಲ್ಪನೆ–ಅನುಷ್ಠಾನಕ್ಕೆ ಕೈಗೊಂಡ ಕ್ರಮಗಳು, ಕೈಗಾರಿಕೆ ಮತ್ತು ಬ್ಯಾಂಕಿಂಗ್ ವ್ಯವಸ್ಥೆಗಳ ಕುರಿತು ವಿಶೇಷ ಉಪನ್ಯಾಸಗಳು ನಡೆದವು.

ಡಿಸ್ಸನಾಯಿಕೆ ಭಾರತ ಪ್ರವಾಸ

ಕೊಲಂಬೊ (ಪಿಟಿಐ): ಶ್ರೀಲಂಕಾದ ಅಧ್ಯಕ್ಷ ಅನುರ ಕುಮಾರ ಡಿಸ್ಸನಾಯಿಕೆ ಅವರು ಡಿ.15ರಿಂದ ಎರಡು ದಿನಗಳ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ.

ಡಿಸ್ಸನಾಯಿಕೆ

ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಅವರು ಮೊದಲ ಬಾರಿಗೆ ವಿದೇಶ ಪ್ರವಾಸ ಕೈಗೊಂಡಿದ್ದಾರೆ.

'ಡಿಸ್ಸನಾಯಿಕೆ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದ್ದಾರೆ' ಎಂದು ಶ್ರೀಲಂಕಾ ಸಂಸತ್ತಿನ ವಕ್ತಾರ ನಲಿಂದಾ ಜಯತಿಸ್ಸಾ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಡಿಸ್ಸನಾಯಿಕೆ ಅವರೊಂದಿಗೆ ವಿದೇಶಾಂಗ ಸಚಿವ ವಿಜಿಥಾ ಹೆರತ್ ಮತ್ತು ಹಣಕಾಸು ಇಲಖೆಯ ಉಪಸಚಿವ ಅನಿಲ್ ಜಯಂತಾ ಫರ್ನಾಂಡೋ ಅವರು ಭಾರತಕ್ಕೆ ಭೇಟಿ ನಿಡಲಿದ್ದಾರೆ ಎಂದು ಹೇಳಿದ್ದಾರೆ.

ಅಧಿಕಾರಕ್ಕಾಗಿ ರಾಮನ ಹೆಸರು ಬಳಕೆ: ಬರಗೂರು

ಪ್ರಜಾವಾಣಿ ವಾರ್ತೆ

ತುಮಕೂರು: ಪ್ರಸ್ತುತ ಸನ್ನಿವೇಶದಲ್ಲಿ ರಾಜಕೀಯಕ್ಕಾಗಿ ರಾಮಾಯಣ; ಅಧಿಕಾರ ಪಡೆಯಲು ರಾಮನ ಹೆಸರು ಬಳಕೆಯಾಗುತ್ತಿದೆ ಎಂದು ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ವಿಷಾದಿಸಿದರು.

ತುಮಕೂರು ವಿ.ವಿಯಲ್ಲಿ ಮಂಗಳವಾರ ನಡೆದ 'ಸಹಿತ–2 ವಿಶ್ವವಿದ್ಯಾಲಯದ ಸಾಹಿತ್ಯ ಪರಿಶೆ' ಉದ್ಘಾಟನಾ ಕಾರ್ಯಕ್ರಮದಲ್ಲಿ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಅವರಿಗೆ ಕುಲಪತಿ ಪ್ರೊ.ಎಂ.ವೆಂಕಟೇಶ್ವರಲು ಪುಸ್ತಕ ನೀಡಿದರು. ಸಾಹಿತ್ಯ ಪರಿಶೆ ಸಂಘಟಕ ಪ್ರೊ.ಎಚ್.ಕೆ.ಶಿವಲಿಂಗಸ್ವಾಮಿ ಉಪಸ್ಥಿತರಿದ್ದರು

ತುಮಕೂರು ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಇಂಗ್ಲಿಷ್ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಡಿವಿಜಿ ಕನ್ನಡ ಅಧ್ಯಯನ ಮತ್ತು ಸಂಶೋಧನ ಕೇಂದ್ರದಿಂದ ಏರ್ಪಡಿಸಿದ್ದ 'ಸಹಿತ–2 ವಿಶ್ವವಿದ್ಯಾಲಯದ ಸಾಹಿತ್ಯ ಪರಿಶೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಮಾಯಣ ಇಂದಿಗೆ ಬೇಕಾದ ರಾಜಕೀಯ ನೈತಿಕತೆಯ ಪಾಠ, ಆಶಯ ಹೇಳುತ್ತದೆ. ಮಹಾಕಾವ್ಯ ರಾಜಕೀಯ ಅನೈತಿಕತೆಯ ಅಸ್ತ್ರವಾದರೆ ಅದರ ಅಸ್ಮಿತೆ ನಾಶವಾಗುತ್ತದೆ. ರಾಮಾಯಣದಲ್ಲಿ ರಾಜಕೀಯಕ್ಕೆ ಸಂಬಂಧಿಸಿದ ಅನೇಕ ಪಟ್ಟುಗಳು, ಸ್ಥಿತ್ಯಂತರ, ಕ್ರೋಡೀಕರಣ, ನೈತಿಕತೆಯ ಬಗ್ಗೆ ಚರ್ಚೆ ನಡೆದಿದೆ. ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ, ರಾಜಕೀಯ ಎಲ್ಲ ಮೌಲ್ಯಗಳನ್ನು ಒಳಗೊಂಡಿದೆ. ಇದರಲ್ಲಿ ಆಸೆ–ಆಕಾಂಕ್ಷೆ, ನಿರೀಕ್ಷೆ–ನಿರಾಸೆಗಳಿವೆ. ಆದರೆ ಹತಾಶೆಯಿಲ್ಲ. ಹತಾಶೆ ಲೋಕದಲ್ಲಿರುವವರಿಗೆ ಮಹಾಭಾರತ, ರಾಮಾಯಣ ಆತ್ಮಸ್ಥೈರ್ಯದ ಮಹಾಕಾವ್ಯಗಳು ಎಂದು ವಿಶ್ಲೇಷಿಸಿದರು.

ಭರತ ಶ್ರೀರಾಮನ ಪಾದುಕೆಯನ್ನು ಸಿಂಹಾಸನದ ಮೇಲಿಟ್ಟು ಅಧಿಕಾರ ನಡೆಸಿದರು. ಇದು ಪಾದುಕೆಗೆ ಕೊಟ್ಟ ಸಾಮಾಜಿಕ ಗೌರವ. ಸಮಾಜದ ಕಟ್ಟಕಡೆಯ ನೆಲೆಯನ್ನು ಅತ್ಯುನ್ನತವಾದ ರಾಜ ಪ್ರಭುತ್ವಕ್ಕೆ ಏರಿಸಿ, ಉನ್ನತೀಕರಿಸಿದ ಪ್ರಕ್ರಿಯೆ. ಕಟ್ಟಕಡೆಯ ಮನುಷ್ಯನಿಗೆ ದೊರಕಬೇಕಾದ ಮೊದಲ ಆದ್ಯತೆ ಎನ್ನುವ ಸಂಕೇತ. ಇದೊಂದು ರಾಜಕೀಯ ಸಂದೇಶ. ಇದನ್ನು ಹೇಳುವುದು ವಾಲ್ಮೀಕಿ ಅಂತಹವರಿಗೆ ಮಾತ್ರ ಸಾಧ್ಯ ಎಂದು ಅವರು ತಿಳಿಸಿದರು.

ಮರುಹುಟ್ಟುಗಳ ಮಹಾಕಾವ್ಯ ರಾಮಾಯಣ. ಇದು ಜನಮಾನಸದಲ್ಲಿ ನೆಲೆಗೊಂಡಿದೆ. ಮತ್ತೆ ಮತ್ತೆ ಅನೇಕ ದೇಶ, ಭಾಷೆಗಳಲ್ಲಿ ಕೃತಿ ಬರುತ್ತದೆ. ಬೇರೆ ಬೇರೆ ಮಗ್ಗುಲಲ್ಲಿ ಅರ್ಥ ಮಾಡಿಕೊಂಡು, ಚಿಂತನೆ ಮಾಡುತ್ತಾ ನಮ್ಮದಾಗಿಸಿಕೊಳ್ಳುತ್ತ ಹೋಗೋಣ ಎಂದರು.

ವಿ.ವಿ ಕುಲಪತಿ ಪ್ರೊ.ಎಂ. ವೆಂಕಟೇಶ್ವರಲು, ಕುಲಸಚಿವೆ ನಾಹಿದಾ ಜಮ್ ಜಮ್, ಸಾಹಿತ್ಯೋತ್ಸವದ ಸಂಘಟಕ ಪ್ರೊ.ಎಚ್.ಕೆ. ಶಿವಲಿಂಗಸ್ವಾಮಿ, ಸಹ ಪ್ರಾಧ್ಯಾಪಕಿ ಗೀತಾ ವಸಂತ ಇತರರು ಹಾಜರಿದ್ದರು.

ನಗರದಲ್ಲಿ ಇಂದು

ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್‌–2024: ಆಯೋಜನೆ ಮತ್ತು ಸ್ಥಳ: ಡಾನ್ ಬಾಸ್ಕೊ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕುಂಬಳಗೋಡು, ಬೆಳಿಗ್ಗೆ 8.30

ರಸಗ್ರಹಣ ತರಗತಿಗಳ ಪ್ರಮಾಣಪತ್ರ ವಿತರಣಾ ಸಮಾರಂಭ: ಅತಿಥಿಗಳು: ಪಿ.ವಿ. ನಾರಾಯಣ, ಆರ್. ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾದ 75ನೇ ವಾರ್ಷಿಕೋತ್ಸವ, ಭಾರತ–ಚೀನಾ ಮೈತ್ರಿ ಸಂಘ–ಕರ್ನಾಟಕದ 75ನೇ ವಾರ್ಷಿಕೋತ್ಸವ, ಚೈನೀಸ್ ಛಾಯಾಚಿತ್ರಗಳ ಪ್ರದರ್ಶನಕ್ಕೆ ಚಾಲನೆ: ರಾಧಾಕೃಷ್ಣ, ಅತಿಥಿ: ಕೊಂಗ್ ಕ್ಸಿನಾಹು ವಾ, ಭಾಷಣಕಾರರು: ಪಿ.ಜಿ.ಆರ್. ಸಿಂಧ್ಯ, ಅಧ್ಯಕ್ಷತೆ: ಕೆ. ಶ್ರೀನಿವಾಸಗೌಡ, ಆಯೋಜನೆ: ಇಂಡಿಯಾ–ಚೀನಾ ಫ್ರೆಂಡ್‌ಶಿಪ್ ಅಸೋಸಿಯೇಷನ್ ಕರ್ನಾಟಕ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ಗೊ.ರು. ಚನ್ನಬಸಪ್ಪ

87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ನಿಯೋಜಿತ ಸಮ್ಮೇಳನಾಧ್ಯಕ್ಷ ಗೊ.ರು. ಚನ್ನಬಸಪ್ಪ ಅವರಿಗೆ ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಪ್ರಸ್ತಾವಿಕ ನುಡಿ: ಸಿ. ಸೋಮಶೇಖರ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕರ್ನಾಟಕ ಗಾಂಧಿ ಸ್ಮಾರಕ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಬಾಂಗ್ಲಾದೇಶದಲ್ಲಿ ಹಿಂದೂಗಳ ಸ್ಥಿತಿಗತಿ, ಸವಾಲುಗಳು, ಮುಂದಿನ ದಾರಿ: ಅನಿರ್ಬನ್ ಗಂಗೋಲಿ, ಆಯೋಜನೆ: ಮಂಥನ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್ ಆವರಣ, ಅರಮನೆ ರಸ್ತೆ, ಸಂಜೆ 6.30

'ಗೀತಾ ವಿವೃತಿ' ಧಾರ್ಮಿಕ ಪ್ರವಚನ: ವಾದಿರಾಜಾಚಾರ್ಯ ದೇಶಪಾಂಡೆ, ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, ಗಂಗಾಧರ ಬಡಾವಣೆ, ಎರಡನೇ ಮುಖ್ಯರಸ್ತೆ, ವಿಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ

ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯ ಸಮಾರಂಭದಲ್ಲಿ ರಾಜ್ಯದ ಸರ್ಕಾರಿ ಸಂಸ್ಥೆಗಳ ಪೈಕಿ ಅತಿ ಹೆಚ್ಚು ಸಶಸ್ತ್ರ ಪಡೆಗಳ ಧ್ವಜ ನಿಧಿ ಸಂಗ್ರಹಣೆಯಲ್ಲಿ ಕೆಎಸ್‌ಆರ್‌ಟಿಸಿ ಸತತ 10ನೇ ಬಾರಿಗೆ ಪ್ರಶಸ್ತಿ ಪಡೆದಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ಮೇಜರ್ ಜನರಲ್ ಬಿ.ಜಿ. ಗಿಲಗಂಚಿ, ಬ್ರಿಗೇಡಿಯರ್ ಎಂ.ಬಿ. ಶಶಿಧರ್ ಅವರು ಪ್ರಶಸ್ತಿಯನ್ನು ಕೆಎಸ್‌ಆರ್‌ಟಿಸಿ ಮಂಡಳಿ ಕಾರ್ಯದರ್ಶಿ ಲತಾ ಟಿ.ಎಸ್., ಮುಖ್ಯ ಲೆಕ್ಕಾಧಿಕಾರಿ ಮಂಜುಳಾ ಎಸ್. ನಾಯಕ್, ಮುಖ್ಯ ಕಾರ್ಮಿಕ ಕಲ್ಯಾಣಾಧಿಕಾರಿ ಎಚ್.ಡಿ. ಗೌರಾಂಭ ಅವರಿಗೆ ಪ್ರದಾನ ಮಾಡಿದರು

'ಮೋದಿ 48 ಗಂಟೆಗಳಲ್ಲಿ ಬಾಂಗ್ಲಾ ಸೋಲಿಸಬಲ್ಲರು'

ಮುಖ್ಯಾಂಶಗಳು
- ಶಿವಸೇನಾ (ಶಿಂದೆ ಬಣ) ಶಾಸಕ ನೀಲೇಶ್ ರಾಣೆ ಹೇಳಿಕೆ
- ಭಾರತ ಇಷ್ಟವಾಗದಿದ್ದರೆ ಮುಸ್ಲಿಮರು ದೇಶ ತೊರಯಬಹುದು ಎಂದ ಶಾಸಕ

ಸಿಂಧುದುರ್ಗ (ಪಿಟಿಐ): 'ಬಾಂಗ್ಲಾದೇಶದ ಹಿಂದೂಗಳನ್ನು ರಕ್ಷಿಸಲು ಭಾರತಕ್ಕೆ ಸಾಧ್ಯ. ಅನಿವಾರ್ಯ ಎನಿಸಿದರೆ ಪ್ರಧಾನಿ ನರೇಂದ್ರ ಮೋದಿ ಅವರು 48 ಗಂಟೆಗಳಲ್ಲಿ ಬಾಂಗ್ಲಾವನ್ನು ಸೋಲಿಸಬಲ್ಲರು' ಎಂದು ಶಿವಸೇನಾ (ಶಿಂದೆ ಬಣ) ಶಾಸಕ ನೀಲೇಶ್ ರಾಣೆ ಹೇಳಿದ್ದಾರೆ.

ಮಹಾರಾಷ್ಟ್ರದ ಸಿಂಧುದುರ್ಗದಲ್ಲಿ ಮಂಗಳವಾರ ನಡೆದ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು, 'ಹಿಂದೂಗಳಿಗಾಗಿ ಜಗತ್ತಿನಲ್ಲಿರುವ ಒಂದು ದೇಶವೆಂದರೆ ಅದು ಭಾರತ. ನೇಪಾಳ ಹಿಂದೂ ರಾಷ್ಟ್ರ ಆಗಿದೆಯಾದರೂ, ಅಲ್ಲಿನ ಜನಸಂಖ್ಯೆ ತುಂಬಾ ಕಡಿಮೆ. ಮುಸ್ಲಿಮರಿಗೆ ಹಲವು ದೇಶಗಳಿವೆ. ನಿಮಗೆ (ಮುಸ್ಲಿಮರಿಗೆ) ನಮ್ಮ ದೇಶ ಇಷ್ಟವಾಗದಿದ್ದರೆ ದೇಶವನ್ನು ತೊರೆಯಬಹುದು' ಎಂದಿದ್ದಾರೆ.

'ನಮ್ಮ ದೇಶದಲ್ಲಿ ಹಿಂದೂ ಮಹಿಳೆಯರ ಅಪಹರಣ ಪ್ರಕರಣ ಹೆಚ್ಚುತ್ತಿದೆ. ಗಣೇಶ, ರಾಮನವಮಿ ಮತ್ತು ಹನುಮ ಜಯಂತಿ ಮೆರವಣಿಗೆಯ ಮೇಲೆ ಕಲ್ಲು ತೂರಲಾಗುತ್ತದೆ' ಎಂದು ಆರೋಪಿಸಿದರು.

ಬಿಜೆಪಿಯಲ್ಲಿದ್ದ ನೀಲೇಶ್ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೂ ಮುನ್ನ ಶಿಂದೆ ನೇತೃತ್ವದ ಶಿವಸೇನಾ ಸೇರಿದ್ದರು.

ಕುರುವೆಲ್ ತಿಮ್ಮನಹಳ್ಳಿಯಲ್ಲಿ ಕಾಣಿಸಿಕೊಂಡ ಕರಡಿ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿ ನರಸೀಪುರ ಪಂಚಾಯಿತಿಯ ಕುರುವೆಲ್ ತಿಮ್ಮನಹಳ್ಳಿಯಲ್ಲಿ ಮಂಗಳವಾರ ಸಂಜೆ 6.50ಕ್ಕೆ ಕರಡಿ ಕಾಣಿಸಿಕೊಂಡಿದೆ.

ಮಂಗಮ್ಮ ಅವರು ಮನೆಯ ಹತ್ತಿರ ಹಸು ಕಟ್ಟುವ ಸಮಯಕ್ಕೆ ಕರಡಿ ಊರಿನ ಆಂಜನೇಯ ದೇವಾಲಯದ ಕಡೆಯಿಂದ ಬೇಲಿ ಮರೆಯಲ್ಲಿ ಕಾಣಿಸಿಕೊಂಡಿದೆ. ಇದೇ ವೇಳೆ ಮನೆಯ ಮುಂದೆ ನಿಂತಿದ್ದ ಭಾಗ್ಯಮ್ಮ, ಕರಡಿಯನ್ನು ಕಂಡು ಕಿರುಚಿಕೊಂಡು ಓಡಿದ್ದಾರೆ. ಮಂಗಮ್ಮ ಅವರೂ ಓಡಿದ್ದಾರೆ. ಮತ್ತೊಂದು ಮನೆಯ ಮುಂದೆ ಕುಳಿತಿದ್ದ ವೀರಮ್ಮ ಅವರೂ ಕೂಗಿಕೊಂಡಿದ್ದರಿಂದ ಕರಡಿ ಓಡಿಹೋಗಿದೆ.

'ಸಂಜೆ ಸಮಯಕ್ಕೆ ಕರಡಿ ಊರಿಗೆ ಬಂದಿತ್ತು. ನಾವು ಮೂವರು ಹೆಂಗಸರೇ ಇದ್ದೆವು. ನೋಡಿ ಕೂಗಿದ್ದಕ್ಕೆ ಸರಿಹೋಯ್ತು. ಇಲ್ಲದಿದ್ದರೆ ಮಂಗಮ್ಮ ಅವರ ಮೇಲೆ ಕರಡಿ ಎರಗುತ್ತಿತ್ತೇನೋ' ಎಂದು ಭಾಗ್ಯಮ್ಮ, ವೀರಮ್ಮ ಆತಂಕ ವ್ಯಕ್ತಪಡಿಸಿದರು.

'ಗ್ರಾಮದ ಸುತ್ತಮುತ್ತ ಬೇಲಿ ಬೆಳೆದುಕೊಂಡಿದೆ. ಕರಡಿ, ಚಿರತೆ ಅಡಗಲು ಅವಕಾಶಗಳಿವೆ. ಅದನ್ನು ಪಂಚಾಯಿತಿ ಆಡಳಿತ ಶುಚಿ ಮಾಡಬೇಕು. ಇಲ್ಲದಿದ್ದರೆ ಕಾಡುಪ್ರಾಣಿಗಳಿಂದ ಜನರಿಗೆ ತೊಂದರೆಯಾಗುತ್ತದೆ' ಎಂದು ಗ್ರಾಮಸ್ಥರು ಹೇಳಿದರು.

ಬುಗಡಿಹಳ್ಳಿ ಗೊಲ್ಲರಹಟ್ಟಿಯಲ್ಲಿ ಮೇ 21ರಂದು ಕರಡಿಯನ್ನು ಬೋನಿಟ್ಟು ಸೆರೆ ಹಿಡಿಯಲಾಗಿತ್ತು.

ಬೆಳಗಾವಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್

'ಹೈಕೋರ್ಟ್ ಆದೇಶ ಪಾಲಿಸಿದ್ದೇವೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ನಾವು ಹೈಕೋರ್ಟ್ ಆದೇಶ ಕಟ್ಟುನಿಟ್ಟಾಗಿ ಪಾಲಿಸಿದ್ದೇವೆ. ಆದರೆ, ಪಂಚಮಸಾಲಿ ಸಮುದಾಯದ ಹೋರಾಟಗಾರರು ಕಾನೂನು ಕೈಗೆತ್ತಿಕೊಂಡ ಕಾರಣ ಕನಿಷ್ಠ ಬಲ ಪ್ರಯೋಗ ಮಾಡುವುದು ಅನಿವಾರ್ಯವಾಯಿತು' ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು.

ಇಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನ್ಯಾಯಾಲಯದ ಆದೇಶದಂತೆ ಪ್ರತಿಭಟನೆಗೆ ಅವಕಾಶ ಕೊಟ್ಟಿದ್ದೆವು. ಶಾಂತಿಯುತವಾಗಿ ಪ್ರತಿಭಟಿಸುವುದಾಗಿ ಹೋರಾಟಗಾರರೂ ತಿಳಿಸಿದ್ದರು. ಆದರೆ, ಆದೇಶ ಮೀರಿ ರಾಷ್ಟ್ರೀಯ ಹೆದ್ದಾರಿಗೆ ನುಗ್ಗಿದರು. ಬ್ಯಾರಿಕೇಡ್‌ಗಳನ್ನು ಮುರಿದರು. ಸಾರಿಗೆ ಸಂಸ್ಥೆಯ ಏಳು ಬಸ್, ಪೊಲೀಸ್ ಇಲಾಖೆಯ ಎರಡು ವಾಹನ ಜಖಂಗೊಂಡವು. ಪರಿಸ್ಥಿತಿ ನಿಯಂತ್ರಣಕ್ಕಾಗಿ ಕೆಲವು ಹೆಜ್ಜೆ ಇರಿಸುವುದು ಅನಿವಾರ್ಯವಾಯಿತು' ಎಂದು ಸಮರ್ಥಿಸಿಕೊಂಡರು.

ಬೆಳಗಾವಿಯ ಸುವರ್ಣ ವಿಧಾನಸೌಧದ ಎದುರು ಮಂಗಳವಾರ ರಾಷ್ಟ್ರೀಯ ಹೆದ್ದಾರಿ ಮೇಲೆ ಧರಣಿ ಕುಳಿತ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ಪೊಲೀಸರು ವಶಕ್ಕೆ ಪಡೆದರು – ಪ್ರಜಾವಾಣಿ ಚಿತ್ರ

'ಕಲ್ಲುತೂರಾಟದ ಘಟನೆಯಲ್ಲಿ 14 ಪೊಲೀಸರು, 10 ಹೋರಾಟಗಾರರು ಗಾಯಗೊಂಡಿದ್ದು, ಅವರಿಗೆ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ. ಗಾಯಾಳುಗಳ ವೈದ್ಯಕೀಯ ಶುಲ್ಕವನ್ನು ಜಿಲ್ಲಾಡಳಿತ ಭರಿಸಲಿದೆ. ಹಿರೇಬಾಗೇವಾಡಿ ಠಾಣೆಯಲ್ಲಿ ದೂರು ದಾಖಲಿಸಿದ್ದು, 70 ಮಂದಿ ವಶಕ್ಕೆ ಪಡೆಯಲಾಗಿದೆ' ಎಂದು ತಿಳಿಸಿದರು.

'ಬೇರೆ ಸ್ಥಳ ನೀಡಿದ್ದೆವು'

'ಹೋರಾಟ ಮಾಡಲು ಪಂಚಮಸಾಲಿ ಸಮುದಾಯದವರಿಗೆ ಬೇರೆ ಬೇರೆ ಸ್ಥಳ ತೋರಿಸಿದ್ದೆವು. ಆದರೆ, ಕೊಂಡಸಕೊಪ್ಪ ಗುಡ್ಡದ ಮೇಲೆ ಅವರು ಹೋರಾಟಕ್ಕೆ ತೀರ್ಮಾನಿಸಿದರು. ನಿಗದಿತ ಸ್ಥಳದಲ್ಲಿ ಪ್ರತಿಭಟಿಸುವಂತೆ ತಿಳಿಸಿದೆವು. ಆದರೆ, ಹೋರಾಟಗಾರರು ಸೌಧಕ್ಕೆ ಮುತ್ತಿಗೆ ಹಾಕಲು ಮುಂದಾಗಿ ಕಲ್ಲುತೂರಿದರು' ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು.

ಉತ್ತರವಲಯ ಐಜಿಪಿ ವಿಕಾಶಕುಮಾರ್ ವಿಕಾಶ್, ನಗರ ಪೊಲೀಸ್ ಕಮಿಷನರ್ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಇದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರ ಕಛೇರಿ, ಅನೆಕ್ಸ್ ಕಟ್ಟಡ–1, ನರಸಿಂಹರಾಜ ಚೌಕ, ಬೆಂಗಳೂರು – 560002.

ಸಂಖ್ಯೆ: ಬೃಬೆಂಮಪಾ/ಮುಖ್ಯಆಯುಕ್ತರು/ಪಿಎಸ್‌ಆರ್(ಜಿ)/2629/2024–25 **ನಮೂನೆ–3** (ನಿಯಮ–3 ರ ಉಪ–ನಿಯಮ (3) ನೋಡಿ) ದಿನಾಂಕ: 10–12–2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯ್ದೆ 1961 ರ ಸೆಕ್ಷನ್ 14–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ ಅನುಮೋದಿತ ಮಹಾಯೋಜನೆ 2015 ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಕೊತ್ತನೂರು ರಸ್ತೆಯಿಂದ ಆವಲಹಳ್ಳಿ, ಭೈರತಿ, ಬಿಳಿಶಿವಾಲೆ, ಆದೂರು, ಬಿದರಹಳ್ಳಿ, ಹಿರಂಡಹಳ್ಳಿ ಮತ್ತು ರಾಂಪುರ ರಸ್ತೆವರೆಗಿನ ರಸ್ತೆ ವಿಸ್ತರಣೆ ನಿರ್ಮಾಣ" ಮಾಡುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶವು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು / ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013 ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು ಪ್ರಾಧಿಕಾರವು ಭೂಮಿಯನ್ನು ಒಪ್ಪಿಸಿದ ದುಪ್ಪಟ್ಟು ಮತ್ತು ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ಒಪ್ಪಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರ ಕಛೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಛೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ / ಕಟ್ಟಡ ಪ್ರದೇಶವನ್ನು ನೀಡಿದ / ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು : **ಬೆಂಗಳೂರು ನಗರ** ತಾಲ್ಲೂಕಿನ ಹೆಸರು : **ಬೆಂಗಳೂರು ಪೂರ್ವ** ಗ್ರಾಮದ ಹೆಸರು : **ಆದೂರು**

Sl. No.	Sy.No/ Khatha No.	Type of Land		Nature of Land			Dimension of the Land/ Plot & Extent in Sq.m		Boundaries of the Land / Plot				Building Details			Present Activity on Land/Building (Specify Specific activity such as Shop, Office, Factory, Apartment, Individual House etc.,	Market (guide -lines) value of the land Per Sq.m	Name and address of the owner of the Plot / Land for which DRC is to be issued
		Vacant	Built up	Agriculture	Converted Undeveloped	Approved Layout / Developed Land Building Site	Dimension	Extent	North	South	East	West	Extent in Sq.m	Type of Construction and No. of Floors	Floor Area Ratio			
1	Sy.No. 12/2	Vacant Land		Agriculture Land			560.00 Sqm		Remaining Land of Sy.No. 12/2	Road	Village Gadi	Sy.No. 12/3	None	None	None	Vacant	2,965.00/-	Sri V. Munivenkatappa S/o Late. D. Venkataswamy Gowda, No.09, Soubhagya Nilaya, Adur Village, Bidarahalli Hobli, Virgonagar Post, Bengaluru - 560049.

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು.

ವಿಭಾಗ / ಉಪ–ವಿಭಾಗ / ಶಾಖೆ ಕಛೇರಿ ಹೆಸರು ಮತ್ತು ವಿಳಾಸ	ಉಪ ಆಯುಕ್ತರು, ಭೂಸ್ವಾಧೀನ ಅಧಿಕಾರಿ ಮತ್ತು ಟಿಡಿಆರ್, 2ನೇ ಮಹಡಿ, ಕೊಠಡಿ ಸಂಖ್ಯೆ. 208, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮ. ಪಾಲಿಕೆ, ಬೆಂಗಳೂರು – 560002

ಸಹಿ/–
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಎಐ ದೊಡ್ಡ ಹೊಟ್ಟೆಗೆ ಸಿಂಥೆಟಿಕ್ ಡೇಟಾ

ಕೃಷ್ಣ ಭಟ್

ಆರ್ಟಿಫಿಶಿಯಲ್ ಇಂಟಲಿಜೆನ್ಸ್‌ಗೆ 'ಡೇಟಾ' ಎನ್ನುವುದು ತಂದೆ–ತಾಯಿ ಇದ್ದ ಹಾಗೆ! ಡೇಟಾ ಇಲ್ಲದೇ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಇಲ್ಲ. ಈ ತಂದೆ–ತಾಯಿಯರೇ, ಎಂದರೆ ಡೇಟಾದಿಂದಲೇ ಆರ್ಟಿಫಿಶಿಯಲ್ ಇಂಟಲಿಜೆನ್ಸ್, ಅದರಲ್ಲೂ 'ಜನರೇಟಿವ್ ಎಐ'ಗೆ ಜೀವ ಬಂದಿದೆ.

ನಾವು ಒಂದು ಪ್ರಶ್ನೆಯನ್ನು ಒಂದು 'ಜೆನ್ ಎಐ' ಬಳಿ ಕೇಳಿದರೆ, ಅದು ತಪ್ಪು ಉತ್ತರ ನೀಡಿದರೆ ಅಥವಾ ಸುತ್ತಿ ಬಳಸಿ ಅಸಂಬದ್ಧ ಉತ್ತರ ನೀಡಿದರೆ, ಅದಕ್ಕೆ ಕಾರಣ ಅದರ ಹಿಂದೆ ಇರುವ, ಅರ್ಥಂಬರ್ಥ ಇರುವ ಅಥವಾ ಇಲ್ಲದ ಡೇಟಾ!

ಬರಿ ಡೇಟಾ ಇದ್ದರೆ ಸಾಲದು. ಆ ಡೇಟಾವನ್ನು ಇಟ್ಟುಕೊಂಡು ಸರಿಯಾದ ತರಬೇತಿಯನ್ನೂ ಕೊಟ್ಟಿರಬೇಕು. ಈ ಡೇಟಾ ಮತ್ತು ಅದರ ಮೇಲೆ ನೀಡಿರುವ ತರಬೇತಿಯೇ ಒಂದು ಎಐ ಎಷ್ಟು ಪರಿಣಾಮಕಾರಿ ಎಂಬುದನ್ನು ಹೇಳುತ್ತದೆ. ಈಗ ಬಹುತೇಕ ಜೆನ್ ಎಐಗಳಲ್ಲಿರುವ ಸಮಸ್ಯೆಗಳಿಗೆ ಒಂದೋ ಡೇಟಾ ಕೊರತೆ ಅಥವಾ ಡೇಟಾವನ್ನು ಸರಿಯಾಗಿ ವಿಶ್ಲೇಷಣೆ ಮಾಡದೇ ಇರುವುದೇ ಕಾರಣ.



ಕೆಲವು ವರ್ಷಗಳ ಹಿಂದೆ ಉಚಿತವಾಗಿ ಸಿಗುತ್ತಿದ್ದ ಡೇಟಾಗಳೆಲ್ಲ ಈಗ ಜೆನ್ ಎಐಗೆ ಸಾಲುತ್ತಿಲ್ಲ. ಅವೆಲ್ಲವನ್ನೂ ಈ ಜೆನ್ ಎಐಗೆ ಉಣಿಸಿ, ಅದನ್ನು ಜೀರ್ಣಿಸಿಕೊಂಡು ಆಗಿದೆ. ಹಾಗಾದರೆ ಮುಂದೇನು?

ಅದಕ್ಕೆ ತಜ್ಞರ ಬಳಿ ಉತ್ತರ ಸಿದ್ಧವಿದೆ. ಅದುವೇ 'ಸಿಂಥೆಟಿಕ್ ಡೇಟಾ'. ಎಂದರೆ, ಡೇಟಾವನ್ನೂ ಕೃತಕವಾಗಿ ತಯಾರಿಸಲಾಗುತ್ತದೆ. ಆ ಡೇಟಾ ಇಟ್ಟುಕೊಂಡು ಮನುಷ್ಯ ಹೇಗೆ ಯೋಚನೆ ಮಾಡುತ್ತಾನೆಯೋ ಅದೇ ರೀತಿ ಚಿಂತನೆ ನಡೆಸುವ ರೀತಿಯಲ್ಲಿ ಜೆನ್ ಎಐಗೆ ತರಬೇತಿಯನ್ನು ನೀಡಲಾಗುತ್ತದೆ.

ಓಪನ್‌ಎಐ ಸಂಸ್ಥಾಪಕ ಸದಸ್ಯ ಆಂದ್ರೆಜ್ ಕರ್ಪತಿ ಹೇಳುವ ಪ್ರಕಾರ 'ಈಗಿರುವ ಎಲ್ಲ ಜೆನ್ ಎಐಗಳಿಗೂ 'ಮನುಷ್ಯನ ರೀತಿಯಲ್ಲಿ ಚಿಂತನೆ' ಮಾಡುವ ವಿಷಯದಲ್ಲಿ ಸಮಸ್ಯೆಯಿದೆ.' ನಾವು ಈಗ ಜೆನ್ ಎಐ ಬಳಿ ಕೇಳುವ ಪ್ರಶ್ನೆಗಳಿಗೆ ಬಹುತೇಕ ಸಂದರ್ಭದಲ್ಲಿ ನಮಗೆ ಸಿಗುವ ಉತ್ತರ ತಾರ್ಕಿಕವಾಗಿರುತ್ತದೆ. ಆದರೆ, ಅದಕ್ಕೆ ಭಾವನೆಗಳು, ಚಿಂತನೆಗಳು, ಯೋಚನೆಗಳ ಸ್ಪರ್ಶ ಇರುವುದಿಲ್ಲ!

ಇದಕ್ಕೆ ಮುಖ್ಯ ಕಾರಣವೇ ಈಗಾಗಲೇ ಇಂಟರ್ನೆಟ್‌ನಲ್ಲಿ ಲಭ್ಯವಿದ್ದ ಡೇಟಾಗಳ ವಿಧಾನ ಎಂದು ತಜ್ಞರು ಹೇಳುತ್ತಾರೆ. ಇದನ್ನು ನಿವಾರಿಸುವುದಕ್ಕೆ ಈಗಾಗಲೇ ಜೆನರೇಟಿವ್ ಎಐ ಅಭಿವೃದ್ಧಿಪಡಿಸುತ್ತಿರುವ ಕಂಪನಿಗಳು ಆರ್‌ಎಲ್‌ಎಚ್‌ಎಫ್ ವಿಧಾನವನ್ನು ಬಳಸಲು ಶುರು ಮಾಡಿವೆ. ಎಂದರೆ, ಒಂದು ಪ್ರಶ್ನೆಗೆ ಜೆನ್ ಎಐ ನೀಡಿದ ವಿವಿಧ ಪ್ರತಿಕ್ರಿಯೆಗಳನ್ನು ಒಬ್ಬ ಮಾನವನಿಗೆ ಕೊಟ್ಟು ಯಾವುದು ಹೆಚ್ಚು ಸೂಕ್ತ ಎಂದು ವಿಶ್ಲೇಷಣೆ ಹಾಗೂ ರ‍್ಯಾಂಕಿಂಗ್ ಅನ್ನು ಪಡೆಯುವುದು. ಅದನ್ನು ಜೆನ್ ಎಐಗೆ ಕೊಟ್ಟು 'ನೋಡು... ನೀನು ಕೊಟ್ಟ ಪ್ರತಿಕ್ರಿಯೆಗಳ ಪೈಕಿ ಮಾನವನಿಗೆ ಈ ಪ್ರತಿಕ್ರಿಯೆ ಇಷ್ಟವಾಗಿದೆ, ಈ ಪ್ರತಿಕ್ರಿಯೆ ಇಷ್ಟವಾಗಿಲ್ಲ' ಎಂದು ತಿಳಿಸುವುದು. ಅದನ್ನು ತಿಳಿದುಕೊಂಡ ಜೆನ್ ಎಐ ಯಾವುದು ಹೆಚ್ಚು ಇಷ್ಟವಾಗಿದೆಯೋ ಅಂಥದ್ದೇ ಪ್ರತಿಕ್ರಿಯೆ ನೀಡುತ್ತದೆ ಮತ್ತು ಅಂಥದ್ದೇ ಪ್ರತಿಕ್ರಿಯೆ ನೀಡುವುದಕ್ಕೆ ಬಳಸಿದ ತರ್ಕವನ್ನು ಆದ್ಯತೆಯ ಮೇಲೆ ಬಳಸಿಕೊಳ್ಳುತ್ತದೆ.

ಈ 'ಆರ್‌ಎಲ್‌ಎಚ್‌ಎಫ್', ಎಂದರೆ 'ರೀಇನ್‌ಫೋರ್ಸ್‌ಮೆಂಟ್ ಲರ್ನಿಂಗ್ ವಿಥ್ ಹ್ಯೂಮನ್ ಫೀಡ್‌ಬ್ಯಾಕ್' ವಿಧಾನವನ್ನು ಬಳಸುವುದಕ್ಕೆ ಹೊಸ ಡೇಟಾ ಬೇಕಾಗಿಲ್ಲ. ಆದರೆ ವೈವಿಧ್ಯಮಯ ಡೇಟಾ ಬೇಕಾಗುತ್ತದೆ.

ಈ ಹಂತದಲ್ಲಿ ಅಸಲಿ ಡೇಟಾ ಬದಲಿಗೆ ಸಿಂಥೆಟಿಕ್ ಡೇಟಾ ಬಳಕೆ ಹೆಚ್ಚು ಪ್ರಾಮುಖ್ಯವನ್ನು ಪಡೆಯುತ್ತಿದೆ. ಈಗ ಬಹುತೇಕ ಎಲ್ಲ ಜೆನ್ ಎಐ ಅಭಿವೃದ್ಧಿಪಡಿಸುತ್ತಿರುವ ಸಂಸ್ಥೆಗಳು ಸಿಂಥೆಟಿಕ್, ಎಂದರೆ ನಕಲಿ ಡೇಟಾ ಜನರೇಟ್ ಮಾಡುವುದಕ್ಕೆ ಅವರದ್ದೇ ಆದ ವ್ಯವಸ್ಥೆಯನ್ನು ಮಾಡಿಕೊಂಡಿವೆ. ಉದಾಹರಣೆಗೆ, ಓಪನ್‌ಎಐ ಬಳಿ 'ಸ್ಟ್ರಾಬೆರಿ' ಎಂಬ ಟೂಲ್ ಇದೆ. ಇದು ಅಲ್ಲಿನ ಇಂಜಿನಿಯರುಗಳಿಗೆ ಬೇಕಾದ ರೀತಿಯ ಸಿಂಥೆಟಿಕ್ ಡೇಟಾವನ್ನು ಸಿದ್ಧಪಡಿಸಿ ಕೊಡುತ್ತದೆ. ಈ ಡೇಟಾವನ್ನು ಇಟ್ಟುಕೊಂಡು ಇಂಜಿನಿಯರುಗಳು ಜೆನ್ ಎಐಗೆ ವಿಶ್ಲೇಷಣೆ ಮಾಡುವುದನ್ನು ಕಲಿಸಿಕೊಡುತ್ತಾರೆ. ಇನ್ನೊಂದೆಡೆ, ಹಗ್ಗಿಂಗ್ ಫೇಸ್ ಎಂಬ ಕಂಪನಿಯು 'ಕಾಸ್ಮೋಪೀಡಿಯಾ' ಎಂಬ ಬೃಹತ್ ಸಿಂಥೆಟಿಕ್ ಡೇಟಾಸೆಟ್ ಅನ್ನೇ ಪರಿಚಯಿಸಿದೆ. ಇದು ಮಶಿನ್ ಲರ್ನಿಂಗ್‌ನಲ್ಲಿ ತೊಡಗಿಸಿಕೊಂಡಿರುವವರಿಗೆ ಉತ್ತಮ ಗುಣಮಟ್ಟದ ಡೇಟಾವನ್ನು ಒದಗಿಸುವ ಕೆಲಸ ಮಾಡುತ್ತದೆ. ಅಷ್ಟೇ ಅಲ್ಲ, ಇದಕ್ಕೆ ಹತ್ತಾರು ಕಂಪನಿಗಳೂ ಹುಟ್ಟಿಕೊಂಡಿವೆ. ಈ ಸಿಂಥೆಟಿಕ್ ಡೇಟಾವನ್ನು ಜನರೇಟ್ ಮಾಡುವುದಷ್ಟೇ ಅಲ್ಲ, ಅವುಗಳನ್ನು ಜೆನ್ ಎಐ ಅಭಿವೃದ್ಧಿಪಡಿಸುತ್ತಿರುವ ಕಂಪನಿಗಳಿಗೆ ಒದಗಿಸುವುದಕ್ಕೂ ಮೊದಲು ಅವುಗಳ ಗುಣಮಟ್ಟ ತಪಾಸಣೆಯನ್ನೂ ಮಾಡಲಾಗುತ್ತದೆ. ದೇಶದ ಅತಿದೊಡ್ಡ ಟೆಲಿಕಾಂ ಕಂಪನಿಗಳಲ್ಲಿ ಒಂದಾದ ಟೆಲಿಫೋನಿಕಾ ಸಿಂಥೆಟಿಕ್ ಡೇಟಾ ಬಳಸಿಕೊಂಡು ಗ್ರಾಹಕರಿಗೆ ಹೇಗೆ ನೆರವು ನೀಡಬಹುದು ಎಂಬುದರ ಸಂಶೋಧನೆ ನಡೆಸುತ್ತಿದೆ. ಟೆಲಿಕಾಂ ಕಂಪನಿಗಳ ಬಳಿ ಅಪಾರ ಪ್ರಮಾಣದ ಗ್ರಾಹಕರ ಡೇಟಾ ಇದ್ದರೂ, ಅವುಗಳನ್ನು ಸಂಸ್ಕರಿಸುವುದರಲ್ಲಿ ಅಪಾರ ಸಮಯ ಮತ್ತು ಹಣ ವ್ಯರ್ಥವಾಗುತ್ತದೆ. ಅಲ್ಲದೆ, ಗೌಪ್ಯತೆ ಉಲ್ಲಂಘನೆ ಸಮಸ್ಯೆಯೂ ಇದರಲ್ಲಿದೆ. ಹೀಗಾಗಿ, ಇವು ಸಿಂಥೆಟಿಕ್ ಗ್ರಾಹಕರ ಡೇಟಾವನ್ನು ಜನರೇಟ್ ಮಾಡುವುದೇ ಹೆಚ್ಚು ಉಪಯುಕ್ತ ಎಂದು ಭಾವಿಸುತ್ತಿವೆ. ಅಸಲಿ ಡೇಟಾದಲ್ಲಿ ಇರುವ ದೃಷ್ಟಿಕೋನದ ಸಮಸ್ಯೆ ಕೂಡ ಈ ಸಿಂಥೆಟಿಕ್ ಡೇಟಾದಲ್ಲಿಲ್ಲ! ಅಸಲಿ ಡೇಟಾದಲ್ಲಿ ಒಂದು ಜನಾಂಗ ಅಥವಾ ಮನುಷ್ಯರ ಬಗ್ಗೆ ಕೀಳಾದ ಭಾವ ಇರಬಹುದು. ಅದನ್ನು ಹೀರಿಕೊಂಡ ಜೆನ್ ಎಐ ಕೂಡ ಅದೇ ಅಭಿಪ್ರಾಯವನ್ನು ಹೊರಹಾಕಬಹುದು. ಆದರೆ, ಈ ಸಿಂಥಟಿಕ್ ಡೇಟಾದಲ್ಲಿ ಈ ಸಮಸ್ಯೆ ಇರುವುದಿಲ್ಲ.

ಇದರ ಜೊತೆಗೆ ಡೇಟಾ ಬಗ್ಗೆ ಈಗ ಜನರಿಗೆ ಹೆಚ್ಚು ಹೆಚ್ಚು ತಿಳಿವಳಿಕೆ ಬಂದಿದೆ. ಗೌಪ್ಯ ಡೇಟಾಗಳನ್ನು ಜೆನ್ ಎಐ ಬಳಸುವಂತಿಲ್ಲ. ಮೊದಲು ಅನಾಮಿಕಗೊಳಿಸಿದ ಡೇಟಾವನ್ನು ಗೌಪ್ಯವಲ್ಲದ ಡೇಟಾ ಎಂದೇ ಪರಿಗಣಿಸಲಾಗುತ್ತಿತ್ತು. ಆದರೆ, ಈಗ ಅದು ಕೂಡ ಗೌಪ್ಯತೆಯ ವ್ಯಾಖ್ಯಾನದ ವ್ಯಾಪ್ತಿಗೆ ಬರುತ್ತದೆ ಎಂಬ ಕಾರಣಕ್ಕೆ ಜೆನ್ ಎಐ ಕಂಪನಿಗಳು ಅದರ ಬಳಕೆಯನ್ನು ಕಡಿಮೆ ಮಾಡಿವೆ. ಹೀಗಾಗಿ, ಮುಕ್ತವಾಗಿ, ಉಚಿತವಾಗಿ ಸಿಗುವ, ಗೌಪ್ಯತೆ ಇಲ್ಲದಂತಹ ಡೇಟಾದಲ್ಲಿ ವೈವಿಧ್ಯತೆಯ ಕೊರತೆ ಇದೆ. ಈ ಎಲ್ಲ ಸಮಸ್ಯೆಗಳಿಂದ ಸಿಂಥೆಟಿಕ್ ಡೇಟಾಗೆ ಜೆನ್ ಎಐ ಅಭಿವೃದ್ಧಿಪಡಿಸುತ್ತಿರುವ ಕಂಪನಿಗಳು ಮೊರೆಹೋಗಿವೆ.

ಕೆಲವೇ ವರ್ಷಗಳ ಹಿಂದೆ ಹುಟ್ಟಿಕೊಂಡಿದ್ದ ಡೇಟಾ ಈಸ್ ದಿ ನ್ಯೂ ಆಯಿಲ್ ಎಂಬ ಕಲ್ಪನೆ ಈಗಲೇ ಹಳಸಲಾಗುತ್ತಿದೆ. ಈಗ ಆಯಿಲ್ ಮತ್ತು ಡೇಟಾ – ಎರಡೂ ಅಮೂಲ್ಯವೇ ಆದರೂ, ಅದರ ರೂಪ ಬದಲಾಗಿದೆ. ಪೆಟ್ರೋಲಿಯಂ ಬದಲಿಗೆ ನವೀಕರಿಸಬಹುದಾದ ಇಂಧನಕ್ಕೂ, ಅಸಲಿ ಡೇಟಾ ಬದಲಿಗೆ ಸಿಂಥೆಟಿಕ್ ಡೇಟಾಕ್ಕೂ ಹೆಚ್ಚಿನ ಪ್ರಾಮುಖ್ಯ ಬರುತ್ತಿದೆ!



'ಕೊಕ್ಕರೆ' ಡ್ರೋನು

ಕೊಳ್ಳೇಗಾಲ ಶರ್ಮ

ವಿಮಾನ ನೋಡಿದ್ದೀರಲ್ಲ? ಸಬ್‌ಮೆರೀನ್ ಅಥವಾ ಜಲಾಂತರ್ಗಾಮಿ ನೌಕೆಯನ್ನು ನೋಡಿರದಿದ್ದರೂ, ಅದರ ಬಗ್ಗೆ ಕೇಳಿರುತ್ತೀರಿ. ವಿಮಾನವನ್ನು ಕವಿಗಳು 'ಲೋಹದ ಹಕ್ಕಿ' ಎಂದು ವಿವರಿಸುತ್ತಾರೆ. ವಾಸ್ತವದಲ್ಲಿ ವಿಮಾನದ ಆಕಾರವು ಹಕ್ಕಿಯಂತೆ ಇದ್ದರೂ, ಅದು ಹಾರುವ ತಂತ್ರವೇ ಬೇರೆ. ಹಕ್ಕಿಗಳಂತೆ ಅದು ರೆಕ್ಕೆ ಬಡಿಯುವುದೇ ಇಲ್ಲ. ಹಾಗೆಯೇ ಸಬ್‌ಮೆರೀನು ಸಮುದ್ರದೊಳಗೆ ಈಜಿದರೂ, ಅದು ಚಲಿಸಲು ಬಳಸುವ ತಂತ್ರವೇ ಬೇರೆ.ಮೀನುಗಳಂತೆ ಬಳುಕುತ್ತಾ ಸಾಗುವುದಿಲ್ಲ. ಲೋಹದ ಮೀನು, ಲೋಹದ ವಿಮಾನ ಎನ್ನುವುದೆಲ್ಲ ಬರೀ ಕಲ್ಪನೆ ಎಂದುಕೊಂಡಿದ್ದರೆ ಸ್ವಲ್ಪ ತಾಳಿ. ಹಕ್ಕಿಗಳಂತೆಯೇ ರೆಕ್ಕೆ ಬಡಿಯುತ್ತಾ ಗಾಳಿಗೇರುವ ರೋಬಾಟು ಹಾಗೂ ಮೀನುಗಳಂತೆಯೇ ರೆಕ್ಕೆಗಳನ್ನು ಬಡಿದು ದಿಕ್ಕು ಬದಲಿಸುವ ಜಲಾಂತರ್ಗಾಮಿ ರೋಬಾಟುಗಳು ಸಿದ್ಧವಾಗುತ್ತಿವೆ.

ಹಕ್ಕಿಗಳನ್ನು ಗಮನಿಸಿ. ಅವು ಹಾರಲು ಹೊರಟಾಗ ವಿಮಾನಗಳಂತೆ ಕಿಲೋಮೀಟರುಗಳಷ್ಟು ದೂರ ಓಡುವುದಿಲ್ಲ. ಒಂದಿಷ್ಟು ದೂರ ಓಡಿ ಹೋಗಿ ಥಟ್ಟನೆ ಮೇಲೆ ನೆಗೆದು ಹಾರಲು ಆರಂಭಿಸುತ್ತವೆ. ವಿಮಾನವನ್ನು ಬಿಡಿ; ಅದು ಬಹಳ ಭಾರಿ; ಕುಪ್ಪಳಿಸಿ ಮೇಲೆ ಹಾರುವುದು ಸ್ವಲ್ಪ ಕಷ್ಟವೇ. ಆದರೆ ತುಸು ಹಗುರವಾದ ಡ್ರೋನುಗಳಾದರೂ ಹೀಗೆ ಮಾಡಬಹುದಿತ್ತಲ್ಲವೇ? ಇದುವೂ ಸಾಧ್ಯವಂತೆ. ಸ್ವಿಟ್ಜರ್ಲೆಂಡಿನ ಲೌಸಾನೆಯಲ್ಲಿರುವ ಸರ್ಕಾರಿ ತಾಂತ್ರಿಕ ಸಂಶೋಧನಾಲಯದ ಯಾಂತ್ರಿಕಬುದ್ಧಿ ಇರುವ ಯಂತ್ರಗಳ ತಂತ್ರಜ್ಞ ವಾಂಗ್ ಡಾಂಗ್ ಶಿಂಗ್ ಮತ್ತು ಸಂಗಡಿಗರು ಹೀಗೆ ಓಡಿ, ನೆಗೆದು ಗಾಳಿಯೇರುವ ಡ್ರೋನನ್ನು ಸೃಷ್ಟಿಸಿದ್ದಾರೆ.

ವಾಂಗ್ ಡಾಂಗ್ ಶಿಂಗ್ ತಂಡದ ಡ್ರೋನು ಸಾಧಾರಣ ಡ್ರೋನುಗಳಂತೆ ಕಾಣುವುದಿಲ್ಲ. ನೋಡಲು ಕೂಡ ಅದು ಹಕ್ಕಿಯಂತೆಯೇ ಇದೆ. 'ರೇವನ್' ಎಂದು ಇದಕ್ಕೆ ಹೆಸರಿಟ್ಟಿದ್ದಾರೆ. ಎಂದರೆ ವಿಭಿನ್ನ ಪರಿಸರಗಳಿಗೆ ಯುಕ್ತವಾದ ಹಕ್ಕಿಯನ್ನು ಅಣಕಿಸುವ ರೋಬಾಟು ಎಂದು ಅರ್ಥ. ಇದರ ವಿಶೇಷ, ಅದರ ಕಾಲುಗಳು. ಹಕ್ಕಿಗಳಂತೆಯೇ ಈ ಡ್ರೋನು ನೆಲದ ಮೇಲೆ ನಡೆಯಬಲ್ಲುದು, ಓಡಬಲ್ಲುದು, ಕುಪ್ಪಳಿಸಬಲ್ಲುದು ಹಾಗೂ ಆಕಾಶದಲ್ಲಿ ಹಾರಬಲ್ಲುದು. ವಿಮಾನಗಳಿಗಾಗಲಿ, ಡ್ರೋನುಗಳಿಗಾಗಲಿ ಇದು ಸಾಧ್ಯವಿಲ್ಲ. ರೇವನ್ ಹೀಗೆ ನೆಲದಲ್ಲಿ ಸರಾಗವಾಗಿ ಚಲಿಸಿದಂತೆಯೇ ಗಾಳಿಯಲ್ಲಿಯೂ ಹಾರಬಲ್ಲುದು. ವಿಮಾನ ಹಾಗೂ ಡ್ರೋನುಗಳು ಗಾಳಿಯಲ್ಲಿ ಹಾರಲು ಸಮರ್ಥವಾಗಿದ್ದರೂ, ನೆಲದ ಮೇಲೆ ಓಡಾಡುವುದರಲ್ಲಿ ಅಶಕ್ತರು. ಆದ್ದರಿಂದಲೇ ವಿಮಾನಗಳು ಮೇಲೇರಲು ಬಹಳಷ್ಟು ದೂರ ಓಡಬೇಕು. ಡ್ರೋನುಗಳನ್ನು ಮೇಲೆ ಎತ್ತಿ ಬಿಸಾಡಬೇಕು, ಗಾಳಿಪಟವನ್ನು ಬಿಸಾಡಿದಂತೆ. ಅಥವಾ ಹೆಲಿಕಾಪ್ಟರಿನಲ್ಲಿರುವ ರೋಟರುಗಳಿಂದ ಗಾಳಿಯನ್ನು ಬೀಸಿ ಮೇಲೆ ಎತ್ತಬೇಕು. ಅನಂತರವಷ್ಟೆ ಅವುಗಳ ಹಾರಾಟ. ರೇವನ್‌ಗೆ ಈ ಸಂಕಟವಿಲ್ಲ. ಅದರ ಕಾಲುಗಳನ್ನು ಈ ಎಲ್ಲ ಚಟುವಟಿಕೆಗಳಿಗೆ ಹೊಂದುವಂತೆ ಶಿಂಗ್ ತಂಡ ರಚಿಸಿದೆ.



ಹಕ್ಕಿಗಳ ಕಾಲು ವಿಶಿಷ್ಟ ನಮ್ಮ ಕಾಲಿನ ಹಾಗೆ ಅದು ಮಾಂಸಲವಲ್ಲ. ಕಾಲನ್ನು ಚಾಲಿಸುವ ಮಾಂಸಗಳೆಲ್ಲವೂ ಬಹುತೇಕ ಅದು ದೇಹಕ್ಕೆ ಕೂಡಿಕೊಳ್ಳುವ ಭಾಗದಲ್ಲಿ ಇರುತ್ತವೆ. ಕೊಕ್ಕರೆಯ ಕಡ್ಡಿಯಂತಹ ಕಾಲನ್ನು ನೆನಪಿಸಿಕೊಳ್ಳಿ. ಹಾಗೆಯೇ ಪಾದ, ಮೊಣಕಾಲು ಹಾಗೂ ತೊಡೆಗಳ ಸಂಧಿಗಳೂ ನಮ್ಮ ನಿಮ್ಮದರಂತೆ ಇಲ್ಲ. ಬಹುತೇಕ ಹಕ್ಕಿಗಳ ಮಂಡಿ ಹಿಮ್ಮುಖವಾಗಿ ಮಡಿಚಿಕೊಂಡಿರುತ್ತದೆ. 'ಇದರಿಂದ ಹಕ್ಕಿಗಳ ಭಾರ ಕಡಿಮೆಯಾಗುತ್ತದೆ. ಕಾಲನ್ನು ಒದೆಯಲು ಶಕ್ತಿಯೂ ಹೆಚ್ಚುತ್ತದೆ,' ಎಂದು ಶಿಂಗ್ ಹೇಳುತ್ತಾರೆ. ಇದೇ ರೀತಿಯಲ್ಲಿ ರೇವನ್ ಕಾಲನ್ನೂ ರಚಿಸಲಾಗಿದೆ. ರೋಬಾಟುಗಳಲ್ಲಿ ಅತಿ ಭಾರಿಯಾದ ಅಂಗಗಳೆಂದರೆ ಅವುಗಳ ಕೈ, ಕಾಲುಗಳು. ಆದರೆ ರೇವನ್ ಕಾಲುಗಳು ಕೊಕ್ಕರೆಯ ಕಾಲಿನಂತೆಯೇ ಕಡ್ಡಿ. ಅವನ್ನು ಚಾಲಿಸುವ ಮೋಟರು, ಗಿಯರು ಮೊದಲಾದವೆಲ್ಲವೂ ಮೇಲ್ಭಾಗದಲ್ಲಿ, ಡ್ರೋನಿನ ಹೊಟ್ಟೆಯ ಬಳಿ ಒಟ್ಟಾಗಿವೆ. ಜೊತೆಗೆ ಕಾಲನ್ನೂ ಹಕ್ಕಿಗಳದ್ದರಂತೆಯೇ ತೊಡೆ, ಮೊಣಕಾಲು ಹಾಗೂ ಪಾದಗಳೆಂದು ಮೂರು ಅಂಶಗಳನ್ನಾಗಿ ರಚಿಸಿದ್ದಾರೆ. ಇವು ಎಡ, ಬಲ, ಹಿಂದು, ಮುಂದು ತಿರುಗುವಂತೆ ಜೋಡಿಸಲಾಗಿದೆ.

ಆದರೆ ಇದು ಕೆಲಸ ಮಾಡೀತೇ? ಇದನ್ನೂ ಶಿಂಗ್ ತಂಡ ಪರೀಕ್ಷಿಸಿದೆಯಂತೆ. ಈ ಡ್ರೋನು ನೆಲದಿಂದ ಗಾಳಿಗೆ ಏರಲು ತೆಗೆದುಕೊಳ್ಳುವ ಸಮಯವನ್ನು ವಿವಿಧ ಸಂದರ್ಭಗಳಲ್ಲಿ ಪರೀಕ್ಷಿಸಿದೆ. ಹಕ್ಕಿಗಳು ಮರದಿಂದ ಹಾರುವಾಗ ಕುಪ್ಪಳಿಸಿ, ಗಾಳಿಗೆ ಜಿಗಿದು ಹಾಗೆಯೇ ಹಾರುತ್ತವಷ್ಟೆ. ಹಾಗೆಯೇ ರೆಂಬೆಯ ಮೇಲೆ ಒಂದಿಷ್ಟು ದೂರ ಕುಪ್ಪಳಿಸಿ ಮೇಲೇಳುತ್ತವೆ. ಇವೆಲ್ಲ ರೀತಿಯಲ್ಲಿಯೂ ರೇವನ್ ಹಾರಬಲ್ಲುದೇ ಎಂದು ಪರೀಕ್ಷಿಸಿದ್ದಾರೆ. ಕಾಲಿನ ಹೊಸ ವಿನ್ಯಾಸದಿಂದಾಗಿ ಈ ಡ್ರೋನು ಎಲ್ಲ ಸಂದರ್ಭಗಳಲ್ಲಿಯೂ ಯಶಸ್ವಿಯಾಗಿ ಗಾಳಿಗೆ ಹಾರಿತ್ತು.

ಇಂಥ ಡ್ರೋನುಗಳಿಂದ ಸಾಕಷ್ಟು ಅನುಕೂಲಗಳಿವೆ. ಸಾಧಾರಣ ಡ್ರೋನು ಮರದ ಮೇಲೆ ಅಥವಾ ಮೇಲೆ ಹಾರಲು ಸಾಕಷ್ಟು ಅವಕಾಶ ಇಲ್ಲದಾಗ, ಅದು ಸತ್ತಂತೆಯೇ ಸರಿ. ಆದರೆ ಈ ಡ್ರೋನು ಹಾಗಲ್ಲ. ಮೇಲೆ ಬಹಳ ಎತ್ತರಕ್ಕೆ ಏರಲಾಗದಿದ್ದಾಗಲೂ ಕುಪ್ಪಳಿಸಿಕೊಂಡು ನೆಲಕ್ಕ ಸಮೀಪದಲ್ಲಿಯೇ ಹಾರಬಲ್ಲುದು. ಅನಂತರ ಅವಕಾಶ ದೊರೆತಾಗ ಮೇಲಕ್ಕೆ ಏರಬಲ್ಲುದು. ಎದುರಿಗೆ ಕಲ್ಲುಬಂಡೆ ಎದುರಾದಾಗ, ಅದನ್ನೇರಿ ಅಲ್ಲಿಂದ ಮತ್ತೆ ಹಾರುವ ಹಕ್ಕಿಯಂತೆಯೇ ಇದು ಕೂಡ ಚಲಿಸುತ್ತದೆ. ಡ್ರೋನು, ವಿಮಾನಗಳಿಗೆ ಕಷ್ಟವೆನ್ನಿಸುವ ಹಲವು ಸಂದರ್ಭಗಳಲ್ಲಿ ಇದು ಸಮರ್ಥವಾಗಿ ಹಾರುತ್ತದಂತೆ. ಇವೆಲ್ಲವಕ್ಕೂ ಪ್ರೇರಣೆ ಎಂದರೆ ಹಕ್ಕಿಯ ಕಾಲುಗಳು. ನಿಸರ್ಗದಿಂದ ನಾವು ಕಲಿಯಬೇಕಾದ್ದು ಇನ್ನೂ ಬಹಳಷ್ಟಿದೆ, ಅಲ್ಲವೇ?

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ನಮ್ಮ ಪರಿಸರ

2 ಈ ಕೆಳಗಿನವುಗಳಲ್ಲಿ ಯಾವುದರಿಂದ ಒಂದು ಆಹಾರ ಸರಪಳಿಯನ್ನು ರಚಿಸಬಹುದು?

(a) ಹುಲ್ಲು, ಗೋಧಿ ಮತ್ತು ಮಾವು

(b) ಹುಲ್ಲು, ಮೇಕೆ ಮತ್ತು ಮಾನವ

(c) ಮೇಕೆ , ಹಸು ಮತ್ತು ಆನೆ

(d) ಹುಲ್ಲು, ಮೀನು ಮತ್ತು ಮೇಕೆ ಉತ್ತರ:–ಬಿ

3. ಈ ಕೆಳಗಿನವುಗಳಲ್ಲಿ ಪರಿಸರಸ್ನೇಹಿ ಅಭ್ಯಾಸಗಳು ಯಾವುವು?

(a) ಶಾಪಿಂಗ್ ವೇಳೆ ಖರೀದಿಸಿದ ವಸ್ತುಗಳನ್ನಿಡಲು ಬಟ್ಟೆಯ ಬ್ಯಾಗ್‌ಗಳನ್ನು ಒಯ್ಯುವುದು

(b) ಅನಗತ್ಯವಾಗಿ ಉರಿಯುತ್ತಿರುವ ವಿದ್ಯುದ್ದೀಪಗಳನ್ನು ಮತ್ತು ಫ್ಯಾನ್‌ಗಳನ್ನು ಆರಿಸುವುದು

(c) ಶಾಲೆಗೆ ಬಿಡಲು ನಿಮ್ಮ ತಾಯಿಯ ದ್ವಿಚಕ್ರ ವಾಹನದ ಬದಲು ಕಾಲ್ನಡಿಗೆಯಲ್ಲಿ ತೆರಳುವುದು

(d) ಮೇಲಿನ ಎಲ್ಲವೂ

ಉತ್ತರ:– ಡಿ

* * * * * * *

ಅಧ್ಯಾಯ 10
ಮಾನವನ ಕಣ್ಣು ಮತ್ತು ವರ್ಣಮಯ ಜಗತ್ತು

1) ಮಾನವನ ಕಣ್ಣು ಯಾವುದರಂತೆ ಇದೆ?

ಉತ್ತರ:– ಮಾನವನ ಕಣ್ಣು ಒಂದು ಕ್ಯಾಮರಾದಂತಿದೆ. ಇದರ ಮಸೂರ ವ್ಯವಸ್ಥೆಯು ದ್ಯುತಿಸಂವೇದಿ ಪರದೆಯಾದ ರೆಟಿನಾದ (ಅಕ್ಷಿಪಟಲ) ಮೇಲೆ ಪ್ರತಿಬಿಂಬವನ್ನು ಉಂಟುಮಾಡುತ್ತದೆ.

2) ಮಾನವನ ಕಣ್ಣಿನ ವ್ಯಾಸವು ಎಷ್ಟು ಇದೆ?

ಉತ್ತರ:– ಕಣ್ಣುಗುಡ್ಡೆಯು ಸರಿಸುಮಾರು 2.3 ಸೆಂ.ಮೀ. ವ್ಯಾಸವುಳ್ಳ ಗೋಳಾಕಾರದಲ್ಲಿದೆ

3) ಕಣ್ಣನ್ನು ಪ್ರವೇಶಿಸುವ ಬೆಳಕಿನ ಕಿರಣಗಳ ಹೆಚ್ಚಿನ ವಕ್ರೀಭವನವು ಎಲ್ಲಿ ಉಂಟಾಗುತ್ತದೆ?

ಉತ್ತರ:– ಕಣ್ಣನ್ನು ಪ್ರವೇಶಿಸುವ ಬೆಳಕಿನ ಕಿರಣಗಳ ಹೆಚ್ಚಿನ ವಕ್ರೀಭವನವು ಕಾರ್ನಿಯಾದ ಹೊರ ಮೇಲ್ಮೈನಲ್ಲಿ ಉಂಟಾಗುತ್ತದೆ.

4) ಕಣ್ಣಿನೊಳಗೆ ಪ್ರವೇಶಿಸುವ ಬೆಳಕಿನ ಪ್ರಮಾಣವನ್ನು ಯಾವುದು ನಿಯಂತ್ರಿಸುತ್ತದೆ?

ಉತ್ತರ:– ಕಣ್ಣಿನೊಳಗೆ ಪ್ರವೇಶಿಸುವ ಬೆಳಕಿನ ಪ್ರಮಾಣವನ್ನು ಕಣ್ಣಿನ ಪಾಪೆ ನಿಯಂತ್ರಿಸುತ್ತದೆ.

5) ಕಣ್ಣಿನ ಮಸೂರವು ಅಕ್ಷಿಪಟಲದ ಮೇಲೆ ಯಾವ ರೀತಿಯ ವಸ್ತುವಿನ ನೈಜ ಪ್ರತಿಬಿಂಬವನ್ನು ಉಂಟುಮಾಡುತ್ತದೆ.?

ಉತ್ತರ:– ಕಣ್ಣಿನ ಮಸೂರವು ವಸ್ತುವಿನ ತಲೆಕೆಳಗಾದ ನೈಜ ಪ್ರತಿಬಿಂಬವನ್ನು ಅಕ್ಷಿಪಟಲದ ಮೇಲೆ ಉಂಟುಮಾಡುತ್ತದೆ.

6) ಕಣ್ಣಿನ ಬಗ್ಗೆ ವಿವರವಾಗಿ ಬರೆಯಿರಿ

ಉತ್ತರ:– ಮಾನವನ ಕಣ್ಣು ಒಂದು ಕ್ಯಾಮರಾದಂತಿದೆ. ಇದರ ಮಸೂರ ವ್ಯವಸ್ಥೆಯು ದ್ಯುತಿಸಂವೇದಿ ಪರದೆಯಾದ ರೆಟಿನಾದ (ಅಕ್ಷಿಪಟಲ) ಮೇಲೆ ಪ್ರತಿಬಿಂಬವನ್ನು ಉಂಟುಮಾಡುತ್ತದೆ. ಬೆಳಕು ಕಣ್ಣಿನ ತೆಳುವಾದ ಪೊರೆ ಕಾರ್ನಿಯಾ ಮೂಲಕ ಕಣ್ಣನ್ನು ಪ್ರವೇಶಿಸುತ್ತದೆ. ಇದು ಚಿತ್ರದಲ್ಲಿ ತೋರಿಸಿರುವಂತೆ ಕಣ್ಣುಗುಡ್ಡೆಯ ಮುಂಭಾಗದಲ್ಲಿ ಪಾರದರ್ಶಕ ಉಬ್ಬನ್ನು ಉಂಟು ಮಾಡುತ್ತದೆ. ಕಣ್ಣುಗುಡ್ಡೆಯು ಸರಿಸುಮಾರು 2.3 ಸೆಂ.ಮೀ. ವ್ಯಾಸವುಳ್ಳ ಗೋಳಾಕಾರದಲ್ಲಿದೆ. ಕಣ್ಣನ್ನು ಪ್ರವೇಶಿಸುವ ಬೆಳಕಿನ ಕಿರಣಗಳ ಹೆಚ್ಚಿನ ವಕ್ರೀಭವನವು ಕಾರ್ನಿಯಾದ ಹೊರ ಮೇಲ್ಮೈನಲ್ಲಿ ಉಂಟಾಗುತ್ತದೆ. ವಿವಿಧ ಅಂತರದಲ್ಲಿರುವ ವಸ್ತುಗಳನ್ನು ರೆಟಿನಾದ ಮೇಲೆ ಕೇಂದ್ರೀಕರಿಸಲು ಬೇಕಾದ ಸಂಗಮ ದೂರದ ಸೂಕ್ಷ್ಮ ಹೊಂದಾಣಿಕೆಯನ್ನಷ್ಟೇ ಸ್ಫಟಿಕ ಮಸೂರವು ಒದಗಿಸುತ್ತದೆ. ಕಾರ್ನಿಯಾದ ಹಿಂಭಾಗದಲ್ಲಿ ಐರಿಸ್ (ವರ್ಣಪಟಲ) ಎಂಬ ರಚನೆಯನ್ನು ಕಾಣುತ್ತೇವೆ. ಐರಿಸ್ ಎಂಬುದು ಕಡುಕಪ್ಪಾದ ಸ್ನಾಯುಗಳ ಒಂದು ಪದರವಾಗಿದ್ದು ಕಣ್ಣು ಪಾಪೆಯ (pupil) ಗಾತ್ರವನ್ನು ನಿಯಂತ್ರಿಸುತ್ತದೆ.



ಕಣ್ಣಿನೊಳಗೆ ಪ್ರವೇಶಿಸುವ ಬೆಳಕಿನ ಪ್ರಮಾಣವನ್ನು ಕಣ್ಣಿನ ಪಾಪೆ ನಿಯಂತ್ರಿಸುತ್ತದೆ. ಕಣ್ಣಿನ ಮಸೂರವು ವಸ್ತುವಿನ ತಲೆಕೆಳಗಾದ ನೈಜ ಪ್ರತಿಬಿಂಬವನ್ನು ಅಕ್ಷಿಪಟಲದ ಮೇಲೆ ಉಂಟುಮಾಡುತ್ತದೆ. ಅಕ್ಷಿಪಟಲವು ಅಗಾಧ ಸಂಖ್ಯೆಯ ಬೆಳಕಿನ ದೃಶ್ಯ ಗ್ರಾಹಕ ಕೋಶಗಳ ತೆಳು ಪರದೆಯಾಗಿದೆ. ದೃಶ್ಯಗ್ರಾಹಕ ಕೋಶಗಳು ಬೆಳಕಿನ ಕಿರಣಗಳ ಚೋದನೆಯಿಂದ ಸಕ್ರಿಯಗೊಳ್ಳುತ್ತವೆ ಮತ್ತು ವಿದ್ಯುತ್ ಸಂಕೇತಗಳನ್ನು ಸೃಷ್ಟಿಸುತ್ತವೆ.

ಈ ಸಂಕೇತಗಳನ್ನು ಚಾಕ್ಷುಷ ನರಗಳ (optic nerves) ಮೂಲಕ ಮಿದುಳಿಗೆ ತಲುಪಿಸಲಾಗುತ್ತದೆ. ಅಂತಿಮವಾಗಿ ಮಿದುಳು ಈ ಸಂಕೇತಗಳನ್ನು ಅರ್ಥೈಸಿ, ಮಾಹಿತಿಗಳನ್ನು ಸಂಸ್ಕರಿಸುತ್ತದೆ. ಆಗ ನಾವು ವಸ್ತುಗಳನ್ನು ಹೇಗಿವೆಯೋ ಹಾಗೇ ಗ್ರಹಿಸುತ್ತೇವೆ.

7) ನಮ್ಮ ಕಣ್ಣಿನ ಮೂಲಕ ಹತ್ತಿರದ ವಸ್ತುವನ್ನು ನೋಡಲು ಹೇಗೆ ಸಾಧ್ಯವಾಗುತ್ತದೆ?

ಉತ್ತರ:– ಕಣ್ಣಿನ ಸಮೀಪವಿರುವ ವಸ್ತುಗಳನ್ನು ನೋಡುವಾಗ ಕಣ್ಣಿನ ಸಿಲಿಯರಿ ಸ್ನಾಯುಗಳು ಕುಗ್ಗುತ್ತವೆ. ಇದರಿಂದ ಕಣ್ಣಿನ ಮಸೂರದ ವಕ್ರತೆ ಹೆಚ್ಚಾಗುತ್ತದೆ. ಆಗ ಕಣ್ಣಿನ ಮಸೂರವು ದಪ್ಪವಾಗುತ್ತದೆ. ಇದರ ಪರಿಣಾಮವಾಗಿ ಕಣ್ಣಿನ ಸಂಗಮದೂರ ಕಡಿಮೆಯಾಗುತ್ತದೆ ಮತ್ತು ಹತ್ತಿರದ ವಸ್ತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ

8) ಯಾವುದನ್ನು ಕಣ್ಣಿನ ಸ್ಪಷ್ಟ ದೃಷ್ಟಿಯ ಕನಿಷ್ಠ ದೂರ ಎನ್ನುತ್ತೇವೆ?

ಉತ್ತರ:– ಕಣ್ಣಿಗೆ ವಸ್ತುವು ಸ್ಪಷ್ಟವಾಗಿ ಹಾಗೂ ಒತ್ತಡರಹಿತವಾಗಿ ಕಾಣುವ ಕನಿಷ್ಟ ದೂರವನ್ನು ಸ್ಪಷ್ಟದೃಷ್ಟಿಯ ಕನಿಷ್ಟದೂರ ಎನ್ನುತ್ತೇವೆ. ಇದನ್ನು ಕಣ್ಣಿನ ಸಮೀಪ ಬಿಂದು ಎಂದೂ ಸಹ ಕರೆಯುತ್ತೇವೆ

9) ಒಂದು ಒಂದು ವಸ್ತುವನ್ನು ಆರಾಮವಾಗಿ ಮತ್ತು ಅತ್ಯಂತ ಸ್ಪಷ್ಟವಾಗಿ ವೀಕ್ಷಿಸಲು ಅದನ್ನು ಕಣ್ಣಿನಿಂದ ಎಷ್ಟು ಸೆಂ.ಮೀ. ಅಂತರದಲ್ಲಿಡಬೇಕು.?

ಉತ್ತರ:– ಒಂದು ಒಂದು ವಸ್ತುವನ್ನು ಆರಾಮವಾಗಿ ಮತ್ತು ಅತ್ಯಂತ ಸ್ಪಷ್ಟವಾಗಿ ವೀಕ್ಷಿಸಲು ಅದನ್ನು ಕಣ್ಣಿನಿಂದ 25 ಸೆಂ.ಮೀ. ಅಂತರದಲ್ಲಿಡಬೇಕು.

10) ಕಣ್ಣಿನ ಪೊರೆ ಎಂದು ಯಾವುದಕ್ಕೆ ಕರೆಯುತ್ತೇವೆ? ಇದನ್ನು ಹೇಗೆ ನಿವಾರಿಸಬಹುದು?

ಉತ್ತರ:– ವಯಸ್ಸಾದವರಿಗೆ ಕೆಲವೊಮ್ಮೆ ಕಣ್ಣಿನ ಸ್ಫಟಿಕ ಮಸೂರವು ಹಾಲಿನಂತೆ ಬೆಳ್ಳಗೆ ಹಾಗೂ ಮೋಡ ಕವಿದಂತಾಗುತ್ತದೆ. ಈ ಸ್ಥಿತಿಯನ್ನು ಕಣ್ಣಿನ ಪೊರೆ (cataract) ಎನ್ನುತ್ತೇವೆ. ಇದು ಭಾಗಶಃ ಅಥವಾ ಪೂರ್ಣ ದೃಷ್ಟಿ ನಷ್ಟ ಉಂಟು ಮಾಡುತ್ತದೆ. ಕಣ್ಣಿನ ಪೊರೆ ಶಸ್ತ್ರಕ್ರಿಯೆಯ ಮೂಲಕ ಕಣ್ಣಿನ ದೃಷ್ಟಿ ಪುನರ್ ಸ್ಥಾಪಿಸಲು ಸಾಧ್ಯವಿದೆ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC BIOLOGY

MAN IN HEALTH AND DISEASES

6. What is lipogenesis?

Ans:- Lipogenesis is the conversion of glucose into fat.

7. What is Glycogenolysis?

Ans:- Glycogenolysis is breaking down of glycogen into glucose.

8. What is Gluconeogenesis?

Ans:- Gluconeogenesis is the synthesis of carbohydrates from non–carbohydrate compounds like fats and proteins.

9. What is Diabetes mellitus?

Ans:- When the glucose level in blood crosses the critical limit, it is excreted along with the urine this is called diabetes mellitus. This is a condition of hyperglycemia, which is caused by the hyposecretion of the insulin.

10. Which are the types of Diabetes mellitus?

Ans:- There are two types of diabetes mellitus, they are – (a) Insulin dependent diabetes mellitus (IDDM)

(b) Non insulin dependent diabetes mellitus (NIDDM)

11. Which type of diabetes is known as maturity – onset diabetes?

Ans:- Non insulin dependent diabetes mellitus (NIDDM) is known as maturity – onset diabetes.

12. What is glycosuria?

Ans:- Glycosuria is the disorder characterised by the excretion of glucose in urine.

13. Which are the conditions that we come across in a diabetic person?

Ans:- A diabetic person suffers from the conditions like Polydipsia, Polyuria and Polyphagia.

14. What are these – a) Polydipsia?
b) Polyuria?
c) Polyphagia?

Ans:- Polydipsia is the condition wherein a person suffers with excessive thirst.

Polyuria is a condition wherein a person suffers with excessive urination.

Polyphagia is a condition wherein a person suffers with excessive eating.

15. What is meant by vaccination?

Ans:- Vaccination is the intentional administration of a harmless or less harmful form of a pathogen to induce a specific immune response that protects the individual against later exposure to the same pathogen.

16. What is inoculation?

Ans:- In passive immunization, the antibodies are produced in the body of some other vertebrates like a horse or cow in response to a specific antigen. These antibodies are then injected into the human body when required. This is called inoculation.

17. What is phagocytosis?

Ans:- Phagocytosis means injestion of solid particles or microbes by the cell membrane of certain cells. Such cells are called phagocytes, which form a non-specific resistance of the body.

18. What is meant by pus?

Ans:- The Pus is a mixture of dead and dying neutrophils, broken down tissue cells, living as well as dead pathogens.

19. What is the normal body temperature in human beings?

Ans:- The normal body temperature in human beings is 98.60 F.

20. What are pyrogens?

Ans:- Leukocytes and macrophages exposed to bacteria and other foreign substances release chemicals that increase body temperature are called Pyrogens.

21. What are interferons?

Ans:- Interferons are antimicrobial proteins released by virus infected cells that protect other healthy tissue cells from viral infection.

22. What is meant by immunogenicity?

Ans:- The ability of an antigen to stimulate antibody production is called antigenicity or immunogenicity

23. Name the scientists who were awarded noble prize for discovering the chemical structure of antibodies.

Ans:- Gerald Edelman and Rodney Porter.

24. What is an enzyme?

Ans:- An enzyme is a biocatalyst which accelerates the process of biochemical reactions without itself undergoing a permanent change or being used up.

25. What are Digestive enzymes?

Ans:- The enzymes which bring about hydrolysis of food are called digestive enzymes.

26. Name the bile pigments.

Ans:- Bilirubin and biliverdin are the bile pigments.

27. Name the different types of immunity and explain them briefly.

Ans:- The different types of immunity are Active immunity and Passive immunity.

(a) Active immunity is the resistance built up as a result of the body's contact with micro organisms and their toxins or other antigenic components.

Production of antibodies takes several days for the first infection. But for a subsequent infection with the same micro organism, antibodies are produced immediately to resist the infection. This is because; the memory T cells produced during the first infection remain in the body for a long time and react immediately to enhance resistance. Thus, the body builds up active immunity or acquired immunity.

Vaccination is a method of active immunization used against various diseases like small pox and polio. In this method of immunization, killed or weakened bacteria are injected into the body and the immune system of the body recognises these bacteria and starts producing the antibodies.

(b) Passive immunity is the transfer of actively formed antibody from one person or animal to another to build up resistance. *(Contd….)*

ನಾಳೆ-ನಾಡಿದ್ದು ರಾಜ್ಯದ ವಿವಿಧೆಡೆ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಗಾಳ ಕೊಲ್ಲಿಯಲ್ಲಿ ವಾಯು ಭಾರ ಕುಸಿತದಿಂದಾಗಿ ಗುರುವಾರ ಹಾಗೂ ಶುಕ್ರವಾರ ರಾಜ್ಯದ ವಿವಿಧೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಚಿತ್ರದುರ್ಗ, ತುಮಕೂರು, ಮೈಸೂರು, ಚಾಮರಾಜನಗರ, ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ ಗುರುವಾರ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಬಳ್ಳಾರಿ, ಚಿಕ್ಕಮಗಳೂರು, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ಶಿವಮೊಗ್ಗ ಹಾಗೂ ವಿಜಯನಗರ ಜಿಲ್ಲೆಗಳ ಹಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು ಹಾಗೂ ತುಮಕೂರು ಜಿಲ್ಲೆಗಳಿಗೆ ಇಲಾಖೆಯು ಶುಕ್ರವಾರವು 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಶನಿವಾರವೂ ರಾಜ್ಯದ ವಿವಿಧೆಡೆ ಮಳೆ ಮುಂದುವರಿಯುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕೆಎಎಸ್: ಮಾರ್ಚ್ ಅಂತ್ಯಕ್ಕೆ ಮುಖ್ಯ ಪರೀಕ್ಷೆ

ಬೆಂಗಳೂರು: 384 ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿಗೆ ಡಿ.29ರಂದು ಪೂರ್ವಭಾವಿ ಪರೀಕ್ಷೆಯನ್ನು ಮತ್ತೆ ನಡೆಸಲು ಈಗಾಗಲೇ ನಿರ್ಧರಿಸಿರುವ ಕೆಪಿಎಸ್‌ಸಿ, 2025ರ ಮಾರ್ಚ್28, 29, ಏಪ್ರಿಲ್ 1 ಮತ್ತು 2ರಂದು ಮುಖ್ಯ ಪರಿಕ್ಷೆ ನಡೆಸಲು ದಿನ ನಿಗದಿಪಡಿಸಿದೆ.

ಈ ಬಗ್ಗೆ ಕೆಪಿಎಸ್‌ಸಿ ಕಾರ್ಯದರ್ಶಿ ರಮಣದೀಪ್ ಚೌಧರಿ ಅವರು ಪ್ರಕಟಣೆ ಹೊರಡಿಸಿದ್ದಾರೆ. ಆದರೆ, ಅಧಿಸೂಚನೆಯನ್ನು ಇನ್ನಷ್ಟೆ ಹೊರಡಿಸಬೇಕಿದೆ.

ಈ ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ ಆಗಸ್ಟ್ 27ರಂದು ಪೂರ್ವಭಾವಿ ಪರೀಕ್ಷೆ ನಡೆಸಿತ್ತು. ಆದರೆ, ಪರೀಕ್ಷೆಯ ಕನ್ನಡ ಪ್ರಶ್ನೆ ಪತ್ರಿಕೆಯಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿದ ಪ್ರಶ್ನೆ- ಉತ್ತರಗಳಲ್ಲಿ ತಪ್ಪುಗಳು ಕಾಣಿಸಿಕೊಂಡ ಕಾರಣಕ್ಕೆ ಡಿ. 29ಕ್ಕೆ ಮರು ಪರೀಕ್ಷೆ ನಿಗದಿಯಾಗಿದೆ.

ಸುಧಾ, ಮಯೂರ ಓದಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರರು ಕ.ನೀ.ನಿ.ನಿ ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ-591116
ತಾಲ್ಲೂಕ: ಸವದತ್ತಿ ಜಿಲ್ಲಾ: ಬೆಳಗಾವಿ ರಾಜ್ಯ: ಕರ್ನಾಟಕ
Division Mail : eewandmdivision@gmail.com

ಸಂಖ್ಯೆ: ಕಾ&ಯಾಂ/ಪಿ.ಬಿ-1/ಇ-ಟೆಂಡರ್/2024-25/666 ದಿನಾಂಕ: 07/12/2024

ಕಾಲಾವಧಿ ವಿಸ್ತರಣೆ ಪ್ರಕಟಣೆ (ದ್ವಿಲಕೋಟೆ ಪದ್ಧತಿಯಲ್ಲಿ)
(ಇಂಡೆಂಟ್ ನಂ. KNNL/2024-25/LI/WORK INDENT 1958)
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ)

ಈ ಕಛೇರಿ ಟೆಂಡರ್ ಅಧಿಸೂಚನೆ ಸಂಖ್ಯೆ: 557 ದಿನಾಂಕ: 28/10/2024 ರಂದು (ಇಂಡೆಂಟ್ ನಂ. KNNL/2024-25/LI/WORK INDENT 1958) ಕಾಮಗಾರಿಗೆ ಶೇಕಡವಾರು ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಕಾಲಾವಧಿಯನ್ನು ವಿಸ್ತರಿಸಲಾಗಿದೆ. ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

1) ಇ-ಪೋರ್ಟಲ್ ಮೂಲಕ ಟೆಂಡರನ್ನು ದಿನಾಂಕ: 27/12/2024 ರಂದು ಸಂಜೆ 4.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30/12/2024.ರಂದು ಬೆಳಿಗ್ಗೆ 11.00 ಘಂಟೆ.

ಹಾಗೂ ಕಾಮಗಾರಿಗೆ ಸಂಬಂಧಿಸಿದ ಇತರೆ ವಿವರಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ಪಡೆಯುಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ,
ಕನೀನಿನಿ.ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ.

DIPR/BGM/RO-NO-1281/KSMCA/2024-25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್ 25536625, 25536789

IFT No: KMF/ENGG/NHPP_CRP/ETP_O&M_WORKS_CALL2/2024-25 Date: 10-12-2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಡಿಯಲ್ಲಿ ಮರುಟೆಂಡರ್ ಪ್ರಕಟಣೆ - ಎರಡನೇ ಕರೆ

ಕರ್ನಾಟಕ ಹಾಲು ಮಹಾಮಂಡಳ ಬೆಂಗಳೂರು, ವತಿಯಿಂದ ಹಾಸನದ ಚನ್ನರಾಯಪಟ್ಟಣದಲ್ಲಿರುವ ನಂದಿನಿ ಹೈ-ಟೆಕ್ ಉತ್ಪನ್ನ ಘಟಕದ Effluent Treatment Plant ನಿರ್ವಹಣೆ ಕೆಲಸಗಳನ್ನು ನಿರ್ವಹಿಸುವ ಸಂಬಂಧ ಇದೇ ಮಾದರಿಯ ಕೆಲಸಗಳನ್ನು ನಿರ್ವಹಿಸಿ ಅನುಭವವಿರುವ ಅರ್ಹ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖೇನ ದ್ವಿಲಕೋಟೆ ಪದ್ಧತಿಯ (Technical & Financial) ಟೆಂಡರನ್ನು ಅಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ https://kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: support@eprochelpdesk.com and helpline no. +91-8046010000, +91-8068948777, 080-22230960, 080-22234115

ಕ್ರ. ಸಂ.	ಕೆಲಸದ ವಿವರ	ಇ.ಎಂ.ಡಿ. ರೂ.ಗಳಲ್ಲಿ	ಗುತ್ತಿಗೆ ನಿರ್ವಹಣೆ ಅವಧಿ
1	ಹಾಸನದ ಚನ್ನರಾಯಪಟ್ಟಣದಲ್ಲಿರುವ ನಂದಿನಿ ಹೈಟೆಕ್ ಉತ್ಪನ್ನ ಘಟಕದ ದಿನವಹಿ 600 + 600 ಸಾವಿರ ಲೀಟರ್ ಸಾಮರ್ಥ್ಯದ Effluent Treatment Plant ನಿರ್ವಹಣೆ ಮತ್ತು ಮಾನವ ಸಂಪನ್ಮೂಲ ಒದಗಿಸುವ ಕೆಲಸಗಳು (ದ್ವೈವಾರ್ಷಿಕ ಅವಧಿಗೆ) - ಎರಡನೇ ಕರೆ	1,00,000/-	ಎರಡು ವರ್ಷ

1. ಟೆಂಡರ್ ಷೆಡ್ಯೂಲ್ ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ 11-12-2024 ರಿಂದ 27-12-2024 ರ ಸಾಯಂಕಾಲ 4.00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ 27-12-2024 ರ ಸಾಯಂಕಾಲ 4.00 ಗಂಟೆಯವರೆಗೆ.
3. ಟೆಂಡರುಗಳನ್ನು (Cover-1) ತೆರೆಯುವ ದಿನಾಂಕ 30-12-2024 ರಂದು ಸಾಯಂಕಾಲ 4.30 ಗಂಟೆಗೆ.

ಇನ್ನಿತರೆ ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್‌ನ ತಿದ್ದುಪಡಿ / ಬದಲಾವಣೆಗಳನ್ನು ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.inನಲ್ಲಿ ಪಡೆಯಬಹುದಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳದ ಪರವಾಗಿ
ಸಹಿ/- ನಿರ್ದೇಶಕರು (ಅಭಿಯಂತರ-1)

ಜಿಲ್ಲಾ ಪಂಚಾಯತ ಧಾರವಾಡ
ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ
ಉಪ ನಿರ್ದೇಶಕರು (ಗ್ರಾಕೈ) ರವರ ಕಚೇರಿ,
ಜಿಲ್ಲಾ ಪಂಚಾಯತ ಕೈಗಾರಿಕಾ ವಿಭಾಗ,ಡಿಐಸಿ ಬಿಲ್ಡಿಂಗ್, ರಾಯಾಪೂರ, ಧಾರವಾಡ-9

ಸಂಖ್ಯೆ: IC/2024-25/IND0090 Dated: 06-12-2024
ಸಂಖ್ಯೆ:ಜಿಪಂಧಾ/ಉನಿ(ಖಾಗ್ರಾ)/ಇ-ಟೆಂಡರ್/2024-25 ದಿನಾಂಕ: 06-12-2024

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ)
(Inviting Tender through E-Procurment)

ಧಾರವಾಡ ಜಿಲ್ಲೆಯಲ್ಲಿರುವ 07 ತಾಲೂಕುಗಳ ಗ್ರಾಮೀಣ ಭಾಗದ ವೃತ್ತಿನಿರತ ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ಹಾಗೂ ವೃತ್ತಿನಿರತ ಬಡಗಿತನ ಹಾಗೂ ಗೌಂಡಿ ಕುಶಲಕರ್ಮಿಗಳಿಗೆ ಈ ಕೆಳಕಂಡ ಉಪಕರಣಗಳನ್ನು ಸರಬರಾಜು ಮಾಡಲು ಅರ್ಹ ಅಧಿಕೃತ ನೋಂದಾಯಿತ ಉತ್ಪಾದಕರು ಅಥವಾ ಉತ್ಪಾದಕರಿಂದ ಅಧಿಕೃತ ಸರಬರಾಜುದಾರ ಪ್ರಮಾಣ ಪತ್ರ ಹೊಂದಿದವರಿಂದ ಖರೀದಿ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ.

ಕ್ರ ಸಂ	ಸಾಮಗ್ರಿಗಳ ವಿವರ	ಪ್ರಮಾಣ	ಅಂದಾಜು ಮೊತ್ತ	ಇ.ಎಂ.ಡಿ ಮೊತ್ತ(2.5%)
1	ISI ಮಾರ್ಕ ಹೊಂದಿದ ಹೊಲಿಗೆ ಯಂತ್ರ	799	79,92,000/-	1,99,800/-
2	ಬಡಗಿತನ	100		
3	ಗೌಂಡಿ	100		
	ಒಟ್ಟು	999		

ಜಿಲ್ಲಾ ಪಂಚಾಯತಿಯಿಂದ ಬಿಡುಗಡೆಯಾಗುವ ಅನುದಾನದ ಅನುಸಾರ ಸರಬರಾಜು ಆದೇಶ ನೀಡಲಾಗುವುದು. ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಗಿನಂತಿದೆ.

1	ಟೆಂಡರ್ ನೋಟಿಫಿಕೇಶನ್ ನಂ.	ಸಂಖ್ಯೆ: IC/2024-25/IND0090, Dated:06-12-2024
2	ಟೆಂಡರ್ ನೋಟಿಫಿಕೇಶನ್ ದಿನಾಂಕ	06-12-2024
3	ಮಾದರಿ ಉಪಕರಣ ಸಲ್ಲಿಸುವ ದಿನಾಂಕ ಮತ್ತು ಸಮಯ (ಐಎಸ್‌ಟಿ)	18-12-2024 ರಂದು ಸಂಜೆ 5.00 ಗಂಟೆಯ ಒಳಗಾಗಿ
4	ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ (ಐಎಸ್‌ಟಿ)	19-12-2024 ರಂದು ಸಂಜೆ 5.00 ಗಂಟೆಯ ಒಳಗಾಗಿ
5	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಐಎಸ್‌ಟಿ)	24-12-2024 ರಂದು ಬೆಳಿಗ್ಗೆ 11.00 ಗಂಟೆಗೆ
6	ಮಾದರಿ ಉಪಕರಣಗಳ ಹಾಗೂ ದಾಖಲಾತಿಗಳು ಪರಿಶೀಲನೆ ಮಾಡುವ ದಿನಾಂಕ ಮತ್ತು ಸಮಯ	27-12-2024 ರಂದು ಮಧ್ಯಾಹ್ನ 3.00 ಗಂಟೆಗೆ
7	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಐಎಸ್‌ಟಿ)	31-12-2024 ರಂದು ಮಧ್ಯಾಹ್ನ 3.00 ಗಂಟೆಗೆ
8	ಟೆಂಡರ್ ತೆರೆಯುವ ಹಾಗೂ ಮಾದರಿ ಉಪಕರಣಗಳನ್ನು ಸಲ್ಲಿಸುವ ಸ್ಥಳ	ಉಪ ನಿರ್ದೇಶಕರು (ಖಾಗ್ರಾ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಪಂಚಾಯತ ಕೈಗಾರಿಕಾ ವಿಭಾಗ, ರಾಯಾಪೂರ, ಧಾರವಾಡ-580 009 ದೂರವಾಣಿ ಸಂಖ್ಯೆ : 0836-2324798

ಟೆಂಡರ್ ನಿಯಮಗಳು, ದಾಖಲೆಗಳ ಹಾಗೂ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ ಅರ್ಜಿ ಶುಲ್ಕ ಪಾವತಿಸಿ www.kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿ ಪಡೆಯಬಹುದಾಗಿದೆ. ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಪ್ರತ್ಯೇಕವಾಗಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಹಾಕುವುದು. ಹೆಚ್ಚಿನ ಮಾಹಿತಿಗಾಗಿ ಕೆಲಸದ ವೇಳೆಯಲ್ಲಿ ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಉಪ ನಿರ್ದೇಶಕರು (ಖಾಗ್ರಾ)
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಜಿಲ್ಲಾ ಪಂಚಾಯತ ಕೈಗಾರಿಕಾ ವಿಭಾಗ, ಧಾರವಾಡ

ವಾ.ಸಾ.ಇ/ಧಾರವಾಡ/722/ದೇಶಪಾಂಡೆಪಬ್ಲಿಸಿಟಿ/2024-25

ಕರ್ನಾಟಕ ಸರ್ಕಾರ ಪ್ರಾಯೋಜಿತ
ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್
70, 2ನೇ ಮಹಡಿ, ಕೆ.ಎಂ.ಸಿ. ಬಿಲ್ಡಿಂಗ್, ಬಸವನಗುಡಿ ಪೋಸ್ಟ್ ಆಫೀಸ್ ಎದುರು, ಕೆ.ಆರ್. ರಸ್ತೆ, ಬಸವನಗುಡಿ, ಬೆಂಗಳೂರು-560004.
Ph.: 080-26671616, e-mail: yeshtrust1@gmail.com

ಸಂಖ್ಯೆ: ಯಶಸ್ವಿನಿ ಟ್ರಸ್ಟ್/ಗು-ಸಿಬ್ಬಂದಿ/24-25 ದಿನಾಂಕ: 10-12-2024

ಪತ್ರಿಕಾ ಪ್ರಕಟಣೆ

ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಗೆ ಸೇವೆ ಆಹ್ವಾನ

ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್ ಕಛೇರಿ ಕೆಲಸ ಕಾರ್ಯಗಳಿಗೆ 11 ತಿಂಗಳ ಅಲ್ಪಾವಧಿ ಏಕೀಕೃತ ವೇತನ (consolidated pay) ನೇರ ಹೊರ ಗುತ್ತಿಗೆ ಆಧಾರಿತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಗೆ ಸೇವೆ ಪಡೆಯುವ ಸಲುವಾಗಿ ಅರ್ಜಿ ಕರೆಯಲಾಗಿದ್ದು, ಸದರಿ ಹುದ್ದೆಗೆ ಅನುಭವ, ಮತ್ತು ವಯಸ್ಸು ತಿಳಿಸಲಾಗಿದೆ.

ಹುದ್ದೆಯ ಹೆಸರು: ಮುಖ್ಯ ಕಾರ್ಯನಿರ್ವಹಣಾಧಿಕಾರಿ.
ಹುದ್ದೆಯ ಸಂಖ್ಯೆ: 01.
ಅನುಭವ: ನಿವೃತ್ತ, ಐಎಎಸ್ ಅಧಿಕಾರಿ /ಸಹಕಾರ ಇಲಾಖೆಯ ನಿವೃತ್ತ, ಅಪರ ನಿಬಂಧಕರು/ ನಿವೃತ್ತ, ಕೆ.ಎ.ಎಸ್. ಅಧಿಕಾರಿ (ಮಾರ್ಚ್ 2025ಕ್ಕೆ ನಿವೃತ್ತಿ ಹೊಂದುವವರು ಕೂಡ ಅರ್ಜಿ ಸಲ್ಲಿಸಬಹುದಾಗಿದೆ)
ವಯಸ್ಸು: ಗರಿಷ್ಟ ವಯಸ್ಸಿನ ಮಿತಿ 66 ವರ್ಷ.

ಅರ್ಜಿಯ ನಮೂನೆಯನ್ನು **https://yeshasvinitrust.in/** ಪ್ರಕಟಿಸಲಾಗಿದೆ. ದೂರವಾಣಿ ಸಂಖ್ಯೆ: 080-26671616. ಅರ್ಜಿ ಸಲ್ಲಿಸಲು ಪ್ರಾರಂಭಿಕ **ದಿನಾಂಕ: 11-12-2024** ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 10-01-2025** ಹೆಚ್ಚಿನ ವಿವರಗಳಿಗಾಗಿ ಹಾಗೂ ಹುದ್ದೆ ಸಂಬಂಧಿತ ಮಾಹಿತಿಗಾಗಿ ಮೇಲೆ ನಮೂದಿತ ದೂರವಾಣಿಗೆ ಸಂಪರ್ಕಿಸಲು ಕೋರಿದೆ.

ಸಹಿ/-ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಯಶಸ್ವಿನಿ ಟ್ರಸ್ಟ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ದಾಸರಹಳ್ಳಿ ವಲಯ, ದಾಸರಹಳ್ಳಿ ವಿಭಾಗ, ಎಂಇಐ ಲೇಔಟ್, ಹೆಸರಘಟ್ಟ ಮುಖ್ಯ ರಸ್ತೆ, ಬಾಗಲಗುಂಟೆ, ಟಿ. ದಾಸರಹಳ್ಳಿ, ಬೆಂಗಳೂರು-560 073.

ಸಂ: ಬಿಬಿಎಂಪಿ/ಕಾನಿಅ/ದಾವಿ/ಟೆಂಡರ್/21/2024-25 ದಿನಾಂಕ: 10.12.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ-ಲಕೋಟೆ ಪದ್ಧತಿ)

ಕಾರ್ಯನಿರ್ವಾಹಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ವಿವರ
1	ವಾರ್ಡ್ ಸಂಖ್ಯೆ 15ರ ಕಮ್ಮಗೊಂಡನಹಳ್ಳಿಯಲ್ಲಿ ಒಳಚರಂಡಿ ಮತ್ತು ನೀರು ಸರಬರಾಜು ಸ್ವತ್ತುಗಳಿಗೆ ದುರಸ್ತಿ ಮತ್ತು ನಿರ್ವಹಣೆ-ನೀರು ಸರಬರಾಜು ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ: ರೂ. 82.73 ಲಕ್ಷಗಳು, ಇಎಂಡಿ: ರೂ.1.65 ಲಕ್ಷಗಳು.**
2	ವಾರ್ಡ್ ಸಂಖ್ಯೆ 16ರ ಮಲ್ಲಸಂದ್ರದಲ್ಲಿ ಒಳಚರಂಡಿ ಮತ್ತು ನೀರು ಸರಬರಾಜು ಸ್ವತ್ತುಗಳಿಗೆ ದುರಸ್ತಿ ಮತ್ತು ನಿರ್ವಹಣೆ-ನೀರು ಸರಬರಾಜು ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ: ರೂ. 82.73 ಲಕ್ಷಗಳು, ಇಎಂಡಿ: ರೂ.1.65 ಲಕ್ಷಗಳು.**
3	ವಾರ್ಡ್ ಸಂಖ್ಯೆ 17ರ ಚಿಕ್ಕಸಂದ್ರ ಒಳಚರಂಡಿ ಮತ್ತು ನೀರು ಸರಬರಾಜು ಸ್ವತ್ತುಗಳಿಗೆ ದುರಸ್ತಿ ಮತ್ತು ನಿರ್ವಹಣೆ-ನೀರು ಸರಬರಾಜು ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ: ರೂ. 82.50 ಲಕ್ಷಗಳು, ಇಎಂಡಿ: ರೂ.1.65 ಲಕ್ಷಗಳು.**
4	ವಾರ್ಡ್ ಸಂಖ್ಯೆ 20, 21, & 22ರ ಪಿಐಎ ಉಪವಿಭಾಗದಲ್ಲಿ ಒಳಚರಂಡಿ ಮತ್ತು ನೀರು ಸರಬರಾಜು ಸ್ವತ್ತುಗಳಿಗೆ ದುರಸ್ತಿ ಮತ್ತು ನಿರ್ವಹಣೆ-ನೀರು ಸರಬರಾಜು ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ: ರೂ. 82.50 ಲಕ್ಷಗಳು, ಇಎಂಡಿ: ರೂ.1.65 ಲಕ್ಷಗಳು.**
5	ವಾರ್ಡ್ ಸಂಖ್ಯೆ 23, 24 & 25ರ ಹೆಗ್ಗನಹಳ್ಳಿ ಉಪವಿಭಾಗದಲ್ಲಿ ಒಳಚರಂಡಿ ಮತ್ತು ನೀರು ಸರಬರಾಜು ಸ್ವತ್ತುಗಳಿಗೆ ದುರಸ್ತಿ ಮತ್ತು ನಿರ್ವಹಣೆ-ನೀರು ಸರಬರಾಜು ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ: ರೂ. 119.91 ಲಕ್ಷಗಳು, ಇಎಂಡಿ: ರೂ.2.00 ಲಕ್ಷಗಳು.**
6	ವಾರ್ಡ್ ಸಂಖ್ಯೆ 18 ಬಾಗಲಗುಂಟೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಮೋರಿಗಳ ಸುಧಾರಣಾ ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ: ರೂ. 30.32 ಲಕ್ಷಗಳು, ಇಎಂಡಿ: ರೂ. 0.61 ಲಕ್ಷಗಳು.**

1) ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ **18.12.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆಯ **ದಿನಾಂಕ: 23.12.2024ರ ಬೆಳಿಗ್ಗೆ 11:30 ಗಂಟೆಗೆ.** 3) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 27.12.2024ರ ಸಂಜೆ 4:00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 16.12.2024ರ ಸಂಜೆ 4:30 ಗಂಟೆಗೆ.** 5) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 03.01.2025ರ ಸಂಜೆ 4:30 ಗಂಟೆಗೆ (ಸಾಧ್ಯವಾದಲ್ಲಿ).** ಹೆಚ್ಚಿನ ಮಾಹಿತಿಯನ್ನು ಕೆಪಿಪಿ ಪೋರ್ಟಲ್ https://kppp.karnataka.gov.in ಮತ್ತು ಕೆಳಸಹಿದಾರರ ಕಚೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ದಾಸರಹಳ್ಳಿ ವಿಭಾಗ.

ಕರ್ನಾಟಕ ಸರ್ಕಾರ
ಜಿಲ್ಲಾ ನಗರಾಭಿವೃದ್ಧಿ ಕೋಶ ಬೀದರ
Office of the Deputy Commissioner, Opp: Old Bus Stand, Bidar-585 401
Ph. No: 08482-229332, Fax: 08482-225262 E-mail: ka.bidar.dudc@gmail.com

ಸಂ: ಜಿನಕೋ/ನಗ-4(5% ಪ್ರೋ)/ಸಿಆರ್-12/2024-25 ದಿನಾಂಕ: 09-12-2024

:: ಅಲ್ಪಾವಧಿ ಟೆಂಡರ್ ಪ್ರಕಟಣೆ ::

1) ಕಾಮಗಾರಿ / ಸರಕು / ಸೇವೆಯ ವಿವರ: ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) (5% ಪ್ರೋತ್ಸಾಹಧನ) ಯೋಜನೆಯಡಿ ನಗರಸಭೆ ಬೀದರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು, DMA/2024-25/OW/WORK_INDENT32873, 2) ಕಾಮಗಾರಿ / ಸರಕು / ಸೇವೆಯ ಅಂದಾಜು ಮೊತ್ತ: KPPP-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ : KPPP-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: KPPP-portal ನಲ್ಲಿ ನಮೂದಿಸಿದಂತೆ, 5) ಪ್ರಿ ಬಿಡ್ ಮೀಟಿಂಗ್: 21-12-2024 at 11.00 AM, 6) ಟೆಂಡರ ಭರ್ತಿ ಮಾಡಿ ಸಲ್ಲಿಸಲು ಅಂತಿಮ ದಿನಾಂಕ: 26-12-2024 upto 04.30 PM, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27-12-2024 at 05.00 PM, 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ: ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿಕೋಶ, ಬೀದರ, ಇ-ಮೇಲ್: ka.bidar.dudc@gmail.com 08482-229332, 9) ಅಂತರಜಾಲ ತಾಣದ ವಿಳಾಸ: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ

ವಾ.ಸಾ.ಸಂ.ಇ/ಬೀದರ/289/ಕೆ.ಎಸ್.ಎಂ.ಸಿ.&ಎ/2024-25

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು
ಐ.ಡಿ.ಎಸ್.ಎಮ್.ಟಿ. ಲೇಔಟ್, ಮಂತ್ರಾಲಯರಸ್ತೆ, ರಾಯಚೂರು Email: rudaraichur@gmail.com

ಸಂಖ್ಯೆ: ನಪ್ರಾರಾ/ಆಡಳಿತ/ಮು.ತೆ/2024-25/ ದಿನಾಂಕ: 09-12-2024

ಇ-ಟೆಂಡರ್ ಪ್ರಕಟಣೆ

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ವಿವಿಧ ಖಾತೆಗಳಲ್ಲಿರುವ ಮೊತ್ತವನ್ನು ಮುದ್ದತ್ತಿನ ಠೇವಣಿ ರೂಪದಲ್ಲಿ ಹೂಡಲು ಅಲ್ಪಾವಧಿಯ ಬ್ಯಾಂಕ್ ಸ್ಥಿರಾ ಠೇವಣಿಗಳಲ್ಲಿ ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿ ರಾಷ್ಟ್ರೀಕೃತ ಬ್ಯಾಂಕಗಳಿಂದ ಬಡ್ಡಿದರ ಪಡೆಯಲು ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್‌ನ ವಿವರ: ವಿವಿಧ ಖಾತೆಗಳಲ್ಲಿರುವ ಹೆಚ್ಚುವರಿ ಮೊತ್ತವನ್ನು ಮುದ್ದತ್ತಿನ ಠೇವಣಿ ರೂಪದಲ್ಲಿ ಹೂಡುವ ಕುರಿತು. **ಟೆಂಡರ್‌ನ ಸಂಖ್ಯೆ:** Number:RCRUDA/2024-25/AUCTION3. **ಅಂದಾಜು ವೆಚ್ಚ (ಕೋಟಿಗಳಲ್ಲಿ):** 15.00

1) ಟೆಂಡರಗಳನ್ನು ದಿನಾಂಕ: 10-12-2024ರಿಂದಸರ್ಕಾರದ KPPP ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು. 2) ಪ್ರಶ್ನೆಗಳಿಗೆ ಕೊನೆಯ ದಿನಾಂಕ: 13-12-2024 @ 05.00PM **3) ಹರಾಜುನಲ್ಲಿ ಭಾಗವಹಿಸುವಿಕೆಯನ್ನು ಖಚಿತಪಡಿಸಲು ದಿನಾಂಕ ಮತ್ತು ಸಮಯ:**23-12-2024 ರಂದು ಸಂಜೆ 05.00 ಗಂಟೆಯವರೆಗೆ **4) ಪ್ರಾರಂಭ ದಿನಾಂಕ ಮತ್ತು ಮೌಲ್ಯಮಾಪನದ ಸಮಯ:** ದಿನಾಂಕ: 26-12-2024 11.00AM. **5) ನೇರ ಹರಾಜಿನ ದಿನಾಂಕ ಮತ್ತು ಸಮಯ:** 31-12-2024: 10.00 AM ರಿಂದ 04.00 PM

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೆ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಸದರಿ ಟೆಂಡರ್‌ಗಳ ಯಾವುದೆ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸುಲಾಗುವುದಿಲ್ಲ, ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತುಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾಕೋಶದ ವೆಬ್‌ಸೈಟ್ http://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ ರಾಯಚೂರು

DIP/RCR/588/KSMCA/589/2024-25

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು - 560024.
ಇ-ಮೇಲ್: commissionerahvs@gmail.com ಫೋನ್: 080-23412767

ಸಂಖ್ಯೆ: ಆಪಸಂ/ಪ್ರಾ.ನಿ(ಕೆಎಲ್‌ಡಿ.ಎ) : RGM:Leqp:ಟೆ:2024-25 ದಿನಾಂಕ : 10.12.2024

ಟೆಂಡರ್ ನೋಟಿಫಿಕೇಷನ್
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಆಯುಕ್ತರು, ಪಶುಪಾಲನಾ ಇಲಾಖೆ ವತಿಯಿಂದ 2024-25ನೇ ಸಾಲಿಗೆ ಆರ್.ಜಿ.ಎಂ ಯೋಜನೆಯಡಿ ರೂ. 564.00 ಲಕ್ಷಗಳಿಗೆ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಒಂದು ವರ್ಷದ ಅವಧಿಗೆ ಟೆಂಡರ್ ಕರೆಯಲಾಗಿದೆ. ಆಸಕ್ತಿಯುಳ್ಳ ಅರ್ಹ ಬಿಡ್ಡುದಾರರು ಅಂತರ್ಜಾಲ ವಿಳಾಸ https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಯುನ್ನು ಮುಖ್ಯ ಪಶುವೈದ್ಯಾಧಿಕಾರಿಗಳು, ಕೆ.ಎಲ್.ಡಿ.ಎ, ಹೆಬ್ಬಾಳ, ಬೆಂಗಳೂರು-560024 ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ : 10-12-2024 ರಿಂದ ದಿನಾಂಕ : 09-01-2025 ರವರೆಗೆ ಸಾಯಂಕಾಲ 5.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.

ಸಹಿ/- ಮುಖ್ಯ ಪಶುವೈದ್ಯಾಧಿಕಾರಿಗಳು, ಕೆಎಲ್‌ಡಿಎ
ಹಾಗೂ ಸದಸ್ಯ ಕಾರ್ಯದರ್ಶಿಗಳು, ಟೆಂಡರ್ ಆಹ್ವಾನ ಸಮಿತಿ

DIPR/CP/3725/Zen/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಾಜರಾಜೇಶ್ವರಿನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ ಕಚೇರಿ, ಚೌಡೇಶ್ವರಿ ಬಸ್ ನಿಲ್ದಾಣದ ಹತ್ತಿರ, ಮತ್ತಿಕೆರೆ, ಬೆಂಗಳೂರು-54.

ಸಂಖ್ಯೆ: ಕಾಪಾಅ/ರಾರಾನವಿ/ಟೆಂಡರ್/04/2024-25 ದಿನಾಂಕ: 07.12.2024

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)
ದ್ವಿಲಕೋಟೆ ದಾಖಲೆ ಪದ್ಧತಿ (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ-ಕೆಡಬ್ಲ್ಯೂ 1, 2, 3 & 4)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಕೆಳಗೆ ತಿಳಿಸಿರುವ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ವಾರ್ಡ್ ಸಂಖ್ಯೆ	ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ (₹. ಗಳಲ್ಲಿ)	ಕಾಮಗಾರಿಗಳ ಸಂಖ್ಯೆ	ವರ್ಗೀಕರಣ
1.	34	30.00 ರಿಂದ 125.00	60,000/- ರಿಂದ 2,50,000/-	3	ಸಾಮಾನ್ಯರು
2.	34	41.20	82,400/-	1	ಪರಿಶಿಷ್ಟ ಜಾತಿ
3.	35	20.00 ರಿಂದ 125.00	50,000/- ರಿಂದ 2,50,000/-	4	ಸಾಮಾನ್ಯರು
4.	36	41.20 ರಿಂದ 125.00	82,400/- ರಿಂದ 2,50,000/-	4	ಸಾಮಾನ್ಯರು
5.	37	41.20 ರಿಂದ 125.00	82,400/- ರಿಂದ 2,50,000/-	4	ಸಾಮಾನ್ಯರು
6.	38	41.20 ರಿಂದ 125.00	82,400/- ರಿಂದ 2,50,000/-	3	ಸಾಮಾನ್ಯರು
7.	38	41.20	82,400/-	1	ಪರಿಶಿಷ್ಟ ಜಾತಿ
8.	39	70.00	1,40,000/-	1	ಪರಿಶಿಷ್ಟ ಪಂಗಡ
9.	39	125.00	2,50,000/-	1	ಸಾಮಾನ್ಯರು
10.	40	125.00	2,50,000/-	1	ಸಾಮಾನ್ಯರು
11.	40	41.20	82,400/-	1	ಪರಿಶಿಷ್ಟ ಜಾತಿ
12.	41	60.00 ರಿಂದ 125.00	1,20,000/- ರಿಂದ 2,50,000/-	2	ಸಾಮಾನ್ಯರು
13.	41	41.30	82,600/-	1	ಪರಿಶಿಷ್ಟ ಜಾತಿ
14.	42	41.20 ರಿಂದ 125.00	82,400/- ರಿಂದ 2,50,000/-	3	ಸಾಮಾನ್ಯರು
15.	43	41.20 ರಿಂದ 125.00	82,400/- ರಿಂದ 2,50,000/-	2	ಸಾಮಾನ್ಯರು
16.	44	50.00 ರಿಂದ 125.00	1,00,000/- ರಿಂದ 2,50,000/-	2	ಸಾಮಾನ್ಯರು
17.	44	41.20	82,400/-	1	ಪರಿಶಿಷ್ಟ ಪಂಗಡ
18.	45	125.00	2,50,000/-	1	ಸಾಮಾನ್ಯರು
19.	45	41.20	82,400/-	1	ಪರಿಶಿಷ್ಟ ಜಾತಿ
			ಒಟ್ಟು ಕಾಮಗಾರಿಗಳ ಸಂಖ್ಯೆ	37	

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 19.12.2024ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 27.12.2024ರ ಸಂಜೆ 4:00 ಗಂಟೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವ ದ್ವಿಲಕೋಟೆ ಟೆಂಡರ್ (ಐಟಂ ಸಂ. 1 ರಿಂದ 16) ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ರಾಜರಾಜೇಶ್ವರಿನಗರ ವಲಯ, 18ನೇ ಅಡ್ಡರಸ್ತೆ, ಐಡಿಯಲ್ ಹೋಮ್ಸ್, ರಾರಾನಗರ, ಬೆಂಗಳೂರು-98 ಇಲ್ಲಿ ದಿನಾಂಕ 23.12.2024ರ ಬೆಳಿಗ್ಗೆ 11:30 ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 30.12.2024ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು ದಿನಾಂಕ 31.12.2024ರ ಸಂಜೆ 4:30 ಗಂಟೆಗೆ (ಸಾಧ್ಯವಾದಲ್ಲಿ) ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ರಾಜರಾಜೇಶ್ವರಿನಗರ ವಿಭಾಗ

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನಂ. 16/ಐ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು - 560 052.
ದೂ.: 080-22200660/22260932 ಇ-ಮೇಲ್: mdkfcsc123@yahoo.com

ಸಂ:ಕಆನಾಸನಿನಿ/ಆಡಳಿತ/100/2024-25 ದಿನಾಂಕ: 09.12.2024

ಪ್ರಕಟಣೆ

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತಕ್ಕೆ ಹಂಚಿಕೆಯಾಗಿರುವ ಜಿಲ್ಲಾ ವ್ಯಾಪ್ತಿಯಲ್ಲಿ ತೆರೆಯಲಾಗಿರುವ ಖರೀದಿ ಕೇಂದ್ರಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಮೂರು ತಿಂಗಳ ಅವಧಿಗೆ ಪಡೆಯುವ ಸಲುವಾಗಿ ಟೆಂಡರ್ ಸಂಖ್ಯೆ: KFCSCL/2024-25/SE0076 ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ **https://kppp.karnataka.gov.in** ಗೆ ಭೇಟಿ ನೀಡಬಹುದು.

ಸಹಿ/-ಉಪ ಪ್ರಧಾನ ವ್ಯವಸ್ಥಾಪಕರು(ಪ್ರ), ಆಡಳಿತ.

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.
ಸಂ: ಕಾಇಂ:ಗ್ರಾಕುನೀ&ನೈವಿ:ದಾ/ಸ.ಇಂ-2/ ಎಂ.ವಿ.ಎಸ್(ಓ&ಎಂ)/ ಟೆಂಡರ್::2024-25/949 ದಿನಾಂಕ:06/12/2024

ಅಲ್ಪಾವಧಿ ಟೆಂಡರ್ ಪ್ರಕಟಣೆ
("ಇ-ಪ್ರೊಕ್ಯೂರ್‌ಮೆಂಟ್"ಮೂಲಕ)

2024-25 ನೇ ಸಾಲಿನಲ್ಲಿ ಬಹುಗ್ರಾಮ ಯೋಜನೆಯಡಿ (ಓ&ಎಂ) ಹರಿಹರ ತಾಲ್ಲೂಕಿನ ಒಟ್ಟು 01 ಯೋಜನೆ ಕಾಮಗಾರಿ ರೂ.168.50 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಅನ್ವಯ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 13/12/2024 ರ ಸಂಜೆ 5.00 ರ ವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ: 08192-262126 ಅಥವಾ http//kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/570/
ಕೆಎಸ್ಎಂಸಿಎ/2024-25

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ & ನೈ. ವಿಭಾಗ, ದಾವಣಗೆರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಛೇರಿ ಕರ್ನಾಟಕ ನೀರಾವರಿ ನಿಗಮ ನಿಯಮಿತ, ತುಂ.ಮೆ.ಯೋ ವಿಭಾಗ, ಶಿವಮೊಗ್ಗ,
ಪೋನ್ ನಂ. 08182-254832

ಪ್ರಕಟಣೆ ಸಂಖ್ಯೆ: ಕನೀನಿನಿ/ತುಂ.ಮೆ.ಯೋ. ವಿ/ಪಿಬಿ-2/ಟೆಂಡರ್/18 ದಿನಾಂಕ:07.12.2024

SHORT TERM PERCENTAGE TENDER NOTIFICATION
(Through e-Procurement only)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.-ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿ ಬರುವ ಒಂದು(01) ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ.169.33 ಲಕ್ಷಗಳಾಗಿರುತ್ತದೆ.(ಜಿ.ಎಸ್.ಟಿ ಹೊರತುಪಡಿಸಿ)
(2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ/ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ: 11.12.2024 17.30 ಘಂಟೆಯವರೆಗೆ.
(3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 07.12.2024 ರಿಂದ 17.12.2024 ಸಾಯಂಕಾಲ 17.29 ಘಂಟೆಯವರೆಗೆ (ಕಚೇರಿ ವೇಳೆಯಲ್ಲಿ).

ಟೆಂಡರನ್ನು ತೆರೆಯುವ ದಿನಾಂಕ / ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು/ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https:\\eproc.karanataka.gov.in ವೆಬ್‌ಸೈಟ್ ನಲ್ಲಿ ಪಡೆಯಬಹುದು.

ಸಹಿ/-
ಕಾರ್ಯಪಾಲಕ ಇಂಜನೀಯರರು,
ಕನೀನಿನಿ, ತುಂ.ಮೆ.ಯೋ. ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ.49-12/
ಝೇಂಕಾರ್/2024-25

ನಗರಸಭಾ ಕಾರ್ಯಾಲಯ, ಚಿಕ್ಕಮಗಳೂರು.
CITY MUNICIPAL COUNCIL, CHIKKAMAGALURU.

ಸಂಖ್ಯೆ:ಸಿಎಂಸಿ/ಸಿಕೆಎಂ/ನನಿಕ/ನೀ.ಸ.ಸಾ/ಸಿಆರ್/01/2024-265 ದಿನಾಂಕ : 09.12.2024

: : ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ : :

ಈ ಕೆಳಕಂಡ ನೀರು ಸರಬರಾಜು ಸಾಮಗ್ರಿಗಳನ್ನು ಸರಭರಾಜುಮಾಡಲು ಅದಿಕೃತ ಮಾರಾಟಗಾರರು/ಸರಬರಾಜುದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ-ಲಕೋಟೆ ಪದ್ದತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ಷರತ್ತುಗಳಿಗೊಳಪಟ್ಟು ಟೆಂಡರ್ ಸಲ್ಲಿಸಬಹುದಾಗಿದೆ.

ಕ್ರ ಸಂ	ವಾಹನದ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ ಗಳಲ್ಲಿ)
1	DMA/2024-25/IND4054	90.10	1,53,000/-

ಟೆಂಡರ್ ಫಾರಂ ಬೆಲೆ- ಇ-ಪ್ರೊಕ್ಯೂರ್‌ಮೆಂಟ್‌ನಂತೆ ಕಾಲಾವಧಿ-01 ವರ್ಷ.

1. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24.12.2024ರ 17.30 ಗಂಟೆಯವರೆಗೆ
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:26.12.2024ರ 11.00 ಗಂಟೆಗೆ
3. ಆರ್ಥಿಕ ಬಿಡ್ ತೆರೆಯುವ ದಿನಾಂಕ:27.12.2024ರ 11.00 ಗಂಟೆಗೆ

ಹೆಚ್ಚಿನ ವಿವರವನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಯಾವುದೇ ಬದಲಾವಣೆಗಳಿದ್ದಲ್ಲಿ. ಇ-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವಿದಿಲ್ಲ.

ಸಹಿ/-	ಸಹಿ/-	ಸಹಿ/-
ಶ್ರೀಮತಿ ಬಿ ಸಿ ಸಜಾತ ಶಿವಕುಮಾರ್ ಅಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು	ಶ್ರೀಮತಿ ಅನು ಮಧುಕುಮಾರ್ ಉಪಾಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು	ಬಿ.ಸಿ. ಬಸವರಾಜು ಕೆ.ಎಂ.ಎ.ಎಸ್ ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ,
ಪಂ.ರಾ.ಇಂ. ವಿಭಾಗ, ಕೆ.ಆರ್.ನಗರ

ಸಂಖ್ಯೆ: ಕಾಇಂ/ಪಂರಾಇಂವಿ/ಕೃರಾನ/ಎ.ಇ/ಟೆಂಡರ್/2024-25 ದಿನಾಂಕ: 09.12.2024

ಇ-ಪ್ರೊಕ್ಯೂರ್‌ಮೆಂಟ್ ರೀತ್ಯಾ ಅಲ್ಪಾವಧಿ ಟೆಂಡರ್ ಪ್ರಕಟಣೆ -ಸಂಖ್ಯೆ 11/2024-25 ದಿನಾಂಕ: 09.12.2024

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು K.W-1 /K.W-2/ K.W -3/ K.W-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು G.O. No. FD 9 PCL 2004 Dt. 06-08-2005 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕೆ.ಆರ್.ನಗರ ರವರ ಪರವಾಗಿ ಈ ಕೆಳಗೆ ನಮೂದಿಸಿರುವ ವಿವಿಧ ಲೆಕ್ಕಶೀರ್ಷಿಕೆಯ ಯೋಜನೆಯಡಿ ಕಾಮಗಾರಿಯನ್ನು ಕೈಗೊಳ್ಳಲು https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

1) ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ಷೆಡ್ಯೂಲ್-ಬಿ ಅಪ್ ಲೋಡ್ (Upload) ಮಾಡುವ ಅಂದಾಜು ದಿ: 10.12.2024 ರ ಬೆಳಿಗ್ಗೆ 10.30 ಗಂಟೆಯಿಂದ. **2)** ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ಷೆಡ್ಯೂಲ್ -ಬಿನಲ್ಲಿ ದರ ನಮೂದಿಸುವ ಕೊನೆಯ ದಿ: 21.12.2024ರ ಸಂಜೆ 4.30 ಗಂಟೆಯ ವರೆಗೆ. **3)** ತಾಂತ್ರಿಕ ಬಿಡ್(ಕೆಡಬ್ಲ್ಯೂ-1,2,3,& 4) ತೆರೆಯುವ ದಿ: 23.12.2024 ರ ಮಧ್ಯಾಹ್ನ 12.00 ಗಂಟೆಯಿಂದ. **4)** ಆರ್ಥಿಕ ಬಿಡ್(ಕೆಡಬ್ಲ್ಯೂ-1,2,3,& 4) ತೆರೆಯುವ ದಿನಾಂಕ ತಾಂತ್ರಿಕವಾಗಿ ಅರ್ಹತೆಗೊಂಡ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು

ಕಾಮಗಾರಿಗಳ ವಿವರ

ತಾಲ್ಲೂಕು	ಕೆ.ಆರ್.ನಗರ	ಹುಣಸೂರು	ಪಿರಿಯಾಪಟ್ಟಣ	ಹೆಚ್.ಡಿ.ಕೋಟೆ	ಒಟ್ಟು
ಒಟ್ಟು ಕಾಮಗಾರಿಗಳ ಸಂಖ್ಯೆ	03	01	01	06	11
ಸಾಮಾನ್ಯ	03	01	0	03	07
ಪರಿಶಿಷ್ಟ ಜಾತಿ ಮೀಸಲಾತಿ	0	0	01	02	03
ಪರಿಶಿಷ್ಟ ಪಂಗಡ ಮೀಸಲಾತಿ	0	0	0	01	01

ಆನ್ ಲೈನ್‌ನಲ್ಲಿ ಮಾತ್ರ ನಿರ್ವಹಿಸಲಾಗುವುದು, ವಿವರಗಳಿಗೆ https://kppp.karnataka.gov.in ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ. ದೂರವಾಣಿ ಸಂಖ್ಯೆ 08223-262228.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ತಾಂತ್ರಿಕ ವಿಭಾಗ, ಕೆ.ಆರ್.ನಗರ

DIPR/DDMYS-939/KSMCA-631/2024-25

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಾಸ್ಕೊದಲ್ಲಿ ಮಂಗಳವಾರ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ಭೇಟಿಯಾದರು —ಎಎಫ್‌ಪಿ ಚಿತ್ರ

ಪುಟಿನ್ ಭೇಟಿಯಾದ ರಾಜನಾಥ್

ನವದೆಹಲಿ (ಪಿಟಿಐ): ಭಾರತ– ರಷ್ಯಾ ನಡುವಣ ದ್ವಿಪಕ್ಷೀಯ ಬಾಂಧವ್ಯವು ಹಿಂದೆಂದಿಗಿಂತಲೂ ಗಟ್ಟಿಯಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಅವರು ಮಾಸ್ಕೊದಲ್ಲಿ ಮಂಗಳವಾರ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಮಾತುಕತೆ ವೇಳೆ ರಾಜನಾಥ್ ಅವರು, ‘ಉಭಯ ದೇಶಗಳ ನಡುವಣ ಬಾಂಧವ್ಯವು ಅತ್ಯಂತ ಎತ್ತರದ ಪರ್ವತಕ್ಕಿಂತಲೂ ಎತ್ತರವಾಗಿದೆ ಮತ್ತು ಸಾಗರದ ಅತ್ಯಂತ ಆಳವಾಗಿರುವ ಪ್ರದೇಶಕ್ಕಿಂತಲೂ ಆಳವಾಗಿದೆ ಎಂದಿದ್ದಾರೆ’ ಎಂಬುದಾಗಿ ರಕ್ಷಣಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಭಾರತವು ಯಾವಾಗಲೂ ರಷ್ಯಾದ ಪರವಾಗಿ ನಿಂತಿದೆ ಮತ್ತು ಭವಿಷ್ಯದಲ್ಲಿಯೂ ಈ ನೀತಿಯನ್ನು ಮುಂದುವರಿಸುತ್ತದೆ ಎಂದು ಸಿಂಗ್, ಪುಟಿನ್ ಅವರಿಗೆ ತಿಳಿಸಿದ್ದಾರೆ.

ಪುಟಿನ್ ಭೇಟಿಗೂ ಮುನ್ನ ರಾಜನಾಥ್ ಅವರು ಮಿಲಿಟರಿ ಸಹಕಾರಕ್ಕೆ ಸಂಬಂಧಿಸಿದ ಭಾರತ–ರಷ್ಯಾ ಅಂತರ–ಸರ್ಕಾರಿ ಆಯೋಗದ 21ನೇ ಅಧಿವೇಶನದಲ್ಲಿ ರಷ್ಯಾದ ರಕ್ಷಣಾ ಸಚಿವ ಆಂಡ್ರೆ ಬೆಲೊಸೊವ್ ಅವರೊಂದಿಗೆ ಪಾಲ್ಗೊಂಡರು.

ಬೆಲೊಸೊವ್ ಅವರೊಂದಿಗಿನ ಮಾತುಕತೆ ವೇಳೆ ಸಿಂಗ್ ಅವರು ಭಾರತಕ್ಕೆ ‘ಎಸ್ 400 ಟ್ರಯಂಫ್’ ರಕ್ಷಣಾ ಕ್ಷಿಪಣಿ ವ್ಯವಸ್ಥೆಯ ಇನ್ನುಳಿದ ಎರಡು ಘಟಕಗಳ ಪೂರೈಕೆಯನ್ನು ತ್ವರಿತಗೊಳಿಸುವಂತೆ ಒತ್ತಾಯಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಮಾಸ್ಕೊದಲ್ಲಿ ಪುಟಿನ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ ಐದು ತಿಂಗಳ ಬಳಿಕ ರಕ್ಷಣಾ ಸಚಿವರ ಭೇಟಿ ನಡೆದಿದೆ.

ವ್ಯಾಪಾರಿ ಕೊಲೆ: ಇಬ್ಬರ ಬಂಧನ

ಕೆಜಿಎಫ್: ತಾಲ್ಲೂಕಿನ ಕದರಿಗಾನಕುಪ್ಪ ಗ್ರಾಮದ ಬಳಿ ವೃದ್ಧರೊಬ್ಬರನ್ನು ಕೊಲೆ ಮಾಡಿ ಹಣ ದೋಚಿದ್ದ ಇಬ್ಬರು ಆರೋಪಿಗಳನ್ನು ವಿಶೇಷ ಪೊಲೀಸ್ ತಂಡ ಮಂಗಳವಾರ ಬಂಧಿಸಿದೆ.

ಕೊಲೆ ಆರೋಪಿಗಳಾದ ಬೇತಮಂಗಲ ನಿವಾಸಿಗಳಾದ ಕಿರಣ್‌ಕುಮಾರ್ ಮತ್ತು ವಿ.ವಿಜಯ್ ಎಂಬುವವರನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಬೆನ್ನವಾರ ಗ್ರಾಮದ ಪಿ.ರಾಜ (65) ಡಿ.4ರಂದು ಮಧ್ಯಾಹ್ನ ಬಾಳೆಹಣ್ಣು ವ್ಯಾಪಾರ ಮುಗಿಸಿ ವಿ.ಕೋಟೆಗೆ ಹೋಗಲು ಸುಂದರಪಾಳ್ಯದಲ್ಲಿ ನಿಂತಿದ್ದರು. ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಡ್ರಾಪ್ ಮಾಡುವುದಾಗಿ ಅವರನ್ನು ಬೈಕ್‌ನಲ್ಲಿ ಹತ್ತಿಸಿಕೊಂಡಿದ್ದರು.

ಬೇತಮಂಗಲ-ವಿ.ಕೋಟೆ ಮುಖ್ಯರಸ್ತೆಯ ಕದರಿಗಾನಕುಪ್ಪ ಗ್ರಾಮದ ಬಳಿ ಬೈಕ್‌ನಿಂದ ರಾಜ ಅವರನ್ನು ಕೆಳಗಿಳಿಸಿ ಆಯುಧಗಳಿಂದ ಮಾರಣಾಂತಿಕ ಹಲ್ಲೆ ನಡೆಸಿದ್ದರು. ರಾಜ ಅವರ ಬಳಿ ಇದ್ದ ₹1,500 ದೋಚಿ ಪರಾರಿಯಾಗಿದ್ದರು.

ಪಕ್ಕದ ಜಮೀನಿನ ಬಳಿ ರಾಜ ಅವರನ್ನು ಬಿಟ್ಟು ಪರಾರಿಯಾಗಿದ್ದರು. ಮಾರಣಾಂತಿಕ ಹಲ್ಲೆಗೊಳಗಾಗಿದ್ದ ರಾಜ ಅವರನ್ನು ಕೋಲಾರದ ಎಸ್.ಎನ್.ಆರ್. ಆಸ್ಪತ್ರೆಗೆ ಸೇರಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಡಿ. 7ರಂದು ಅವರು ಮೃತಪಟ್ಟಿದ್ದರು.

ಬೇತಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು.

ಸುತ್ತಮುತ್ತಲ ಜಿಲ್ಲೆಗಳ ಆಸ್ಪತ್ರೆಗಳಿಂದಲೂ ವಾಣಿವಿಲಾಸ ಆಸ್ಪತ್ರೆಗೆ ಶಿಫಾರಸು

ಹಾಸಿಗೆಗೆ ‘ರೆಫರಲ್’ ರಗಳೆ

ವಾಣಿವಿಲಾಸ ಆಸ್ಪತ್ರೆಯಲ್ಲಿನ ವ್ಯವಸ್ಥೆ

703	ಆಸ್ಪತ್ರೆಯಲ್ಲಿರುವ ಒಟ್ಟು ಹಾಸಿಗೆಗಳು
500	ತಾಯಂದಿರ ಚಿಕಿತ್ಸೆಗೆ ಮೀಸಲಿರುವ ಹಾಸಿಗೆಗಳು
24	ಮಹಿಳೆಯರ ಚಿಕಿತ್ಸೆಗಿರುವ ಐಸಿಯು ಹಾಸಿಗೆಗಳು
166	ಮಕ್ಕಳ ಚಿಕಿತ್ಸೆಗೆ ಮೀಸಲಿರುವ ಹಾಸಿಗೆಗಳು
160	ನಿರ್ಮಾಣವಾಗುತ್ತಿರುವ ಕಟ್ಟಡದಲ್ಲಿನ ಹಾಸಿಗೆಗಳ ಸಂಖ್ಯೆ

• ವರುಣ ಹೆಗಡೆ

ಬೆಂಗಳೂರು: ನಗರದ ಪ್ರಮುಖ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಾದ ವಾಣಿವಿಲಾಸ ಆಸ್ಪತ್ರೆಗೆ ಭೇಟಿ ನೀಡುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದ್ದು, ರಾಜ್ಯದ ವಿವಿಧೆಡೆಯಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ತಾಯಂದಿರು ಶಿಫಾರಸು (ರೆಫರಲ್) ಆಧಾರದಲ್ಲಿ ಬರುತ್ತಿರುವುದರಿಂದ ಚಿಕಿತ್ಸೆ ಒದಗಿಸುವುದು ವೈದ್ಯರಿಗೆ ಸವಾಲಾಗಿ ಪರಿಣಮಿಸಿದೆ.

ಈ ಆಸ್ಪತ್ರೆಯು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಅತಿ ದೊಡ್ಡ ತಾಯಿ–ಮಗುವಿನ ಆಸ್ಪತ್ರೆಯೂ ಇದಾಗಿದೆ. ಪ್ರಸೂತಿ, ಸ್ತ್ರೀರೋಗ, ಮಕ್ಕಳ ಹಾಗೂ ಶಸ್ತ್ರಚಿಕಿತ್ಸಾ ವಿಭಾಗಗಳನ್ನು ಹೊಂದಿದೆ. ಅತ್ಯಾಧುನಿಕ ನವಜಾತ ಶಿಶು ಆರೈಕೆ ಘಟಕ (ಎನ್‌ಐಸಿಯು), ಮಕ್ಕಳ ತೀವ್ರ ನಿಗಾ ಘಟಕ (ಪಿಐಸಿಯು), ಹೆರಿಗೆ ಕೊಠಡಿ, ಚಿಕಿತ್ಸಾ ವಿಭಾಗವನ್ನು ಒಳಗೊಂಡಿದೆ. ಇದರಿಂದಾಗಿ ಸಂಕೀರ್ಣ ಪ್ರಕರಣಗಳು ಹೆಚ್ಚಾಗಿ ಇಲ್ಲಿಗೆ ಶಿಫಾರಸು ಆಧಾರದಲ್ಲಿ ಬರುತ್ತಿವೆ. ಇನ್ನೊಂದೆಡೆ ತಜ್ಞ ವೈದ್ಯರು, ಸೌಲಭ್ಯದ ಕೊರತೆ ಸೇರಿ ವಿವಿಧ ಕಾರಣಗಳಿಂದ ನಗರದ ವಿವಿಧ ಸರ್ಕಾರಿ ಆಸ್ಪತ್ರೆಗಳು ಹಾಗೂ ಜಿಲ್ಲಾ ಆಸ್ಪತ್ರೆಗಳು ಶಿಫಾರಸು ಮಾಡುತ್ತಿವೆ. ಪರಿಣಾಮ ಆಸ್ಪತ್ರೆಯಲ್ಲಿ ತಾಯಂದಿರ ದಟ್ಟಣೆ ಉಂಟಾಗುತ್ತಿದೆ.

ಆಸ್ಪತ್ರೆಯ ಹೊರರೋಗಿ ವಿಭಾಗಕ್ಕೆ ಪ್ರತಿನಿತ್ಯ ಸರಾಸರಿ 250ರಿಂದ 300 ಮಂದಿ ಭೇಟಿ ನೀಡುತ್ತಿದ್ದಾರೆ. ‘ಆಯುಷ್ಮಾನ್ ಭಾರತ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ’ ಸೇರಿ ವಿವಿಧ ಯೋಜನೆಗಳಡಿ ತಾಯಿ–ಮಗುವಿಗೆ ಉಚಿತ ಚಿಕಿತ್ಸೆ ಒದಗಿಸಲಾಗುತ್ತಿದೆ. ಬಡ–ಮಧ್ಯಮ ವರ್ಗದವರು ದೂರದ ಊರುಗಳಿಂದ ಈ ಆಸ್ಪತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಇದರಿಂದಾಗಿ ಚಿಕಿತ್ಸೆಗೆ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ವಾಣಿವಿಲಾಸ ಆಸ್ಪತ್ರೆ

8-9 ಸಾವಿರ ವಾಣಿವಿಲಾಸ ಆಸ್ಪತ್ರೆಗೆ 1ತಿಂಗಳಿಗೆ ಭೇಟಿ ನೀಡುವ ಹೊರರೋಗಿಗಳು

1,300-1,500 ಆಸ್ಪತ್ರೆಯಲ್ಲಿ 1ತಿಂಗಳಿಗೆ ನಡೆಯುವ ಹೆರಿಗೆಗಳು

ಶಿಶುಗಳ ಚಿಕಿತ್ಸೆಗೂ ಶಿಫಾರಸು

ನವಜಾತ ಶಿಶುಗಳು ಸಹ ಶಿಫಾರಸು ಆಧಾರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಣಿವಿಲಾಸ ಆಸ್ಪತ್ರೆಗೆ ಬರುತ್ತಿದ್ದಾರೆ. ಇವರಲ್ಲಿ ಶೇ 30 ರಷ್ಟು ಪ್ರಕರಣಗಳು ಅವಧಿಗಿಂತ ಮೊದಲು ಜನಿಸಿದ ಮಕ್ಕಳಾಗಿದ್ದಾರೆ. ಇನ್ನೂ, ಉಸಿರಾಟದ ಸಮಸ್ಯೆ, ಕಡಿಮೆ ತೂಕ ಸೇರಿ ವಿವಿಧ ಕಾರಣಗಳಿಂದಲೂ ಶಿಫಾರಸು ಆಧಾರದಲ್ಲಿ ಮಕ್ಕಳು ಆಸ್ಪತ್ರೆಗೆ ಬರುತ್ತಿದ್ದಾರೆ. ಇವರಿಗೆ ಹೆಚ್ಚಿನ ಅವಧಿ ಚಿಕಿತ್ಸೆ ಅಗತ್ಯ ಇರುವುದರಿಂದ ಮಕ್ಕಳಿಗೆ ಹಾಸಿಗೆ ಒದಗಿಸಿ, ಚಿಕಿತ್ಸೆ ನೀಡುವುದು ವೈದ್ಯರಿಗೆ ಸಮಸ್ಯೆಯಾಗಿದೆ.

ಸಂಕೀರ್ಣ ಪ್ರಕರಣ: ಜಯನಗರ ಸಾರ್ವಜನಿಕ ಆಸ್ಪತ್ರೆ, ಕೆ.ಸಿ. ಜನರಲ್ ಸೇರಿ ನಗರದ ವಿವಿಧ ಆಸ್ಪತ್ರೆಗಳಿಂದಲೂ ಅಂತಿಮ ಹಂತದಲ್ಲಿ ತಾಯಂದಿರನ್ನು ಇಲ್ಲಿಗೆ ಶಿಫಾರಸು ಮಾಡಲಾಗುತ್ತಿದೆ. ಕೋಲಾರ, ರಾಮನಗರ, ಚಿಕ್ಕಮಗಳೂರು ಸೇರಿ ವಿವಿಧ ಜಿಲ್ಲೆಗಳಿಂದಲೂ ಪ್ರಕರಣಗಳು ಬರುತ್ತಿವೆ. ಹೆಚ್ಚಿನವರು ಅಧಿಕ ರಕ್ತದೊತ್ತಡ, ಹೃದಯ ಸಮಸ್ಯೆ, ರಕ್ತಸ್ರಾವ, ಗರ್ಭಾಶಯದಲ್ಲಿ ತೊಂದರೆ, ‘ಪ್ಲೆಸೆಂಟಾ ಪ್ರಿವಿಯಾ’ (ಸಂಪೂರ್ಣವಾಗಿ ಗರ್ಭಕಂಠವನ್ನು ನಿರ್ಬಂಧಿಸುವ ಸ್ಥಿತಿ) ಸೇರಿ ವಿವಿಧ ಸಮಸ್ಯೆ ಇರುವವರಾಗಿದ್ದಾರೆ. ಒಳರೋಗಿಗಳಲ್ಲಿ ಶೇ 60 ರಷ್ಟು ಮಂದಿ ಶಿಫಾರಸು ಆಧಾರದಲ್ಲಿಯೇ ದಾಖಲಾಗುತ್ತಿದ್ದಾರೆ. ಇದರಿಂದಾಗಿ ಆಸ್ಪತ್ರೆಯಲ್ಲಿ ತಾಯಂದಿರಿಗೆ ಹಾಸಿಗೆ ಒದಗಿಸಿ, ಚಿಕಿತ್ಸೆ ಒದಗಿಸುವುದು ಸವಾಲಾಗಿದೆ. ಇನ್ನೊಂದೆಡೆ ವೈದ್ಯರು ಹಾಗೂ ಸಿಬ್ಬಂದಿಯ ಕೊರತೆ ಚಿಕಿತ್ಸೆಗೆ ಸಮಸ್ಯೆಯಾಗಿದೆ.

‘ಇತ್ತೀಚಿನ ದಿನಗಳಲ್ಲಿ ಶಿಫಾರಸು ಆಧಾರದಲ್ಲಿ ಬರುವವರ ಸಂಖ್ಯೆ ಹೆಚ್ಚಳ ಆಗುತ್ತಿದೆ. ನಮ್ಮಲ್ಲಿ ನಡೆಯುವ ಬಹುತೇಕ ಹೆರಿಗೆಗಳು ಸಹಜ ಹೆರಿಗೆಯಾಗಿವೆ. ಸಂಕೀರ್ಣ ಪ್ರಕರಣಗಳಲ್ಲಿ ಶಸ್ತ್ರಚಿಕಿತ್ಸೆ ಅನಿವಾರ್ಯ. ಜಿಲ್ಲಾ ಮಟ್ಟದ ಆಸ್ಪತ್ರೆಗಳು ಹಾಗೂ ನಗರದ ವಿವಿಧ ಆಸ್ಪತ್ರೆಗಳು ನಿರ್ವಹಣೆ ಮಾಡಬಹುದಾದ ಪ್ರಕರಣಗಳೂ ಶಿಫಾರಸು ಆಧಾರದಲ್ಲಿ ಬರುತ್ತಿರುವುದರಿಂದ ತುರ್ತಾಗಿ ಚಿಕಿತ್ಸೆ ಇರುವವರಿಗೆ ಸಮಸ್ಯೆಯಾಗುವ ಸಾಧ್ಯತೆ ಇರುತ್ತದೆ’ ಎಂದು ಆಸ್ಪತ್ರೆಯ ವೈದ್ಯರೊಬ್ಬರು ಕಳವಳ ವ್ಯಕ್ತಪಡಿಸಿದರು.

ಜನಾರೋಗ್ಯ ಸತ್ಯದರ್ಶನ

ಆಸ್ಪತ್ರೆ ಅಗತ್ಯ ವೈದ್ಯಕೀಯ ಸೌಲಭ್ಯ ಹೊಂದಿದ್ದು, ಸಮಸ್ಯೆಯಾಗದಂತೆ ಚಿಕಿತ್ಸೆ ನೀಡಲಾಗುತ್ತದೆ. ಅನಗತ್ಯ ಶಿಫಾರಸು ತಪ್ಪಬೇಕಿದೆ

ಡಾ. ಸವಿತಾ ಸಿ., ವಾಣಿವಿಲಾಸ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ

ಹಾಸಿಗೆ, ಸಿಬ್ಬಂದಿ ಅಗತ್ಯ

ಆಸ್ಪತ್ರೆಗೆ ಬರುವ ತಾಯಂದಿರು ಹಾಗೂ ಮಕ್ಕಳ ಸಂಖ್ಯೆ ಹೆಚ್ಚಳ ಆಗುತ್ತಿರುವುದರಿಂದ ಹಾಸಿಗೆ ಸಂಖ್ಯೆ ಹಾಗೂ ಸಿಬ್ಬಂದಿಯನ್ನು ಹೆಚ್ಚಿಸಬೇಕಾಗಿದೆ. ಸದ್ಯ 160 ಹಾಸಿಗೆಗಳ ಕಟ್ಟಡ ನಿರ್ಮಾಣ ಆಗುತ್ತಿದ್ದು, ಮುಂದಿನ ಆರು ತಿಂಗಳಲ್ಲಿ ಕಾಮಗಾರಿ ಮುಕ್ತಾಯ ಗೊಳ್ಳುವ ಸಾಧ್ಯತೆಯಿದೆ. ಆಸ್ಪತ್ರೆಗೆ ಬರುವ ಎಲ್ಲರಿಗೂ ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸಲ ಇನ್ನೂ ಕನಿಷ್ಠ 200 ಹಾಸಿಗೆಗಳು ಹಾಗೂ ಹೆಚ್ಚಿನ ವೈದ್ಯರು, ಶುಶ್ರೂಷಕರು ಹಾಗೂ ವೈದ್ಯಕೀಯ ಸಿಬ್ಬಂದಿ ಅಗತ್ಯವಿದೆ ಎನ್ನುತ್ತಾರೆ ಆಸ್ಪತ್ರೆಯ ವೈದ್ಯರು.

ಸುದ್ದಿ 2 ನಿಮಿಷ

ಸೈಬರ್ ವಂಚನೆ: ₹13 ಲಕ್ಷ ಕಳೆದುಕೊಂಡ ಎಂಜಿನಿಯರ್

ಬೆಂಗಳೂರು: ‘ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡಲಾಗುವುದು’ ಎಂದು ಎಂಜಿನಿಯರ್ ಒಬ್ಬರಿಗೆ ಸೈಬರ್ ಖದೀಮರು ಆಮಿಷವೊಡ್ಡಿ ₹13 ಲಕ್ಷ ವಂಚಿಸಿದ್ದಾರೆ. ಈ ಸಂಬಂಧ ಪೂರ್ವ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಲಸೂರು ನಿವಾಸಿ, ಎಂಜಿನಿಯರ್ ವಿ.ಎಂ.ನಾಗಮಣಿ ಅವರು ನೀಡಿದ್ದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ದೂರುದಾರಿಗೆ ಫೇಸ್‌ಬುಕ್‌ನಲ್ಲಿ ಟ್ರೇಡಿಂಗ್ ಕುರಿತು ಲಿಂಕ್ ಬಂದಿತ್ತು. ಲಿಂಕ್ ಒತ್ತಿದ ಬಳಿಕ ಪ್ರಣೀತ್ ಜೋಶಿ ಹೆಸರಿನ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಅವರ ಮೊಬೈಲ್ ಸಂಖ್ಯೆ ಸೇರ್ಪಡೆ ಆಗಿತ್ತು. ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಪಾವತಿಸುವ ಆಮಿಷ ಒಡ್ಡಲಾಗಿತ್ತು’ ಎಂದು ಪೊಲೀಸರು ಹೇಳಿದರು.

‘ದೂರುದಾರರು ತಮ್ಮ ಎಸ್‌ಬಿಐ ಖಾತೆಯಿಂದ ₹9.92 ಲಕ್ಷ ಹಾಗೂ ಎಚ್‌ಡಿಎಫ್‌ಸಿ ಖಾತೆಯಿಂದ ₹3.14 ಲಕ್ಷವನ್ನು ಬಿಡಿಸಿ ಅಪರಿಚಿತರು ನೀಡಿದ್ದ ಖಾತೆಗೆ ವರ್ಗಾವಣೆ ಮಾಡಿ, ಮೋಸ ಹೋಗಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಿಂಚಣಿ ₹ 5ಸಾವಿರಕ್ಕೆ ಹೆಚ್ಚಿಸಿ

ಬೆಂಗಳೂರು: ಪಿಂಚಣಿಯನ್ನು ₹ 3 ಸಾವಿರದಿಂದ ₹ 5 ಸಾವಿರಕ್ಕೆ ಹೆಚ್ಚಿಸುವುದು ಹಾಗೂ ಇಎಸ್‌ಐ ಜಾರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗಳ ಆಗ್ರಹಿಸಿ ಕರ್ನಾಟಕ ಸ್ಟೇಟ್ ಕನಸ್ಟ್ರಕ್ಷನ್ ವರ್ಕರ್ಸ್ ಸೆಂಟ್ರಲ್ ಯೂನಿಯನ್ (ಕೆಎಸ್‌ಸಿಡಬ್ಲ್ಯುಸಿಯು) ನೇತೃತ್ವದಲ್ಲಿ ಕಾರ್ಮಿಕರು ಪ್ರತಿಭಟನೆ ನಡೆಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಜಮಾಯಿಸಿದ ಕಾರ್ಮಿಕರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕೆಎಸ್‌ಸಿಡಬ್ಲ್ಯುಸಿಯು ಅಧ್ಯಕ್ಷ ಎನ್.ಪಿ.ಸ್ವಾಮಿ, ‘ರಾಜ್ಯ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹವಾಗಿರುವ ಹಣವನ್ನು ಕೇಂದ್ರ ಸರ್ಕಾರವು ಇ ಶ್ರಮ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿರುವ ಕಾರ್ಮಿಕರಿಗೆ ವರ್ಗಾಯಿಸಬಾರದು. ಈ ಪ್ರಸ್ತಾವ ಕಾನೂನು ಬಾಹಿರವಾಗಿದೆ. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ವಿವಿಧ ಸೌಲಭ್ಯ ಒದಗಿಸಬೇಕು’ ಎಂದು ಆಗ್ರಹಿಸಿದರು.

ಎಲ್ಲಾ ಕಟ್ಟಡ ಕಾರ್ಮಿಕರಿಗೂ ವಸತಿ ಸೌಲಭ್ಯ ಒದಗಿಸಬೇಕು. ನೋಂದಣಿ ಮತ್ತು ಮರು ನೋಂದಣಿಗಾಗಿ ಸಲ್ಲಿಸಿರುವ ಅರ್ಜಿಗಳನ್ನು ಸಕಾರಣವಿಲ್ಲದೇ ತಿರಸ್ಕರಿಸುವುದನ್ನು ನಿಲ್ಲಿಸಬೇಕು. ಕಾಲಮಿತಿಯಲ್ಲಿ ಅರ್ಜಿಯನ್ನು ವಿಲೇವಾರಿ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಏಳು ಮಂದಿ ವಿರುದ್ಧ ಸಿಸಿಬಿ ಠಾಣೆಯಲ್ಲಿ ಎಫ್‌ಐಆರ್

ನೌಕರಿ: ₹1 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರೈಲ್ವೆ ಇಲಾಖೆಯಲ್ಲಿ ಟಿಕೆಟ್ ಕಲೆಕ್ಟರ್(ಟಿ.ಸಿ) ನೌಕರಿ ಕೊಡಿಸುವುದಾಗಿ ಆಮಿಷವೊಡ್ಡಿ ಉದ್ಯೋಗ ಆಕಾಂಕ್ಷಿಗಳಿಂದ ₹1 ಕೋಟಿಗೂ ಹೆಚ್ಚು ಹಣ ಪಡೆದು ವಂಚಿಸಿದ್ದ ಆರೋಪದ ಅಡಿ ಏಳು ಮಂದಿ ವಿರುದ್ಧ ಕೇಂದ್ರ ಅಪರಾಧ ಠಾಣೆಯಲ್ಲಿ(ಸಿಸಿಬಿ) ಎಫ್‌ಐಆರ್ ದಾಖಲಾಗಿದೆ.

ವಿಜಯಪುರ ಜಿಲ್ಲೆಯ ಲಕ್ಷ್ಮಿಕಾಂತ್ ಹೊಸಮನಿ, ಭೀಮರಾವ್ ಎಂಟಮಾನಿ, ವಿ.ಮುರಳಿ, ಬಸು ಕಾಸಪ್ಪ ಮಯೂರ, ಕೂಲಪ್ಪ ಸಿಂಗೆ, ಶ್ರೀಧರ್, ಸಂತೋಷ ನಾಯಕ್ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ವಿಜಯಪುರ ಜಿಲ್ಲೆಯ ಆಲಮೇಲದ ಹುಸನಪ್ಪ ಮಾಡ್ಯಾಳ ಅವರು ನೀಡಿದ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಉದ್ಯೋಗ ಆಕಾಂಕ್ಷಿಗಳು ಹಣ ಸಂದಾಯ ಮಾಡಿದ್ದಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಪಡೆದುಕೊಳ್ಳಲಾಗಿದೆ. ತನಿಖೆ ಪ್ರಗತಿಯಲ್ಲಿದೆ’ ಎಂದು ಪೊಲೀಸರು ಹೇಳಿದರು.

‘ಶಿವಕುಮಾರ ಯಮನಪ್ಪ ಹೊಸಮನಿ, ಅಶೋಕ ಲಕ್ಕಪ್ಪ ವಾಲಿಕಾರ, ಗಣಪತಿ ಬಂಡಿಬಾ ವಾಗಮೊರೆ, ಸುನಿಲ್ ರಾಯಗೊಂಡ ಪೂಜಾರಿ ಸೇರಿ ಹಲವು ಉದ್ಯೋಗ ಆಕಾಂಕ್ಷಿಗಳಿಂದ ಆರೋಪಿಗಳು ಹಣ ಪಡೆದು ವಂಚಿಸಿದ್ದಾರೆ. ಉದ್ಯೋಗ ಆಕಾಂಕ್ಷಿಗಳಿಂದ 2022 ಹಾಗೂ 2023ನೇ ಸಾಲಿನಲ್ಲಿ ತಲಾ ₹20 ಲಕ್ಷದಂತೆ ಹಣ ಪಡೆದುಕೊಂಡಿದ್ದಾರೆ. ಬೆಂಗಳೂರು ಹಾಗೂ ವಿಜಯಪುರದಲ್ಲಿ ಆರೋಪಿಗಳು ನಗದು ಹಾಗೂ ಬ್ಯಾಂಕ್ ಖಾತೆಗಳ ಮೂಲಕ ಹಣ ಪಡೆದುಕೊಂಡಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ನಕಲಿ ತರಬೇತಿ: ‘ಉದ್ಯೋಗ ಆಕಾಂಕ್ಷಿಗಳಿಗೆ ಆರೋಪಿಗಳು ಆನ್‌ಲೈನ್ ಮೂಲಕ ನಕಲಿ ನೇಮಕಾತಿ ಪತ್ರವನ್ನು ಕಳುಹಿಸಿದ್ದರು. ಅಲ್ಲದೇ ಆಕಾಂಕ್ಷಿಗಳನ್ನು ಮುಂಬೈ ಹಾಗೂ ಉತ್ತರ ಪ್ರದೇಶದ ಕಾನ್ಪುರಕ್ಕೆ ಕರೆದೊಯ್ದು ಅಲ್ಲಿನ ಕಚೇರಿಯೊಂದರಲ್ಲಿ ನಕಲಿ ತರಬೇತಿ ಕೊಡಿಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

ಜೀವ ಬೆದರಿಕೆ: ‘ನೇಮಕಾತಿ ಆದೇಶ ಪತ್ರ ನಕಲಿ ಎಂಬುದು ಗೊತ್ತಾದ ಬಳಿಕ ಹಣ ವಾಪಸ್ ಮಾಡುವಂತೆ ಆರೋಪಿಗಳ ಬಳಿ ಮನವಿ ಮಾಡಿದ್ದೆವು. ಆಗ ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿದ್ದರು’ ಎಂದು ಉದ್ಯೋಗ ಆಕಾಂಕ್ಷಿಗಳ ದೂರಿನ ಪ್ರತಿ ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ವಿಚಾರಣೆಗೆ ಬರುವಂತೆ ನೋಟಿಸ್ ಜಾರಿಗೆ ನಿರ್ಧಾರ

ಖಾಸಗಿ ಕಂಪನಿಯ ಉದ್ಯೋಗಿ ಆತ್ಮಹತ್ಯೆ ಪ್ರಕರಣ: ಮಾರತ್ತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರತ್ತಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮಂಜುನಾಥ್ ಲೇಔಟ್‌ನಲ್ಲಿ ನೆಲಸಿದ್ದ ಉತ್ತರ ಪ್ರದೇಶದ ನಿವಾಸಿ ಅತುಲ್ ಸುಭಾಷ್(34) ಆತ್ಮಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಅತುಲ್ ಸಂಬಂಧಿಕರಿಗೆ ನೋಟಿಸ್ ಜಾರಿ ಮಾಡಲು ನಿರ್ಧರಿಸಿದ್ದಾರೆ.

‘ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಕೃತಕ ಬುದ್ಧಿಮತ್ತೆ ವಿಭಾಗದಲ್ಲಿ ಅತುಲ್ ಸುಭಾಷ್ ಅವರು ಕೆಲಸ ಮಾಡುತ್ತಿದ್ದರು. ಮಂಜುನಾಥ ಲೇಔಟ್‌ನ ಮುನ್ನೆಕೊಳ್ಳಾಲದ ಡಾಲ್ಫೀನಿಯಂ ರೆಸಿಡೆನ್ಸಿಯ ಮೂರನೇ ಮಹಡಿಯ ಫ್ಲ್ಯಾಟ್‌ನ ನಂ.: ಟಿ-06ನಲ್ಲಿ ನೆಲಸಿದ್ದ ಅವರು, ಸೋಮವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಮೃತ ಅತುಲ್ ಅವರ ಸಹೋದರ ಬಿಕಾಸ್‌ಕುಮಾರ್ ಅವರು, ‘ತನ್ನ ಸಹೋದರನ ಸಾವಿಗೆ ಆತನ ಪತ್ನಿ, ಪತ್ನಿಯ ತಾಯಿ, ಸಹೋದರ ಹಾಗೂ ಆಕೆಯ ಚಿಕ್ಕಪ್ಪ ಕಾರಣ’ ಎಂಬುದಾಗಿ ದೂರು ನೀಡಿದ್ದಾರೆ. ಅತುಲ್ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದರು. ಅಲ್ಲದೇ ಪ್ರಕರಣಗಳನ್ನು ಬಗೆಹರಿಸಿಕೊಳ್ಳಲು ₹3 ಕೋಟಿಗೆ ಬೇಡಿಕೆ ಇಟ್ಟಿದ್ದರು. ಇದರಿಂದ ಅತುಲ್ ಅವರು ಮಾನಸಿಕ ಹಾಗೂ ದೈಹಿಕವಾಗಿ ನೊಂದಿದ್ದರು. ನಾಲ್ವರ ಪ್ರಚೋದನೆಯಿಂದಲೇ ಸಹೋದರ ಮೃತಪಟ್ಟಿದ್ದಾರೆಂದು ನೀಡಿದ ದೂರು ಆಧರಿಸಿ ಆರೋಪಿಗಳ ವಿರುದ್ಧ ಬಿಎನ್‌ಎಸ್ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬಿಕಾಸ್‌ಕುಮಾರ್ ಅವರಿಂದ ಆರೋಪಿಗಳ ವಿಳಾಸ ಹಾಗೂ ಸಂಪರ್ಕ ಸಂಖ್ಯೆ ಪಡೆದುಕೊಳ್ಳಲಾಗಿದೆ. ಸಂಬಂಧಪಟ್ಟವರಿಗೆ ವಿಚಾರಣೆಗೆ ಬರುವಂತೆ ಸದ್ಯದಲ್ಲೇ ನೋಟಿಸ್ ಜಾರಿ ಮಾಡಲಾಗುವುದು’ ಎಂದು ತಿಳಿಸಿದರು.

‘ಅತುಲ್ 26 ಪುಟಗಳ ಮರಣ ಪತ್ರವನ್ನು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು. ಆತ್ಮಹತ್ಯೆಗೂ ಮುನ್ನ ಮರಣ ಪತ್ರವನ್ನೂ ಇ–ಮೇಲ್ ಮೂಲಕ ಸುಪ್ರೀಂ, ಹೈಕೋರ್ಟ್, ತಮ್ಮ ಕಚೇರಿ, ಕುಟುಂಬ ಸದಸ್ಯರಿಗೆ ಕಳುಹಿಸಿದ್ದರು. ಅತುಲ್ ಅವರು ಐದು ವರ್ಷಗಳ ಹಿಂದೆ ವಿವಾಹ ಆಗಿದ್ದರು. ಆರಂಭದಲ್ಲಿ ಉತ್ತರ ಪ್ರದೇಶದಲ್ಲೇ ದಂಪತಿ ನೆಲಸಿದ್ದರು. ಎರಡು ವರ್ಷದ ಹಿಂದೆ ಬೆಂಗಳೂರಿಗೆ ಬಂದಿದ್ದರು. ಈ ಮಧ್ಯೆ ಕೌಟುಂಬಿಕ ವಿಚಾರಕ್ಕೆ ಗಲಾಟೆ ಮಾಡಿಕೊಂಡು, ಪತ್ನಿ ಉತ್ತರ ಪ್ರದೇಶಕ್ಕೆ ವಾಪಸ್ ತೆರಳಿದ್ದರು’ ಎಂದು ಮೂಲಗಳು ಹೇಳಿವೆ.

ನೀರಿನ ಟ್ಯಾಂಕರ್: 51 ಪ್ರಕರಣ ದಾಖಲು

ಬೆಂಗಳೂರು: ಪೂರ್ವ ವಿಭಾಗದ ವೈಟ್‌ಫೀಲ್ಡ್ ಸಂಚಾರ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ನಿಯಮ ಉಲ್ಲಂಘಿಸಿದ್ದ ನೀರಿನ ಟ್ಯಾಂಕರ್ ಚಾಲಕರ ವಿರುದ್ಧ 51 ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಏಕಮುಖ ಸಂಚಾರದ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ವಾಹನ ಚಾಲನೆ ಮಾಡುತ್ತಿದ್ದ ನೀರಿನ ಟ್ಯಾಂಕರ್ ಚಾಲಕರ ವಿರುದ್ಧ 32 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

ಕರ್ಕಶ ಹಾರ್ನ್ ಬಳಸುತ್ತಿದ್ದ ನೀರಿನ ಟ್ಯಾಂಕರ್ ಚಾಲಕರ ವಿರುದ್ಧ 19 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಇವರಿಂದ ₹25 ಸಾವಿರ ದಂಡ ಸಂಗ್ರಹಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಸಂಚಾರ ನಿಯಮ ಉಲ್ಲಂಘಿಸಿದ ಇತರೆ ವಾಹನ ಚಾಲಕರ ವಿರುದ್ಧ 461 ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಡ್ಡಾದಿಡ್ಡಿ ಚಾಲನೆ, ಅತಿವೇಗದ ವಾಹನ ಸಂಚಾರ, ನಿಗದಿಗಿಂತ ಹೆಚ್ಚಿನ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದವರ ವಿರುದ್ಧ, ಮದ್ಯ ಸೇವಿಸಿ ಚಾಲನೆ, ಸೈಲೆನ್ಸರ್ ಮಾರ್ಪಾಡು, ಕರ್ಕಶ ಹಾರ್ನ್ ಅಳವಡಿಕೆ, ನಿಷೇಧಿತ ಸ್ಥಳದಲ್ಲಿ ವಾಹನ ನಿಲುಗಡೆ ಮಾಡಿದ್ದ ಹಾಗೂ ನಿರ್ಬಂಧಿತ ರಸ್ತೆಗಳಲ್ಲಿ ವಾಹನ ಸಂಚಾರ ನಡೆಸುತ್ತಿದ್ದವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ. ₹2.30 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಉದ್ಯಾನ, ಮೈದಾನ, ಕೆರೆ ಸ್ಥಿತಿಗತಿ ವರದಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ವಲಯ ವ್ಯಾಪ್ತಿಯ ಉದ್ಯಾನಗಳು, ಮೈದಾನಗಳು ಹಾಗೂ ಕೆರೆಗಳ ಸ್ಥಿತಿ-ಗತಿಯ ಕುರಿತಂತೆ ಒಂದು ತಿಂಗಳಲ್ಲಿ ವರದಿ ಸಲ್ಲಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ದಕ್ಷಿಣ ವಲಯ ವ್ಯಾಪ್ತಿಯಲ್ಲಿ ‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದ ನಂತರ ಅಧಿಕಾರಿಗಳಿಗೆ ಆದೇಶ ನೀಡಿದರು.

ಉದ್ಯಾನ, ಮೈದಾನ ಹಾಗೂ ಕೆರೆಗಳಿಗೆ ಸಂಬಂಧಿಸಿದಂತೆ ಪ್ರತಿ ಸ್ಥಳಕ್ಕೂ ಅಧಿಕಾರಿಗಳು ಖುದ್ದಾಗಿ ಭೇಟಿ ನಿಡಿ ಜಿಯೊ ಲೊಕೇಶನ್ ಸಹಿತ ಛಾಯಾಚಿತ್ರದ ವರದಿ ಸಲ್ಲಿಸಲು ಹೇಳಿದರು.

ಗಾಂಧಿ ಬಜಾರ್ ಮಾರುಕಟ್ಟೆಯಲ್ಲಿ ವ್ಯಾಪಾರಿಗಳಿಗಾಗಿ ಕಟ್ಟೆಗಳನ್ನು ನಿರ್ಮಾಣ ಮಾಡಲಾಗಿದ್ದು, ಅದನ್ನು ಹೊರತುಪಡಿ ಬೇರೆಡೆ ವ್ಯಾಪಾರ ಮಾಡುವವರನ್ನು ತೆರವುಗೊಳಿಸಬೇಕು ಎಂದರು.

ಚಿಕ್ಕಪೇಟೆ ವ್ಯಾಪ್ತಿಯಲ್ಲಿ ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆ ಹೆಚ್ಚಾಗಿರುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಸಮಸ್ಯೆಯಾಗುತ್ತಿದೆ ಎಂದು ಸ್ಥಳೀಯರು ದೂರಿದರು. ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ತುಷಾರ್ ಗಿರಿನಾಥ್ ಸೂಚಿಸಿದರು.

ಗುರಪ್ಪನ ಪಾಳ್ಯದಲ್ಲಿ ಸಮುದಾಯ ಭವನ ನಿರ್ಮಾಣವಾಗಿ ನಾಲ್ಕು ವರ್ಷಗಳಾಗಿವೆ. ಆದರೆ ಇನ್ನೂ ಸಮುದಾಯ ಭವನ ತೆರೆದಿಲ್ಲ ಎಂದು ಸ್ಥಳೀಯರು ದೂರಿದಾಗ, ‘ಬಾಕಿ ಕಾಮಗಾರಿಗೆ ಅಂದಾಜು ಪಟ್ಟಿ ಸಿದ್ಧಪಡಿಸಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು’ ಎಂದು ಅಧಿಕಾರಿಗಳಿಗೆ ಮುಖ್ಯ ಆಯುಕ್ತರು ಆದೇಶಿಸಿದರು.

ವಲಯ ಆಯುಕ್ತೆ ವಿನೋತ್ ಪ್ರಿಯಾ, ವಲಯ ಜಂಟಿ ಆಯುಕ್ತ ಶಿವಕುಮಾರ್, ಉಪ ಆಯುಕ್ತ ಡಿ.ಕೆ ಬಾಬು ಉಪಸ್ಥಿತರಿದ್ದರು.

ಪಾದಚಾರಿ ಮಾರ್ಗ ಒತ್ತುವರಿ ತೆರವು

ಯಲಹಂಕ ವಲಯದಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಯಿತು.

ವಲಯ ಆಯುಕ್ತ ಕರೀಗೌಡ ಸೂಚನೆಯಂತೆ ಕಾರ್ಯಾಚರಣೆ ನಡೆಸಿದ ಸಿಬ್ಬಂದಿ, ಬೀದಿಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸಿದರು.

ವಾರ್ಡ್ ನಂ.1 ಕೆಂಪೇಗೌಡ ವಾರ್ಡ್ ವ್ಯಾಪ್ತಿಯಲ್ಲಿ ಯಲಹಂಕ ರೈತರ ಸಂತೆ (ಜಕ್ಕೂರು ಮುಖ್ಯರಸ್ತೆ), ಬಿ.ಬಿ.ರಸ್ತೆ, ಸರ್ಕಾರಿ ಆಸ್ಪತ್ರೆ ರಸ್ತೆ, ಯಲಹಂಕ ಮತ್ತು ಡೌನ್ ಬಜಾರ್ ರಸ್ತೆಗಳಲ್ಲಿ ರಸ್ತೆಬದಿ ಮತ್ತು ಪಾದಚಾರಿ ಮಾರ್ಗಗಳಲ್ಲಿ ಅಂಗಡಿಗಳನ್ನು ಮಾರ್ಷಲ್‌ಗಳು ಹಾಗೂ ಪೊಲೀಸ್ ಸಿಬ್ಬಂದಿ ಸಹಯೋಗದೊಂದಿಗೆ ತೆರವುಗೊಳಿಸಲಾಯಿತು. ಅಂಗಡಿಯವರಿಗೆ, ದಂಡ ವಿಧಿಸಿ, ₹12 ಸಾವಿರ ವಸೂಲಿ ಮಾಡಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಬೆಂಗಳೂರು ದಕ್ಷಿಣ ಲೋಕಸಭೆ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರ ಕಚೇರಿ ಎದುರು ರೈತರು ಪ್ರತಿಭಟನೆ ನಡೆಸಿದರು

ಸ್ವಾತಂತ್ರ್ಯ ಉದ್ಯಾನದಲ್ಲಿ ಎಐಡಿಎಸ್‌ಒ ನೇತೃತ್ವದಲ್ಲಿ ಪ್ರತಿಭಟನೆ

ಎಸ್‌ಎಸ್‌ಪಿ ವಿದ್ಯಾರ್ಥಿ ವೇತನ ಬಿಡುಗಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಪಿ ವಿದ್ಯಾರ್ಥಿವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಎಐಡಿಎಸ್‌ಒ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

‘ಶೈಕ್ಷಣಿಕ ವರ್ಷ ಮುಗಿಯುತ್ತಿದ್ದರೂ ಎಂಬಿಎ, ಎಂಸಿಎ, ಎಂಟೆಕ್‌ನ ಏಳು ಸಾವಿರ ವಿದ್ಯಾರ್ಥಿಗಳಿಗೆ ₹ 35 ಸಾವಿರದಿಂದ ₹ 40 ಸಾವಿರ ವಿದ್ಯಾರ್ಥಿವೇತನ ಬಿಡುಗಡೆ ಆಗಿಲ್ಲ. ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಧಾರವಾಗಿರುವ ವಿದ್ಯಾರ್ಥಿ ವೇತನ ಪಡೆಯಲು ಹೋರಾಟ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಸರ್ಕಾರಕ್ಕೆ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇಲ್ಲ’ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಐಡಿಎಸ್‌ಒ ಉಪಾಧ್ಯಕ್ಷ ಅಭಯಾ ದಿವಾಕರ್ ಮಾತನಾಡಿ, ‘ವಿದ್ಯಾರ್ಥಿಗಳು ಹಲವು ಬಾರಿ ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಿದರೂ ಸರ್ಕಾರ ಎಸ್‌ಎಸ್‌ಪಿ ವಿದ್ಯಾರ್ಥಿವೇತನದ ಸಮಸ್ಯೆ ಸರಿಪಡಿಸುತ್ತಿಲ್ಲ. ಪದವಿ, ಸ್ನಾತಕೋತ್ತರ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ’ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷೆ ಅಪೂರ್ವ, ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್ ಕುಮಾರ, ಸದಸ್ಯರಾದ ನವಾಜ್, ಸ್ನೇಹ, ರಕ್ಷು, ವಿದ್ಯಾರ್ಥಿ ಪ್ರತಿನಿಧಿಗಳಾದ ಗಿರೀಶ್, ಭರತ್ ಪಾಲ್ಗೊಂಡಿದ್ದರು.

ಎಸ್‌ಎಸ್‌ಪಿ ವಿದ್ಯಾರ್ಥಿ ವೇತನ ಬಿಡುಗಡೆಗೊಳಿಸುವಂತೆ ಆಗ್ರಹಿಸಿ ಎಐಡಿಎಸ್‌ಒ ನೇತೃತ್ವದಲ್ಲಿ ವಿದ್ಯಾರ್ಥಿಗಳು ಮಂಗಳವಾರ ಪ್ರತಿಭಟಿಸಿದರು — ಪ್ರಜಾವಾಣಿ ಚಿತ್ರ

ರೈತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಪ್ರತಿಭಟನೆ

ರೈತರ ಸಾಲ ಮನ್ನಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಸತ್ ಅಧಿವೇಶನದಲ್ಲಿ ರೈತರ ಸಮಸ್ಯೆಗಳ ಕುರಿತು ಚರ್ಚಿಸಿ, ಆ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು’ ಎಂದು ಆಗ್ರಹಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ರೈತರು ಬೆಂಗಳೂರು ದಕ್ಷಿಣ ಲೋಕಸಭೆ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ಬಳಿಕ ಸಂಸದರ ಕಚೇರಿ ಸಿಬ್ಬಂದಿಗೆ ಮನವಿ ಸಲ್ಲಿಸಿದರು.

ಎಲ್ಲಾ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಜಾರಿಗೆ ತರಬೇಕು. ಸ್ವಾಮಿನಾಥನ್ ವರದಿ ಅನ್ವಯ ಕನಿಷ್ಠ ಬೆಂಬಲ ಬೆಲೆ ನಿಗದಿ ಪಡಿಸಬೇಕು. ರೈತರ ಸಾಲ ಸಂಪೂರ್ಣ ಮನ್ನಾ ಮಾಡಬೇಕು ಎಂದು ಆಗ್ರಹಿಸಿದರು.

‘60 ವರ್ಷ ತುಂಬಿದ ರೈತರಿಗೆ ಪಿಂಚಣಿ ಯೋಜನೆ ಜಾರಿಗೆ ಬರಬೇಕು. ರೈತರಿಗಾಗಿ ಹೋರಾಟ ಮಾಡಿದ ರೈತರ ಮೇಲಿರುವ ಎಲ್ಲಾ ಪ್ರಕರಣಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಾಪಸ್ ಪಡೆಯಬೇಕು’ ಎಂದೂ ರೈತರು ಆಗ್ರಹಿಸಿದರು.

ಹರಿಯಾಣ ಭಾಗದಲ್ಲಿ ಚಳವಳಿ ನಡೆಸುತ್ತಿರುವ ರೈತರು, ಎರಡು ದಿನಗಳ ಹಿಂದೆ ದೆಹಲಿಗೆ ಕಾಲ್ನಡಿಗೆ ಮೂಲಕ ತೆರಳಲು ಬರುತ್ತಿದ್ದಾಗ ಪೊಲೀಸರು ಅವರನ್ನು ತಡೆದು ಅಶ್ರುವಾಯು ಸಿಡಿಸಿ ಜಲ ಫಿರಂಗಿ ಪ್ರಯೋಗಿಸಿದ್ದಾರೆ. ಇದರಿಂದ ಹಲವು ರೈತರು ಆಸ್ಪತ್ರೆ ಸೇರಿದ್ದಾರೆ. ರೈತರ ಮೇಲೆ ಪೊಲೀಸರು ದಬ್ಬಾಳಿಕೆ ನಡೆಸಿದ್ಧಾರೆ ಎಂದು ಆಕ್ರೋಶ ಹೊರಹಾಕಿದರು.

‘ನ.26ರಿಂದ ದೇಶದ ರೈತರ ಹಿತಕ್ಕಾಗಿ ಹೋರಾಡುತ್ತಿರುವ ದಲ್ಲೆವಾಲಾ ಅವರ ಉಪವಾಸ ಸತ್ಯಾಗ್ರಹ 14ನೇ ದಿನಕ್ಕೆ ಕಾಲಿಟ್ಟಿದೆ. ಅವರ ಪರಿಸ್ಥಿತಿ ಗಂಭೀರವಾಗಿದೆ. ಆದರೂ ಯಾವ ಸಂಸದರೂ ಅಧಿವೇಶನದಲ್ಲಿ ಈ ಬಗ್ಗೆ ಚರ್ಚಿಸುತ್ತಿಲ್ಲ. ಕೇಂದ್ರ ಸರ್ಕಾರ ಚಳವಳಿ ನಿರತರ ಜತೆಗೆ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಿ ರೈತ ಮುಖಂಡರ ಪ್ರಾಣ ಉಳಿಸಬೇಕು’ ಎಂದು ಮನವಿ ಮಾಡಿದರು.

ಸಂಸದರ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಆಪ್ತ ಕಾರ್ಯದರ್ಶಿ ಭಾನುಪ್ರಕಾಶ್ ಹಾಗೂ ಅರವಿಂದ್ ಅವರಿಗೆ ಒತ್ತಾಯ ಪತ್ರ ಸಲ್ಲಿಸಿದರು.

ಒಕ್ಕೂಟದ ರಾಜ್ಯ ಅಧ್ಯಕ್ಷ ಕುರುಬೂರು ಶಾಂತಕುಮಾರ್, ರಾಜ್ಯ ಸಂಘಟನಾ ಕಾರ್ಯದರ್ಶಿ ಹತ್ತಳ್ಳಿ ದೇವರಾಜು, ಧಾರಾವಾಡ ಜಿಲ್ಲಾ ಕಾರ್ಯದರ್ಶಿ ಪರಶುರಾಮ್ ಎತ್ತಿನಗುಡ್ಡ, ಮೈಸೂರು ಜಿಲ್ಲಾ ಅಧ್ಯಕ್ಷ ಪಿ.ಸೋಮಶೇಖರ್, ಕಾರ್ಯಾಧ್ಯಕ್ಷ ಕಿರಗಸೂರ ಶಂಕರ್, ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

'ಫೆಂಜಲ್' ಪರಿಣಾಮ: ಬೇಡಿಕೆಗೆ ತಕ್ಕಂತೆ ಪೂರೈಕೆ ಆಗದ ತರಕಾರಿ

ನುಗ್ಗೆಕಾಯಿ, ಬೆಳ್ಳುಳ್ಳಿ ಕೆ.ಜಿಗೆ ₹400!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೆಂಜಲ್ ಚಂಡಮಾರುತದ ಪ್ರಭಾವದಿಂದ ಇತ್ತೀಚೆಗೆ ಸುರಿದ ಮಳೆಯಿಂದ ತರಕಾರಿ ಬೆಳೆಗಳಿಗೆ ಹಾನಿಯಾಗಿದ್ದು, ತರಕಾರಿ ದರಗಳು ಹೆಚ್ಚಾಗಿವೆ. ಒಂದು ಕೆ.ಜಿ ನುಗ್ಗೆಕಾಯಿ ಹಾಗೂ ಬೆಳ್ಳುಳ್ಳಿ ₹400ರಂತೆ ಮಾರಾಟವಾಗುತ್ತಿವೆ.

ಬೆಂಗಳೂರು ನಗರಕ್ಕೆ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಂದ ತರಕಾರಿ ಪೂರೈಕೆ ಆಗುತ್ತದೆ. ಆದರೆ ಈ ಜಿಲ್ಲೆಗಳಲ್ಲಿ ಇತ್ತೀಚೆಗೆ ಸುರಿದ ಅಕಾಲಿಕ ಮಳೆಯಿಂದ ತರಕಾರಿ ಬೆಳೆಗಳು ನೆಲಕಚ್ಚಿವೆ. ಇದರಿಂದ ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಪೂರೈಕೆ ಆಗದ ಕಾರಣ ತರಕಾರಿ ದರಗಳು ಏರಿಕೆಯಾಗಿವೆ.

'ಮಾರುಕಟ್ಟೆಗೆ ಸ್ಥಳೀಯ ನುಗ್ಗೆಕಾಯಿ ಪೂರೈಕೆ ಆಗುತ್ತಿಲ್ಲ. ಮಹಾರಾಷ್ಟ್ರದಿಂದ ಪೂರೈಕೆ ಆಗುತ್ತಿದ್ದು, ಇದರ ಬೆಲೆ ದುಪ್ಪಟ್ಟಾಗಿದೆ. ವಾರದ ಹಿಂದೆ ಒಂದು ಕೆ.ಜಿಗೆ ₹600ರಂತೆ ಮಾರಾಟವಾಗುತ್ತಿತ್ತು. ಈಗ ₹400ರಂತೆ ಮಾರಾಟವಾಗುತ್ತಿದೆ' ಎಂದು ಕೆ.ಆರ್. ಮಾರುಕಟ್ಟೆಯ ತರಕಾರಿ ವ್ಯಾಪಾರಿ ಅಕ್ರಂ 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಂಗಳೂರು ನಗರದ ಮಾರುಕಟ್ಟೆಗೆ ತಮಿಳುನಾಡಿನಿಂದ ಹೆಚ್ಚು ತರಕಾರಿ ಪೂರೈಕೆ ಆಗುತ್ತದೆ. ಆದರೆ ಅಲ್ಲಿ ಚಂಡಮಾರುತದ ಪರಿಣಾಮ ಮಳೆ ಸುರಿದು ತರಕಾರಿ ಬೆಳೆಗಳು ಹಾಳಾಗಿವೆ. ಆದ ಕಾರಣ ಮಾರುಕಟ್ಟೆಗೆ ಮಹಾರಾಷ್ಟ್ರದಿಂದ ತರಕಾರಿ ಪೂರೈಕೆ ಆಗುತ್ತಿದೆ' ಎಂದು ವಿವರಿಸಿದರು.

'ಬೆಳ್ಳುಳ್ಳಿ ದರವೂ ಏರಿಕೆಯಾಗುತ್ತಲೇ ಇದ್ದು ಚಿಲ್ಲರೆ ಮಾರುಕಟ್ಟೆಯಲ್ಲಿ ಕೆಜಿಗೆ 400 ರಿಂದ 420ರವರೆಗೂ ಮುಟ್ಟಿದೆ. ಕಳೆದವಾರ ಕೆ.ಜಿಗೆ 320 ರಿಂದ 350ರವರೆಗೆ ದರ ಇತ್ತು. ಚಂಡಮಾರುತದ ಪ್ರಭಾವ ಹಾಗೂ ಹೊರ ರಾಜ್ಯಗಳಿಂದ ಪೂರೈಕೆ ಕುಸಿದಿರುವುದು ಬೆಳ್ಳುಳ್ಳಿ ಬೆಲೆ ಹೆಚ್ಚಾಗಲು ಪ್ರಮುಖ ಕಾರಣ. ಹೋಟೆಲ್, ರೆಸ್ಟೋರೆಂಟ್ ಸಹಿತ ಗೃಹ ಬಳಕೆಗೆ, ಮಸಾಲೆ ಪದಾರ್ಥಗಳ ತಯಾರಿಗೆ ಬೆಳ್ಳುಳ್ಳಿ ಪ್ರಧಾನವಾಗಿ ಬಳಸುವುದರಿಂದ ಬೇಡಿಕೆ ಹೆಚ್ಚಿದ್ದು ದರವೂ ಏರುಗತಿಯಲ್ಲಿ ಸಾಗಿದೆ' ಎಂದು ವ್ಯಾಪಾರಿಗಳು ತಿಳಿಸಿದರು.

ಸೊಪ್ಪಿನ ದರ (ಪ್ರತಿ ಕಟ್ಟಿಗೆ)

ಸೊಪ್ಪು	ಕಳೆದ ವಾರ	ಈ ವಾರ
ಕೊತ್ತಂಬರಿ	20	30
ಪುದೀನಾ	10	20
ಪಾಲಕ್	10	20
ಸಬ್ಬಕ್ಕಿ	15	20
ಮೆಂತೆ	10	20

ಕೆ.ಆರ್. ಮಾರುಕಟ್ಟೆಯ ದರ ಪ್ರತಿ ಕೆ.ಜಿಗೆ (₹ಗಳಲ್ಲಿ)

ತರಕಾರಿ	ಕಳೆದ ವಾರ	ಈ ವಾರ
ಕ್ಯಾರೆಟ್	60	60
ಕ್ಯಾಪ್ಸಿಕಮ್	70	80
ಈರುಳ್ಳಿ	40	60
ಬೀನ್ಸ್	100	60
ಟೊಮೆಟೊ	30	40
ಆಲೂಗಡ್ಡೆ	30	40
ಬೀಟ್‌ರೂಟ್	40	60
ಹಾಗಲಕಾಯಿ	60	60
ಬೂದುಗುಂಬಳ	40	40
ಹೀರೆಕಾಯಿ	60	60
ಮೆಣಸಿನಕಾಯಿ	80	80
ಬಟಾಣಿ	200	120
ಬೆಳ್ಳುಳ್ಳಿ	320	400
ನುಗ್ಗೆಕಾಯಿ	600	400

18ರಿಂದ ನೃತ್ಯ ಶಿಬಿರ

ಬೆಂಗಳೂರು: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಇದೇ 18 ರಿಂದ 20ರವರೆಗೆ ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ 'ಅಭಿನಯ ತರಬೇತಿ' ನೃತ್ಯ ಶಿಬಿರ ಹಮ್ಮಿಕೊಂಡಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗದ ಸಹಯೋಗದಲ್ಲಿ ನಡೆಯಲಿದೆ. 18 ವರ್ಷಗಳು ಮೇಲ್ಪಟ್ಟ ಹಾಗೂ ಶಾಸ್ತ್ರೀಯ ನೃತ್ಯದ 'ಸೀನಿಯರ್' ಪರೀಕ್ಷೆ ತೇರ್ಗಡೆ ಹೊಂದಿರುವ ಅಥವಾ ರಂಗ ಪ್ರವೇಶಿಸಿರುವ ಆಸಕ್ತರು ಅರ್ಜಿ ಸಲ್ಲಿಸಬೇಕಾಗಿದೆ. ಅರ್ಜಿಯಲ್ಲಿ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ನಮೂದಿಸಿ, ಜನನ ಪ್ರಮಾಣ ಪತ್ರ, ಸೀನಿಯರ್ ಪರೀಕ್ಷೆ ತೇರ್ಗಡೆ ಹೊಂದಿರುವ ಪ್ರಮಾಣ ಪತ್ರ ಅಥವಾ ರಂಗಪ್ರವೇಶದ ಆಹ್ವಾನ ಪತ್ರಿಕೆಯೊಂದಿಗೆ ಡಿ. 16ರೊಳಗೆ ಅರ್ಜಿ ಸಲ್ಲಿಸಬೇಕು.

ಭರ್ತಿ ಮಾಡಿದ ಅರ್ಜಿಯನ್ನು ಮೊಬೈಲ್ ಸಂಖ್ಯೆ 9535026433ಕ್ಕೆ ವಾಟ್ಸ್‌ಅಪ್ ಮಾಡಬಹುದಾಗಿದೆ.

ಕೆಎಸ್‌ಎಲ್‌ಟಿಎ ಏಷ್ಯನ್ ಜೂನಿಯರ್ ಟೆನಿಸ್ ಟೂರ್ನಿ

ರುನ್ಮಾನ್‌ಗೆ ರಿತೇಶ್ ಆಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಕ್ವಾಲಿಫೈಯರ್ ಆಟಗಾರ ರಿತೀಶ್ ಅಭಿನವ್ ಎ.ಎಸ್. ಅವರು ಇಲ್ಲಿನ ಕೆಎಸ್‌ಎಲ್‌ಟಿಎ ಏಷ್ಯನ್ ಜೂನಿಯರ್ (14 ವರ್ಷದೊಳಗಿನವರ) ಟೆನಿಸ್ ಟೂರ್ನಿಯ ಬಾಲಕರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ರುನ್ಮಾನ್ ಎಂ. ಮಹೇಶ್‌ಗೆ ಆಘಾತ ನೀಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ನಗರದ ಕೆಎಸ್‌ಎಲ್‌ಟಿಎ ಟೆನಿಸ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಎರಡನೇ ಸುತ್ತಿನ ಟೆನಿಸ್ ಪಂದ್ಯದಲ್ಲಿ ತಮಿಳುನಾಡಿನ ರಿತೀಶ್ 6-1, 6-3ರಿಂದ ರುನ್ಮಾನ್ ಅವರನ್ನು ಮಣಿಸಿದರು.

ಎರಡು ತಿಂಗಳ ಹಿಂದೆ ಮುಂಗೈಗೆ ಗಾಯಗೊಂಡಿದ್ದ ರುನ್ಮಾನ್, ಚೇತರಿಸಿಕೊಂಡು ಸ್ಪರ್ಧಾಕಣಕ್ಕೆ ಇಳಿಸಿದ್ದರು. ಇನ್ನು ಅವರು ಒಂಬತ್ತರಿಂದ 16ನೇ ಸ್ಥಾನಕ್ಕಾಗಿ ಹೋರಾಡಲಿದ್ದಾರೆ.

ಅರ್ಜುನ್ ಮಣಿಕಂದನ್ ಆಟದ ವೈಖರಿ – ಪ್ರಜಾವಾಣಿ ಚಿತ್ರ

ಎರಡನೇ ಶ್ರೇಯಾಂಕದ ಮಾಧವ್ ದಧಿಚ್ ಮತ್ತು ಮೂರನೇ ಶ್ರೇಯಾಂಕದ ಸಂಜಯ್ ಗಿರೀಶ್ ಕುಮಾರ್ ಅವರು ಎಂಟರ ಘಟ್ಟಕ್ಕೆ ಮುನ್ನಡೆದರು.

ಮಾಧವ್ 6-0, 6-4ರಿಂದ ಸುಜ್ಯೈ ಪೋತುಲ ವಿರುದ್ಧ; ಸಂಜಯ್ 6-3, 6-4ರಿಂದ ಧನುಷ್ ಎಂ. ವಿರುದ್ಧ ಜಯ ಸಾಧಿಸಿದರು. ಅರ್ಜುನ್ ಮಣಿಕಂದನ್ 6-4, 6-2ರಿಂದ ಯಶ್ ಕುಮಾರ್ ಅವರನ್ನು ಮಣಿಸಿ ಮೂರನೇ ಸುತ್ತು ಪ್ರವೇಶಿಸಿದರು.

ಬಾಲಕಿಯರ ವಿಭಾಗದಲ್ಲಿ ಏಳನೇ ಶ್ರೇಯಾಂಕದ ಧೃತಿ ಸಾಂದ್ರಾ ಬಂಟುಪಳ್ಳಿ ಹೊರತುಪಡಿಸಿ ಉಳಿದ ಶ್ರೇಯಾಂಕಿತ ಆಟಗಾರ್ತಿಯರು ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಧೃತಿ 2-6, 5-7ರಿಂದ ಕೃಷಿಕಾ ಗೌತಮ್‌ಗೆ ಶರಣಾದರು.

ಕ್ರೀಡೆ ಶಿಕ್ಷಣದ ಭಾಗವಾಗುವುದು ಮುಖ್ಯ: ಅಗಾಸ್ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು (ಪಿಟಿಐ): ಕ್ರೀಡೆಯು ಮಕ್ಕಳಿಗೆ ಸೋಲಿನ ಪಾಠವನ್ನು ಕಲಿಸುತ್ತದೆ ಎಂದಿರುವ ಅಮೆರಿಕದ ಟೆನಿಸ್ ದಿಗ್ಗಜ ಆ್ಯಂಡ್ರೆ ಅಗಾಸ್ಸಿ, ಕ್ರೀಡೆಯನ್ನು ಶಿಕ್ಷಣದ ಭಾಗವಾಗಿಸುವ ಮಹತ್ವದ ಬಗ್ಗೆ ಒತ್ತಿ ಹೇಳಿದ್ದಾರೆ.

'ಶ್ರೇಷ್ಠತೆಯ ಬುನಾದಿಯಾಗಿ ಕ್ರೀಡೆ ಮತ್ತು ಶಿಕ್ಷಣದ ಭವಿಷ್ಯ' ಎಂಬ ವಿಷಯದ ಮೇಲೆ ಮಂಗಳವಾರ ನಡೆದ ಟಿಐಇ ಜಾಗತಿಕ ಶೃಂಗಸಭೆಯಲ್ಲಿ ಅಗಾಸ್ಸಿ ಮಾತನಾಡಿದರು.

'ನಾವು ವಿಫಲರಾದಾಗಲೂ ಮರುದಿನ ಮತ್ತೆ ಆಡಬೇಕಾಗುತ್ತದೆ. ಕ್ರೀಡೆಯು ನಮಗೆ ಗೆಲುವಿನ ಕಡೆ ಗಮನ ಕೇಂದ್ರೀಕರಿಸುವುದನ್ನು ಕಲಿಸುತ್ತದೆ. ಸೋಲು ನಮ್ಮನ್ನು ಆ ಗುರಿಯಿಂದ ವಿಮುಖರಾಗಿಸುತ್ತದೆ. ಗೆಲುವಿನ ಕಡೆ ಯೋಚಿಸುವ ಅಗತ್ಯ ಮೂಡಿಸುತ್ತದೆ. ನಾವು ಹೇಗೆ ಸುಧಾರಿಸಿಕೊಳ್ಳಬೇಕು ಎಂದು ಯೋಚಿಸುವಂತೆ ಮಾಡುತ್ತದೆ' ಎಂದು ಹಿರಿಯ ಟೆನಿಸಿಗ ವಿಶ್ಲೇಷಿಸಿದರು.



ಆ್ಯಂಡ್ರೆ ಅಗಾಸ್ಸಿ

ಅವಕಾಶವಂಚಿತ ಮಕ್ಕಳ ಶಿಕ್ಷಣಕ್ಕಾಗಿ 2001ರಿಂದ ವೆಚ್ಚ ಮಾಡುತ್ತಿರುವ ಅಗಾಸ್ಸಿ, 'ಅಮೆರಿಕದಲ್ಲಿ 130 ಶಾಲೆಗಳನ್ನು ಆರಂಭಿಸಲು ನಾನು ನೆರವಾದೆ. ಈ ಶಾಲೆಗಳಲ್ಲಿ 80,000 ಮಕ್ಕಳು ಕಲಿಯುತ್ತಿದ್ದಾರೆ' ಎಂದು ಹೇಳಿದರು.

ಟೆನಿಸ್ ತಮಗೆ ಜೀವನ ಪಾಠ ಕಲಿಸಿತು ಎಂದೂ ಹೇಳಿದರು. 'ಕ್ರೀಡೆಯು ಸಮಸ್ಯೆ ಪರಿಹಾರಕ್ಕೆ ಸಂಬಂಧಿಸಿದ್ದು. ಟೆನಿಸ್ ನನಗೆ ನನ್ನ ಗುರಿಯೆಡೆಗೆ ಸಾಗಲು, ನನಗೆ ಎದುರಾದ ಸಮಸ್ಯೆ ಪರಿಹರಿಸಲು ನೆರವಾಯಿತು' ಎಂದರು.

ತಮ್ಮ ಬಂಡಾಯ ಮನೋಭಾವದ ಬಗ್ಗೆ ಪ್ರಸ್ತಾಪಿಸಿದ ಅಗಾಸ್ಸಿ 'ನಾನು ಟೀಕೆಗಳನ್ನೆದುರಿಸಿದ್ದೆ. ಅದರಿಂದಾಗಿಯೇ ಇಂದು ಈ ಹಂತ ತಲುಪಲು ಸಾಧ್ಯವಾಯಿತು. ಟೀಕೆ, ಖಂಡನೆಗಳು ವ್ಯಕ್ತಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇವು ಅಂತಿಮವಾಗಿ ನಮಗೆ ವಿನಯವಂತಿಕೆಯನ್ನೂ ಕಲಿಸುತ್ತದೆ' ಎಂದರು.

'ಮ್ಯಾರಥಾನ್ ಮೈಂಡ್‌ಸೆಟ್' ಹೆಸರಿನ ಈ ಸಭೆಯಲ್ಲಿ ಆಕಾಶ್ ಎಜುಕೇಷನಲ್ ಸರ್ವಿಸಸ್ ಲಿಮಿಟೆಡ್‌ನ ಸಹ ಸ್ಥಾಪಕ ಆಕಾಶ್ ಚೌಧರಿ ಅವರೂ ಮಾತನಾಡಿದರು.

ರೈತ ಉತ್ಪಾದಕ ಸಂಸ್ಥೆಯಿಂದ ನಿರುಪಯುಕ್ತ ಮರಗಳ ಮೌಲ್ಯವರ್ಧನೆ

ತೆಂಗಿನ ಮರ ಕಡಿಯಲು 18 ಸಾವಿರ ಅರ್ಜಿ

● ಸಂಧ್ಯಾ ಹೆಗಡೆ

ಮಂಗಳೂರು: ಒಣ, ನಿರುಪಯುಕ್ತ ತೆಂಗಿನ ಮರಗಳನ್ನು ಖರೀದಿಸಿ ಮೌಲ್ಯವರ್ಧನೆ ಮಾಡುವ ದಕ್ಷಿಣ ಕನ್ನಡ ತೆಂಗು ರೈತ ಉತ್ಪಾದಕರ ಸಂಸ್ಥೆಗೆ, ಮರ ಕಡಿಯಲು ಬೇಡಿಕೆ ಇಟ್ಟು ರೈತರಿಂದ 18 ಸಾವಿರಕ್ಕೂ ಹೆಚ್ಚು ಅರ್ಜಿ ಸಲ್ಲಿಕೆಯಾಗಿವೆ.

ಆರು ತಿಂಗಳಲ್ಲಿ ಸಂಸ್ಥೆಯು ಸುಮಾರು 2,000 ತೆಂಗಿನ ಮರಗಳನ್ನು ರೈತರಿಂದ ಖರೀದಿಸಿದ್ದು, ಅದರ ತಿರುಳು ಬಳಸಿ ವಿವಿಧ ಉತ್ಪನ್ನಗಳನ್ನು ತಯಾರಿಸಿದೆ. ಪೀಠೋಪಕರಣ, ಆಟಿಕೆ, ಅಡುಗೆಮನೆ ಸಾಮಗ್ರಿ ಮಾರುಕಟ್ಟೆ ಪ್ರವೇಶಿಸಿವೆ.

'ಕಲ್ಪವೃಕ್ಷದ ಜೊತೆ ಜನರಿಗೆ ಭಾವನಾತ್ಮಕ ಸಂಗತಿಗಳು ಬೆಸೆದು ಕೊಂಡಿವೆ. ಹೀಗಾಗಿ, ಅನೇಕರು ಒಣಗಿದ ಅಥವಾ ನಿರುಪಯುಕ್ತ ತೆಂಗಿನ ಮರಗಳನ್ನು ತೋಟದಿಂದ ತೆರವುಗೊಳಿಸಲು ಹಿಂದೇಟು ಹಾಕುತ್ತಾರೆ. ಜೊತೆಗೆ, ತೋಟದ ನಡುವಿನಿಂದ ಒಣ ಮರ ತೆರವುಗೊಳಿಸುವುದೂ ಅವರಿಗೆ ಸವಾಲು. ಅಂತಹ ಮರಗಳನ್ನು ನಾವು ಅವರ ಮನೆ ಬಾಗಿಲಿಗೇ ಹೋಗಿ ಖರೀದಿಸುತ್ತಿದ್ದೇವೆ. ಸಂಸ್ಥೆಯು 20 ಸಾವಿರ ಸದಸ್ಯರನ್ನು ಹೊಂದಿದ್ದು, ಅರ್ಜಿ ಸಲ್ಲಿಸಿದವರಲ್ಲಿ ಸದಸ್ಯರೇ ಹೆಚ್ಚಿನವರು' ಎನ್ನುತ್ತಾರೆ ವಿಟ್ಲದಲ್ಲಿ ಕೇಂದ್ರ ಕಚೇರಿ ಹೊಂದಿರುವ ಸಂಸ್ಥೆಯ ಅಧ್ಯಕ್ಷ ಕುಸುಮಾಧರ ಎಸ್.ಕೆ.

ಒಣ ತೆಂಗಿನ ಮರ ಕಟ್ಟಿಗೆ ಬಳಸಿ ತಯಾರಿಸಿದ ಮೊಬೈಲ್ ಫೋನ್ ಸ್ಟ್ಯಾಂಡ್ ಮತ್ತು ತೆಂಗಿನ ಮರವನ್ನು ಕಚ್ಚಾವಸ್ತುವಾಗಿ ಬಳಸಿ ತಯಾರಿಸಿದ ಗೋಡೆ ಗಡಿಯಾರ

'ಗುಣಮಟ್ಟ ಆಧರಿಸಿ ಒಂದು ಮರಕ್ಕೆ ಗರಿಷ್ಠ ₹2,000 ದರ ನೀಡಲಾಗುತ್ತದೆ. ಸಿಡಿಲು ಬಡಿದು ಚೆಂಡೆ ಒಣಗಿಸಿದ ಮರಗಳನ್ನು ಸಹ ಖರೀದಿಸಲಾಗುತ್ತದೆ. ಕಾರ್ಮಿಕರ ಅಲಭ್ಯತೆ ಇದ್ದಲ್ಲಿ, ಸಂಸ್ಥೆಯೇ ಈ ಹೊಣೆ ನಿರ್ವಹಿಸುತ್ತದೆ. ಆದರೆ, ಅದರ ವೆಚ್ಚವನ್ನು ಮರದ ಮಾಲೀಕರು ಭರಿಸಬೇಕಾಗುತ್ತದೆ. ಒಂದು ತೆಂಗಿನ ಮರ ಕಡಿದರೆ ಒಂದು ಗಿಡ ನೆಡುವುದನ್ನು ಕಡ್ಡಾಯಗೊಳಿಸಿದ್ದೇವೆ. ಸಿಪಿಸಿಆರ್‌ಐ ಪ್ರಮಾಣೀಕರಿಸಿದ ಸಸಿಯನ್ನು ನಾವು ಉಚಿತವಾಗಿ ಅವರಿಗೆ ಒದಗಿಸುತ್ತೇವೆ' ಎನ್ನುತ್ತಾರೆ ಅವರು.

ಸಂಸ್ಕರಿಸಿದ ಮೇಲೆ ಒಂದು ಮರದಿಂದ ಶೇ 50ರಷ್ಟು ಕಟ್ಟಿಗೆ ಮಾತ್ರ ಬಳಕೆಗೆ ಸಿಗುತ್ತದೆ. ಸಂಗ್ರಹಿಸಿದ ಮರಗಳನ್ನು ದಾಸ್ತಾನು ಮಾಡಲು ಜಾಗದ ಅಭಾವ ಇದ್ದು, ಕಂಪನಿ ಹೊಸ ಘಟಕ ಪ್ರಾರಂಭಿಸಲು ಸಿದ್ಧತೆ ನಡೆಸಿದೆ. ಆ ನಂತರದ ದಿನಗಳಲ್ಲಿ ಅರ್ಜಿ ಸಲ್ಲಿಸಿದ ರೈತರಿಂದ ಹೆಚ್ಚು ಮರ ಖರೀದಿಸಿ, ತಯಾರಿಕೆ ಹೆಚ್ಚಳಕ್ಕೆ ಯೋಚಿಸಲಾಗಿದೆ. ಆನ್‌ಲೈನ್ ಮಾರುಕಟ್ಟೆ ಪ್ರವೇಶಿಸುವ ಯೋಜನೆಯೂ ಇದೆ. ದಕ್ಷಿಣ ಕನ್ನಡ, ಉಡುಪಿ ಭಾಗಗಳ ರೈತರ ಅರ್ಜಿ ಹೆಚ್ಚಿದ್ದು, ಹಾಸನ, ಮೈಸೂರು, ರಾಜ್ಯದ ಬೇರೆ ಜಿಲ್ಲೆಗಳ ಅರ್ಜಿಗಳೂ ಇವೆ. ಪ್ಲೈವುಡ್‌ಗೆ ಪರ್ಯಾಯವಾಗಿ ತೆಂಗಿನ ಮರದ ಕಟ್ಟಿಗೆ ಬಳಸಲು ಪ್ರಯೋಗಗಳು ನಡೆಯುತ್ತಿವೆ. ತೆಂಗಿನ ಕಟ್ಟಿಗೆ ಗಟ್ಟಿ ಮುಟ್ಟಾಗಿದ್ದು, ಮನೆಯ ಜಂತಿಗೆ ಇದರ ಬಳಕೆ ರೂಢಿಯಲ್ಲಿದೆ ಎಂದು ಸಂಸ್ಥೆಯ ಮುಖ್ಯ ಸಲಹೆಗಾರ ಯತೀಶ್ ಕೆ.ಎಸ್. 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ವಿಹಾರ ನೌಕೆ 'ಸಿಲ್ವರ್ ವಿಸ್ಪರ್'ಗೆ ಸ್ವಾಗತ

ಪ್ರಜಾವಾಣಿ ವಾರ್ತೆ

ಮಂಗಳೂರು: ಮುಂಬೈನಿಂದ 299 ಪ್ರಯಾಣಿಕರನ್ನು ಕರೆತಂದ ಈ ಋತುವಿನ ಮೊದಲ ವಿಹಾರ ನೌಕೆ 'ಎಂಎಸ್ ಸಿಲ್ವರ್ ವಿಸ್ಪರ್' ಅನ್ನು ನವ ಮಂಗಳೂರು ಬಂದರು ಪ್ರಾಧಿಕಾರದಲ್ಲಿ ಸ್ವಾಗತಿಸಲಾಯಿತು.

ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಅವರು ಹಡಗಿನ ಕ್ಯಾಪ್ಟನ್‌ಗೆ ಸ್ಮರಣಿಕೆ ನೀಡಿ ಸ್ವಾಗತಿಸಿದರು. ಎನ್‌ಎಂಪಿಎ ಉಪಾಧ್ಯಕ್ಷೆ ಎಸ್. ಶಾಂತಿ ಇದ್ದರು. ಭರತನಾಟ್ಯ, ಸ್ಥಳೀಯ ಸಾಂಸ್ಕೃತಿಕ ಶ್ರೀಮಂತ ಪರಂಪರೆಯನ್ನು ಕಂಡು ಪ್ರಯಾಣಿಕರು ಪುಳಕಗೊಂಡರು. ನಂತರ ಮೂಡುಬಿದಿರೆಯ ಸಾವಿರ ಕಂಬಗಳ ದೇವಾಲಯ, ಕದ್ರಿ ಮಂಜುನಾಥ ದೇವಸ್ಥಾನ, ಸೇಂಟ್ ಅಲೋಶಿಯಸ್ ಚಾಪೆಲ್, ಪಿಲಿಕುಳದ ಕುಶಲಕರ್ಮಿಗಳ ಗ್ರಾಮಗಳಿಗೆ ಅವರು ಭೇಟಿ ನೀಡಿದರು. ಸಿಲ್ವರ್ ವಿಸ್ಪರ್ ಹಡಗು 186 ಮೀಟರ್ ಉದ್ದ, 6.20 ಮೀಟರ್ ಡ್ರಾಫ್ಟ್ ಮತ್ತು 28,258 ಟನ್ ತೂಕ ಹೊಂದಿದೆ. ಅಂತರರಾಷ್ಟ್ರೀಯ ಪ್ರವಾಸ ನಡೆಸಲಿರುವ ಈ ಹಡಗು, ಕೇಪ್‌ಟೌನ್, ಮುಂಬೈ, ಮಂಗಳೂರು, ಕೊಲಂಬೊ ಮತ್ತು ಅದರಾಚೆ ಪ್ರಯಾಣಿಸುವವರಿಗೆ ವಿಶಿಷ್ಟ ಅನುಭವ ನೀಡುತ್ತದೆ ಎಂದು ಪ್ರಕಟಣೆ ತಿಳಿಸಿದೆ.



ಮುಂದಿನ ವರ್ಷ ಅಮೆರಿಕದಲ್ಲಿ ವಿಶ್ವ ಒಕ್ಕಲಿಗರ ಸಮ್ಮೇಳನ

ಬೆಂಗಳೂರು: ಅಮೆರಿಕ ಒಕ್ಕಲಿಗರ ಪರಿಷತ್ತಿನ ಪಶ್ಚಿಮ ಶಾಖೆ(ವಿಪಿಎ–ವೆಸ್ಟ್) ಸಂಘಟನೆಯು ಅಮೆರಿಕದ ಸ್ಯಾನ್ ಹೋಸೆ ನಗರದಲ್ಲಿ 2025ರ ಜುಲೈ 3 ರಿಂದ 5ರವರೆಗೆ ವಿಶ್ವ ಒಕ್ಕಲಿಗರ ಸಮ್ಮೇಳನವನ್ನು ಆಯೋಜಿಸಿದೆ.

ಸ್ಯಾನ್ ಹೋಸೆಯ ಮೆಕೆನ್ರಿ ಕನ್ವೆನ್ಷನ್ ಸೆಂಟರ್‌ನಲ್ಲಿ ಸಮ್ಮೇಳನ ನಡೆಯಲಿದೆ. ಸಮ್ಮೇಳನದಲ್ಲಿ ಸಮುದಾಯದ ಹಿರಿಯ ಸ್ವಾಮೀಜಿಗಳು, ಉದ್ಯಮಿಗಳು, ಕೇಂದ್ರ ಹಾಗೂ ರಾಜ್ಯದ ಸಚಿವರು, ರಾಜಕಾರಣಿಗಳು ಮತ್ತು ವಿವಿಧ ಕ್ಷೇತ್ರದ ಸಾಧಕರು ಭಾಗವಹಿಸಲಿದ್ದಾರೆ ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಉಳುತಾ ಸಾಗಿಹೆವು ಜಗವೆಂಬ ಹೊಲವನು' ಎಂಬ ಶೀರ್ಷಿಕೆಯಡಿ ನಡೆಯಲಿರುವ ಈ ಸಮ್ಮೇಳನದಲ್ಲಿ ಭಾರತ, ಅಮೆರಿಕ ದೇಶಗಳಷ್ಟೇ ಅಲ್ಲದೇ, ಯೂರೋಪ್, ಆಸ್ಟ್ರೇಲಿಯಾ, ಕೆನಡಾ, ದುಬೈ ಹಾಗೂ ವಿಶ್ವದ ಬೇರೆ ಬೇರೆ ಭಾಗದಲ್ಲಿರುವ ಒಂದು ಸಾವಿರಕ್ಕೂ ಹೆಚ್ಚು ಮಂದಿ ಸೇರುವ ನಿರೀಕ್ಷೆ ಇದೆ.

ಭಾರತ ಮತ್ತು ಅಮೆರಿಕದ ಕಲಾವಿದರಿಂದ ಸಾಂಸ್ಕೃತಿಕ ಉತ್ಸವ, ಮನರಂಜನೆ ಕಾರ್ಯಕ್ರಮಗಳು ನಡೆಯಲಿವೆ. ಸಮ್ಮೇಳನದಲ್ಲಿ ಭಾಗವಹಿಸಲು ಆಸಕ್ತರು ಹೆಚ್ಚಿನ ವಿವರಗಳಿಗೆ ಭೇಟಿ ನೀಡಿ https://myvpa.org/

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸಿದರು. ಪ್ರಜಾವಾಣಿ ಚಿತ್ರ

ಅದಾನಿ ಪ್ರಕರಣ: ಜೆಪಿಸಿ ರಚನೆಗೆ ಸಿಪಿಐ ಆಗ್ರಹ

'ಮಣಿಪುರದಲ್ಲಿ ಶಾಂತಿ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ ಗೌತಮ್ ಅದಾನಿ ಮೇಲಿನ ಲಂಚ ಪ್ರಕರಣದ ತನಿಖೆಯನ್ನು ಜಂಟಿ ಸಂಸದೀಯ ಸಮಿತಿ (ಜೆಪಿಸಿ)ಗೆ ಒಪ್ಪಿಸಬೇಕು, ಮಣಿಪುರದಲ್ಲಿ ಶಾಂತಿ ಸ್ಥಾಪಿಸಬೇಕು ಎಂದು ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷದ (ಸಿಪಿಐ) ಕಾರ್ಯಕರ್ತರು ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

'ದೇಶದಲ್ಲಿ ರೈತರು, ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮುಖ್ಯ ನೀಡದೆ ಉದ್ಯಮಿಗಳಾದ ಅದಾನಿ, ಅಂಬಾನಿಯಂತಹ ಬಂಡವಾಳಶಾಹಿಗಳ ಹಿತಾಸಕ್ತಿಗಾಗಿಯೇ ಅಧಿಕಾರ ಬಳಕೆಯಾಗುತ್ತಿದೆ. ಸೋಲಾರ್ ವಿದ್ಯುತ್ ಉತ್ಪಾದನೆ ಮತ್ತು ಮಾರಾಟದ ಗುತ್ತಿಗೆ ಪಡೆಯಲು ಸಾವಿರಾರು ಕೋಟಿ ರೂಪಾಯಿ ಲಂಚವನ್ನು ಅದಾನಿ ಸಮೂಹ ನೀಡಿದೆ ಎಂದು ನ್ಯೂಯಾರ್ಕ್‌ನ ಪೂರ್ವ ಜಿಲ್ಲಾ ನ್ಯಾಯಾಲಯದಲ್ಲಿ ಅಟಾರ್ನಿಯೇ ಆರೋಪಪಟ್ಟಿ ಸಲ್ಲಿಸಿದ್ದಾರೆ. ಇದರ ಸತ್ಯಾಸತ್ಯತೆ ಅರಿಯಲು ಜೆಪಿಸಿ ರಚಿಸಿ, ಸಮಗ್ರ ತನಿಖೆ ನಡೆಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವೆ ನಡೆಯುತ್ತಿರುವ ಜನಾಂಗೀಯ ಸಂಘರ್ಷವನ್ನು ತಡೆಯಬೇಕು. 60 ಸಾವಿರಕ್ಕೂ ಹೆಚ್ಚು ಜನರು ಶಿಬಿರದಲ್ಲಿ ತಂಗುವಂತಹ ಸ್ಥಿತಿ ನಿರ್ಮಾಣಗೊಂಡಿದೆ. ಮಣಿಪುರದಲ್ಲಿ ಶಾಂತಿ ನೆಲಸುವ ಕುರಿತು ಸಂಸತ್ತಿನಲ್ಲಿ ಚರ್ಚಿಸಬೇಕು ಹಾಗೂ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ ವಾಪಸ್ ಪಡೆಯಬೇಕು' ಎಂದು ಸಿಪಿಐ ಖಜಾಂಚಿ ಬಿ.ಗುರವಯ್ಯ ಆಗ್ರಹಿಸಿದರು.

'ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಬೆಲೆ ಏರಿಕೆ ಹಾಗೂ ನಿರುದ್ಯೋಗ ಸಮಸ್ಯೆಯು ಜನರ ಬದುಕನ್ನು ದುಸ್ತರಗೊಳಿಸಿದೆ. ಒಕ್ಕೂಟ ವ್ಯವಸ್ಥೆಗೆ ಮಾರಕವಾಗಲಿರುವ 'ಒಂದು ದೇಶ ಒಂದು ಚುನಾವಣೆ' ಎಂಬ ವಿಷಯವನ್ನು ಮುನ್ನೆಲೆಗೆ ತರುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಪಕ್ಷದ ಸಹ ಕಾರ್ಯದರ್ಶಿ ಬಿ.ಅಮ್ಜದ್, ಸಹ ಕಾರ್ಯದರ್ಶಿ ಎಸ್.ಹನುಮಂತಪ್ಪ ಪಾಲ್ಗೊಂಡಿದ್ದರು.

ಫಲಾನುಭವಿಗಳ ಸಂಖ್ಯೆ 6 ಲಕ್ಷ ಕುಸಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಕಳೆದ ಒಂದೂವರೆ ವರ್ಷದಲ್ಲಿ ಪ್ರಧಾನಮಂತ್ರಿ ಕೃಷಿ ಸಮ್ಮಾನ್ ಯೋಜನೆಯ (ಪಿಎಂ–ಕಿಸಾನ್) ಫಲಾನುಭವಿಗಳ ಸಂಖ್ಯೆ ಐದು ಲಕ್ಷದಿಂದ ಆರು ಲಕ್ಷದಷ್ಟು ಕುಸಿತವಾಗಿದೆ.

ಲೋಕಸಭೆಯಲ್ಲಿ ಮೈಸೂರು ಸಂಸದ ಯದುವೀರ್ ಒಡೆಯರ್ ಮಂಗಳವಾರ ಕೇಳಿದ ಪ್ರಶ್ನೆಗೆ ಕೃಷಿ ಖಾತೆ ರಾಜ್ಯ ಸಚಿವ ರಾಮನಾಥ್ ಠಾಕೂರ್ ನೀಡಿರುವ ಉತ್ತರದಲ್ಲಿ ಈ ಮಾಹಿತಿ ಇದೆ. 13ನೇ ಕಂತಿನವರೆಗೆ (2023ರ ಮಾರ್ಚ್) ರಾಜ್ಯದ ಫಲಾನುಭವಿಗಳ ಸಂಖ್ಯೆ 49 ಲಕ್ಷದಷ್ಟು ಇತ್ತು. 14ನೇ ಕಂತಿನಲ್ಲೂ ಫಲಾನುಭವಿಗಳ ಸಂಖ್ಯೆ 49.34 ಲಕ್ಷ ಆಗಿತ್ತು. 15ನೇ ಕಂತಿನಲ್ಲಿ ಈ ಸಂಖ್ಯೆ 43.78 ಲಕ್ಷಕ್ಕೆ ಕುಸಿಯಿತು. ಆ ಬಳಿಕ ಸಂಖ್ಯೆಯಲ್ಲಿ ಗಣನೀಯ ಏರಿಕೆ ಆಗಿಲ್ಲ.

ಪಿಎಂ– ಕಿಸಾನ್ ಯೋಜನೆಯಡಿ ಕೃಷಿಕರಿಗೆ ವಾರ್ಷಿಕ ₹6 ಸಾವಿರ ನೇರ ನಗದು ವರ್ಗಾವಣೆ ಮಾಡಲಾಗುತ್ತದೆ. ಈ ಮೊತ್ತವನ್ನು ₹8 ಸಾವಿರ ಅಥವಾ ₹12 ಸಾವಿರಕ್ಕೆ ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಕಿಸಾನ್ ಸಮ್ಮಾನ್

'ನರೇಗಾ: ಆಧಾರ್ ಜೋಡಣೆಯಾಗದ ಜಾಬ್ ಕಾರ್ಡ್ ರದ್ದು ಇಲ್ಲ'

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಆಧಾರ್ ಕಾರ್ಡ್ ಜೋಡಣೆಯಾಗದ ಕಾರ್ಮಿಕರ ಜಾಬ್ ಕಾರ್ಡ್‌ಗಳನ್ನು ರದ್ದುಪಡಿಸಿಲ್ಲ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಖಾತೆ ರಾಜ್ಯ ಸಚಿವ ಕಮಲೇಶ್ ಪಾಸ್ವಾನ್ ಸ್ಪಷ್ಟಪಡಿಸಿದರು.

ಲೋಕಸಭೆಯಲ್ಲಿ ರಾಯಚೂರು ಸಂಸದ ಜಿ.ಕುಮಾರ್ ನಾಯ್ಕ್ ಮಂಗಳವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, 'ಈ ವರ್ಷದ ಜನವರಿಯಿಂದ ಕಾರ್ಮಿಕರಿಗೆ ವೇತನ ಪಾವತಿಗೆ ಆಧಾರ್ ಕಡ್ಡಾಯಗೊಳಿಸಲಾಗಿದೆ. ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವ ಉದ್ದೇಶ ಇದರ ಹಿಂದಿದೆ' ಎಂದರು. 'ದೇಶದಲ್ಲಿ 2024–25ನೇ ಆರ್ಥಿಕ ವರ್ಷದಲ್ಲಿ 35.04 ಲಕ್ಷ ಜಾಬ್ ಕಾರ್ಡ್‌ಗಳನ್ನು ರದ್ದುಪಡಿಸಲಾಗಿದೆ. ನಕಲಿ ಜಾಬ್ ಕಾರ್ಡ್, ಗ್ರಾಮಸ್ಥರು ಕೆಲಸ ಮಾಡಲು ಇಷ್ಟ ಪಡದೇ ಇರುವುದು, ಕುಟುಂಬದವರು ಗ್ರಾಮದಿಂದ ಶಾಶ್ವತವಾಗಿ ಸ್ಥಳಾಂತರ ಆಗಿರುವುದು ಇದಕ್ಕೆ ಕಾರಣ. ಈ ವರ್ಷದಲ್ಲಿ ಹೊಸದಾಗಿ 36.21 ಲಕ್ಷ ಜಾಬ್ ಕಾರ್ಡ್‌ಗಳನ್ನು ವಿತರಿಸಲಾಗಿದೆ ಎಂದರು.



ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಶೇಖರ್ ಯಾದವ್ ವಿವಾದಿತ ಭಾಷಣ

ಮಾಹಿತಿ ಕೇಳಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಹೈಕೋರ್ಟ್ ನ್ಯಾಯಮೂರ್ತಿ ಶೇಖರ್ ಕುಮಾರ್ ಯಾದವ್ ಅವರು ವಿಶ್ವ ಹಿಂದೂ ಪರಿಷತ್ತಿನ (ವಿಎಚ್‌ಪಿ) ಕಾರ್ಯಕ್ರಮವೊಂದರಲ್ಲಿ ಆಡಿದ ಮಾತುಗಳ ಕುರಿತ ಮಾಧ್ಯಮ ವರದಿಗಳನ್ನು ಗಮನಿಸಿರುವ ಸುಪ್ರೀಂ ಕೋರ್ಟ್, ವಿವರ ನೀಡುವಂತೆ ಅಲಹಾಬಾದ್ ಹೈಕೋರ್ಟ್‌ಗೆ ಮಂಗಳವಾರ ಸೂಚನೆ ನೀಡಿದೆ.

ಯಾದವ್ ಅವರು ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ. ಏಕರೂಪ ನಾಗರಿಕ ಸಂಹಿತೆಯ ಮುಖ್ಯ ಉದ್ದೇಶ ಸಾಮಾಜಿಕ ಸೌಹಾರ್ದ, ಲಿಂಗ ಸಮಾನತೆ ಮತ್ತು ಧರ್ಮನಿರಪೇಕ್ಷತೆಯನ್ನು ಉತ್ತೇಜಿಸುವುದು ಎಂದು ನ್ಯಾಯಮೂರ್ತಿ ಯಾದವ್ ಅವರು, ವಿಎಚ್‌ಪಿಯ ಕಾನೂನು ವಿಭಾಗದ ಪ್ರಾಂತೀಯ ಸಮಾವೇಶದಲ್ಲಿ ಹೇಳಿದ್ದರು.

ಕಾರ್ಯಕ್ರಮ ನಡೆದ ಒಂದು ದಿನದ ನಂತರ, ಬಹುಸಂಖ್ಯಾತರಿಗೆ ಅನುಗುಣವಾಗಿ ಕಾನೂನು ಕೆಲಸ ಮಾಡಬೇಕು ಎಂಬುದು ಸೇರಿದಂತೆ ಕೆಲವು ಪ್ರಚೋದನಕಾರಿ ವಿಷಯಗಳ ಬಗ್ಗೆ ನ್ಯಾಯಮೂರ್ತಿಯವರು ಮಾತನಾಡಿದ್ದಾರೆ ಎನ್ನಲಾದ ವಿಡಿಯೊಗಳನ್ನು ವ್ಯಾಪಕವಾಗಿ ಹಂಚಿಕೊಳ್ಳಲಾಗಿತ್ತು. ಅವರು ಆಡಿದ್ದಾರೆ ಎನ್ನಲಾದ ಮಾತುಗಳನ್ನು ವಿರೋಧ ಪಕ್ಷಗಳು ಕಟುವಾಗಿ ಟೀಕಿಸಿದ್ದವು. ಈ ಮಾತುಗಳು ದ್ವೇಷ ಭಾಷಣಕ್ಕೆ ಸಮ ಎಂದು ಅವು ಹೇಳಿದ್ದವು.

ಆಲೋಕ್ ಕುಮಾರ್

ಇಂತಹ ಸಭೆಗಳು ಮುಂದುವರಿಯಲಿವೆ– ವಿಎಚ್‌ಪಿ:

ಲಖನೌ (ಪಿಟಿಐ): ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಶೇಖರ್ ಯಾದವ್ ಅವರು ವಿಶ್ವ ಹಿಂದೂ ಪರಿಷತ್ತಿನ (ವಿಎಚ್‌ಪಿ) ಕಾರ್ಯಕ್ರಮದಲ್ಲಿ ಭಾಷಣ ಮಾಡಿದ್ದರ ಬಗ್ಗೆ ವಿರೋಧ ಪಕ್ಷಗಳ ಟೀಕೆಗಳನ್ನು ತಳ್ಳಿಹಾಕಿರುವ ವಿಎಚ್‌ಪಿ ಮುಖ್ಯಸ್ಥ ಆಲೋಕ್ ಕುಮಾರ್, ಇಂತಹ 'ಜಾಗೃತಿ ಸಭೆ'ಗಳ ಆಯೋಜನೆಯನ್ನು ಮುಂದುವರಿಸಲಾಗುತ್ತದೆ ಎಂದು ಹೇಳಿದ್ದಾರೆ.

'ನ್ಯಾಯಮೂರ್ತಿಯವರನ್ನು ನಾವು ಏಕರೂಪ ನಾಗರಿಕ ಸಂಹಿತೆಯ ಬಗ್ಗೆ ಮಾತನಾಡಲು ಆಹ್ವಾನಿಸಿದ್ದೆವು. ನಾವು ನಿವೃತ್ತ ನ್ಯಾಯಮೂರ್ತಿಗಳ ಜೊತೆ ಕೆಲಸ ಮಾಡುತ್ತೇವೆ, ವಿಎಚ್‌ಪಿ ಮತ್ತು ಹಿಂದುತ್ವಕ್ಕಾಗಿ ಕೆಲಸ ಮಾಡಲು ಅವರನ್ನು ಆಹ್ವಾನಿಸುತ್ತೇವೆ. ಆದರೆ, ಹಾಲಿ ನ್ಯಾಯಮೂರ್ತಿಗಳು ವಿಎಚ್‌ಪಿಗಾಗಿ ಕೆಲಸ ಮಾಡಲಿ ಎಂದು ನಾವು ಬಯಸುವುದಿಲ್ಲ. ಕೆಲವು ಬಾರಿ ನಾವು ಏಕರೂಪ ನಾಗರಿಕ ಸಂಹಿತೆಯಂತಹ ವಿಷಯಗಳ ಬಗ್ಗೆ ನಮ್ಮಲ್ಲಿ ಅರಿವು ಮೂಡಿಸಲು ಅವರನ್ನು ಆಹ್ವಾನಿಸುತ್ತೇವೆ' ಎಂದು ಕುಮಾರ್ ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಬೇಕು ಎಂಬುದನ್ನು ಸಂವಿಧಾನದ ರಾಜ್ಯ ನಿರ್ದೇಶನ ತತ್ತ್ವಗಳು ಹೇಳುತ್ತವೆ ಎಂದು ನ್ಯಾಯಮೂರ್ತಿ ಹೇಳಿದ್ದರು. ನಿರ್ದೇಶನ ತತ್ತ್ವಗಳನ್ನು ಚುನಾಯಿತ ಪ್ರತಿನಿಧಿಗಳು ಪಾಲಿಸುವುದು ಅಪೇಕ್ಷಣೀಯ ಎಂದೂ ಅವರು ಹೇಳಿದ್ದರು. ಏಕರೂಪ ನಾಗರಿಕ ಸಂಹಿತೆಯೊಂದನ್ನು ಸರ್ಕಾರಗಳು ರೂಪಿಸಬೇಕು ಎಂದು ಸುಪ್ರೀಂ ಕೋರ್ಟ್ ಬೇರೆ ಬೇರೆ ತೀರ್ಪುಗಳಲ್ಲಿ ಹೇಳಿದ್ದುದನ್ನು ಅವರು ಉಲ್ಲೇಖಿಸಿದರು...' ಎಂದು ಕುಮಾರ್ ವಿವರಿಸಿದ್ದಾರೆ.

'ಬಹುಸಂಖ್ಯಾತರ' ವಿಚಾರವಾಗಿ ನ್ಯಾಯಮೂರ್ತಿ ನಿರ್ದಿಷ್ಟವಾಗಿ ಏನು ಹೇಳಿದ್ದಾರೆ ಎಂಬುದು ತಮಗೆ ಗೊತ್ತಿಲ್ಲ ಎಂದು ಕುಮಾರ್ ಸ್ಪಷ್ಟಪಡಿಸಿದರು. ಆದರೆ, ಕಾನೂನು ಕೆಲಸ ಮಾಡಬೇಕಿರುವುದು ಹೇಗೆ ಎಂಬ ವಿಚಾರದಲ್ಲಿ ಬಹುಸಂಖ್ಯಾತರ ಮಾತಿಗೆ ಬೆಲೆ ಇರಬೇಕು ಎಂಬ ಮಾತುಗಳನ್ನು ನ್ಯಾಯಮೂರ್ತಿ ಆಡಿದ್ದರು ಎಂದಾದರೂ, ಆ ಬಗ್ಗೆ ವಿಷಾದವೇನೂ ಇಲ್ಲ ಎಂದು ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಸಿಜೆಐಗೆ ಪ್ರಶಾಂತ್ ಭೂಷಣ್ ಪತ್ರ

ನ್ಯಾಯಮೂರ್ತಿ ಯಾದವ್ ಅವರ ನಡೆಯ ಬಗ್ಗೆ ಆಂತರಿಕ ವಿಚಾರಣೆ ನಡೆಸಬೇಕು ಎಂದು ಕೋರಿ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರಿಗೆ ಪತ್ರ ಬರೆದಿದ್ದಾರೆ.

ನ್ಯಾಯಮೂರ್ತಿ ಯಾದವ್ ಅವರು 2021ರಲ್ಲಿ ಗೋವುಗಳ ಬಗ್ಗೆ ಕೆಲವು ಮಾತುಗಳನ್ನು ಆಡಿದ್ದರು. 'ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಬೇಕು. ಗೋರಕ್ಷಣೆಯನ್ನು ಹಿಂದೂಗಳ ಮೂಲಭೂತ ಹಕ್ಕು ಎಂದು ಪರಿಗಣಿಸಬೇಕು. ಏಕೆಂದರೆ ದೇಶದ ಸಂಸ್ಕೃತಿ ಹಾಗೂ ನಂಬಿಕೆಗೆ ನೋವಾದಾಗ ದೇಶ ದುರ್ಬಲವಾಗುತ್ತದೆ' ಎಂದು ಅವರು ಹೇಳಿದ್ದರು.



ಪ್ರಶಾಂತ್ ಭೂಷಣ್

'ಸಂಸದೀಯ ಪ್ರಜಾಪ್ರಭುತ್ವಕ್ಕಾಗಿ ಹೋರಾಟ'

ಕಲಾಪವನ್ನು ಧನಕರ್ ಪಕ್ಷಪಾತಿಯಾಗಿ ನಡೆಸುತ್ತಿರುವ ಆರೋಪ

ನವದೆಹಲಿ (ಪಿಟಿಐ): ರಾಜ್ಯಸಭೆಯ ಸಭಾಪತಿಯೂ ಆಗಿರುವ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರ ಪಕ್ಷಪಾತಿ ನಿಲುವನ್ನು ವಿಪಕ್ಷಗಳು ಖಂಡಿಸಿವೆ.

ಅವರನ್ನು ಪದಚ್ಯುತಗೊಳಿಸುವ ಗೊತ್ತುವಳಿ ಮಂಡಿಸಲು ವಿರೋಧ ಪಕ್ಷಗಳು ಮಂಗಳವಾರ ನೋಟಿಸ್ ನೀಡಿರುವ ಕುರಿತು ಕಾಂಗ್ರೆಸ್‌ವಕ್ತಾರ ಜೈರಾಮ್ ರಮೇಶ್ ಅವರು ವಿವರಣೆ ನೀಡಿದ್ದಾರೆ.

'ರಾಜ್ಯಸಭೆಯ ಕಲಾಪಗಳನ್ನು ಸಭಾಪತಿಯವರು ತೀರಾ ಪಕ್ಷಪಾತಿಯಾಗಿ ನಡೆಸುತ್ತಿದ್ದಾರೆ. ಹೀಗಾಗಿ, 'ಇಂಡಿಯಾ' ಗುಂಪಿನ ಪಕ್ಷಗಳಿಗೆ ಅವರ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸುವ ಕ್ರಮ ಅಲ್ಲದೆ ಬೇರೆ ಆಯ್ಕೆಗಳು ಇರಲಿಲ್ಲ. ಇದು 'ಇಂಡಿಯಾ'ದಲ್ಲಿರುವ ಪಕ್ಷಗಳ ಪಾಲಿಗೆ ಬಹಳ ನೋವಿನ ತೀರ್ಮಾನ. ಆದರೆ ಸಂಸದೀಯ ಪ್ರಜಾತಂತ್ರದ ಹಿತಾಸಕ್ತಿಯ ದೃಷ್ಟಿಯಿಂದ ಪಕ್ಷಗಳು ಇದನ್ನು ಮಾಡಬೇಕಾಯಿತು' ಎಂದು ಜೈರಾಮ್ ರಮೇಶ್ ಅವರು 'ಎಕ್ಸ್' ಮೂಲಕ ಹೇಳಿದ್ದಾರೆ.

ಹಲವು ಸಂಗತಿಗಳ ವಿಚಾರವಾಗಿ ವಿರೋಧ ಪಕ್ಷಗಳು ಧನಕರ್ ಬಗ್ಗೆ ಅಸಮಾಧಾನ ಹೊಂದಿವೆ. ಈಚೆಗೆ ಕಾಂಗ್ರೆಸ್–ಸೋರೊಸ್ 'ನಂಟಿನ' ಬಗ್ಗೆ ಪ್ರಸ್ತಾಪಿಸಲು ಆಡಳಿತ ಪಕ್ಷಗಳ ಸದಸ್ಯರಿಗೆ ಅವಕಾಶ ಕಲ್ಪಿಸಿದ್ದು ಕೂಡ ವಿರೋಧ ಪಕ್ಷಗಳ ಅಸಮಾಧಾನಕ್ಕೆ ಕಾರಣವಾಗಿದೆ.

ಬಹುಮತ ಇಲ್ಲ: ಗೊತ್ತುವಳಿ ಮಂಡನೆ ಆದರೆ, ಅದಕ್ಕೆ ರಾಜ್ಯಸಭೆಯ ಅಂಗೀಕಾರ ದೊರೆಯಲು ಸರಳ ಬಹುಮತದ ಅಗತ್ಯ ಇದೆ. ಆದರೆ ವಿರೋಧ ಪಕ್ಷಗಳಿಗೆ ಅಷ್ಟು ಸಂಖ್ಯಾಬಲ ಇಲ್ಲ. ಉಪ ರಾಷ್ಟ್ರಪತಿಯ ಪದಚ್ಯುತಿಗೆ ಗೊತ್ತುವಳಿ ಮಂಡಿಸಲು ನೋಟಿಸ್ ನೀಡಿರುವುದು ಇದೇ ಮೊದಲು. ಗೊತ್ತುವಳಿಯ ಮಂಡನೆ ಆಗಬೇಕು ಎಂದಾದರೆ ರಾಜ್ಯಸಭೆಯ ಉಪ ಸಭಾಪತಿಯ ಒಪ್ಪಿಗೆ ಅಗತ್ಯ.

ನೋಟಿಸ್‌ನಲ್ಲಿ ಹೇಳಿರುವುದೇನು?

- ಧನಕರ್ ಅವರು ಪಕ್ಷಪಾತಿಯಾಗಿ ನಡೆದುಕೊಳ್ಳುತ್ತಿದ್ದಾರೆ. ಉನ್ನತ ಮಟ್ಟದ ಸಾಂವಿಧಾನಿಕ ಹುದ್ದೆ ಹೊಂದಿರುವವರು ಹೀಗೆ ಮಾಡುವುದು ಸರಿಯಲ್ಲ
- ಧನಕರ್ ಅವರು ರಾಜ್ಯಸಭೆಯ ಸಭಾಪತಿಯಾಗಿ ವಿರೋಧ ಪಕ್ಷಗಳ ಸದಸ್ಯರ ವಿಚಾರವಾಗಿ ಪಕ್ಷಪಾತಿಯಾಗಿ ಹಾಗೂ ನ್ಯಾಯಸಮ್ಮತವಲ್ಲದ ರೀತಿಯಲ್ಲಿ ನಡೆದುಕೊಂಡ ನಿದರ್ಶನಗಳು ಬಹಳಷ್ಟಿವೆ
- ವಿರೋಧ ಪಕ್ಷಗಳ ಸದಸ್ಯರ ವಿಚಾರವಾಗಿ ಅವರು ಅಗೌರವ ತೋರುವ ರೀತಿಯಲ್ಲಿ ಮಾತನಾಡಿದ್ದಾರೆ. ಕೇಂದ್ರ ಸರ್ಕಾರದ ಕಾರ್ಯನಿರ್ವಹಣೆಯ ಬಗ್ಗೆ ಪ್ರಸ್ತಾಪಿಸಿದಾಗಲೆಲ್ಲ ಅವರು ವಿರೋಧ ಪಕ್ಷಗಳ ನಾಯಕರನ್ನು ಟೀಕಿಸಿದ್ದಾರೆ
- ಸಭಾಪತಿ ಸ್ಥಾನದಲ್ಲಿದ್ದಾಗ ಧನಕರ್ ಅವರು ಈ ವರ್ಷದ ಜುಲೈನಲ್ಲಿ ತಮ್ಮನ್ನು 'ಆರ್‌ಎಸ್‌ಎಸ್‌ನ ಏಕಲವ್ಯ' ಎಂದು ಕರೆದುಕೊಂಡಿದ್ದರು. ಇದು ಅವರು ಹೊಂದಿರುವ ಹುದ್ದೆಗೆ ತಕ್ಕುದಲ್ಲ

> ಕಾಂಗ್ರೆಸ್, ಅದರ ಮಿತ್ರ ಪಕ್ಷಗಳು ಸಲ್ಲಿಸಿರುವ ನೋಟಿಸ್ ತಿರಸ್ಕೃತವಾಗುತ್ತದೆ. ತನ್ನ ಕುಕೃತ್ಯ ಮರೆಮಾಚಲು ಕಾಂಗ್ರೆಸ್ ಈ ನೋಟಿಸ್ ಸಲ್ಲಿಸಿದೆ.
>
> **ಕಿರಣ್ ರಿಜಿಜು,** ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

ಮಸೀದಿ ಭಾಗಶಃ ಧ್ವಂಸ

ಒಂದನೇ ಪುಟದಿಂದ...

ಮಸೀದಿಯ ಉಸ್ತುವಾರಿ ವಹಿಸಿಕೊಂಡವರಿಗೆ ಇದೇ ವರ್ಷ ಆಗಸ್ಟ್ ಹಾಗೂ ಸೆಪ್ಟೆಂಬರ್‌ನಲ್ಲಿ ಎರಡು ನೋಟಿಸ್ ಕಳುಹಿಸಲಾಗಿತ್ತು. ಒತ್ತುವರಿ ಮಾಡಿ ನಿರ್ಮಿಸಿರುವ ಮಸೀದಿಯ ಭಾಗ ಕೆಡವಿಹಾಕುವಂತೆ ಸೂಚಿಸಲಾಗಿತ್ತು. ಆಗ ಒಂದು ತಿಂಗಳ ಕಾಲಾವಕಾಶವನ್ನು ಮಸೀದಿಯ ಉಸ್ತುವಾರಿ ಕೇಳಿಕೊಂಡಿದ್ದರು ಎಂದೂ ಅಧಿಕಾರಿ ಹೇಳಿದರು. ಕೋರಿದ್ದ ಕಾಲಾವಕಾಶದ ಒಳಗೆ ಮಸೀದಿಯ ಸಮಿತಿಯು ಕಾರ್ಯತತ್ಪರವಾಗದೇ ಇರುವುದರಿಂದ ಅನಿವಾರ್ಯವಾಗಿ ಅದನ್ನು ಒಡೆದು ಹಾಕಬೇಕಾಯಿತು ಎಂದರು.

ನೋಟಿಸ್‌ಗಳನ್ನು ಪ್ರಶ್ನಿಸಿ ಮಸೀದಿ ಸಮಿತಿಯು ಅಲಹಾಬಾದ್ ಹೈಕೋರ್ಟ್‌ನ ಮೊರೆಹೋಗಿತ್ತು. ಅರ್ಜಿಯ ವಿಚಾರಣೆಗೆ ಹೈಕೋರ್ಟ್ ಡಿಸೆಂಬರ್ 13ರ ದಿನಾಂಕ ನಿಗದಿಪಡಿಸಿದೆ. ಅಷ್ಟರೊಳಗೆ ಮಸೀದಿಯ ಭಾಗವನ್ನು ಕೆಡವಲಾಗಿದೆ.

'ಜ್ಞಾನವಾಪಿ' ಪ್ರಕರಣ– ಡಿ.17ಕ್ಕೆ ವಿಚಾರಣೆ: (ಪ್ರಯಾಗ್‌ರಾಜ್) 'ಜ್ಞಾನವಾಪಿ ಮಸೀದಿಯೊಳಗಿನ 'ವಜುಖಾನಾ' ಭಾಗದ ಸಮೀಕ್ಷೆ ನಡೆಸುವಂತೆ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ನಿರ್ದೇಶನ ನೀಡಲು ಸಾಧ್ಯವಿಲ್ಲ' ಎಂದಿದ್ದ ವಾರಾಣಸಿ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಅಲಹಾಬಾದ್ ಹೈಕೋರ್ಟ್ ಡಿ. 17ಕ್ಕೆ ಮುಂದೂಡಿದೆ.

ಈ ವಿಚಾರಕ್ಕೆ ಸಂಬಂಧಿಸಿ ಡಿ. 16ರಂದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯಲಿದೆ ಎಂದು ಹೈಕೋರ್ಟ್‌ಗೆ ತಿಳಿಸಲಾಯಿತು. ಈ ಮಾಹಿತಿ ತಿಳಿದ ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್ವಾಲ್ ಅರ್ಜಿಯ ವಿಚಾರಣೆಯನ್ನು ಡಿ.17ಕ್ಕೆ ಮುಂದೂಡಿದರು.

ಫತೇಪುರ ಜಿಲ್ಲೆಯ ನೂರಿ ಹಮಾ ಮಸೀದಿಯ ಹಿಂಬದಿಯ ಭಾಗವನ್ನು ಬುಲ್ಡೋಜರ್‌ಗಳಿಂದ ಮಂಗಳವಾರ ಒಡೆದುಹಾಕಲಾಯಿತು –ಪಿಟಿಐ ಚಿತ್ರ

ಮನವಿಗೆ ಸ್ಪಂದಿಸಲಿಲ್ಲ: ಮಸೀದಿ ಉಸ್ತುವಾರಿ

'ನೂರಿ ಹಮಾ ಮಸೀದಿಯು 180 ವರ್ಷ ಹಳೆಯದು. ಅದು ಸಂರಕ್ಷಿತ ಸ್ಮಾರಕಗಳ ಪಟ್ಟಿಗೆ ಸೇರಿದೆ. ಹೈಕೋರ್ಟ್‌ನಲ್ಲಿ ವಿಚಾರಣೆ ಮುಗಿಯುವವರೆಗೆ ಕಾಯುವಂತೆ ನಾವು ವಿನಂತಿಸಿಕೊಂಡೆವು. ಹಿಂದಿನ ಗೋಡೆಗಳನ್ನು ಒಡೆದರೆ, ಇಡೀ ಕಟ್ಟಡಕ್ಕೆ ಹಾನಿಯಾಗಲಿದೆ ಎಂದೂ ಕೇಳಿಕೊಂಡೆವು. ನಮ್ಮ ಮನವಿಗೆ ಅಧಿಕಾರಿಗಳು ಸ್ಪಂದಿಸಲಿಲ್ಲ ಎಂದು ಮಸೀದಿಯ ಉಸ್ತುವಾರಿ ಪ್ರತಿಕ್ರಿಯಿಸಿದರು.

ದುರ್ಗಡಿ ಕೋಟೆ: ಮಸೀದಿ ಮಾಲೀಕತ್ವದ ಅರ್ಜಿ ವಜಾ

ಠಾಣೆ (ಪಿಟಿಐ): ಜಿಲ್ಲೆಯ ದುರ್ಗಡಿ ಕೋಟೆಯ ಒಳಗಿರುವ ಮಸೀದಿಯ ಮಾಲೀಕತ್ವ ಪಡೆಯಲು ಮುಸ್ಲಿಂ ಟ್ರಸ್ಟ್ ಸಲ್ಲಿಸಿದ್ದ ಅರ್ಜಿಯನ್ನು ಕಲ್ಯಾಣ ಸಿವಿಲ್ ನ್ಯಾಯಾಲಯವು ವಜಾಗೊಳಿಸಿದ್ದು, ಮಹಾರಾಷ್ಟ್ರ ಸರ್ಕಾರದ ಪರವಾಗಿ ತೀರ್ಪು ನೀಡಿದೆ.

ಮಜ್ಲಿಶ್-ಎ-ಮುಶಾವ್ರೀನ್ ಮಜ್ಜಿದ್ ಟ್ರಸ್ಟ್ ಅರ್ಜಿ ಸಲ್ಲಿಸಿದ ಬಳಿಕ 1976ರಿಂದ ಕೋಟೆ ಒಳಗಿನ ಮಸೀದಿ ಮತ್ತು ಈದ್ಗಾ (ಪ್ರಾರ್ಥನಾ ಸ್ಥಳ) ಕುರಿತಂತೆ ಕಾನೂನು ಸಮರ ನಡೆಯುತ್ತಿತ್ತು. ಕೋಟೆ ಒಳಗೆ ಹಿಂದೂ ದೇವಸ್ಥಾನವೂ ಇದೆ.

1968ರಲ್ಲಿ ಮಹಾರಾಷ್ಟ್ರ ಸರ್ಕಾರವು ಕಲ್ಯಾಣ ಪುರಸಭೆಗೆ ಆವರಣದ ಗುತ್ತಿಗೆಯನ್ನು ನೀಡುವವರೆಗೆ ಮಸೀದಿ ಮತ್ತು ಈದ್ಗಾ ಸ್ಥಳವನ್ನು ಸ್ಥಳೀಯ ಮುಸ್ಲಿಂ ಸಮುದಾಯವು ಪ್ರಾರ್ಥನೆಗಾಗಿ ಬಳಸುತ್ತಿತ್ತು ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಸಿವಿಲ್ ನ್ಯಾಯಾಧೀಶರಾದ ಎ.ಎಸ್.ಲಾಂಜೇವರ್, ಕಾಯ್ದೆಯಡಿ ಸೂಚಿಸಿದಂತೆ ವಿಲೇವಾರಿ ದಿನಾಂಕದಿಂದ ಮೂರು ವರ್ಷಗಳೊಳಗೆ ಟ್ರಸ್ಟ್ ಅರ್ಜಿ ಸಲ್ಲಿಸಿಲ್ಲ. ಹೀಗಾಗಿ ನಾಗರಿಕ ಪ್ರಕ್ರಿಯಾ ಸಂಹಿತೆ ಪ್ರಕಾರ ಅರ್ಜಿ ತಿರಸ್ಕೃತಗೊಂಡಿದೆ ಎಂದು ತಿಳಿಸಿದರು.

ಪ್ರತಿಭಟನೆ; ನಡೆಯದ ಕಲಾಪ

ನಾಯಕರ ವಿರುದ್ಧದ ಹೇಳಿಕೆಗೆ ಲೋಕಸಭೆಯಲ್ಲಿ ಆಕ್ರೋಶ, ಕಾಂಗ್ರೆಸ್ ಧರಣಿ

ನವದೆಹಲಿ (ಪಿಟಿಐ): 'ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕರ ಜೊತೆಗೆ ಭಾರತ ವಿರೋಧಿ ಶಕ್ತಿಗಳು ಕೈಜೋಡಿಸಿವೆ' ಎಂಬ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರ ನೇರ ಆರೋಪ ಮಂಗಳವಾರ ಲೋಕಸಭೆಯಲ್ಲಿ ಕೋಲಾಹಲದ ಸ್ಥಿತಿಗೆ ಕಾರಣವಾಯಿತು.

ಕೋಲಾಹಲ ಸ್ಥಿತಿಯಿಂದಾಗಿ ದಿನದ ಮಟ್ಟಿಗೆ ಕಲಾಪ ಮುಂದೂಡಲಾಯಿತು. ಅದಾನಿ ವಿಷಯದ ಪ್ರಸ್ತಾಪ ಮತ್ತು ಜಾರ್ಜ್ ಸೋರೊಸ್–ಕಾಂಗ್ರೆಸ್ ಸಂಪರ್ಕ ಕುರಿತ ಬಿಜೆಪಿಯವರ ಆರೋಪ ಕಲಾಪ ನುಂಗಿಹಾಕಿದವು.

ಸಚಿವ ರಿಜಿಜು ಅವರು ಶೂನ್ಯವೇಳೆಯಲ್ಲಿ ಮಾಡಿದ ಈ ಆರೋಪಕ್ಕೆ ಕಾಂಗ್ರೆಸ್ ಪಕ್ಷದ ಗೌರವ್ ಗೊಗೊಯಿ ಮತ್ತು ಇತರೆ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಅಧ್ಯಕ್ಷರ ಪೀಠದ ಎದುರು ಗುಂಪುಗೂಡಿ ಪ್ರತಿಭಟಿಸಿದರು. ಕಾಂಗ್ರೆಸ್ ಸದಸ್ಯರು ಸದನಕ್ಕೆ ಮಾಸ್ಕ್ ಮತ್ತು ಪ್ರಧಾನಿ ನರೇಂದ್ರ ಮೋದಿ, ಉದ್ಯಮಿ ಗೌತಮ್ ಅದಾನಿ ಅವರ ಅಪ್ಪಿಕೊಂಡಿರುವ ವ್ಯಂಗ್ಯ ಭಾವಚಿತ್ರವಿದ್ದ ಜಾಕೆಟ್ ಧರಿಸಿ ಬಂದಿದ್ದರು.

ಈ ನಡೆಯನ್ನೂ ಟೀಕಿಸಿದ ರಿಜಿಜು, 'ಈ ಮೂಲಕ ಕಾಂಗ್ರೆಸ್‌ನವರು ಸಂಸತ್ತಿನ ಘನತೆ ಮೇಲೆ ದಾಳಿ ನಡೆಸಿದ್ದಾರೆ. ಕಲಾಪಕ್ಕೆ ಅಡ್ಡಿ ಪಡಿಸುವ ಮೂಲಕ, ಇತರೆ ಸದಸ್ಯರು ತಮ್ಮ ಕ್ಷೇತ್ರಗಳ ವಿಷಯಗಳನ್ನು ಪ್ರಸ್ತಾಪಿಸದಂತೆ ತಡೆಯುತ್ತಿದ್ದಾರೆ' ಎಂದು ತರಾಟೆಗೆ ತೆಗೆದುಕೊಂಡರು.

ಇದಕ್ಕೂ ಮೊದಲು ಅಧ್ಯಕ್ಷರ ಪೀಠದಲ್ಲಿದ್ದ ಬಿಜೆಪಿ ಸದಸ್ಯ ದಿಲೀಪ್ ಸೋಕಿಯಾ ಅವರು, ಸಂಸತ್ತಿನ ವಿವಿಧ ಸ್ಥಾಯಿ ಸಮಿತಿಗಳ ವರದಿಗಳನ್ನು ಮಂಡಿಸಲು ಅವಕಾಶ ಕಲ್ಪಿಸಿದ್ದರು.

ಬಂದರು ಸಚಿವ ಸರ್ಬಾನಂದಾ ಸೊನೊವಾಲ್ ಅವರು, ಮರ್ಚಂಟ್ ಶಿಪ್ಪಿಂಗ್ ಮಸೂದೆ ಮಂಡಿಸಿದರು. ಮಸೂದೆ ಕುರಿತು ಕಾಂಗ್ರೆಸ್‌ನ ಮನೀಶ್ ತಿವಾರಿ ಮತ್ತು ತೃಣಮೂಲ ಕಾಂಗ್ರೆಸ್‌ನ ಸೌಗತಾ ರೇ ಅವರು ಎತ್ತಿದ ಆಕ್ಷೇಪಗಳಿಗೂ ಅವರು ಪ್ರತಿಕ್ರಿಯಿಸಿದರು.

ಬಳಿಕ ಶೂನ್ಯವೇಳೆ ಆರಂಭವಾದಂತೆ ರಿಜಿಜು ಅವರಾಡಿದ ಮಾತು ಕೋಲಾಹಲ ಸ್ಥಿತಿಗೆ ಕಾರಣವಾಯಿತು. ಕೆಲಹೊತ್ತಿನ ಮಟ್ಟಿಗೆ ಕಲಾಪವನ್ನು ಸಭಾಧ್ಯಕ್ಷರು ಮುಂದೂಡಿದರು.

ನಿಲುವಳಿ ಮಂಡಿಸಲು ನೋಟಿಸ್: ಇದಕ್ಕೂ ಮುನ್ನ ವಿರೋಧಪಕ್ಷದ ನಾಯಕ ರಾಹುಲ್‌ಗಾಂಧಿ ಅವರನ್ನು ಟೀಕಿಸಿದಕ್ಕಾಗಿ ಬಿಜೆಪಿ ಸದಸ್ಯರ ವಿರುದ್ಧ ಹಕ್ಕುಚ್ಯುತಿ ಮಂಡಿಸಲು ಅವಕಾಶ ಕೋರಿ ವಿರೋಧಪಕ್ಷದ ಸದಸ್ಯರು ನೋಟಿಸ್ ನೀಡಲು ಮುಂದಾದರು.

ಬೆಳಿಗ್ಗೆ ಸದನ ಸೇರುತ್ತಿದ್ದಂತೆ ಪ್ರತಿಪಕ್ಷದವರು ಅಧ್ಯಕ್ಷರ ಪೀಠದ ಎದುರು ಜಮೆಯಾದರು. ಇದರಿಂದ ಬೇಸತ್ತ ಸ್ಪೀಕರ್ ಓಂ ಬಿರ್ಲಾ ಮಧ್ಯಾಹ್ನದವರೆಗೆ ಕಲಾಪ ಮುಂದೂಡಿದರು. ಮತ್ತೆ ಸದನ ಸೇರಿದಾಗಲೂ ಅದೇ ಸ್ಥಿತಿ ಇತ್ತು. ಮತ್ತೆ ಒಂದು ಗಂಟೆ ಮುಂದೂಡಲಾಯಿತು. ಮತ್ತೆ ಸೇರಿದಾಗ ಕಾಂಗ್ರೆಸ್‌ನವರ ಜೊತೆ ಪ್ರತಿಭಟನೆಗೆ ಎಸ್‌ಪಿ ಸದಸ್ಯರು ಸೇರಿದರು.

ವಿರೋಧಪಕ್ಷದ ಸದಸ್ಯರು 'ಮೋದಿ ಸರ್ಕಾರ್ ಡೌನ್, ಡೌನ್', 'ಶೇಮ್, ಶೇಮ್', 'ನಮಗೆ ನ್ಯಾಯ ಬೇಕು' ಎಂಬ ಘೋಷಣೆ ಕೂಗಿದರು. ಸದನದ ಹೊರಗೆ ನಡೆದ ಪ್ರತಿಭಟನೆಯಲ್ಲಿ 'ಮೋದಿ, ಅದಾನಿ ಭಾಯಿ, ಭಾಯಿ' ಘೋಷವಾಕ್ಯವಿದ್ದ ಕಪ್ಪುಬಣ್ಣದ ಕೈಚೀಲಗಳನ್ನು ಸದಸ್ಯರು ಹಿಡಿದಿದ್ದರು.

ಮಸೂದೆ ಮಂಡನೆ: ಹಡಗುಗಳ ಸುರಕ್ಷತೆ, ಬಂದರುಗಳಲ್ಲಿ ಸೌಲಭ್ಯಗಳ ಉಸ್ತುವಾರಿಗೆ ಸಮಿತಿ ರಚಿಸಲು ಅವಕಾಶ ಕಲ್ಪಿಸುವ ಮರ್ಚಂಟ್ ಶಿಪ್ಪಿಂಗ್ ಮಸೂದೆಯನ್ನು ಮಂಗಳವಾರ ಲೋಕಸಭೆಯಲ್ಲಿ ಮಂಡಿಸಲಾಯಿತು.

ಉದ್ಯಮಿ ಗೌತಮ್ ಅದಾನಿ ವಿಷಯ ಚರ್ಚೆಗೆ ಆಗ್ರಹಪಡಿಸಿ ಪ್ರತಿಪಕ್ಷಗಳ ಸಂಸದರು ಮಂಗಳವಾರ ಸಂಸತ್ತಿನ ಹೊರಗೆ ಧರಣಿ ನಡೆಸಿದರು ಪಿಟಿಐ ಚಿತ್ರ

> ಲೋಕಸಭೆಯಲ್ಲಿ ಅದಾನಿ ವಿಷಯ ಚರ್ಚಿಸಲು ಸರ್ಕಾರಕ್ಕೆ ಹೆದರಿಕೆ. ಅದಕ್ಕೆ ಕಲಾಪ ಮುಂದೂಡುವ ಕಾರ್ಯತಂತ್ರ ಅನುಸರಿಸುತ್ತಿದೆ
>
> **ಪ್ರಿಯಾಂಕಾ ಗಾಂಧಿ,** ಸಂಸದೆ

ಬಂಗಲೆ, ಜಮೀನುಗಳಲ್ಲಿ ಅಕ್ರಮ ಸ್ವತ್ತು

ಬೆಂಗಳೂರು: ಆದಾಯ ಮೀರಿದ ಆಸ್ತಿ ಸಂಪಾದಿಸಿದ ಆರೋಪದ ಮೇಲೆ, ಹತ್ತು ಅಧಿಕಾರಿಗಳಿಗೆ ಸೇರಿದ ವಿವಿಧ ಕಟ್ಟಡ, ಸ್ಥಳಗಳ ಮೇಲೆ ಕಾರ್ಯಾಚರಣೆ ನಡೆಸಿದ ಲೋಕಾಯುಕ್ತ ಪೊಲೀಸರು ಅಪಾರ ಪ್ರಮಾಣದ ಆಸ್ತಿ ಪತ್ತೆ ಮಾಡಿದ್ದಾರೆ.

ಎಂ. ಲೋಕೇಶ್ ಬಾಬು, ಸೂಪರಿಂಟೆಂಡಿಂಗ್ ಎಂಜಿನಿಯರ್, ಬೆಸ್ಕಾಂ, ಪಶ್ಚಿಮ ವೃತ್ತ, ಬೆಂಗಳೂರು
- ₹3.57 ಕೋಟಿ ಮೌಲ್ಯದ ಮೂರು ಬಂಗಲೆ, 2 ನಿವೇಶನ ಮತ್ತು ಕೃಷಿ ಜಮೀನು
- ₹ 90 ಲಕ್ಷದ ಚಿನ್ನಾಭರಣ, ₹30 ಲಕ್ಷ ಮೌಲ್ಯದ ವಾಹನಗಳು, ₹1.90 ಕೋಟಿ ಮೌಲ್ಯದ ಗೃಹೋಪಯೋಗಿ ಮತ್ತು ಐಷಾರಾಮಿ ವಸ್ತುಗಳು, ₹3.50 ಲಕ್ಷ ನಗದು

₹6.70 ಕೋಟಿ, ಆಸ್ತಿಯ ಒಟ್ಟು ಮೌಲ್ಯ

ನಂಜುಂಡಯ್ಯ, ಡಿಎಸ್‌ಪಿ (ಸಶಸ್ತ್ರ), ಪೊಲೀಸ್ ತರಬೇತಿ ಶಾಲೆ, ಚನ್ನಪಟ್ಟಣ
- ಐದು ನಿವೇಶನ, ಒಂದು ಬಂಗಲೆ. ₹11.04 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹ 45.74 ಲಕ್ಷದ ಚಿನ್ನಾಭರಣ, ₹23 ಲಕ್ಷ ಮೌಲ್ಯದ ವಾಹನಗಳು, ₹75 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ₹4.68 ಲಕ್ಷ ನಗದು

₹12.53 ಕೋಟಿ, ಆಸ್ತಿಯ ಒಟ್ಟು ಮೌಲ್ಯ

ಎಸಿಎಫ್ ಸುರೇಶ್ ಅವರ ಮನೆಯಲ್ಲಿ ಪತ್ತೆಯಾಗಿರುವ ಚಿನ್ನಾಭರಣ ಹಾಗೂ ನಗದು

ಎಸ್.ಸುರೇಶ್ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಿರಿಯೂರು ಉಪ ವಿಭಾಗ, ಚಿತ್ರದುರ್ಗ
- 9 ಎಕರೆ 20 ಗುಂಟೆ ಕೃಷಿ ಜಮೀನು, ಮೂರು ನಿವೇಶನ, ಮೂರು ಬಂಗಲೆ. ₹2.19 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹ 61.01 ಲಕ್ಷದ ಚಿನ್ನಾಭರಣ, ₹22.10 ಲಕ್ಷ ಮೌಲ್ಯದ ವಾಹನ, ₹42.83 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ₹4.82 ಲಕ್ಷ ನಗದು

₹3.50 ಕೋಟಿ, ಆಸ್ತಿಯ ಒಟ್ಟು ಮೌಲ್ಯ

ಎಸ್.ಜಿ.ಸುರೇಶ್, ಕಂದಾಯ ನಿರೀಕ್ಷಕ, 197ನೇ ವಾರ್ಡ್, ವಸಂತಪುರ, ಉತ್ತರಹಳ್ಳಿ, ಎಆರ್‌ಒ ಕಚೇರಿ, ಬಿಬಿಎಂಪಿ
- 4 ಎಕರೆ 5 ಕುಂಟೆ ಕೃಷಿ ಜಮೀನು, ಎರಡು ಬಂಗಲೆ, ಮೂರು ನಿವೇಶನ ಮತ್ತು ಒಂದು ತೋಟದ ಮನೆ ಸೇರಿ ₹1.61 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹ 3.53 ಲಕ್ಷದ ಚಿನ್ನಾಭರಣ, ₹18 ಲಕ್ಷ ಮೌಲ್ಯದ ವಾಹನಗಳು

₹1.82 ಕೋಟಿ, ಆಸ್ತಿಯ ಒಟ್ಟು ಮೌಲ್ಯ

ಲಕ್ಷ್ಮಣ ಕೊನೇರಪ್ಪ ಕರ್ನಿ, ಪ್ರಥಮ ದರ್ಜೆ ಸಹಾಯಕ, ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗ, ಗದಗ
- 3 ಎಕರೆ 17 ಗುಂಟೆ ಕೃಷಿ ಜಮೀನು, ಒಂದು ನಿವೇಶನ, ಮೂರು ಬಂಗಲೆ, ಒಂದು ವಾಣಿಜ್ಯ ಸಂಕೀರ್ಣ. ₹1.75 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹ 22.91 ಲಕ್ಷದ ಚಿನ್ನಾಭರಣ, ₹3.40 ಲಕ್ಷ ನಗದು

₹2.01 ಕೋಟಿ, ಆಸ್ತಿಯ ಒಟ್ಟು ಮೌಲ್ಯ

ರಾಮಪ್ಪ ಪಾಂಡು ಜಾಧವ್ ಸೂಪರಿಂಟೆಂಡಿಂಗ್ ಎಂಜಿನಿಯರ್/ ಸಹಾಯಕ ಆಯುಕ್ತ (ಅಭಿವೃದ್ಧಿ), ಮಹಾನಗರ ಪಾಲಿಕೆ, ಕಲಬುರಗಿ
- ನಾಲ್ಕು ಫ್ಲ್ಯಾಟ್, ಎರಡು ಬಂಗಲೆ ಮತ್ತು 7 ಎಕರೆ ಕೃಷಿ ಜಮೀನು. ₹2.37 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹50 ಲಕ್ಷ ಮೊತ್ತದ ವೈದ್ಯಕೀಯ ಸೀಟುಗಳ ಪಟ್ಟಿ, ರಸೀತಿ. ₹ 18 ಲಕ್ಷದ ಚಿನ್ನಾಭರಣ, ₹15.50 ಲಕ್ಷ ಮೌಲ್ಯದ ವಾಹನಗಳು, ₹36.46 ಲಕ್ಷ ಷೇರು ಹೂಡಿಕೆಗಳು, ₹1.50 ಲಕ್ಷ ನಗದು

₹3.58 ಕೋಟಿ, ಆಸ್ತಿಯ ಒಟ್ಟು ಮೌಲ್ಯ

ಡಾ.ಎಂ.ಸಿ.ಸುನಿಲ್ ಕುಮಾರ್ ಜಿಲ್ಲಾ ಆರೋಗ್ಯ ಅಧಿಕಾರಿ, ಬೆಂಗಳೂರು ಗ್ರಾಮಾಂತರ
- ಒಂದು ನಿವೇಶನ, ಮೂರು ಬಂಗಲೆ. ₹5.17 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹ 30 ಲಕ್ಷದ ಚಿನ್ನಾಭರಣ, ₹54.50 ಲಕ್ಷ ಮೌಲ್ಯದ ವಾಹನಗಳು, ₹60 ಲಕ್ಷ ಮೌಲ್ಯದ ಠೇವಣಿಗಳು, ₹2 ಲಕ್ಷ ನಗದು

₹6.63 ಕೋಟಿ, ಆಸ್ತಿಯ ಒಟ್ಟು ಮೌಲ್ಯ

ಏಕೇಶ್ ಬಾಬು ಕೆ. ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು
- 3 ಎಕರೆ 12 ಗುಂಟೆ ಕೃಷಿ ಜಮೀನು, ಮೂರು ನಿವೇಶನ, ಮೂರು ಬಂಗಲೆ. ₹7.40 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹ 14.25 ಲಕ್ಷದ ಚಿನ್ನಾಭರಣ, ₹60 ಸಾವಿರ ಮೌಲ್ಯದ ವಾಹನಗಳು, ₹15.25 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ನೋಟು ಎಣಿಸುವ ಯಂತ್ರ, ₹22.15 ಲಕ್ಷ ನಗದು

₹7.92 ಕೋಟಿ, ಆಸ್ತಿಯ ಒಟ್ಟು ಮೌಲ್ಯ

ರಮೇಶ್ ಬಿ.ಅಗಡಿ, ಅಬಕಾರಿ ಇನ್‌ಸ್ಪೆಕ್ಟರ್, ಕೊಪ್ಪಳ
- 37 ಎಕರೆ ಕೃಷಿ ಜಮೀನು, ಐದು ನಿವೇಶನ ಮತ್ತು ಒಂದು ಬಂಗಲೆ. ₹92.79 ಲಕ್ಷ ಮೌಲ್ಯದ ಸ್ಥಿರಾಸ್ತಿ
- ಎರಡು ಸಿಎಲ್–2 ಮದ್ಯದ ಅಂಗಡಿಗಳು, ₹ 38.61 ಲಕ್ಷದ ಚಿನ್ನಾಭರಣ, ₹25 ಲಕ್ಷ ಮೌಲ್ಯದ ವಾಹನಗಳು, ₹24.40 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ₹4.84 ಲಕ್ಷ ನಗದು

₹1.61 ಕೋಟಿ, ಆಸ್ತಿಯ ಒಟ್ಟು ಮೌಲ್ಯ

ಕೃಷ್ಣಪ್ಪ, ಕಂದಾಯ ವಸೂಲಿಗಾರರು, ವಿದ್ಯಾರಣ್ಯಪುರ ಉಪ ವಿಭಾಗ, ಬಿಬಿಎಂಪಿ
- ಮೂರು ನಿವೇಶನ, ಎರಡು ಬಂಗಲೆ 7 ಎಕರೆ ಕೃಷಿ ಜಮೀನು. ₹1.79 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹ 22.69 ಲಕ್ಷದ ಚಿನ್ನಾಭರಣ, ₹3.62 ಲಕ್ಷ ಮೌಲ್ಯದ ವಾಹನಗಳು, ₹10.39 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ₹3.03 ಲಕ್ಷ ನಗದು ಮತ್ತು ₹2.46 ಲಕ್ಷ ಠೇವಣಿ

₹2.21 ಕೋಟಿ, ಆಸ್ತಿಯ ಒಟ್ಟು ಮೌಲ್ಯ

'ಸಿ.ಎಂಗೆ ಹ್ಯಾಂಡ್ ಸಮನ್ಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಹಗರಣದ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ.ಪಾರ್ವತಿ ಮತ್ತು ಬಾಮೈದುನ ಮಲ್ಲಿಕಾರ್ಜುನ ಸ್ವಾಮಿಗೆ ಹ್ಯಾಂಡ್ ಸಮನ್ಸ್ ನೀಡಲು ಅರ್ಜಿದಾರ ಸ್ನೇಹಮಯಿ ಕೃಷ್ಣ ಅವರಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಕೋರಿ ದೂರುದಾರರೂ ಆದ ಮೈಸೂರಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಮಂಗಳವಾರ ವಿಚಾರಣೆ ನಡೆಸಿ ಆದೇಶಿಸಿದರು.

ಡಿ. 9ರವರೆಗೆ ನಡೆಸಿರುವ ತನಿಖೆಯ ವಸ್ತುಸ್ಥಿತಿ ವರದಿಯನ್ನು ಲೋಕಾಯುಕ್ತ ಪೊಲೀಸರು ನ್ಯಾಯಪೀಠಕ್ಕೆ ಸಲ್ಲಿಸಿದರು. ಅಂತೆಯೇ, ಪ್ರಕರಣದ ಕೇಸ್ ಡೈರಿ ಮತ್ತು ಸಾಕ್ಷಿಗಳ ಹೇಳಿಕೆ ಒಳಗೊಂಡ ಮತ್ತೊಂದು ವರದಿಯನ್ನೂ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದರು.

'ಅರ್ಜಿಯಲ್ಲಿ ಜಾರಿ ನಿರ್ದೇಶನಾಲಯವನ್ನೂ (ಇ.ಡಿ) ಪ್ರತಿವಾದಿಯಾಗಿಸಬೇಕು' ಎಂಬ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಮಧ್ಯಂತರ ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಒಂದು ವಾರ ಕಾಲಾವಕಾಶ ನೀಡಿದ ನ್ಯಾಯಪೀಠ ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿತು.

'ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ವಿರುದ್ಧ ಅರ್ಜಿದಾರ ಸ್ನೇಹಮಯಿ ಕೃಷ್ಣ ಗಂಭೀರ ಆರೋಪ ಮಾಡುತ್ತಿದ್ದು, ಆ ಕುರಿತ ವರದಿಗಳು ಪತ್ರಿಕೆಯಲ್ಲಿ ಪ್ರಕಟವಾಗಿವೆ. ಇದು ನ್ಯಾಯಾಲಯದಲ್ಲಿರುವ ವಿಚಾರಣೆಯ ಮೇಲೆ ಅಡ್ಡ ಪರಿಣಾಮ ಉಂಟು ಮಾಡುತ್ತದೆ. ಅರ್ಜಿದಾರರ ಈ ನಡವಳಿಕೆಯನ್ನು ಕೋರ್ಟ್ ಗಂಭೀರವಾಗಿ ಪರಿಗಣಿಸಬೇಕು' ಎಂದು ಕಪಿಲ್ ಸಿಬಲ್ ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ಕೆ.ಜಿ.ರಾಘವನ್ ಅವರನ್ನು ಉದ್ದೇಶಿಸಿದ ನ್ಯಾಯಪೀಠ, 'ಏನಿದೆಲ್ಲಾ? ನ್ಯಾಯಾಲಯದಲ್ಲಿ ಅರ್ಜಿ ವಿಚಾರಣೆ ನಡೆಯುತ್ತಿರುವ ಹಂತದಲ್ಲಿ ಹೀಗೆ ಮಾಡುವುದು ಎಷ್ಟು ಸರಿ? ಅರ್ಜಿದಾರರು ಸ್ವಯಂ ನಿಯಂತ್ರಣ ವಿಧಿಸಿಕೊಳ್ಳಬೇಕು' ಎಂದು ತಾಕೀತು ಮಾಡಿದರು. ಇದಕ್ಕೆ ರಾಘವನ್, 'ಅರ್ಜಿದಾರರ ನಡೆಗೆ ನಾನು ಕ್ಷಮೆ ಕೋರುತ್ತೇನೆ' ಎಂದು ತಿಳಿಸಿದರು.

ರಕ್ತ ಬರುವತನಕ ಹಾಲು ಕರೆಯಬೇಡಿ...

'ಕಳೆದ 29 ದಿನಗಳಲ್ಲಿ 7,500 ಮೆಮೊಗಳ (ಜ್ಞಾಪನಾ ಪತ್ರ) ಪೈಕಿ 5,500 ಮೆಮೊಗಳನ್ನು ವಿಚಾರಣೆಗೆ ಪಟ್ಟಿ ಮಾಡಿದ್ದೇನೆ. ಇನ್ನೂ ಎಷ್ಟು ಮೆಮೊಗಳನ್ನು ಸ್ವೀಕರಿಸಲಿ? ನಾನೂ ಮನುಷ್ಯ. ಹಸುವಿನ ಕೆಚ್ಚಲಿನಲ್ಲಿ ರಕ್ತ ಬರುವವರೆಗೆ ಹಾಲು ಕರೆಯಲಾಗದು...'

ಮಂಗಳವಾರ ಬೆಳಿಗ್ಗೆ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠದ ಮುಂದೆ ವಕೀಲರೊಬ್ಬರು ದಾವೆ ಇತ್ಯರ್ಥಕ್ಕೆ ಸಂಬಂಧಿಸಿದ ತುರ್ತು ಅರ್ಜಿಯೊಂದನ್ನು ವಿಚಾರಣೆಗೆ ಪರಿಗಣಿಸುವಂತೆ ಕೋರಿದರು.

'ಹಲವು ಬಾರಿ ಮೆಮೊ ಸಲ್ಲಿಸಿದ್ದೇನೆ. ಪ್ರಕರಣ ಇನ್ನೂ ವಿಚಾರಣೆಗೆ ನಿಗದಿಯಾಗಿಲ್ಲ. ಈ ಬಾರಿ ಪರಿಗಣಿಸಬೇಕು' ಎಂದು ನ್ಯಾಯಮೂರ್ತಿಗಳಿಗೆ ಮೆಮೊ ನೀಡಲು ಮುಂದಾದರು. ಈ ಹೊತ್ತಿಗಾಗಲೇ ಸಾಕಷ್ಟು ಮೆಮೊಗಳನ್ನು ಸ್ವೀಕರಿಸಿದ್ದ ನ್ಯಾಯಮೂರ್ತಿ ನಾಗಪ್ರಸನ್ನ ಅವರು ವಕೀಲರ ಮನವಿಗೆ ಬೇಸರ ಹೊರಹಾಕಿದರು.

'ಮ್ಯಾಜಿಸ್ಟ್ರೇಟ್ ನಿರ್ಧಾರವೇ ಕಾನೂನು ಬಾಹಿರ'

'ಪೋಕ್ಸೊ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪ್ರಕರಣದಲ್ಲಿ ವಿಚಾರಣಾ ಮ್ಯಾಜಿಸ್ಟ್ರೇಟ್ ಮುಂದೆ ಸಂತ್ರಸ್ತೆ ಹಾಗೂ ಫಿರ್ಯಾದುದಾರರು ನೀಡಲಾದ ಹೇಳಿಕೆಯನ್ನು ಲಗತ್ತಿಸಿಲ್ಲ ಮತ್ತು ವೈದ್ಯಕೀಯ ವರದಿಯನ್ನು ಸಲ್ಲಿಸಿಲ್ಲ. ಇದು ಕುರುಡನೊಬ್ಬ ಕತ್ತಲೆಯಲ್ಲಿ ಕಪ್ಪು ಬೆಕ್ಕು ಹುಡುಕಿದಂತಾಗಿದೆ' ಎಂದು ಯಡಿಯೂರಪ್ಪ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಅರುಹಿದರು. ಅಪ್ರಾಪ್ತ ವಯಸ್ಸಿನ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದುಪಡಿಸುವಂತೆ ಕೋರಿ ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಮಂಗಳವಾರ ವಿಚಾರಣೆ ನಡೆಸಿದರು. 'ಪ್ರಕರಣದ ವಿಚಾರಣೆಯನ್ನು 12ರ ಮಧ್ಯಾಹ್ನ 3.30ಕ್ಕೆ ನಡೆಸಲಾಗುವುದು' ಎಂದರು.

'ವಕ್ಫ್: ವರದಿ ಮುಚ್ಚಿಟ್ಟ ಸರ್ಕಾರ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದಲ್ಲಿ ವಕ್ಫ್ ಆಸ್ತಿಗಳ ಅತಿಕ್ರಮಣಗಳ ಕುರಿತು ಉಪ-ಲೋಕಾಯುಕ್ತ ನ್ಯಾಯಮೂರ್ತಿ ಎನ್.ಆನಂದ್ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಮುಚ್ಚಿಟ್ಟಿದೆ' ಎಂದು ಆರೋಪಿಸಿ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ಅವರು ವಕ್ಫ್ (ತಿದ್ದುಪಡಿ) ಮಸೂದೆಗೆ ಸಂಬಂಧಿಸಿದಂತೆ ರಚನೆಯಾಗಿರುವ ಜಂಟಿ ಸದನ ಸಮಿತಿಯ ಅಧ್ಯಕ್ಷ ಜಗದಾಂಬಿಕ ಪಾಲ್‌ಗೆ ಪತ್ರ ಬರೆದಿದ್ದಾರೆ.

'ನ್ಯಾಯಮೂರ್ತಿ ಎನ್.ಆನಂದ್ ಅವರು ಮಾರ್ಚ್ 2016ರಲ್ಲಿ ಕರ್ನಾಟಕ ಸರ್ಕಾರಕ್ಕೆ ತನಿಖಾ ವರದಿ ಸಲ್ಲಿಸಿದ್ದಾರೆ. ಈ ವರದಿಯು ಸರ್ಕಾರದ ದಾಖಲೆಗಳಲ್ಲಿಯೂ ಇಲ್ಲ, ಸಾರ್ವಜನಿಕ ವಲಯದಲ್ಲಿಯೂ ಇಲ್ಲ. ಇದನ್ನು ಉದ್ದೇಶಪೂರ್ವಕವಾಗಿ ಕಣ್ಮರೆಯಾಗುವಂತೆ ಮಾಡಲಾಗಿದೆ' ಎಂದು ಅವರು ದೂರಿದ್ದಾರೆ.

ವಕ್ಫ್ ಆಸ್ತಿಯನ್ನು ಲೂಟಿ ಮಾಡುತ್ತಿರುವ ಅಲ್ಪಸಂಖ್ಯಾತ ಸಮುದಾಯದ ಶ್ರೀಮಂತರ ವಿರುದ್ಧ ಕಾನೂನು ಕ್ರಮ ಜರುಗಿಸಲು ಕಾಂಗ್ರೆಸ್ ಸರ್ಕಾರ ಏಕೆ ಆಸಕ್ತಿ ತೋರುತ್ತಿಲ್ಲ? ಹೀಗಾಗಿ, ಜಂಟಿ ಸಮಿತಿಯು ಈ ವರದಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು' ಎಂದು ಕೋರಿದ್ದಾರೆ.

ಭ್ರೂಣದ ಮಿದುಳಿನ ಚಿತ್ರ: ಐಐಟಿ ಮದ್ರಾಸ್ ಸಾಧನೆ

ಚೆನ್ನೈ (ಪಿಟಿಐ): ಭ್ರೂಣದ ಮಿದುಳಿನ ಅತ್ಯಂತ ವಿವರವಾದ 3ಡಿ ಹೈ-ರೆಸಲೂಶನ್ ಚಿತ್ರಗಳನ್ನು ಬಿಡುಗಡೆ ಮಾಡಿರುವುದಾಗಿ ಚೆನ್ನೈನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ ಮದ್ರಾಸ್) ಮಂಗಳವಾರ ಹೇಳಿದೆ.

ಸಂಸ್ಥೆಯ 'ಸುಧಾ ಗೋಪಾಲಕೃಷ್ಣನ್ ಬ್ರೈನ್ ಸೆಂಟರ್' ಅಭಿವೃದ್ಧಿಪಡಿಸಿದ ಬ್ರೈನ್ ಮ್ಯಾಪಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡು ಮಿದುಳಿನ ಭಾಗಗಳ 5,132 ಡಿಜಿಟಲ್ ಚಿತ್ರಗಳನ್ನು ಸೆರೆಹಿಡಿಯಲಾಗಿದೆ. 'ಭ್ರೂಣದ ಮಿದುಳಿನ ಚಿತ್ರವನ್ನು ಇಷ್ಟೊಂದು ನಿಖರವಾಗಿ ಸೆರೆಹಿಡಿದಿರುವ ವಿಶ್ವದ ಮೊದಲ ಸಂಸ್ಥೆ ನಮ್ಮದು' ಎಂದು ಪ್ರಕಟಣೆ ತಿಳಿಸಿದೆ.

'ಐಐಟಿ ಮದ್ರಾಸ್‌ನ ಸುಧಾ ಗೋಪಾಲಕೃಷ್ಣನ್ ಬ್ರೈನ್ ಸೆಂಟರ್‌ನ ಈ ಸಾಧನೆಯು ಬ್ರೈನ್ ಮ್ಯಾಪಿಂಗ್ ತಂತ್ರಜ್ಞಾನದಲ್ಲಿ ಹೊಸ ಅವಕಾಶದ ಬಾಗಿಲು ತೆರೆದಿದೆ ಮತ್ತು ಭಾರತವನ್ನು ಬ್ರೈನ್ ಮ್ಯಾಪಿಂಗ್ ವಿಜ್ಞಾನದಲ್ಲಿ ವಿಶ್ವದಲ್ಲೇ ಮುಂಚೂಣಿಯಲ್ಲಿ ನಿಲ್ಲಿಸಿದೆ. ಏಕೆಂದರೆ, ಬೇರೆ ದೇಶಗಳಲ್ಲಿ ಇಂತಹ ಕೆಲಸ ಇದುವರೆಗೆ ನಡೆದಿಲ್ಲ' ಎಂದಿದೆ.

ಈ ಸಂಶೋಧನೆಗೆ ಸಂಬಂಧಿಸಿದ ವಿವರಗಳು 'ಧರಣಿ' ಎಂಬ ಹೆಸರಿನಲ್ಲಿ https://brainportal.humanbrain.in/publicview/index.html ನಲ್ಲಿ ಲಭ್ಯವಿದೆ ಎಂದಿದೆ.

ನಿಧನ ವಾರ್ತೆ

ಎಸ್.ಜಯಣ್ಣ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್. ಜಯಣ್ಣ (74) ಮಂಗಳವಾರ ಹೃದಯಾಘಾತದಿಂದ ನಿಧನರಾದರು.

ಬೆಳಿಗ್ಗೆ ಅವರಿಗೆ ತೀವ್ರ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಮೈಸೂರಿಗೆ ಕರೆಯೊಯ್ಯುವ ಮಾರ್ಗಮಧ್ಯೆ ಮೃತಪಟ್ಟರು.

ಕೊಳ್ಳೇಗಾಲದ ನಿವಾಸದಲ್ಲಿ ಬುಧವಾರ ಮಧ್ಯಾಹ್ನದವರೆಗೂ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗುವುದು. ಬಳಿಕ ಮಾಂಬಳ್ಳಿಯ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಅವರು, ಪ್ರಭಾವಿ ರಾಜಕಾರಣಿಯಾಗಿ ಬೆಳೆದಿದ್ದರು. ಅವಿವಾಹಿತರಾಗಿದ್ದರು.

ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದಿಂದ 1994ರಲ್ಲಿ ಜೆಡಿಎಸ್ ಹಾಗೂ 2013ರಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಆಯ್ಕೆಯಾಗಿದ್ದರು. ಅನಾರೋಗ್ಯದ ಕಾರಣದಿಂದ 2018ರಲ್ಲಿ ಕಾಂಗ್ರೆಸ್ ಟಿಕೆಟ್ ವಂಚಿತರಾಗಿದ್ದರು. ಇತ್ತೀಚೆಗೆ ಅವರನ್ನು ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು.

ವಿ. ವಸಂತಶ್ರೀ



ಬೆಂಗಳೂರು: ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಮೊಮ್ಮಗಳು ಹಾಗೂ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್‌ನ ಧರ್ಮದರ್ಶಿಯೂ ಆಗಿದ್ದ ವಿ. ವಸಂತಶ್ರೀ (87) ಅವರು ಸೋಮವಾರ ನಿಧನ ರಾಗಿದ್ದಾರೆ.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಬನಶಂಕರಿ ಚಿತಾಗಾರದಲ್ಲಿ ಮಂಗಳವಾರ ಅವರ ಅಂತ್ಯಕ್ರಿಯೆ ನಡೆಯಿತು.

ಲಂಡನ್‌ನ ಇಂಪೀರಿಯಲ್ ಕಾಲೇಜಿನಲ್ಲಿ ಲೋಹ ವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕಿ ಯಾಗಿ ಕಾರ್ಯನಿರ್ವಹಿಸಿದ್ದ ಅವರು, ಲಂಡನ್‌ನ ಭಾರತೀಯ ವಿದ್ಯಾಭವನ ಹಾಗೂ ಯು.ಕೆ.ಕನ್ನಡ ಬಳಗದ ಸಕ್ರಿಯ ಸದಸ್ಯರಾಗಿದ್ದರು.

ವೃತ್ತಿಯಿಂದ ನಿವೃತ್ತರಾದ ಬಳಿಕ, ತಮ್ಮ ಅಜ್ಜನ ಪುಸ್ತಕಗಳನ್ನು ಪ್ರಕಟಿಸುವ ಜವಾಬ್ದಾರಿ ನಿರ್ವಹಿಸಲು ಬೆಂಗಳೂರಿಗೆ ಮರಳಿದ್ದರು. ಮಾಸ್ತಿ ಅಧ್ಯಯನ ಪೀಠದ ಮೂಲಕ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಆಧುನಿಕ ತಂತ್ರಜ್ಞಾನವನ್ನು ಬಳಸಿ ಮಾಸ್ತಿಯವರ ಕೃತಿಗಳ ಸಚಿತ್ರ ಗಣಕೀಕೃತ ವಿಸ್ತೃತ ಆವೃತ್ತಿಗಳನ್ನು ಹೊರತಂದಿದ್ದರು.

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಸಹಯೋಗದಲ್ಲಿ ಅವರು ಆಯೋಜಿಸುತ್ತಿದ್ದ ವಿಶೇಷ ಉಪನ್ಯಾಸಗಳು ಜನಪ್ರಿಯವಾಗಿದ್ದವು.

ಕೃಷ್ಣ ಯುಗಾಂತ್ಯ

ಊರು: ಸೋಮನಹಳ್ಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ

ವಿದ್ಯಾರ್ಹತೆ: ಬಿಎ, ಬಿಎಲ್, ಎಂಸಿಎಲ್ (ಟೆಕ್ಸಾಸ್)

ಶಿಕ್ಷಣ: ಮಹಾರಾಜ ಕಾಲೇಜು, ಮೈಸೂರು, ಸರ್ಕಾರಿ ಕಾನೂನು ಕಾಲೇಜು, ಬೆಂಗಳೂರು, ದಕ್ಷಿಣ ಮೆಥೋಡಿಸ್ಟ್ ವಿಶ್ವವಿದ್ಯಾಲಯ, ಡಲ್ಲಾಸ್ ಟೆಕ್ಸಾಸ್ (ಯುಎಸ್ಎ), ಫುಲ್‌ಬ್ರೈಟ್ ವಿದ್ವಾಂಸ-ಪದವಿ ವಿದ್ಯಾರ್ಥಿ, ಜಾರ್ಜ್ ವಾಷಿಂಗ್ಟನ್ ವಿಶ್ವವಿದ್ಯಾಲಯ, ವಾಷಿಂಗ್ಟನ್ ಡಿಸಿ (ಯುಎಸ್ಎ)

ವೈವಾಹಿಕ ಜೀವನ: ಪ್ರೇಮಾ ಅವರನ್ನು ಏಪ್ರಿಲ್ 29, 1964ರಂದು ವಿವಾಹವಾದರು- ಅವರಿಗೆ ಇಬ್ಬರು ಹೆಣ್ಣುಮಕ್ಕಳು

ಏರಿದ ಹಾದಿಯ ಪಕ್ಷಿನೋಟ

- **1932** (ಮೇ 1) ಜನನ
- **1962:** ವಿಧಾನಸಭೆ ಸದಸ್ಯ
- **1968:** ಲೋಕಸಭೆ ಸದಸ್ಯ
- **1971:** ಲೋಕಸಭೆ ಸದಸ್ಯ
- **1972:** ವಿಧಾನ ಪರಿಷತ್ ಸದಸ್ಯ- ಕೈಗಾರಿಕಾ ಸಚಿವ
- **1980:** ಲೋಕಸಭೆ ಸದಸ್ಯ- ಕೇಂದ್ರ ಕೈಗಾರಿಕೆ ಮತ್ತು ಹಣಕಾಸು ಖಾತೆ ರಾಜ್ಯ ಸಚಿವ
- **1989:** ವಿಧಾನಸಭಾಧ್ಯಕ್ಷ
- **1992-94:** ಉಪ ಮುಖ್ಯಮಂತ್ರಿ
- **1996:** ರಾಜ್ಯಸಭಾ ಸದಸ್ಯ
- **1999:** ಕೆಪಿಸಿಸಿ ಅಧ್ಯಕ್ಷ
- **1999-2004:** ಮುಖ್ಯಮಂತ್ರಿ
- **2004-08:** ಮಹಾರಾಷ್ಟ್ರ ರಾಜ್ಯಪಾಲ
- **2009:** ರಾಜ್ಯಸಭಾ ಸದಸ್ಯ- ವಿದೇಶಾಂಗ ಸಚಿವ
- **2017:** ಕಾಂಗ್ರೆಸ್‌ಗೆ ರಾಜೀನಾಮೆ- ಬಿಜೆಪಿ ಸೇರ್ಪಡೆ
- **2023:** ಸಕ್ರಿಯ ರಾಜಕಾರಣದಿಂದ ನಿವೃತ್ತಿ

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರೊಂದಿಗೆ

ಚಿತ್ರಗಳು: ಪ್ರಜಾವಾಣಿ ಆರ್ಕೈವ್ಸ್

ಡಾ.ರಾಜ್ ಅಪಹರಣ, ಕಾವೇರಿ ಪಾದಯಾತ್ರೆ, ಬರಗಾಲ, ಕಂಬಾಲಪಲ್ಲಿ ದಲಿತರ ಹತ್ಯೆ

ಸಾಲು ಸಾಲು ಸವಾಲುಗಳ 'ಸಿ.ಎಂ'

• ಎಸ್.ರವಿಪ್ರಕಾಶ್

ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದೊಂದು ಅತ್ಯಂತ ತಲ್ಲಣದ ಅವಧಿ. ಅವರಿಗೂ ಹಿಂದೆ ಅಥವಾ ಆ ಬಳಿಕ ಸಾಲು ಸಾಲು ಸವಾಲುಗಳನ್ನು ಎದುರಿಸಿದ ಬೇರೊಬ್ಬ ಮುಖ್ಯಮಂತ್ರಿ ಇಲ್ಲ. ಭಾವನಾತ್ಮಕವಾಗಿ ಜನರನ್ನು ಕಂಗೆಡಿಸಿದ, ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ ಹಲವು ಸನ್ನಿವೇಶಗಳನ್ನು ಕೃಷ್ಣ ಅವರು ಸಮರ್ಥವಾಗಿ ನಿಭಾಯಿಸಿದರು. ಇದಕ್ಕೆ ಅವರ ಜಾಣ್ಮೆ, ತಾಳ್ಮೆ, ಸಂಯಮವೇ ಮುಖ್ಯಕಾರಣ. ಇವರ ಅವಧಿಯಲ್ಲಿ ಭೀಕರ ಬರಗಾಲ ಇತ್ತು, ಕಾವೇರಿ ನದಿ ನೀರಿನ ಸಮಸ್ಯೆ ತಾರಕಕ್ಕೆ ಏರಿತ್ತು, ಡಾ.ರಾಜ್‌ಕುಮಾರ್ ಅವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿದ್ದ; ಜನತಾದಳ ಮುಖಂಡ ನಾಗಪ್ಪ ಅವರ ಅಪಹರಣವೂ ಆಗಿತ್ತು. ತೆಂಗು ಬೆಳೆಗಾರರ ನೀರಾ ಹೋರಾಟ, ವಿಠಲೇನಹಳ್ಳಿ ಗೋಲಿಬಾರ್, ಕಂಬಾಲಪಲ್ಲಿಯಲ್ಲಿ ದಲಿತರ ಸಜೀವ ದಹನ ಘಟನೆ ಹೀಗೆ... ಸಂಕಷ್ಟಗಳ ಮಧ್ಯೆಯೂ ಅವರು ಕರ್ನಾಟಕ ಐಟಿ-ಬಿಟಿ ಮತ್ತಿತರ ಆಧುನಿಕ ತಂತ್ರಜ್ಞಾನಗಳ ಕ್ಷೇತ್ರದಲ್ಲಿ ದೈತ್ಯಶಕ್ತಿಯನ್ನಾಗಿ ಬೆಳೆಸುವಲ್ಲಿ ಅಡಿಪಾಯವನ್ನೂ ಹಾಕಿದರು.

ಕಂಬಾಲಪಲ್ಲಿ ದಲಿತರ ಸಜೀವ ದಹನ

ಕೋಲಾರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿಯಲ್ಲಿ ಏಳು ಜನ ದಲಿತರನ್ನು ಪ್ರಬಲ ಜಾತಿಗೆ ಸೇರಿದ ಜನರು ಸಜೀವವಾಗಿ ಸುಟ್ಟು ಹಾಕಿದ ಅಮಾನುಷ ಪ್ರಕರಣ, ರಾಜ್ಯವನ್ನೇ ತಲ್ಲಣಕ್ಕೆ ದೂಡಿತು. ಇಡೀ ದೇಶದಲ್ಲೇ ಪ್ರತಿರೋಧದ ತರಂಗವನ್ನೇ ಎಬ್ಬಿಸಿತು. ಆಗ ಗೃಹ ಸಚಿವರಾಗಿದ್ದವರು ಮಲ್ಲಿಕಾರ್ಜುನ ಖರ್ಗೆ. ಸರ್ಕಾರ ವ್ಯಾಪಕ ಟೀಕೆಗೆ ಒಳಗಾಯಿತು. ಆದರೆ, ದಲಿತರಿಗೆ ರಕ್ಷಣೆ ಕೊಡುವಲ್ಲಿ ಕೃಷ್ಣ ಅವರು ಸೂಕ್ತ ವ್ಯವಸ್ಥೆ ಮಾಡಿದರು. ಆ ಗ್ರಾಮದಲ್ಲಿ ಪ್ರತಿ ದಲಿತ ಕುಟುಂಬಕ್ಕೆ ₹70 ಸಾವಿರ ವೆಚ್ಚದಲ್ಲಿ 66 ಮನೆಗಳನ್ನು ನಿರ್ಮಿಸಿಕೊಟ್ಟರು.

ಡಾ.ರಾಜ್‌ಕುಮಾರ್ ಅಪಹರಣ

ವರನಟ, ಕನ್ನಡಿಗರು ತಮ್ಮ ಆರಾಧ್ಯದೈವವೆಂದೇ ನಂಬಿದ್ದ ಡಾ. ರಾಜಕುಮಾರ್ ಅವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿದ್ದು, ರಾಜ್ಯ ಮಾತ್ರವಲ್ಲದೇ ಇಡೀ ದೇಶವನ್ನೇ ತಲ್ಲಣಗೊಳಿಸಿತ್ತು. ಡಾ. ರಾಜ್‌ಕುಮಾರ್ ತಮ್ಮ ಹುಟ್ಟೂರು ಚಾಮರಾಜನಗರ ಜಿಲ್ಲೆಯ ಗಾಜನೂರಿಗೆ ಹೋದಾಗ ವೀರಪ್ಪನ್, ಅವರನ್ನು ಅಪಹರಿಸಿದ್ದ. 108 ದಿನ ರಾಜ್‌ಕುಮಾರ್ ಅವರು, ಕಾಡಿನಲ್ಲಿಯೇ ವೀರಪ್ಪನ್ ಕಪಿಮುಷ್ಟಿಯಲ್ಲಿ ಕಳೆಯಬೇಕಾಯಿತು.

ಅಪಹರಣದ ಸುದ್ದಿ ಬಿತ್ತರವಾಗುತ್ತಿದ್ದಂತೆ ಇಡೀ ರಾಜ್ಯದಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು. ವೀರಪ್ಪನ್ ತಮಿಳು ಮೂಲದವನಾದ ಕಾರಣಕ್ಕೆ ಈ ಪ್ರಕರಣ ಮತ್ತಷ್ಟು ತೀವ್ರತೆಯನ್ನು ಪಡೆದುಕೊಂಡಿತ್ತು. 1992ರಲ್ಲಿ ಕಾವೇರಿ ಗಲಾಟೆ ಸಂದರ್ಭದಲ್ಲಿ ತಮಿಳರ ಮೇಲೆ ಬೆಂಗಳೂರು ಮತ್ತಿತರ ಕಡೆಗಳಲ್ಲಿ ನಡೆದ ದಾಳಿ ಮತ್ತು ಹಿಂಸಾಚಾರದಂತಹ ಸ್ಥಿತಿ ಮರುಕಳಿಸಬಹುದು ಎಂಬ ಭೀತಿ ಸರ್ಕಾರವನ್ನು ಕಾಡಿತ್ತು. ಗಲಾಟೆ ಎಬ್ಬಿಸಿ, ದೊಂಬಿ ನಡೆಸಬಹುದಾದ ಕಿಡಿಗೇಡಿಗಳನ್ನು ಹೆಡೆಮುರಿಕಟ್ಟಿಸಿದರು. ಪ್ರತಿಭಟನೆ, ಬಂದ್‌ಗಳು ನಡೆದರೂ ಅಹಿತಕರ ಘಟನೆಗಳು ನಡೆಯಲಿಲ್ಲ. ಸುರಕ್ಷಿತವಾಗಿ ರಾಜ್‌ಕುಮಾರ್ ಅವರನ್ನು ಬಿಡಿಸಿಕೊಂಡು ಬರಲು ಎಸ್.ಎಂ.ಕೃಷ್ಣ ಅವರು ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿ ಅವರ ಮೊರೆ ಹೋದರು. ಅವರ ಜತೆ ದೂರವಾಣಿ ಮೂಲಕ ಮಾತನಾಡಿದ್ದೂ ಅಲ್ಲದೇ, ಹಲವು ಬಾರಿ ಚೆನ್ನೈನಲ್ಲೂ ಭೇಟಿ ಮಾಡಿದರು. ಇಂತಹ ಭೇಟಿಯ ಪರಿಣಾಮವೇ ವೀರಪ್ಪನ್‌ನನ್ನು ಸಂಪರ್ಕಿಸಲು ಸಾಧ್ಯವಾಗಿದ್ದು.

ತಮಿಳು ಪಾಕ್ಷಿಕ 'ನಕ್ಕೀರನ್' ಸಂಪಾದಕ ಗೋಪಾಲನ್‌ಗೆ ಮಾತ್ರ ವೀರಪ್ಪನ್ ಜತೆ ಸಂಪರ್ಕ ಇರುವುದು ಗೊತ್ತಾಯಿತು. ಆತನ ಮೂಲಕ ವೀರಪ್ಪನ್ ಸಂಪರ್ಕಿಸಿ ರಾಜ್ ಅವರನ್ನು ಬಿಡಿಸಿಕೊಳ್ಳುವ ಒಂದು ಸಣ್ಣ ದಾರಿ ಸಿಕ್ಕಿತು. ಇದೇ ವೇಳೆ ತಮಿಳು ರಾಷ್ಟ್ರವಾದಿ ನೆಡುಮಾರನ್ ಕೂಡ ವೀರಪ್ಪನ್ ಅನ್ನು ಬಲ್ಲವರಾಗಿದ್ದರು. ಇವರ ಮಾತನ್ನು ವೀರಪ್ಪನ್ ಕೇಳುತ್ತಾನೆ ಎಂಬ ಮಾಹಿತಿ ಕೃಷ್ಣ ಅವರ ಗಮನಕ್ಕೆ ಬಂತು. ಆರಂಭದಲ್ಲಿ ಒಪ್ಪದಿದ್ದರೂ ಬಳಿಕ ಒಪ್ಪಿದ ಗೋಪಾಲನ್ ಕಾಡಿಗೆ ಹೋಗಿ ರಾಜ್ ಸಮ್ಮುಖದಲ್ಲೇ ವೀರಪ್ಪನ್ ಭೇಟಿ ಮಾಡಿ, ವೀರಪ್ಪನ್ ಸಂದೇಶವನ್ನು ಕ್ಯಾಸೆಟ್ ಮೂಲಕ ಧ್ವನಿ ಮುದ್ರಿಸಿಕೊಂಡು ತಂದು ಸರ್ಕಾರಕ್ಕೆ ಒಪ್ಪಿಸಿದರು. ಹೀಗೆ ಹಲವು ಬಾರಿ ಹೋದಾಗಲೂ ವೀರಪ್ಪನ್ ಸಂದೇಶದ ಕ್ಯಾಸೆಟ್‌ಗಳನ್ನು ಬರುತ್ತಿದ್ದವು. ಹಣದ ಬೇಡಿಕೆಯೂ ಸೇರಿ ಹಲವು ಬೇಡಿಕೆಗಳನ್ನು ಆತ ಮುಂದಿಟ್ಟಿದ್ದ. ಅರಣ್ಯ ಮತ್ತು ಜೈಲಿನಲ್ಲಿದ್ದ ತನ್ನ ಸಹಚರರನ್ನು ಬಿಡುಗಡೆ ಮಾಡಬೇಕು ಎನ್ನುವ ಬೇಡಿಕೆಯೂ ಪ್ರಮುಖವಾಗಿತ್ತು. ಕೆಲವು ಸಣ್ಣಪುಟ್ಟ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಸಿದ್ಧವಿತ್ತು. ಆದರೆ, ವೀರಪ್ಪನ್ ಸಹಚರರನ್ನು ಬಿಡುಗಡೆ ಮಾಡುವ ಅಧಿಕಾರ ಸರ್ಕಾರದ ಕೈಯಲ್ಲಿ ಇರಲಿಲ್ಲ. ಹಣ ಕೊಟ್ಟು ಬಿಡಿಸಿ ತರುವುದು ಕಷ್ಟದ ಕೆಲಸ, ಆದರೆ ಬೇರೆ ಮಾರ್ಗವಿರಲಿಲ್ಲ. ಹಣ ಕೊಟ್ಟು ಬಿಡಿಸಿಕೊಳ್ಳಲಾಯಿತು ಎಂಬ ವಾದವಿದ್ದರೂ, ಇದನ್ನು ಕೃಷ್ಣ ಅವರು ಸ್ಪಷ್ಟವಾಗಿ ನಿರಾಕರಿಸಿದರು.

ರಾಜ್‌ಕುಮಾರ್ ಬಿಡುಗಡೆಗೊಂಡು ಬಂದ ಬಳಿಕ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ರಾಜ್‌ಕುಮಾರ್ ಮತ್ತು ಕುಟುಂಬದವರಿಂದ ಸುದ್ದಿಗೋಷ್ಠಿ ಏರ್ಪಡಿಸಲಾಗಿತ್ತು. ಅದೊಂದು ನಾಡು ಮರೆಯದ ಕ್ಷಣವಾಗಿ ಇಂದಿಗೂ ಉಳಿದಿದೆ.

ಇದಾದ ಕೆಲವೇ ಸಮಯದಲ್ಲಿ ಮಾಜಿ ಸಚಿವ ಹನೂರಿನ ನಾಗಪ್ಪ ಅವರನ್ನು ವೀರಪ್ಪನ್ ಅಪಹರಣ ಮಾಡಿದ್ದ. ಅವರನ್ನು ಬಿಡಿಸಿಕೊಳ್ಳಲು ಪ್ರಯತ್ನ ಸರ್ಕಾರದ ವತಿಯಿಂದ ನಡೆದಿತ್ತು. ಆದರೆ, ರಾಜ್ ಪ್ರಕರಣದಲ್ಲಿ ತೋರಿದ ತರಾತುರಿ ತೋರಿಸಲಿಲ್ಲ. ನಾಗಪ್ಪ ಅವರನ್ನು ವೀರಪ್ಪನ್ ಕೊಂದು ಹಾಕಿದ. ವೀರಪ್ಪನ್ ಉಪಟಳಕ್ಕೆ ಅಂತ್ಯ ಹಾಡಬೇಕು ಎಂಬ ನಿಶ್ಚಯಕ್ಕೆ ಬಂದಿದ್ದ ಎಸ್.ಎಂ. ಕೃಷ್ಣ ಅದಕ್ಕಾಗಿ ವಿಶೇಷ ತಂಡವನ್ನೇ ರಚಿಸಿದ್ದರು. ಕೊನೆಗೂ, ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲೇ ವೀರಪ್ಪನ್ ಅಂತ್ಯವಾಯಿತು.

ಕಾವೇರಿಗಾಗಿ ಪಾದಯಾತ್ರೆ

ಕೃಷ್ಣ ಅವಧಿಯಲ್ಲಿ ರಾಜ್ಯದಲ್ಲಿ ಭೀಕರ ಬರಗಾಲ ಕಾಲಿಟ್ಟಿತ್ತು. ಎಂದಿನಂತೆ, ತಮಿಳುನಾಡು ಸರ್ಕಾರ ಕಾವೇರಿ ನದಿ ನೀರು ಬಿಡುಗಡೆಗೆ ಒತ್ತಾಯಿಸಿತು. ಕಾವೇರಿ ಕೊಳ್ಳದ ಜಲಾಶಯದಲ್ಲಿ ನೀರಿನ ಸಂಗ್ರಹವೂ ಕಡಿಮೆ ಇತ್ತು. ಈ ಹಂತದಲ್ಲಿ ತಮಿಳುನಾಡು ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಿತು. ಮಧ್ಯಂತರ ಆದೇಶ ನೀಡಿದ ಸುಪ್ರೀಂಕೋರ್ಟ್ ನೀರು ಬಿಡುವಂತೆ ಕರ್ನಾಟಕಕ್ಕೆ ಸೂಚಿಸಿತು. ಮುಖ್ಯಮಂತ್ರಿ ಇಕ್ಕಟ್ಟಿಗೆ ಸಿಲುಕಿದರು. ರಾಜ್ಯದ ರೈತರ ಹಿತ ಕಾಪಾಡುವುದೋ ಅಥವಾ ಸುಪ್ರೀಂಕೋರ್ಟ್ ಆದೇಶ ಪಾಲಿಸಿ ನೀರು ಬಿಡುವುದೋ ಎಂಬ ಗೊಂದಲಕ್ಕೆ ಸಿಲುಕಿದರು. ರಾಜ್ಯದ ರೈತರ ಹಿತ ತಮ್ಮದು ಎಂಬುದನ್ನು ತೋರಿಸಲು ಬೆಂಗಳೂರಿನಿಂದ ಕೆಆರ್‌ಎಸ್‌ವರೆಗೆ ಪಾದಯಾತ್ರೆ ನಡೆಸುವುದಾಗಿ ಘೋಷಿಸಿದರು. ಇದಕ್ಕೆ ರಾಜ್ಯದ ಗಣ್ಯಾತಿಗಣ್ಯರು ಬೆಂಬಲ ವ್ಯಕ್ತಪಡಿಸಿದರು. ರಾಜರಾಜೇಶ್ವರಿ ನಗರದಿಂದ ಪಾದಯಾತ್ರೆ ಆರಂಭಿಸಿದ ಮೊದಲ ದಿನ ಬಿಡದಿ ತಲುಪಿದರು. ರಾತ್ರಿ ಅಲ್ಲೇ ವಾಸ್ತವ್ಯ ಹೂಡಿದರು. ಯಾತ್ರೆ ಉದ್ದಕ್ಕೂ ಇದಕ್ಕೆ ಜನರಿಂದ ಬೆಂಬಲ ಸಿಕ್ಕಿತು. ಪಾದಯಾತ್ರೆಗೆ ಸುಪ್ರೀಂಕೋರ್ಟ್ ಆಕ್ಷೇಪ ವ್ಯಕ್ತಪಡಿಸಿತು. ನ್ಯಾಯಾಂಗ ನಿಂದನೆಯ ಅಪಾಯವನ್ನು ಎದುರುಹಾಕಿಕೊಳ್ಳುವ ಸನ್ನಿವೇಶ ಸೃಷ್ಟಿಯಾಯಿತು. ಪಾದಯಾತ್ರೆ ಮಂಡ್ಯ ತಲುಪುವ ಸಂದರ್ಭದಲ್ಲೇ ಕಾವೇರಿ ಕೊಳ್ಳದ ಪ್ರದೇಶದಲ್ಲಿ ಉತ್ತಮ ಮಳೆಯಾಗಿದ್ದರಿಂದ ತಮಿಳುನಾಡಿಗೆ ನೀರು ಹರಿದು ಹೋಯಿತು. ಏನೇ ಇದ್ದರೂ, ಮುಖ್ಯಮಂತ್ರಿಯಾದವರೊಬ್ಬರು ನೀರಿಗಾಗಿ ಪಾದಯಾತ್ರೆ ನಡೆಸಿದ್ದು ಕರ್ನಾಟಕದ ಪಾಲಿಗಂತೂ ಐತಿಹಾಸಿಕ ಹೆಜ್ಜೆ. ಕಾವೇರಿ ನೀರಾವರಿ ನಿಗಮವನ್ನೂ ಸ್ಥಾಪಿಸಿದ ಶ್ರೇಯ ಕೃಷ್ಣ ಅವರದ್ದಾಗಿದೆ.

ವಿಠಲೇನಹಳ್ಳಿ ಗೋಲಿಬಾರ್

1999ರ ಸಂದರ್ಭದಲ್ಲಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ತೆಂಗಿಗೆ ನುಸಿ ರೋಗ ವ್ಯಾಪಕ ಹರಡಿತ್ತು. ಇದರಿಂದ ಇಳುವರಿ ಸಂಪೂರ್ಣವಾಗಿ ನಾಶವಾಗಲಾರಂಭಿಸಿತು. ಹೀಗಾಗಿ ರೈತರು ತೆಂಗಿನ ಮರಗಳನ್ನು ಕಡಿದು ಹಾಕಲು ಆರಂಭಿಸಿದರು. ನುಸಿರೋಗ ಹತೋಟಿಗೆ ಬರಬೇಕಾದರೆ ನೀರಾ ಇಳಿಸಲು ರೈತರಿಗೆ ಅವಕಾಶ ನೀಡಬೇಕು ಎಂದು ರೈತ ಸಂಘಟನೆಗಳು ಸರ್ಕಾರಕ್ಕೆ ಮನವಿ ಮಾಡಿದವು. ಸರ್ಕಾರ ಇದಕ್ಕೆ ಒಪ್ಪಲಿಲ್ಲ. ರೈತರು ನೀರಾ ಇಳಿಸುವ ಚಳವಳಿ ಆರಂಭಿಸಿದರು. ರೈತರ ಮನವಿಗೆ ಸ್ಪಂದಿಸಬೇಕಾದ ಸರ್ಕಾರ, ಹೋರಾಟ ಹತ್ತಿಕ್ಕಲಾರಂಭಿಸಿತು. 2001ರ ಅಕ್ಟೋಬರ್ 9ರಂದು ಚನ್ನಪಟ್ಟಣ ತಾಲ್ಲೂಕು ವಿಠಲೇನಹಳ್ಳಿಯಲ್ಲಿ ರೈತರು ನೀರಾ ಇಳಿಸುವ ಸಂದರ್ಭದಲ್ಲಿ ಪೊಲೀಸರು ಗೋಲಿಬಾರ್ ಮಾಡಿದ್ದರಿಂದ ಇಬ್ಬರು ರೈತರು ಸಾವನ್ನಪ್ಪಿದರು. ಇದರ ವಿರುದ್ಧ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಬೆಂಗಳೂರಿನಿಂದ ಪಾದಯಾತ್ರೆ ನಡೆಸಿದರು. ಈ ಪಾದಯಾತ್ರೆ ಜೆಡಿಎಸ್‌ನ ಪುನಶ್ಚೇತನಕ್ಕೆ ಕಾರಣವಾಯಿತು.

ಮೂರೂವರೆ ವರ್ಷದ ಬರಗಾಲ

ಕೃಷ್ಣ ಅವಧಿಯಲ್ಲಿ ಮೂರೂವರೆ ವರ್ಷ ಬರಗಾಲವಿತ್ತು. ರೈತರ ಆತ್ಮಹತ್ಯೆಯೂ ಕೂಡ ಸರ್ಕಾರವನ್ನು ಕಂಗೆಡಿಸಿತ್ತು. 162 ತಾಲ್ಲೂಕುಗಳು ಬರಕ್ಕೆ ತುತ್ತಾಗಿದ್ದವು. ಬರವನ್ನು ವೈಜ್ಞಾನಿಕವಾಗಿ ಎದುರಿಸಲು ಯಾವುದೇ ಸರ್ಕಾರ ಕೈಗೊಳ್ಳದಷ್ಟು ಕ್ರಮಗಳನ್ನು ಕೈಗೊಂಡಿತ್ತು. ಬಂಜರು ಭೂಮಿ ಅಭಿವೃದ್ಧಿ, ಜಲ ಸಂವರ್ಧನಾ ಯೋಜನೆ, ಜಲಾನಯನ ಪ್ರದೇಶ ಅಭಿವೃದ್ಧಿ ಸೇರಿ ಹಲವು ಯೋಜನೆಗಳನ್ನು ಕೈಗೆತ್ತಿಕೊಂಡಿತು. ಅಲ್ಲದೇ, ಕೃತಕ ಮೋಡ ಬಿತ್ತನೆ ಮೂಲಕ ಮಳೆ ತರಿಸುವ ಕೆಲಸಕ್ಕೂ ಕೈಹಾಕಿತು. ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಮೊದಲ ಬಾರಿಗೆ ಜಾರಿ ತಂದಿತು. ರೈತರ ಆತ್ಮಹತ್ಯೆ ಅಧ್ಯಯನಕ್ಕೆ ಡಾ.ಜಿ.ಕೆ.ವೀರೇಶ್ ಸಮಿತಿ ನೇಮಿಸಿದರು. ಬೆಳೆಗಳಿಗೆ ಉತ್ತಮ ಬೆಲೆ ನಿಗದಿ ಮಾಡಲು ಡಾ.ಬಿಸಲಯ್ಯ ನೇತೃತ್ವದಲ್ಲಿ ಕೃಷಿ ಬೆಲೆ ನಿಗದಿ ಸಮಿತಿಯನ್ನೂ ರಚಿಸಿದರು. ಕೇಂದ್ರದ ಜತೆ ಸಂಘರ್ಷಕ್ಕೆ ಇಳಿಯದೇ ಬರ ಸ್ಥಿತಿಯನ್ನು ಉತ್ತಮವಾಗಿ ನಿಭಾಯಿಸಿದ ಹೆಗ್ಗಳಿಕೆ ಕೃಷ್ಣ ಅವರದು.

ಛಾಪಾ ಕಾಗದ ಹಗರಣ

ಕರೀಂಲಾಲ್ ತೆಲಗಿಯ ನಕಲಿ ಛಾಪಾ ಕಾಗದದ ಹಗರಣ ಇಡೀ ದೇಶದಲ್ಲಿ ಸಂಚಲನ ಮೂಡಿಸಿತು. ಪುಣೆಯಲ್ಲಿ ನೋಂದಣಿ ಛಾಪಾ ಕಾಗದಗಳ ಹಳೇ ಯಂತ್ರವನ್ನೇ ಹರಾಜಿನಲ್ಲಿ ತೆಗೆದುಕೊಂಡು, ಅಲ್ಲಿದ್ದ ನೌಕರರನ್ನೇ ಬಳಸಿಕೊಂಡು, ಛಾಪಾಕಾಗದ ಮುದ್ರಿಸಿ ತನ್ನದೇ ಜಾಲದ ಮೂಲಕ ಮಾರಾಟ ಮಾಡುತ್ತಿದ್ದ. ಆಗ ವಿರೋಧ ಪಕ್ಷದ ನಾಯಕರಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು ಹಗರಣವನ್ನು ಅಸ್ತ್ರವಾಗಿ ಬಳಸಿಕೊಂಡಿದ್ದೂ ಅಲ್ಲದೇ, ಆಗ ಸಚಿವರಾಗಿದ್ದ ಕೆಲವು ಸಚಿವರ ಜತೆ ನಂಟು ಇದೆ ಎಂದು ಆರೋಪಿಸಿದರು. ತೆಲಗಿಯನ್ನು ಬಂಧಿಸಿದ ಸರ್ಕಾರ, ಹಗರಣವನ್ನು ಬಯಲಿಗೆಳೆಯಿತು. ಅಲ್ಲಿಂದ ಛಾಪಾ ಕಾಗದ ಬದಲು, ಇ-ಸ್ಟ್ಯಾಂಪಿಂಗ್ ವ್ಯವಸ್ಥೆಗೆ ಜಾರಿಗೆ ತರಲಾಯಿತು. ಆ ಮೂಲಕ ಮುದ್ರಾಂಕ ನೋಂದಣಿ ಇಲಾಖೆಯನ್ನು ಸಂಪೂರ್ಣ ಗಣಕೀಕರಣಕ್ಕೆ ಒಳಪಡಿಸಿ, ಭೂಮಿ ತಂತ್ರಾಂಶವನ್ನೂ ಅಭಿವೃದ್ಧಿಪಡಿಸಿ ದೇಶಕ್ಕೆ ಕ್ರಾಂತಿಕಾರಕ ಸುಧಾರಣೆ ತಂದ ರಾಜ್ಯ ಎಂಬ ಹೆಗ್ಗಳಿಕೆಗೂ ಕರ್ನಾಟಕ ಪಾತ್ರವಾಯಿತು.

ಕೃಷ್ಣನ ಕೊಳಲಿನ ಕರೆ ನಾದಸುಧೆಯ ಧಾರೆ

• ಚಂದ್ರಹಾಸ ಹಿರೇಮಳಲಿ

ಅತ್ಯಂತ ಸಿರಿವಂತ ಕುಟುಂಬದಿಂದ ಬಂದು, ವಿದೇಶಗಳಲ್ಲಿ ಓದಿ ಒಂದು ರೀತಿಯೊಳಗೆ 'ಫಾರಿನ್ ಗೌಡ' ಎಂಬ ರೀತಿಯೊಳಗೆ ಬದುಕಿದ ಎಸ್.ಎಂ. ಕೃಷ್ಣ ಅವರು, ನಾಡ ಜನರ ಸಂಕಷ್ಟಗಳಿಗೆ ಕಿವಿಯಾನಿಸಿ, ಬಡವರು-ಮಧ್ಯಮವರ್ಗದವರ ಜೀವನ ಸಹ್ಯವಾಗಬೇಕೆಂದು ಧ್ಯಾನಿಸಿದವರು. ಅದಕ್ಕೆ ಕ್ರಿಯಾರೂಪವನ್ನೂ ಕೊಟ್ಟ ಅವರು ತಮ್ಮ ಅಧಿಕಾರದ 'ಕೊಳಲ' ದನಿಯು ಜನರ ಬವಣೆಗಳನ್ನು ನೀಗಿಸುವ ನಾದದ ನದಿಯಾಗಲಿ ಎಂದು ತಪಿಸಿದವರು; ಅದನ್ನು ಆಗುಮಾಡಿ ತೋರಿಸಿದವರು...

ಮಧ್ಯಾಹ್ನದ ಬಿಸಿಯೂಟ

ಪ್ರತಿ ಮಗುವಿಗೂ ಶಿಕ್ಷಣ ದೊರೆಯಬೇಕು ಎನ್ನುವ ಉದ್ದೇಶದಿಂದ ₹200 ಕೋಟಿ ವೆಚ್ಚದಲ್ಲಿ ಅಕ್ಷರ ದಾಸೋಹ ಯೋಜನೆ ಜಾರಿಗೆ ತಂದರು. ಅಂದು 50 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಈ ಯೋಜನೆ ಅಡಿ ಮಧ್ಯಾಹ್ನದ ಬಿಸಿಯೂಟ ದೊರೆಯುವಂತಾಗಿತ್ತು. ಇದರಿಂದ ಶಾಲೆಯಿಂದ ಹೊರಗೆ ಉಳಿಯುತ್ತಿದ್ದ ಬಡ, ಕೂಲಿ ಕಾರ್ಮಿಕರ ಮಕ್ಕಳು ಮತ್ತೆ ಶಾಲೆ ಕಡೆ ಮುಖ ಮಾಡಿದ್ದರು. ಆ ಕಾಲಘಟ್ಟದಲ್ಲಿ ಈ ಯೋಜನೆ ದೇಶಕ್ಕೆ ಮಾದರಿಯಾಗಿತ್ತು.

ಸರ್ಕಾರಿ ಶಾಲೆ, ಕಾಲೇಜಿನಲ್ಲಿ ಬಾಲಕಿಯರಿಗೆ ಒಂದರಿಂದ ಪಿಯುಸಿವರೆಗೆ ಉಚಿತ ಶಿಕ್ಷಣ, ಶಾಲೆಯಿಂದ ಹೊರಗೆ ಉಳಿದಿದ್ದ 3 ಲಕ್ಷಕ್ಕೂ ಹೆಚ್ಚು ಮಕ್ಕಳನ್ನು ಮರಳಿ ಕರೆತರಲು ಬಿಸಿಯೂಟದ ಜತೆಗೆ ಬಾ ಮರಳಿ ಶಾಲೆಗೆ, ಕೂಲಿಯಿಂದ ಶಾಲೆಗೆ, ಮಧ್ಯಂತರ ಶಾಲೆ ಮತ್ತಿತರ ಕಾರ್ಯಕ್ರಮಗಳನ್ನು ಪೂರಕವಾಗಿ ಅನುಷ್ಠಾನಗೊಳಿಸಿದ್ದರು. ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಕಲಿಕೆ, ಪೂರಕ ಪರೀಕ್ಷೆಗಳಿಗೆ ಚಾಲನೆ ನೀಡಿದ್ದರು.

ವಸತಿ ಕ್ರಾಂತಿ

ಎಸ್.ಎಂ. ಕೃಷ್ಣ ಅವರು ತಮ್ಮ ಅವಧಿಯಲ್ಲಿ ವಸತಿ ಕ್ರಾಂತಿಯನ್ನೇ ಮಾಡಿದರು. ವಸತಿ ರಹಿತರಿಗೆ ಮನೆ ನೀಡುವ ಕಾರ್ಯಕ್ರಮ ಜಾರಿಗೆ ಬಂದು 40 ವರ್ಷಗಳಾಗಿದ್ದರೂ 4 ಲಕ್ಷ ಮನೆಗಳನ್ನು ನೀಡಲು ಸಾಧ್ಯವಾಗಿತ್ತು. ಕೃಷ್ಣ ಅವರು ಮುಖ್ಯಮಂತ್ರಿಯಾಗಿ ನಾಲ್ಕೂವರೆ ವರ್ಷಗಳ ಅವಧಿಯಲ್ಲೇ ನಿರ್ಮಿಸಿದ್ದು 7 ಲಕ್ಷಕ್ಕೂ ಹೆಚ್ಚು ಮನೆಗಳು. ಜತೆಗೆ, ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ 97,410 ನಿವೇಶನಗಳನ್ನು ಬಡವರಿಗೆ ಹಂಚಿಕೆ ಮಾಡಿದ್ದರು.

ಮಹಿಳಾ ಸಬಲೀಕರಣದ ಹೆಜ್ಜೆ 'ಸ್ತ್ರೀಶಕ್ತಿ'

ಬಡ ಕುಟುಂಬದ ಮಹಿಳೆಯರು, ಭೂರಹಿತರು, ವಿಧವೆಯರು, ಪರಿಶಿಷ್ಟರು, ಅಂಗವಿಕಲೆಯರು ಸೇರಿದಂತೆ ಎಲ್ಲ ತಳಸಮುದಾಯಗಳ ಮಹಿಳಾ ಸಬಲೀಕರಣಕ್ಕೆ ನೆರವಾಗುವ ಕ್ರಾಂತಿಕಾರಕ ಸ್ತ್ರೀಶಕ್ತಿ ಯೋಜನೆಯನ್ನು ಅ.18, 2000ರಂದು ಜಾರಿಗೆ ತಂದರು.

ಸಮಾಜದಲ್ಲಿನ ಸಮಾನ ಆರ್ಥಿಕ ಹಾಗೂ ಸಾಮಾಜಿಕ ಸ್ಥಾನವಿರುವ, ಸಮಾನ ಮನಸ್ಸಿನ, ಒಂದೇ ಪ್ರಾದೇಶಿಕ ಸಾಮ್ಯತೆಯ ಗುಂಪಿನ ಮಹಿಳೆಯರು ಸ್ವಸಹಾಯ ಗುಂಪುಗಳನ್ನು ಕಟ್ಟಿಕೊಂಡು ತಮ್ಮ ಶಕ್ತ್ಯಾನುಸಾರ ಸಣ್ಣ ಪ್ರಮಾಣದಲ್ಲಿ ಹಣ ಉಳಿತಾಯ ಮಾಡುವುದು, ಬ್ಯಾಂಕ್ ವಹಿವಾಟು ನಡೆಸುವುದು, ಅಂತಹ ಸಂಘಗಳಿಗೆ ಬಡ್ಡಿರಹಿತ ಸಾಲದ ಜತೆಗೆ, ವಿವಿಧ ರೀತಿಯ ತರಬೇತಿ ನೀಡುವ ಮೂಲಕ ಸ್ವಯಂ ಉದ್ಯೋಗ ಕೈಗೊಳ್ಳಲು ಸಹರಿಸುವುದು ಯೋಜನೆಯ ಉದ್ದೇಶ. ಅಂದು ಅವರು ಸ್ತ್ರೀಶಕ್ತಿ ಯೋಜನೆ ಜಾರಿಗೆ ತಂದ ಫಲವಾಗಿ ಇಂದು ಲಕ್ಷಾಂತರ ಮಹಿಳೆಯರು ಬದುಕಿನ ದಾರಿ ಕಂಡುಕೊಂಡಿದ್ದಾರೆ.

ವೈದ್ಯಕೀಯದಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ಮೀಸಲು

ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಲ್ಲಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಶೇ 5ರಷ್ಟು ಸೀಟು ಮೀಸಲಿಟ್ಟರು. ಸರ್ಕಾರಿ ಕಾಲೇಜುಗಳಲ್ಲಿ ಮಾಹಿತಿ ತಂತ್ರಜ್ಞಾನ ಆಧಾರಿತ ಕೋರ್ಸ್‌ಗಳ ಆರಂಭಿಸಿದರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2001 ಜಾರಿಗೆ ತಂದರು.

ಡಾ.ರಾಜ್‌ಕುಮಾರ್ ಅವರ ಅಪಹರಣ ಆಗಿದ್ದ ಸಂದರ್ಭದಲ್ಲಿ ರಾಜ್ ಪತ್ನಿ ಪಾರ್ವತಮ್ಮ ಮತ್ತು ಮಕ್ಕಳೊಂದಿಗೆ(ಎಡಚಿತ್ರ) ಡಾ. ರಾಜ್‌ಕುಮಾರ್ ಅವರೊಂದಿಗೆ

ಕಾವೇರಿಗಾಗಿ ಪಾದಯಾತ್ರೆ ನಡೆಸಿದ ಸಂದರ್ಭ

ಯುವಕ ಕೃಷ್ಣ ಅವರ ಸೈಕಲ್ ಸವಾರಿ

ಇಂದು ಕಲಾಪವಿಲ್ಲ

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ನಿಧನದ ಪ್ರಯುಕ್ತ ಬುಧವಾರ ಸರ್ಕಾರಿ ರಜೆ ಘೋಷಿಸಲಾಗಿದ್ದು, ಆದ ಕಾರಣ ವಿಧಾನಮಂಡಲದ ಕಲಾಪಗಳು ನಡೆಯುವುದಿಲ್ಲ.

ಎಸ್.ಎಂ.ಕೃಷ್ಣ ಅಸಾಧಾರಣ ನಾಯಕರಾಗಿದ್ದರು. ಸಮಾಜದ ಎಲ್ಲ ವರ್ಗಗಳ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. ಇತರರ ಜೀವನವನ್ನು ಸುಧಾರಿಸಲು ದಣಿವರಿಯದೆ ಶ್ರಮಿಸಿದ್ದ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಗಮನಹರಿಸಿದ್ದರು. ಹಲವು ವರ್ಷಗಳಿಂದ ಅವರೊಂದಿಗೆ ಸಂವಾದ ನಡೆಸುವ ಅನೇಕ ಅವಕಾಶಗಳು ನನಗೆ ದೊರೆತಿದ್ದವು. ಆ ಸಂವಾದಗಳನ್ನು ನಾನು ಯಾವಾಗಲೂ ಗೌರವಿಸುತ್ತೇನೆ

ನರೇಂದ್ರ ಮೋದಿ, ಪ್ರಧಾನಿ

ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡ ಸಂದರ್ಭ. ಬಿಜೆಪಿಯ ಬಿ.ಎಸ್.ಯಡಿಯೂರಪ್ಪ ಪಕ್ಷದ ಶಾಲು ಹಾಕಿ ಸ್ವಾಗತಿಸಿದ್ದರು

'ದ್ವೇಷ, ಸೇಡಿಲ್ಲದ ರಾಜಕಾರಣಿ'

ಕೃಷ್ಣ ಅವರು ಯಾರ ವಿರುದ್ಧವೂ ದ್ವೇಷ ಮತ್ತು ಸೇಡಿನ ರಾಜಕಾರಣ ಮಾಡಲಿಲ್ಲ. ಎಲ್ಲರನ್ನೂ ಪ್ರೀತಿಸುವ ಮತ್ತು ಗೌರವಿಸುವ ಅಪರೂಪದ ವ್ಯಕ್ತಿಯಾಗಿದ್ದರು. 1968ರಲ್ಲಿ ಕೃಷ್ಣ ಅವರು ಮೈಸೂರಿನ ಪುರಭವನದ ಎದುರು ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯ ಸಭೆ ಕರೆದಿದ್ದರು. ಆಗ ವಿದ್ಯಾರ್ಥಿಯಾಗಿದ್ದ ನಾನು ಆ ಸಭೆಯಲ್ಲಿ ಭಾಗವಹಿಸಿದ್ದೆ.

ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರಲು ತೀರ್ಮಾನಿಸಿದಾಗ, ಮಹಾರಾಷ್ಟ್ರ ರಾಜ್ಯಪಾಲರಾಗಿದ್ದ ಕೃಷ್ಣ ಅವರನ್ನು ಭೇಟಿ ಮಾಡಲು ನಿರ್ಧರಿಸಿದೆ. ಅವರನ್ನು ಭೇಟಿ ಮಾಡಲು ನಾನು, ಎಚ್.ಸಿ.ಮಹದೇವಪ್ಪ ಮತ್ತು ಸಿ.ಎಂ.ಇಬ್ರಾಹಿಂ ಹೋಗಿದ್ದೆವು. ಆತ್ಮೀಯವಾಗಿ ಬರ ಮಾಡಿಕೊಂಡರು. ಕಾಂಗ್ರೆಸ್ ಸೇರುವ ನಮ್ಮ ಅಭಿಪ್ರಾಯ ತಿಳಿಸಿದಾಗ, ಕಾಂಗ್ರೆಸ್‌ಗೆ ನಿಮ್ಮ ಅಗತ್ಯವಿದೆ ಕಾಂಗ್ರೆಸ್ ಸೇರಿಕೊಳ್ಳಿ ಎಂದು ಹೇಳಿದರು. ಅದೇ ವೇಳೆಗೆ ನನ್ನನ್ನು ಜೆಡಿಎಸ್‌ನಿಂದ ಉಚ್ಚಾಟಿಸಲಾಯಿತು.

ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ ಅತಿ ಹೆಚ್ಚು ಸವಾಲುಗಳನ್ನು ಎದುರಿಸಿದರು. ಬೆಂಗಳೂರನ್ನು ಸಿಂಗಪುರ ಮಾಡುವ ಕನಸು ಕಂಡಿದ್ದರು. ಆ ಕನಸು ನನಸಾಗಲಿಲ್ಲ. ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಇವರ ಕೊಡುಗೆ ಅಪಾರ. ಬೆಂಗಳೂರು ಭಾರತದ ಸಿಲಿಕಾನ್ ವ್ಯಾಲಿ ಆಗಿ ರೂಪಿಸಿದ ಕೀರ್ತಿ ಕೃಷ್ಣ ಅವರದು

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಬೆಂಗಳೂರಿಗೆ ಘನತೆ, ಜಾಗತಿಕ ಮನ್ನಣೆ ತಂದು ಕೊಟ್ಟವರು'

ಬೆಂಗಳೂರಿಗೆ ಘನತೆ ಮತ್ತು ಜಾಗತಿಕ ಮನ್ನಣೆ ತಂದುಕೊಟ್ಟವರೇ ಕೃಷ್ಣ. ಬೆಂಗಳೂರಿಗೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಮೆಟ್ರೊ ಯೋಜನೆಗಳು ಕಾರ್ಯಗತವಾಗಲು ಇವರ ಕೊಡುಗೆ ಇದೆ. ನಿಜವಾದ ಬ್ರ್ಯಾಂಡ್ ಬೆಂಗಳೂರು ಆಗಿದ್ದು, ಇವರ ಕಾಲದಲ್ಲೇ. ಅವರು ಬಿಜೆಪಿ ಸೇರುವುದಕ್ಕೆ ಮೊದಲು ನನಗೆ ಕರೆ ಮಾಡಿ, ನಾನು ಬಿಜೆಪಿ ಸೇರಬೇಕು ಅಂದುಕೊಂಡಿದ್ದೇನೆ. ದೆಹಲಿ ಬಿಜೆಪಿಯಲ್ಲಿ ಹೆಚ್ಚು ಪರಿಚಯವಿಲ್ಲ. ನನ್ನನ್ನು ದೆಹಲಿಗೆ ಕರೆದುಕೊಂಡು ಹೋಗುತ್ತೀಯಾ ಎಂದು ಕೇಳಿದರು. ದೆಹಲಿಗೆ ಅವರನ್ನು ಕರೆದುಕೊಂಡು ಹೋಗಿ ವರಿಷ್ಠರನ್ನು ಭೇಟಿ ಮಾಡಿಸಿದ್ದೆ.

ಆರ್.ಅಶೋಕ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

ನನ್ನಿಂದ ರಹಸ್ಯ ಕೆಲಸ ಮಾಡಿಸಿದ್ದರು

ಯಾವುದೇ ವಿಷಯವಿದ್ದರೂ ಸರಿ ಎಲ್ಲರ ಅಭಿಪ್ರಾಯ ಪಡೆದುಕೊಂಡೇ ಕೃಷ್ಣ ಅವರು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಡಾ.ರಾಜ್‌ಕುಮಾರ್ ಅವರನ್ನು ವೀರಪ್ಪನ್ ಅಪಹರಣ ಮಾಡಿದಾಗ ಹಲವು ರಹಸ್ಯ ಕೆಲಸಗಳನ್ನು ನನ್ನಿಂದ ಮಾಡಿಸಿದ್ದರು. ಆಗ ಸಂಪುಟದಲ್ಲಿ ನಾನು ಮತ್ತು ಡಿ.ಕೆ. ಶಿವಕುಮಾರ್ ಅವರಿಗೆ ಹೆಚ್ಚು ಆಪ್ತರಾಗಿದ್ದೆವು. ಶಿವಕುಮಾರ್ ಮಾಡಬಹುದಾದ ಕೆಲಸವನ್ನು ಅವರಿಂದಲೂ, ನಾನು ಮಾಡಬಹುದಾದ ಕೆಲಸವನ್ನು ನನ್ನಿಂದಲೂ ಮಾಡಿಸುತ್ತಿದರು. ಆ ಕೆಲಸಗಳನ್ನು ಅದಲು ಬದಲು ಮಾಡುತ್ತಿರಲಿಲ್ಲ. ಯಾರಿಂದ ಯಾವ ಕೆಲಸ ತೆಗೆಸಬೇಕು ಎಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು.

ಜಿ.ಪರಮೇಶ್ವರ, ಗೃಹ ಸಚಿವ

ಉ.ಕ ಅನ್ಯಾಯ ಸರಿಪಡಿಸಲು ದಿಟ್ಟ ಹೆಜ್ಜೆ ಇಟ್ಟವರು

ಅತ್ಯಂತ ಹಿಂದುಳಿದ ಉತ್ತರ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿಗೆ ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡಿಸಿದವರು ಕೃಷ್ಣ. ಉತ್ತರ ಕರ್ನಾಟಕಕ್ಕೆ ಆದ ಅನ್ಯಾಯವನ್ನು ಸರಿಪಡಿಸಲು ಪ್ರೊ.ಅಲಗ್ ಸಮಿತಿಯನ್ನು ರಚಿಸಿದರು. ಅವರು ಆ ಕೆಲಸವನ್ನು ಒಪ್ಪಿಕೊಳ್ಳದಿದ್ದಾಗ, ಡಾ.ಡಿ.ಎಂ.ನಂಜುಂಡಪ್ಪ ಅವರ ಸಮಿತಿ ರಚಿಸಿದರು. ನಂಜುಂಡಪ್ಪ ಅವರ ವರದಿಯನ್ನು ಜಾರಿ ಮಾಡಿದ್ದೂ ಅಲ್ಲದೇ, ಹಣಕಾಸಿನ ನೆರವು ನೀಡಿದರು. ಅಲ್ಲದೇ, ನೀರಾವರಿ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಶೇ 37ರಷ್ಟು ಹಣವನ್ನು ನಿಗದಿ ಮಾಡಿದರು. ಅಪೂರ್ಣ ಯೋಜನೆಗಳನ್ನು ಪೂರ್ಣಗೊಳಿಸಲು ಚಾಲನೆ ನೀಡಿದರು. ಕೃಷ್ಣ ಅತ್ಯಂತ ಸ್ಟೈಲಿಷ್ ರಾಜಕಾರಣಿ ಆಗಿದ್ದರೂ ಮನೆಯಲ್ಲಿ ಮುದ್ದೆ,ಉಪ್ಪುಸಾರು ಮತ್ತು ಉಪ್ಪಿನಕಾಯಿ ಊಟ ಮಾಡುತ್ತಿದ್ದರು.

ಎಚ್.ಕೆ.ಪಾಟೀಲ, ಕಾನೂನು ಸಚಿವ

ನನ್ನ ಸ್ನೇಹಿತ ಮತ್ತು ದೀರ್ಘ ಕಾಲ ಕರ್ನಾಟಕದ ಸಹೋದ್ಯೋಗಿಯಾಗಿದ್ದ ಎಸ್.ಎಂ.ಕೃಷ್ಣ ಅವರ ಸಾವಿನಿಂದ ನನಗೆ ದುಃಖವಾಗಿದೆ. ಒಂದೇ ಕಾಲದಲ್ಲಿ ರಾಜಕೀಯ ಆರಂಭಿಸಿದ್ದ ನಾವು, ಅಭಿವೃದ್ಧಿ ಮತ್ತು ಆಡಳಿತದ ಬಗ್ಗೆ ವಿಭಿನ್ನ ದೃಷ್ಟಿಕೋನಗಳನ್ನು ರೂಢಿಸಿಕೊಂಡಿದ್ದೆವು

ಎಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

ಪತ್ನಿ ಪ್ರೇಮಾ ಅವರೊಂದಿಗೆ

ಸುಭಾಷಿತ

ಮಾತಿಗೆ ಮನೆಯನ್ನು ಕಟ್ಟಿ ಬೆಳಗಿಸುವ ಮತ್ತು ಮನೆಯನ್ನು ಸುಟ್ಟು ಬೂದಿ ಮಾಡುವ ಎರಡೂ ಶಕ್ತಿಗಳಿವೆ.

-ಶಿವಕುಮಾರ ಸ್ವಾಮೀಜಿ

ಹಿಂದಿ ಬಳಕೆಗೆ ಅತಿ ಆದ್ಯತೆ ಕೇಂದ್ರದ ಕ್ರಮ ಸರಿಯಲ್ಲ

ಹಿಂದಿಗೆ ಹೆಚ್ಚಿನ ಆದ್ಯತೆಯನ್ನು ನೀಡುವ ಭಾಷಾ ನೀತಿಯನ್ನು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಹಿಂದಿನಿಂದಲೂ ಪಾಲಿಸುತ್ತ ಬಂದಿದೆ. ಅಲ್ಲದೆ, ಆ ನೀತಿಗೆ ಅದು ಅಚಲ ನಿಷ್ಠೆಯನ್ನು ತೋರಿದೆ ಕೂಡ. ಹಿಂದಿಯ ಬಳಕೆಯನ್ನು ಇನ್ನಷ್ಟು ಕ್ಷೇತ್ರಗಳಿಗೆ ವಿಸ್ತರಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರದ ನಡೆಯು ದಿನಕಳೆದಂತೆ ಹೆಚ್ಚೆಚ್ಚು ಎದ್ದುಕಾಣುವಂತಿದೆ. ಕೇಂದ್ರ ಸರ್ಕಾರದ ಎಲ್ಲ ಸಂಸ್ಥೆಗಳು ಈಗ ಹಿಂದಿಯ ಬಳಕೆಯನ್ನು ಉತ್ತೇಜಿಸುತ್ತಿವೆ, ರಾಜ್ಯ ಸರ್ಕಾರಗಳು ಕೂಡ ಹಿಂದಿಯ ಬಳಕೆಯನ್ನು ಹೆಚ್ಚು ಮಾಡಬೇಕು ಎಂದು ಕೇಂದ್ರ ಹೇಳುತ್ತಿದೆ. ಇಂಗ್ಲಿಷ್‌ನಲ್ಲಿ ತಾವು ಕೇಳಿದ್ದ ಪ್ರಶ್ನೆಗೆ ಸಚಿವರೊಬ್ಬರು ಹಿಂದಿಯಲ್ಲಿ ಉತ್ತರ ನೀಡಿದ್ದಕ್ಕೆ ಕೇರಳದ ಸಂಸದ ಜಾನ್ ಬ್ರಿಟ್ಟಾಸ್ ಅವರು ಈಚೆಗೆ ಪ್ರತಿಭಟನೆ ನಡೆಸಿದ್ದರು. 'ಸಂಸದ್ ಟಿ.ವಿ'ಯು ರಾಜ್ಯಸಭೆಯ ಕಲಾಪಗಳನ್ನು ಇನ್ನು ಮುಂದೆ ಹಿಂದಿಯಲ್ಲಿ ಮಾತ್ರ ಪ್ರಸಾರ ಮಾಡಲಿದೆ ಎಂದು ವರದಿಯಾಗಿದೆ. ರಾಜ್ಯಸಭೆಯ ಸದಸ್ಯರು ಇಂಗ್ಲಿಷ್‌ನಲ್ಲಿ ಮಾತನಾಡಿದರೂ ಅವರ ಧ್ವನಿಗೆ ಬದಲಾಗಿ ಹಿಂದಿಗೆ ಅನುವಾದಗೊಂಡ ಧ್ವನಿಯು ಪ್ರಸಾರ ಆಗಲಿದೆ. ಹೊಸ ಶಾಸನಗಳಿಗೆ ಕೇಂದ್ರ ಸರ್ಕಾರವು ಹಿಂದಿ ಹಾಗೂ ಸಂಸ್ಕೃತದ ಹೆಸರುಗಳನ್ನು ಬಳಕೆ ಮಾಡಿದೆ. ಕ್ರಿಮಿನಲ್ ಅಪರಾಧಗಳ ವಿಚಾರವಾಗಿ ಹೊಸದಾಗಿ ಜಾರಿಗೆ ಬಂದ ಶಾಸನಗಳು ಕೂಡ ಸಂಸ್ಕೃತದ ಹೆಸರು ಹೊತ್ತಿವೆ. ವಿಮಾನಯಾನಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು 'ಭಾರತೀಯ ವಾಯುಯಾನ ವಿಧೇಯಕ'ವನ್ನು ಕಳೆದ ವಾರ ಸಂಸತ್ತಿನಲ್ಲಿ ಮಂಡಿಸಿದೆ. ಹಿಂದಿಯಲ್ಲಿ ಇರುವ ಹಲವು ಹೆಸರುಗಳು ಹಾಗೂ ಹುದ್ದೆಗಳು ಹಿಂದಿಯೇತರ ಭಾಷಿಕರಿಗೆ ವಿಚಿತ್ರವಾಗಿ ಕಾಣಿಸಬಹುದು.

ತನ್ನ ಹಿಂದಿ ಅಭಿಯಾನಕ್ಕೆ ವ್ಯಾಪಕವಾದ ವಿರೋಧ ಇದೆ ಎಂಬುದನ್ನು ಕೇಂದ್ರ ಸರ್ಕಾರ ಗುರುತಿಸದೇ ಇದ್ದರೆ, ಅದು ವಿವೇಕದ ನಡೆಯಾಗುವುದಿಲ್ಲ

ಹಿಂದಿಯ ಬಗೆಗಿನ ವ್ಯಾಮೋಹವು ಒಕ್ಕೂಟ ವ್ಯವಸ್ಥೆಗೆ ವಿರುದ್ಧ. ಒಕ್ಕೂಟ ವ್ಯವಸ್ಥೆ ಎಂಬುದು ರಾಜ್ಯಗಳಿಗೆ ತಮ್ಮ ಗಡಿಯೊಳಗೆ ಸಾರ್ವಭೌಮತ್ವ ಕಲ್ಪಿಸುವ ಹಾಗೂ ಅವುಗಳಿಗೆ ಹಕ್ಕುಗಳನ್ನು ಮತ್ತು ಅಧಿಕಾರಗಳನ್ನು ನೀಡುವ ರಾಜಕೀಯ ಪರಿಕಲ್ಪನೆಯಷ್ಟೇ ಅಲ್ಲ. ಅದು ರಾಜ್ಯಗಳ ಭಾಷೆಗಳನ್ನು ಮತ್ತು ಇತರ ಅಸ್ಮಿತೆಗಳನ್ನು ಗುರುತಿಸಿ, ಗೌರವಿಸುವ ಒಂದು ಸಾಂಸ್ಕೃತಿಕ ಆಲೋಚನೆಯೂ ಹೌದು. ಹಿಂದಿಗೆ ನೀಡುವ ಅತಿಯಾದ ಪ್ರಾಧಾನ್ಯವು ಸಂವಿಧಾನದ ಆಶಯಗಳಿಗೆ ವಿರುದ್ಧ. ಸಂವಿಧಾನದ 348(1)(ಬಿ) ವಿಧಿಯು ದೇಶದ ಎಲ್ಲ ಶಾಸನಗಳ ಅಧಿಕೃತ ಪಠ್ಯವು ಇಂಗ್ಲಿಷ್‌ನಲ್ಲಿ ಇರಬೇಕು ಎಂದು ಹೇಳುತ್ತದೆ. ಅಂದರೆ, ಮಸೂದೆಗಳು, ತಿದ್ದುಪಡಿಗಳು, ಸಂಸತ್ತು ಹಾಗೂ ರಾಜ್ಯಗಳ ವಿಧಾನಮಂಡಲಗಳು ಅಂಗೀಕರಿಸಿದ ಕಾಯ್ದೆಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸುಗ್ರೀವಾಜ್ಞೆಗಳು, ಕಾನೂನುಗಳಿಗೆ ಸಂಬಂಧಿಸಿದ ನಿಯಮಗಳು ಇಂಗ್ಲಿಷ್‌ನಲ್ಲಿ ಇರಬೇಕು. ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳ ಕಲಾಪದ ಭಾಷೆ ಇಂಗ್ಲಿಷ್ ಆಗಿರಬೇಕು ಎಂದು ಕೂಡ 348(1) ವಿಧಿಯು ಹೇಳುತ್ತದೆ. ಸಂವಿಧಾನವು 'ಕಡ್ಡಾಯ' ಎಂದು ಹೇಳಿರುವುದನ್ನು ಸರ್ಕಾರಗಳು ಪಾಲಿಸಬೇಕು.

ಒಂದು ದೇಶವಾಗಿ ಭಾರತವು ಯಾವುದೇ ಒಂದು ಭಾಷೆಯ ಜೊತೆ ಬೆಸೆದುಕೊಂಡಿಲ್ಲ. ಭಾರತದಲ್ಲಿ ಬಹುತೇಕರು ಹಿಂದಿ ಮಾತನಾಡುವುದಿಲ್ಲ. ಭಾರತೀಯರು ಹಲವು ಭಾಷೆಗಳನ್ನು ಮಾತನಾಡುತ್ತಾರೆ. ದೇಶದಲ್ಲಿ ಅಧಿಕೃತವಾಗಿ ಗುರುತಿಸಲಾಗಿರುವ 22 ಭಾಷೆಗಳು ಇವೆ. ಇವಷ್ಟೇ ಅಲ್ಲದೆ, ಲಕ್ಷಾಂತರ ಮಂದಿ ಮಾತನಾಡುವ ಇತರ ಭಾಷೆಗಳೂ ಇವೆ. ಬೇರೆ ಬೇರೆ ಭಾಷೆಗಳನ್ನು ಮಾತನಾಡುವ ಜನ ತಮ್ಮ ಮಾತೃಭಾಷೆಯ ಜೊತೆ ಭಾವನಾತ್ಮಕವಾದ ನಂಟು ಹೊಂದಿರುತ್ತಾರೆ. ಭಾಷೆ ಎಂಬುದು ಜನರ ಅಸ್ಮಿತೆಯೂ ಹೌದು. ಹಿಂದಿ ಭಾಷೆಯ ಬಳಕೆ ಹೆಚ್ಚಿಸುವ ಕೇಂದ್ರ ಸರ್ಕಾರದ ಪ್ರಯತ್ನಗಳಿಗೆ ಬೇರೆ ಭಾಷೆಗಳನ್ನು ಬಳಸುವ ಜನರು ಪ್ರತಿರೋಧ ದಾಖಲಿಸಬಹುದು. ಹಾಗೆಯೇ ಹಿಂದಿಯೇತರ ಭಾಷಿಕ ರಾಜ್ಯಗಳ ಸರ್ಕಾರಗಳು ಕೂಡ ತಮ್ಮ ವಿರೋಧವನ್ನು ದಾಖಲಿಸಬಹುದು. ಏಕೆಂದರೆ, ಕೇಂದ್ರದ ನಡೆಯು ಬೇರೆ ಭಾಷೆಗಳಿಗಿಂತ ಹಿಂದಿಯೇ ಹೆಚ್ಚು ಪ್ರಧಾನ ಎಂದು ಬಿಂಬಿಸುವ ಯತ್ನದಂತೆ ಇದೆ. ಭಾಷೆಯು ವಸಾಹತುಶಾಹಿ ಕಾಲದ ಒಂದು ಅಸ್ತ್ರವೂ ಹೌದು. ತನ್ನ ಹಿಂದಿ ಅಭಿಯಾನಕ್ಕೆ ವ್ಯಾಪಕವಾದ ವಿರೋಧ ಇದೆ ಎಂಬುದನ್ನು ಕೇಂದ್ರ ಸರ್ಕಾರ ಗುರುತಿಸದೇ ಇದ್ದರೆ, ಅದು ವಿವೇಕದ ನಡೆಯಾಗುವುದಿಲ್ಲ. ದೇಶದ ಒಗ್ಗಟ್ಟನ್ನು ಗಮನದಲ್ಲಿ ಇರಿಸಿಕೊಂಡು ಕೇಂದ್ರವು ಈ ಅಭಿಯಾನವನ್ನು ನಿಲ್ಲಿಸಬೇಕು.

ದಿನದ ಟ್ವೀಟ್

ಕೆರೆ ತುಂಬಲಿ, ನಾಡು ಬೆಳಗಲಿ

ನೀರಿಲ್ಲದ ಕೆರೆ, ದೇವರಿಲ್ಲದ ದೇಗುಲ, ಹಿರಿಯರಿಲ್ಲದ ಮನೆಗೆ ಬೆಲೆಯಿಲ್ಲ. ನಮ್ಮ ಬಹುತೇಕ ಕೆರೆಗಳು ಈ ವರ್ಷ ಮಳೆನೀರಿನಿಂದ ತುಂಬಿವೆ. ಹಲವಾರು ಕಾರಣಗಳಿಂದ ಕೆಲವು ಕೆರೆಗಳು ಮಾತ್ರ ತುಂಬಿಲ್ಲ. ಈ ಕೆರೆಗಳಲ್ಲಿ ಉತ್ತಮ ಗುಣಮಟ್ಟದ ನೀರು ತುಂಬುವಂತೆ ಮಾಡಲು ನಾವು ಗರಿಷ್ಠ ಪ್ರಯತ್ನ ಮಾಡುತ್ತೇವೆ.

ಆನಂದ್ ಮಲ್ಲಿಗವಾಡ್, ಕೆರೆ ಸಂರಕ್ಷಕ

ಕಿಡಿನುಡಿ

ಮಧ್ಯದಲ್ಲೇ ಎದ್ದು ಹೊರನಡೆಯಬೇಕು ಎಂದಾದರೆ, ನೀವು ಕಾರ್ಯಕ್ರಮಕ್ಕೆ ಬರಲೇಬಾರದು ಅಥವಾ ಕಾರ್ಯಕ್ರಮ ಶುರುವಾಗುವ ಮೊದಲೇ ಹೊರನಡೆಯಬೇಕು. ಯಾವುದೇ ಕಲಾವಿದ ಪ್ರದರ್ಶನ ನೀಡುವಾಗ ಮಧ್ಯದಲ್ಲಿ ಎದ್ದುಹೋಗುವುದು ಬಹಳ ಒರಟಾದ ವರ್ತನೆ, ಅದು ದೇವಿ ಸರಸ್ವತಿಗೆ ಮಾಡುವ ಅಪಮಾನ.

(ಜೈಪುರದಲ್ಲಿ ಸೋಮವಾರ ನಡೆದ ತಮ್ಮ ಸಂಗೀತ ಕಾರ್ಯಕ್ರಮದಿಂದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಮತ್ತು ಕೆಲವು ಸಚಿವರು ಮಧ್ಯದಲ್ಲೇ ಹೊರನಡೆದಿದ್ದಕ್ಕೆ ಪ್ರತಿಕ್ರಿಯೆ)

ಸೋನು ನಿಗಮ್, ಗಾಯಕ

25 ವರ್ಷಗಳ ಹಿಂದೆ

ಶನಿವಾರ, 11-12-1999

• ಕೊಜೆಂಟ್ರಿಕ್ಸ್ ಬಗ್ಗೆ ತುಟಿಬಿಚ್ಚದ ರಾಜ್ಯ ಸಂಸದರು

ನವದೆಹಲಿ, ಡಿ. 10– ಕೊಜೆಂಟ್ರಿಕ್ಸ್ ಸಂಸ್ಥೆಯು ತನ್ನ ವಿದ್ಯುತ್ ಯೋಜನೆಯನ್ನು ಕೈಬಿಡಬೇಕಾದ ಪರಿಸ್ಥಿತಿಯನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಬೇಕೆಂದು ಕೋರಿದ್ದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರನ್ನು ಕರ್ನಾಟಕದ ಸಂಸತ್ ಸದಸ್ಯರು ಇಂದು ನಿರಾಶೆಗೊಳಿಸಿದ್ದಾರೆ.

ಉಡುಪಿ ಜಿಲ್ಲೆಯ ನಂದಿಕೂರಿನಲ್ಲಿ ಒಂದು ಸಾವಿರ ಮೆಗಾವಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಯೋಜನೆಯನ್ನು ಸ್ಥಾಪಿಸಲು ಮುಂದಾಗಿದ್ದ ಕೊಜೆಂಟ್ರಿಕ್ಸ್ ಸಂಸ್ಥೆಯು ಸರ್ಕಾರ ಮತ್ತು ನ್ಯಾಯಾಲಯದ 'ವಿಳಂಬ'ದಿಂದ ಬೇಸತ್ತು ಕೈಬಿಟ್ಟಿರುವ ಕಳವಳಕಾರಿ ಬೆಳವಣಿಗೆಯ ಬಗೆಗೆ ನಾಳೆ ಸಂಸತ್ತಿನಲ್ಲಿ ಪ್ರಸ್ತಾಪಿಸಬೇಕು ಎಂದು ಕೃಷ್ಣ ಅವರು ಸಂಸತ್ ಸದಸ್ಯರಿಗೆ ತಿಳಿಸಿದ್ದರು.

• ಕುಖ್ಯಾತ ಸುಧೀರ್ ಪ್ರಭು ಮತ್ತೆ ಸೆರೆ

ಬೆಂಗಳೂರು, ಡಿ. 10– ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಕಾವಲು ಸಿಬ್ಬಂದಿಗೆ ಆಮಿಷ ಒಡ್ಡಿ ಪರಾರಿಯಾಗಿದ್ದ ವಿಚಾರಣಾಧೀನ ಕೈದಿ ಹಾಗೂ ಭೂಗತ ಜಗತ್ತಿನ ಕುಖ್ಯಾತ ಮುತ್ತಪ್ಪ ರೈ ಸಹಚರ ಸುಧೀರ್ ಪ್ರಭುನನ್ನು (35) ನಗರದ ಪೊಲೀಸರು ಮತ್ತೆ ಬಂಧಿಸಿದ್ದಾರೆ.

ಚಿಕ್ಕಪೇಟೆ ಉಪವಿಭಾಗದ ಎಸಿಪಿ ಜಿ.ಎ.ಬಾವ– ಚಾಮರಾಜಪೇಟೆ ಇನ್‌ಸ್ಪೆಕ್ಟರ್ ಕೆ. ಮೂರ್ತಿ ಹಾಗೂ ಎಸ್‌ಐಗಳಾದ ಉಮೇಶ್ ಹಾಗೂ ವಾಲಿ ಬಾಷಾ ಅವರನ್ನು ಒಳಗೊಂಡ ತಂಡ ಗುರುವಾರ ಮಧ್ಯರಾತ್ರಿ ಧರ್ಮಸ್ಥಳದ ವಸತಿಗೃಹ ಒಂದರಲ್ಲಿ ಸುಧೀರ್ ಪ್ರಭು ಹಾಗೂ ಆತನ ಜತೆಯಲ್ಲಿದ್ದ ಜಗದೀಶ್, ಸೋಮು, ನಯಾಜ್ ಹಾಗೂ ಜಗ್ಗ ಎಂಬುವವರನ್ನು ಬಂಧಿಸುವಲ್ಲಿ ಯಶಸ್ವಿಯಾಯಿತು.

50 ವರ್ಷಗಳ ಹಿಂದೆ

ಬುಧವಾರ, 11-12-1974

• ನ್ಯಾಯ– ಅನ್ಯಾಯದ ಪರಿವೆ ಇಲ್ಲದೆ ಮೇಲೆರಗಲು ಸಿದ್ಧರಾಗಿದ್ದಾರೆ

ಮಂಗಳೂರು, ಡಿ. 10– 'ಕಳೆದ ಚುನಾವಣೆಯಲ್ಲಿ ಸೋತಿರುವವರೆಲ್ಲಾ ಗುಂಪುಕಟ್ಟಿ ನಮ್ಮ ಮೇಲೆ ಎರಗಲು ಮುಂದಾಗಿದ್ದಾರೆ. ಈ ದಿಸೆಯಲ್ಲಿ ಅವರಿಗೆ ನ್ಯಾಯ– ಅನ್ಯಾಯದ ಪರಿವೆಯೇ ಇಲ್ಲವಾಗಿದೆ' ಎಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಇಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಎಚ್ಚರಿಸಿದರು.

ಇಂದು ಇಲ್ಲಿಗೆ ಆಗಮಿಸಿದ ಮುಖ್ಯಮಂತ್ರಿಯವರು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಾ, ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಇದ್ದ ಸ್ಫೂರ್ತಿಗಿಂತಲೂ ಮಿಗಿಲಾಗಿ ಇಂದು ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯನ್ನು ಉಳಿಸಿಕೊಳ್ಳಲು ನಮಗೆ ಉತ್ಸಾಹ ಮತ್ತು ತಿಳಿವಳಿಕೆ ಅಗತ್ಯವಾಗಿದೆಯೆಂದರು.

'1969ರ ತನಕ ಅಧಿಕಾರ ಮೇಲುವರ್ಗದವರ ಕೈಯಲ್ಲಿತ್ತು. ಈಗ ಜನಸಾಮಾನ್ಯರಿಗೆ ಅಧಿಕಾರ ಸಿಕ್ಕಿರುವುದರಿಂದ ಸಲ್ಲದ ಆರೋಪಗಳನ್ನು ಕಾಂಗ್ರೆಸ್ಸಿಗರ ಮೇಲೆ ಹೊರಿಸಲಾಗುತ್ತಿದೆ. ಕಾರ್ಯಕರ್ತರು ಸಮರ್ಥರಾಗಿ ಪರಿಸ್ಥಿತಿಯನ್ನು ಎದುರಿಸಬೇಕು' ಎಂದು ಅವರು ಕರೆ ನೀಡಿದರು.

ಸಾಂಸ್ಕೃತಿಕ ದಾಸ್ಯವನ್ನು ಹೇರುವ ರಾಷ್ಟ್ರಮಟ್ಟದ ರಾಜಕೀಯಕ್ಕೊಂದು ಸ್ಥಳೀಯ ಪ್ರತಿರೋಧ

ಇದು ಬರೀ ಬಾಡಲ್ಲೊ ಅಣ್ಣಾ...

ಅನುರಣನ

ನಾರಾಯಣ ಎ.

ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಸ್ಯಾಹಾರದ ಜತೆಗೆ ಮಾಂಸಾಹಾರವನ್ನೂ ಒದಗಿಸಬೇಕು ಎನ್ನುವ ಬೇಡಿಕೆ ಕಾವು ಪಡೆದುಕೊಳ್ಳುತ್ತಿರುವುದು ಮತ್ತು ಅದರ ಸುತ್ತ ವಿವಾದ ಹುಟ್ಟಿಕೊಂಡಿರುವುದು ಆಹಾರಕ್ಕೆ ಮಾತ್ರ ಸಂಬಂಧಿಸಿದ ವಿಷಯವಲ್ಲ. ಮಾಂಸಾಹಾರದ ವ್ಯವಸ್ಥೆ ಆಗುತ್ತದೋ ಬಿಡುತ್ತದೋ ಎನ್ನುವ ವಿಷಯ ಬೇರೆ. ಇಂದಿನ ಸಂದರ್ಭದಲ್ಲಿ ಇಂತಹದ್ದೊಂದು ಬೇಡಿಕೆ ಎದ್ದಿದೆ ಮತ್ತು ಅದನ್ನು ಗಟ್ಟಿಯಾಗಿ ಪ್ರತಿಪಾದಿಸಲಾಗುತ್ತಿದೆ ಎನ್ನುವುದೇ ಒಂದು ವಿಶೇಷ.

ಇದು ನಿರ್ದಿಷ್ಟ ಆಹಾರಕ್ಕಾಗಿ ಕೆಲವರು ಮಾಡುತ್ತಿರುವ ಆಗ್ರಹ ಎನ್ನುವುದಕ್ಕಿಂತ ಹೆಚ್ಚಾಗಿ ಮಂಡ್ಯದ ಮಣ್ಣಿನಿಂದ ಮೂಡಿಬಂದ ಒಂದು ಪ್ರತಿರೋಧದ ಧ್ವನಿ ಎನ್ನುವುದು ಸೂಕ್ತ. ಎಲ್ಲೆಡೆ ಏಕಸಂಸ್ಕೃತಿಯೊಂದನ್ನು ಹೇರುವುದರ ಭಾಗವಾಗಿ ಜನರ ಆಹಾರಕ್ರಮವನ್ನೂ ರಾಷ್ಟ್ರೀಯ, ರಾಷ್ಟ್ರ ವಿರೋಧಿ ಎನ್ನುವಂತೆ ಪ್ರತ್ಯೇಕಿಸಿದ್ದು ಮತ್ತು ಅದನ್ನು ಒಪ್ಪಿಕೊಳ್ಳದವರೆಲ್ಲರೂ ದೇಶದ್ರೋಹಿಗಳು ಮತ್ತು ಧರ್ಮ ದ್ರೋಹಿಗಳು ಎಂದು ಬಿಂಬಿಸುವ ಇಂದಿನ ರಾಜಕೀಯದ ಹಿನ್ನೆಲೆಯಲ್ಲಿ ಈ ಮಾಂಸಾಹಾರದ ಪ್ರತಿಪಾದನೆಯನ್ನು ಗಮನಿಸಬೇಕಿದೆ.

ಕರ್ನಾಟಕದಲ್ಲಿ ಈ ರಾಜಕೀಯದ ಅತ್ಯಂತ ಕೊಳಕು ಪ್ರದರ್ಶನ ಆಗಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಹಿಂದಿನ ಅಧಿಕಾರಾವಧಿಯಲ್ಲಿ ಮಾಂಸಾಹಾರ ಸೇವಿಸಿ ದೇವಸ್ಥಾನವೊಂದಕ್ಕೆ ಭೇಟಿ ನೀಡಿದರು ಎನ್ನುವುದನ್ನು ಮುಂದಿಟ್ಟುಕೊಂಡು ಕೆಲವರು ಸೃಷ್ಟಿಸಿದ ವಿವಾದದಲ್ಲಿ. ಅಂದು, ಆಹಾರ ಸೇವನೆಯ ಕಾರಣದಿಂದ ದೇವಸ್ಥಾನ ಪ್ರವೇಶಕ್ಕೆ ನಿರ್ಬಂಧವೇನೂ ಇಲ್ಲ ಎಂದು ಆ ದೇವಸ್ಥಾನದ ಆಡಳಿತ ಮಂಡಳಿಯವರೇ ಸಮಜಾಯಿಷಿ ನೀಡಿದ ಮೇಲೂ ಸಿದ್ದರಾಮಯ್ಯ ಅವರನ್ನು ಹಿಂದೂ ವಿರೋಧಿ ಎಂದು ಬಿಂಬಿಸಿದ್ದು ಬಹುಸಂಸ್ಕೃತಿಯ ಜನವರ್ಗವನ್ನು ಅಕ್ಷರಶಃ ಅವಮಾನಿಸಿದಂತಿತ್ತು.

ನಾವು ಹೇಳಿದ್ದೇ ಧರ್ಮ, ನಾವು ನಿರೂಪಿಸಿದ್ದೇ ದೇವರು, ನಾವು ಪ್ರತಿಪಾದಿಸಿದ್ದೇ ಪಾವಿತ್ರ್ಯ, ನಾವು ಒಪ್ಪಿಕೊಂಡದ್ದೇ ಆಹಾರಕ್ರಮ ಎನ್ನುವ ಒಂದು ಜನವರ್ಗದವರ ಅಹಂಕಾರದ ಎದುರು ಸಿದ್ದರಾಮಯ್ಯ ಪ್ರಕರಣದಲ್ಲಿ ಒಂದು ಸಣ್ಣ ಪ್ರತಿರೋಧವೂ ಹುಟ್ಟಿಕೊಂಡಿರಲಿಲ್ಲ. ಏಕೆಂದರೆ, ಈ ನೆಲದ ಮೂಲ ವಾರಸುದಾರರಾದ ಬಹುಜನವರ್ಗಗಳು ತಮ್ಮ ಮೇಲಾದ ನಿರಂತರ ಸಾಂಸ್ಕೃತಿಕ ದಾಳಿಯಿಂದ ಆ ಮಟ್ಟಿಗೆ ತಮ್ಮತನವನ್ನು ಕಳೆದುಕೊಂಡು ನಿಸ್ತೇಜವಾಗಿಬಿಟ್ಟಿದ್ದವು. ಮಾಂಸಾಹಾರದ ಬಗ್ಗೆ ಯಾರೋ ತಕರಾರು ಎತ್ತುತ್ತಿದ್ದಾರೆ ಎನ್ನುವುದಕ್ಕಿಂತ ಹೆಚ್ಚಾಗಿ ಮಾಂಸಾಹಾರಿಗಳೇ ತಮ್ಮ ಆಹಾರಕ್ರಮದ ಬಗ್ಗೆ ಕೀಳರಿಮೆ ಬೆಳೆಸಿಕೊಂಡದ್ದು ಒಂದು ದುರಂತ. ಅಂದೇ ಜಾಗೃತವಾಗಿ ಮೇಲೆದ್ದು, ಮಾಂಸಾಹಾರ ಸೇವನೆ ಮಾಡಿ ದೇವಾಲಯ ಪ್ರವೇಶಿಸಬಾರದೆಂಬ ನಿರ್ಬಂಧ ಹೇರುವ ರಾಜಕೀಯವನ್ನು ಖಂಡಿಸಬೇಕಿದ್ದ ಈ ನೆಲದ ಶೂದ್ರಪ್ರಜ್ಞೆ ಈಗಲಾದರೂ ಈ ರೀತಿ ಮಂಡ್ಯದಲ್ಲಿ ಕಾಣಿಸಿಕೊಂಡಿರುವುದು ಸ್ವಾಗತಾರ್ಹ. ಮಾಂಸಾಹಾರದಿಂದಾಗಿ ದೇವರ ಪಾವಿತ್ರ್ಯ ಕೆಡುತ್ತದೆ ಎನ್ನುವವರು ಒಂದು ವಿಷಯ ಅರಿತುಕೊಳ್ಳಬೇಕು. ದೇವರನ್ನು ಸೃಷ್ಟಿಯ ಅಗೋಚರ ನಿಯಾಮಕ ಶಕ್ತಿ ಎಂದು ಸ್ವೀಕರಿಸಿದರೆ, ಒಂದು ಜೀವಿಯು ಬದುಕುವುದಕ್ಕಾಗಿ ಇನ್ನೊಂದು ಜೀವಿಯನ್ನು ತಿನ್ನಲೇಬೇಕಾದ ಆಹಾರ ಸರಪಳಿಯನ್ನು ಸೃಷ್ಟಿಸಿದ್ದು ಅದೇ ದೇವರು ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಪರ್ಯಾಯವಾಗಿ, ದೇವರುಗಳು ಎಂದರೆ ಮನುಷ್ಯನೇ ಸೃಷ್ಟಿಸಿದ ಪೌರಾಣಿಕ ಪಾತ್ರಗಳೆಂದು ನಂಬಿದರೆ, ಅಂತಹ ಹಲವಾರು ದೇವರುಗಳು ಮಾಂಸಾಹಾರಿಗಳಾಗಿದ್ದರು ಎನ್ನುವುದನ್ನು ಆಯಾ ದೇವರ ಪುರಾಣಗಳೇ ಸಾರುತ್ತವೆ.

ಆಹಾರವು ಎಲ್ಲ ಜೀವಸೆಲೆಗಳ ಚೈತನ್ಯದ ಮೂಲ. ಆಹಾರವು ಯಾವುದೇ ರೂಪದಲ್ಲಿದ್ದರೂ ಸೇವಿಸುವ ಜೀವಿಗೆ ಅದೇ ದೇವರು, ಅದೇ ಪವಿತ್ರ. ಹಾಗಾಗಿ, ಮಾಂಸಾಹಾರವು ಅಪವಿತ್ರ, ಕೊಳಕು, ಹೊಲಸು ಎಂಬೆಲ್ಲಾ ನಂಬಿಕೆಗಳನ್ನು ಸೃಷ್ಟಿಸಿ ಬಹುಜನರ ಮನಸ್ಸಿನಲ್ಲಿ ಪಾಪಪ್ರಜ್ಞೆ ಮತ್ತು ಕೀಳರಿಮೆ ಹುಟ್ಟುಹಾಕಿದ್ದು ಒಂದು ರೀತಿಯ ಸಾಂಸ್ಕೃತಿಕ ವಸಾಹತೀಕರಣ. ಇದರಿಂದಾಗಿ ಮಾಂಸದಡುಗೆಯನ್ನೇ ತಮ್ಮ ದೇವರುಗಳಿಗೂ ಬಡಿಸಿ ಆಧ್ಯಾತ್ಮಿಕ ಅಗತ್ಯಗಳನ್ನು ಸರಳವಾಗಿ ಪೂರೈಸಿಕೊಳ್ಳುತ್ತಿದ್ದ ಬಹುಜನ ವರ್ಗಗಳು 'ಶುದ್ಧ' ಸಸ್ಯಾಹಾರಿ ವೈದಿಕ ದೇವರುಗಳು ತಮ್ಮ ಮೂಲ ದೇವರುಗಳಿಗಿಂತ ಶ್ರೇಷ್ಠ ಮತ್ತು ಬಲಶಾಲಿಗಳು ಅಂತ ಭ್ರಮಿಸುವಂತಾಯಿತು. ಆ ಪ್ರಭಾವಿ ದೇವರುಗಳ ಪ್ರೀತ್ಯರ್ಥ ಆಡಂಬರದ ತೀರ್ಥಯಾತ್ರೆ ಮಾಡುತ್ತಾ, ಹೋಮ ಹವನ ಮಾಡಿಸುತ್ತಾ ಆಧ್ಯಾತ್ಮಿಕವಾಗಿಯೂ ಆದಿಭೌತಿಕವಾಗಿಯೂ ತಮ್ಮನ್ನು ತಾವೇ ಕಳೆದುಕೊಳ್ಳುವಂತೆಯೂ ಆಯಿತು. ಅವರಿಗಾದ ಈ ನಷ್ಟದ ಲಾಭ ಪಡೆದವರು ಯಾರೆಂದು ವಿವರಿಸುವ ಅಗತ್ಯ ಇಲ್ಲ.

ಸಾಹಿತ್ಯ ಸಮ್ಮೇಳನವೊಂದೇ ಅಲ್ಲ, ಬಹುಕಾಲದಿಂದ ಇಂತಹ ಸಮಾರಂಭಗಳಲ್ಲಿ ಸಸ್ಯಾಹಾರವನ್ನು ಮಾತ್ರ ನೀಡುವ ಪದ್ಧತಿ ಇರುವುದಕ್ಕೊಂದು ಕಾರಣ ಇದೆ. ಸಸ್ಯಾಹಾರವನ್ನು ಎಲ್ಲರೂ ಸೇವಿಸುತ್ತಾರೆ, ಮಾಂಸಾಹಾರವನ್ನು ಎಲ್ಲರೂ ಸೇವಿಸುವುದಿಲ್ಲ. ಹಾಗಾಗಿ, ಪ್ರಾಯೋಗಿಕ ನೆಲೆಯಲ್ಲಿ ಎಲ್ಲರೂ ಸೇವಿಸುವ ಆಹಾರವೇ ಇರಲಿ ಎನ್ನುವುದು ಆ ಕಾರಣ. ಒಂದು ಅನುಕೂಲಕರ ವ್ಯವಸ್ಥೆ ಎನ್ನುವ ಅರ್ಥದಲ್ಲಿ ಸ್ವೀಕೃತವಾಗಿರುವ ಇದನ್ನು ಮಾಂಸಾಹಾರಿಗಳು ಪ್ರಶ್ನಿಸದೇ ಇದ್ದದ್ದು ಸಾರ್ವಜನಿಕ ಸಭ್ಯತೆಯ ದೃಷ್ಟಿಯಿಂದಲೋ ಕೀಳರಿಮೆಯಿಂದಲೋ ಇರಬಹುದು. ಏನೇ ಆಗಲಿ, ಅದೊಂದು ಅಲಿಖಿತ ಒಪ್ಪಂದ. ಇಂತಹ ಕೊಡುಕೊಳ್ಳುವಿಕೆಯ, ಪರಸ್ಪರ ತಾಳಿಕೊಳ್ಳುವಿಕೆಯ ಸಂಬಂಧಗಳ ಹಂದರವೇ ಈ ವೈವಿಧ್ಯಮಯ ದೇಶವನ್ನು ಏಕಮಯವಾಗಿ ಉಳಿಸಿದ್ದು. ಈ ಸೂಕ್ಷ್ಮವನ್ನು ಅರ್ಥ ಮಾಡಿಕೊಳ್ಳದೆ ಮಾಂಸಾಹಾರಿಗಳು ದುಷ್ಟ ತಾಮಸ ಪ್ರವೃತ್ತಿಯವರು, ಸಸ್ಯಾಹಾರಿಗಳು ಸಾತ್ವಿಕರು ಎಂಬಿತ್ಯಾದಿ ಕಥನಗಳನ್ನು ಕಟ್ಟಿ, ಮಾಂಸ ಸೇವನೆಯ ವಿಷಯದಲ್ಲಿ ಮನುಷ್ಯರನ್ನೇ ಬೀದಿ ಬೀದಿಗಳಲ್ಲಿ ಥಳಿಸಿ ಕೊಲ್ಲುವ ಮಟ್ಟಿಗೆ ಆಹಾರ ರಾಜಕೀಯದ ಅತಿರೇಕ ಮುಂದುವರಿದಿರುವ ಈ ಕಾಲಕ್ಕೆ ಸಸ್ಯಾಹಾರ ಮಾತ್ರ ಯಾಕೆ, ಮಾಂಸಾಹಾರ ಯಾಕಿಲ್ಲ ಅಂತ ಯಾರಾದರೂ ಕೇಳುವುದು ಸಹಜ ಮತ್ತು ಅತ್ಯಗತ್ಯ ಬೆಳವಣಿಗೆ.

ಮಾಂಸಾಹಾರಿಗಳು ಕೆಲವರು ತಾವು 'ಆ ದಿನ' ಮಾಂಸ ಸೇವಿಸುವುದಿಲ್ಲ, 'ಈ ತಿಂಗಳು' ಮಾಂಸ ಸೇವಿಸುವುದಿಲ್ಲ ಎಂಬಂತಹ ಪದ್ಧತಿಗಳನ್ನು ಅಳವಡಿಸಿಕೊಂಡಿರುವುದು ಬರೀ ನಂಬಿಕೆಯ ವಿಷಯವಷ್ಟೇ ಅಲ್ಲ. ಅದೊಂದು ರೀತಿ ಅತ್ತ ತಮ್ಮ ಆಹಾರ ಪದ್ಧತಿಯನ್ನು ತ್ಯಜಿಸಲಾಗದ ಇತ್ತ ಮಾಂಸಾಹಾರ ಸೇವಿಸಿ ಅದೇನೋ ದೈವದ್ರೋಹ ಎಸಗುತ್ತಿದ್ದೇವೆ ಎನ್ನುವ ದ್ವಂದ್ವದಿಂದ ಹೊರಬರಲಾಗದ ಸ್ಥಿತಿಯಲ್ಲಿ ರೂಢಿಸಿಕೊಂಡಿರುವ ತಾತ್ಕಾಲಿಕ ಪಲಾಯನ ಮಾರ್ಗವೂ ಆಗಿದೆ. ಅವೆಲ್ಲವೂ ವೈಯಕ್ತಿಕ ನಂಬಿಕೆಗಳು ಅಂತ ಬಿಟ್ಟುಬಿಡಬಹುದು. ಆದರೆ, ಆಹಾರಕ್ರಮದಲ್ಲೂ ಶ್ರೇಣೀಕರಣ ಸೃಷ್ಟಿಸಿ ಈ ದೇಶದ ಬಹುಜನರನ್ನು ಬೌದ್ಧಿಕ- ಸಾಂಸ್ಕೃತಿಕ ದಾಸ್ಯಕ್ಕೆ ದೂಡುವ ಪ್ರವೃತ್ತಿಯನ್ನು ಯಾರೂ ಪ್ರಶ್ನಿಸದಿರಲಿ ಎಂಬ ಕಾರಣಕ್ಕೆ ನಂಬಿಕೆ ಎಂಬ ಈ ಗುರಾಣಿಯನ್ನು ಬಳಸಿಕೊಳ್ಳಲಾಗುತ್ತಿದೆ ಎಂಬ ಪ್ರಜ್ಞೆ ಕೂಡ ಶೂದ್ರ ಬಹುಜನ ವರ್ಗಕ್ಕೆ ಇರಬೇಕಾಗುತ್ತದೆ.

ಹಾಗಾಗಿ, ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ಎದ್ದಿರುವ ಬಾಡೂಟದ ಬೇಡಿಕೆಯು ವ್ಯವಸ್ಥಿತವಾಗಿ ಸಾಂಸ್ಕೃತಿಕ ದಾಸ್ಯವನ್ನು ಹೇರುವ ರಾಷ್ಟ್ರಮಟ್ಟದ ರಾಜಕೀಯಕ್ಕೊಂದು ಸ್ಥಳೀಯ ಪ್ರತಿರೋಧದಂತೆ ಕಾಣಿಸುತ್ತಿದೆ. ರಾಷ್ಟ್ರಕ್ಕೆಲ್ಲ ಒಂದು ದೇವರು- ಒಂದು ಧರ್ಮ, ದೇವರು ಎಂದರೆ ಒಂದು ವರ್ಗದವರು ಸೃಷ್ಟಿಸಿದ ಪೌರಾಣಿಕ ಪಾತ್ರಗಳು, ಧರ್ಮ ಎಂದರೆ ಒಂದು ವರ್ಗದವರು ಒಪ್ಪಿಕೊಂಡ ನಂಬಿಕೆಗಳು ಎನ್ನುವ ರೀತಿಯಲ್ಲಿ ಇಡೀ ಜನಸಮುದಾಯವನ್ನು ನಂಬಿಸಿ, ಅವರು ತಮ್ಮ ಸ್ವಂತಿಕೆಯನ್ನು ಮತ್ತು ಅಸ್ಮಿತೆಯನ್ನು ಮರೆಯುವಂತೆ ಮಾಡುವ ರಾಜಕೀಯಕ್ಕೆ ಎಸೆದ ಸವಾಲಿನ ರೂಪದಲ್ಲಿ 'ಮಾಂಸದೂಟವೂ ಬೇಕು' ಎನ್ನುವ ಬೇಡಿಕೆ ಎದ್ದುಬಂದಿದೆ. ಅದೇರೀತಿ, ಬಹುಕಾಲದಿಂದಲೂ ಮಾಂಸಾಹಾರಿ ಬಹುಜನರನ್ನು ಆವರಿಸಿಕೊಂಡಿರುವ ಕೀಳರಿಮೆಯಿಂದ ಹೊರಬರಲು ಅವರಿಗೆ ನೀಡಿದ ಕರೆಯೂ ಆಗಿದೆ.

ಹಾಗೆಯೇ, ಮಾಂಸಾಹಾರವೂ ಏಕಿಲ್ಲ ಎನ್ನುವುದು ಬರೀ ಪ್ರಶ್ನೆಯಲ್ಲ. ಬದಲಿಗೆ ಅದು ಈ ದೇಶದ ಬಹುಸಂಸ್ಕೃತಿಯ ಮೇಲೆ ಆಗುತ್ತಿರುವ ದಾಳಿಯನ್ನು ಹಿಮ್ಮೆಟ್ಟಿಸಲು ಅಗತ್ಯವಾಗಿ ಪ್ರಯೋಗಿಸಬೇಕಿರುವ ಪ್ರತ್ಯಸ್ತ್ರ. ಸಸ್ಯಾಹಾರಿಗಳೂ ಸೇರಿದಂತೆ ಎಲ್ಲರನ್ನೂ ಗೌರವಿಸುವ, ಎಲ್ಲರ ಹಕ್ಕುಗಳನ್ನೂ ರಕ್ಷಿಸುವ ಹಾಗೂ ದೇವರು, ನಂಬಿಕೆ, ಆಹಾರಕ್ರಮದಂತಹವು ವೈಯಕ್ತಿಕ ಆಯ್ಕೆಗಳು ಎಂದು ಸಾರುವ ಈ ದೇಶದ ಸಂವಿಧಾನ ತೋರಿಸಿರುವ ಹಾದಿಗೆ ಸಮಾಜವನ್ನು ಮರಳಿಸುವ ಪ್ರಯತ್ನವಾಗಿಯೂ ಇಂತಹ ಬೇಡಿಕೆಗಳನ್ನು ಅರ್ಥೈಸಿಕೊಳ್ಳಬಹುದು.

ಚುರುಮುರಿ



ಉಣ್ಣುವ ಆಟ!

• ತುರುವೇಕೆರೆ ಪ್ರಸಾದ್

'ಏನಪ್ಪಾ, ಎಲ್ಲಾ ಕಡೆ ಊಟದ್ದೇ ಚಿಂತೆ ಆಗದೆ, ಚಳಿಗಾಲದ ಅಧಿವೇಶನದ ನಮ್ ನಾಯಕರ ಊಟದ್ ಬಗ್ಗೆ ಪೇಪರ್ನೋರು ಏನೂ ಬರ್ದೇ ಇಲ್ವಲ್ಲಪ್ಪ' ಎಂದ ಗುದ್ಲಿಂಗ.

'ಅವರು ತಿಂತಾನೇ ಇರೋದ್ರಿಂದ ಮತ್ತೆ ಮತ್ತೆ ಅವರ ಮೆನು ಬಗ್ಗೆ ಬರುದ್ರೆ ಬೇಜಾರ್ ಮಾಡ್ಕತರೆ ಅಂತ ಸುಮ್ನಾಗವ್ರೆ ಕಣ್ಲಾ' ಎಂದ ಮಾಲಿಂಗ.

'ಆದ್ರೂ 15 ದಿನದ ಊಟಕ್ಕೆ 3 ಕೋಟಿ ಆಯ್ತದೆ ಅಂತ ಅಂದಾಜ್ ಮಾಡವ್ರಲ್ಲ. ಈ ದಪ ಕೈ, ಮೈತ್ರಿಕೂಟದೋರಿಬ್ರೂ ಎಣ್ಣೆ ಬಳ್ಕಂಡು ಕಾಲು ಎಳೆದು ಕಬಡ್ಡಿ ಆಡಕ್ಕೆ ಒಂಟಿರೋದ್ರಿಂದ ಬರೀ ಉತ್ತರ ಕರ್ನಾಟಕದ ಖಾರದ ಐಟಮ್ಮೇ ಇರ್ತದೆ ಕಣ್ರಲಾ'.

'ಹೌದೇಳಪ್ಪ, ವಿಧಾನಸಭೆ ರಂಗೇರಿದಂಗೆ ಕೈನೋರ್ಗೆ ಬೇರೆ, ಮೈತ್ರಿಯೋರ್ಗೆ ಬೇರೆ ಅಂತ ಎಲ್ಲು ಸಪರೇಟ್ ಊಟದ್ ಸ್ಟಾಲ್ ಮಾಡ್ತರೆ ಅಂತ ಕಾಣ್ತದೆ'.

'ಸಪರೇಟ್ ಊಟದ ಸ್ಟಾಲ್ ಯಾಕ್ಲಾ?'

'ಯಾಕಂದ್ರೆ ಅವರವರ ಟೇಸ್ಟ್‌ಗೆ ತಕ್ಕ ಹಂಗೆ ಮಾಡ್ಬೇಕಲ್ವಾ? ಜೋಳದ ರೊಟ್ಟಿ, ಸಾಮೆ ಅಕ್ಕಿ ಅನ್ನ, ಸಂಗಟಿ ಸಾರು, ಶೇಂಗಾ ಚಟ್ನಿಪುಡಿ ಇದೆಲ್ಲಾ ಕಾಮನ್ನಾಗಿ ಇದ್ದೇ ಇರುತ್ತೆ. ಮೈತ್ರಿಯೋರ್ಗೆ ಸ್ಪೆಷಲ್ಲಾಗಿ ಮೂಡಾ ಚೂಡಾ, ರೀಡೂ ಬೋಂಡಾ, ವರ್ಕ್ಫ್ ಹುಗ್ಗಿ, ಕುರ್ಚಿ ಬಜ್ಜಿ, ವಾಲ್ಮೀಕಿ ಮುಟಗಿ, ಅಂಗೇ ಕೈನೋರ್ಗೆ ಕೋವಿಡ್ ಪಕೋಡಾ, ಗಣಿ ಗುರೆಳ್ಳು, ಪೋಕ್ಸೊ ಕರಂಡಿ, ಟರ್ಮಿನಲ್ ತಾಲಿಪಟ್ಟು ಇರಬಹುದು'.

'ಅದ್ರಲ್ಲೂ ನಮ್ ಗೆದ್ದೇಂದ್ರ ಮತ್ತು ಉತ್ನಾಳು ವರ್ಕ್ಫ್ ಹುಗ್ಗಿಲೇ ಖಾರದ ಹುಗ್ಗಿ, ಸಿಹಿ ಹುಗ್ಗಿ ಅಂತ ಬೇರೆ ಬೇರೆ ವೆರೈಟಿ ಡಿಮ್ಯಾಂಡ್ ಮಾಡ್ಬಹುದು'.

'ಆಮೇಲೆ ನಮ್ಮ ಕೆಲವು ಅಣ್ಣಂದಿರು ಎರಡು ಕಡೆನೂ ರುಚಿ ನೋಡ್ಬಹುದು ಅಲ್ವಾ?'

'ಅಯ್ಯೋ! ನಾವು ಅಂಗ್ ಅಂದ್ಕತೀವಿ ಕಣ್ರಲಾ, ನೈಟಿ ಒಳಕ್ ಓಗ್ಬುಟ್ರೆ ಯಾರ್ಗೆ ಯಾವ ಸ್ಟಾಲೂ ಜ್ಞಾಪಕ ಇರಕಿಲ್ಲ. ಇವರು ಈ ಕಡೆ, ಅವರು ಆ ಕಡೆ ತಿಂತರೆ! ಅದೊಂದ್ ಆಟ ಆಗ್ಬುಡುತ್ತೆ'.

'ಹ್ಞಾಂ ಕಣ್ರೋ 'ಮಾಡಿದ್ದುಣ್ಣೋ ಮಹರಾಯ' ಅನ್ನೋದು ಅಪ್ಲೈ ಆಗೋದು ವೋಟ್ ಹಾಕಿದ ನಮಗೆ ಮಾತ್ರ' ಎಂದ ಪರ್ಮೇಶಿ. ಎಲ್ಲಾ ಹೌದ್ಹೌದು ಎಂದು ತಲೆಯಾಡಿಸಿದರು.

ಸಂಗತ

ಇಳಿಸೋಣ ಆಹಾರ ಹೊತ್ತವರ ಭಾರ

ಆಹಾರ ಡೆಲಿವರಿ ಮಾಡುವ ಹುಡುಗರೊಡನೆ ನಾವು ಮನುಷ್ಯತ್ವದಿಂದ ನಡೆದುಕೊಂಡರೆ ಅವರ ಹೃದಯದ ಭಾರವನ್ನು ಕಡಿಮೆ ಮಾಡಲು ಸಾಧ್ಯ

• ದೀಪಾ ಹಿರೇಗುತ್ತಿ

ಕ್ಷಣಾರ್ಧದಲ್ಲಿ ವ್ಯಾಪಕವಾಗಿ ಹರಡುವ ನೇತ್ಯಾತ್ಮಕ ಸುದ್ದಿಗಳ ನಡುವೆ ಸಕಾರಾತ್ಮಕ ಸಂಗತಿಯೊಂದು ಕಣ್ಣಿಗೆ ಬಿದ್ದು ಮನಸ್ಸಿಗೆ ಹಾಯೆನಿಸಿತು. ಆಹಾರವನ್ನು ಮನೆಬಾಗಿಲಿಗೆ ತಂದುಕೊಡುವ ಜೊಮಾಟೊ ಕಂಪನಿಯ ಸ್ಥಾಪಕ ದೀಪಿಂದರ್ ಗೋಯಲ್ ಸುದ್ದಿಯಲ್ಲಿ ಇರುವವರು. ದೀಪಿಂದರ್ ಗುರುಗ್ರಾಮದಲ್ಲಿ ಇತ್ತೀಚೆಗೆ ಆಹಾರವನ್ನು ಖುದ್ದಾಗಿ ಗ್ರಾಹಕರಿಗೆ ತಲುಪಿಸಲು ಕಂಪನಿಯ ಸಮವಸ್ತ್ರ ಧರಿಸಿ ಬೈಕ್‌ನಲ್ಲಿ ಹೊರಟರು. ಆಹಾರ ಖರೀದಿಸಬೇಕಾದ ಮಳಿಗೆಯು ಪ್ರತಿಷ್ಠಿತ ಮಾಲ್‌ವೊಂದರ ಮೂರನೇ ಮಹಡಿಯಲ್ಲಿತ್ತು. ಅಲ್ಲಿಗೆ ಹೋಗಲು ಲಿಫ್ಟ್ ಹತ್ತಿರ ಬರುತ್ತಿದ್ದಂತೆ ದೀಪಿಂದರ್ ಅವರನ್ನು ತಡೆಯಲಾಯಿತು. ಕಾರಣ, ಡೆಲಿವರಿ ಹುಡುಗರು ಲಿಫ್ಟ್ ಉಪಯೋಗಿಸುವಂತೆ ಇರಲಿಲ್ಲ!

ಮೂರು ಮಹಡಿ ಮೆಟ್ಟಿಲು ಹತ್ತಿ ಹೋದ ದೀಪಿಂದರ್‌ಗೆ ಅಲ್ಲಿ ಮತ್ತೊಂದು ಅಚ್ಚರಿ ಕಾದಿತ್ತು. ಡೆಲಿವರಿ ಹುಡುಗರು ಉಪಾಹಾರಗೃಹದ ಒಳಗೆ ಪ್ರವೇಶಿಸುವಂತೆ ಇರಲಿಲ್ಲ. ದೀಪಿಂದರ್ ಮೆಟ್ಟಿಲ ಬಳಿಯೇ ಬಹಳ ಹೊತ್ತು ಕಾಯಬೇಕಾಯಿತು. ಹಾಗೆ ಕೂತಾಗ ಅಲ್ಲಿದ್ದ ಇತರ ಡೆಲಿವರಿ ಹುಡುಗರ ಜತೆ ಮಾತುಕತೆ ಆಯಿತು. ಅವರ ಕಷ್ಟಸುಖಗಳೂ ಗೊತ್ತಾದವು.

ಮನೆಗೆ ಬಂದವರೇ ಟ್ವಿಟರ್‌ನಲ್ಲಿ ಈ ವಿಷಯವನ್ನು ಪೋಸ್ಟ್ ಮಾಡಿದರು. ತಕ್ಷಣವೇ ಗುರುಗ್ರಾಮದ ಮಾಲ್‌ನ ಮಾಲೀಕ ಸ್ಪಂದಿಸಿದರು. ಡೆಲಿವರಿ ಹುಡುಗರ ಕೆಲಸವನ್ನು ಕಡಿಮೆ ಶ್ರಮದಾಯಕವಾಗಿಸಲು ಸಹಕರಿಸುವಂತೆ ಎಲ್ಲ ಮಾಲ್‌ಗಳ ಮುಖ್ಯಸ್ಥರಿಗೂ ದೀಪಿಂದರ್ ಮನವಿ ಮಾಡಿದರು. ಅಷ್ಟೇ ಅಲ್ಲ, ತಮ್ಮ ಕಂಪನಿಯ ಡೆಲಿವರಿ ಹುಡುಗ, ಹುಡುಗಿಯರ ಕೆಲಸ ಸುಲಭವಾಗಲು ಮತ್ತು ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುವಂತೆ ಮಾಡಲು ಹಲವಾರು ಕ್ರಮಗಳನ್ನು ಕೈಗೊಂಡರು. ಈ ಒಂದು ನಡೆಯ ಮೂಲಕ, ಸಹೋದ್ಯೋಗಿಗಳ ಮೇಲೆ ಸಹಾನುಭೂತಿ ಇರಬೇಕೆಂಬುದನ್ನು ಅವರು ತೋರಿಸಿಕೊಟ್ಟರು.

ತಳಮಟ್ಟದಲ್ಲಿ ಕೆಲಸ ಮಾಡುವಾಗ ನಿತ್ಯವೂ ಡೆಲಿವರಿ ಉದ್ಯೋಗಿಗಳು ಸಣ್ಣ ಹೋರಾಟವನ್ನೇ ಮಾಡಬೇಕಾಗುತ್ತದೆ. ಟ್ರಾಫಿಕ್ ಸಮಸ್ಯೆ, ಒಂದರ ಹಿಂದೊಂದು ಬರುವ ಆರ್ಡರ್‌ಗಳು, ನಿರ್ದಿಷ್ಟ ಸಮಯದಲ್ಲಿ ಆರ್ಡರ್ ತೆಗೆದುಕೊಂಡು ಅವನ್ನು ತಲುಪಿಸಬೇಕಾದ ಅನಿವಾರ್ಯ, ಹೀಗೇ ಎಂದು ಹೇಳಲು ಬಾರದ ಗ್ರಾಹಕರ ವರ್ತನೆ... ಒಂದೇ ಎರಡೇ.

ಹಾಗಾಗಿ, ಡೆಲಿವರಿ ಹುಡುಗರ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದರಲ್ಲಿ ಗ್ರಾಹಕರಾದ ನಮ್ಮ ಕರ್ತವ್ಯವೂ ಇದೆ.

ದೈಹಿಕ ಶ್ರಮಕ್ಕಿಂತ ಮನುಷ್ಯನಿಗೆ ಸಂಕಟ ತರುವುದೆಂದರೆ, ಎದುರಿಗಿರುವ ವ್ಯಕ್ತಿ ತನ್ನನ್ನು ಗೌರವಿಸದಿರುವುದು! ನಮಗೆ ಆಹಾರ ತರುವವರಲ್ಲಿ ಓದುತ್ತಿರುವ ವಿದ್ಯಾರ್ಥಿಯಿರಬಹುದು, ಕುಟುಂಬವನ್ನು ನೋಡಿಕೊಳ್ಳುತ್ತಿರುವ ಸ್ವಾಭಿಮಾನಿ ಹುಡುಗಿಯಿರಬಹುದು, ತಾಯಿಯ ಆಸ್ಪತ್ರೆ ಖರ್ಚಿಗೆ ಸಹಾಯವಾಗಲಿ ಎಂದು ವಾರಕ್ಕೆರಡು ದಿನ ತನ್ನ ಕೆಲಸ ಮುಗಿಸಿ ಈ ಕೆಲಸ ಮಾಡುತ್ತಿರುವ ಉದ್ಯೋಗಿ ಇರಬಹುದು, ತಾನು ಖರೀದಿಸಿದ ಬೈಕಿನ ಸಾಲ ಕಟ್ಟಲು ಒದ್ದಾಡುತ್ತಿರುವ ಹುಡುಗನಿರಬಹುದು. ನಮ್ಮ ಹಸಿದ ಹೊಟ್ಟೆಯನ್ನು ತುಂಬಿಸಲು, ಎಷ್ಟೇ ಹೊತ್ತಾಗಲಿ, ಸರದಿ ಸಾಲಿನಲ್ಲಿ ನಿಂತು ಆಹಾರ ಪಡೆದು, ಮಹಾನಗರಗಳ ಕಿಕ್ಕಿರಿದ ರಸ್ತೆಗಳಲ್ಲಿ, ಸಂದಿಗೊಂದಿಗಳಲ್ಲಿ ಅದನ್ನು ಹೊತ್ತು ತರುವ ಹುಡುಗ, ಹುಡುಗಿಯನ್ನು ಕನಿಷ್ಠವಾಗಿ ಕಾಣದೆ, ಅವಮಾನಿಸದೆ, ಮುಗುಳ್ನಕ್ಕು ಸ್ವೀಕರಿಸುವುದು ನಾವು ಮಾಡಬೇಕಾದ ಮೊದಲ ಕೆಲಸ.

ಟಿಪ್ಸ್ ಕೊಡುತ್ತೇವೋ ಇಲ್ಲವೋ ಟೀಕೆಗಳನ್ನು ಮಾಡುವುದು ಬೇಡ. ಕೊಂಚ ತಡವಾದರೆ ಆಕಾಶವೇ ತಲೆಯ ಮೇಲೆ ಬಿದ್ದಂತೆ ವರ್ತಿಸುವುದು, ಕೆಟ್ಟದಾಗಿ ವರದಿ ಮಾಡುವುದು, ಹಣ ಕೊಡದಿರುವುದು, ಆರ್ಡರ್ ರದ್ದು ಮಾಡುವುದು ಇವೆಲ್ಲ ನಿಜಕ್ಕೂ ಸಲ್ಲದು. ಹಾಗೆಂದು ಗ್ರಾಹಕರಿಗೆ ತೊಂದರೆಯಾದರೆ ದೂರು ಕೊಡುವುದು ಬೇಡವೇ? ಖಂಡಿತ, ಅಸಹನೀಯ ನಡವಳಿಕೆಗೆ ದೂರು ನೀಡಬೇಕಾಗುತ್ತದೆ, ಸಣ್ಣಪುಟ್ಟ ತಪ್ಪುಗಳಿಗೆ ಅಲ್ಲ.

ಹಣವಿದ್ದ ಮಾತ್ರಕ್ಕೆ ಯಾರೇನೂ ಪರ್ಯಾಯ ಜಗತ್ತೊಂದರಲ್ಲಿ ವಾಸಿಸುವುದಿಲ್ಲ. ತಮಗಾಗಿ ಕೆಲಸ ಮಾಡುವವರ ದಾರಿಯಲ್ಲಿ ಒಂದಿಷ್ಟು ದೂರ ನಡೆದು ಅಲ್ಲಿನ ಸಮಸ್ಯೆಗಳ ಬಗ್ಗೆ ಅರ್ಥ ಮಾಡಿಕೊಂಡು ಜಗತ್ತಿಗೂ ಹೇಳಿದ ದೀಪಿಂದರ್ ನಿಜಕ್ಕೂ ಸ್ತುತ್ಯರ್ಹರು. ವ್ಯವಹಾರ ಎನ್ನುವುದು ಬರೀ ಕೊಡು ತೆಗೆದುಕೊಳ್ಳುವಿಕೆಯ ಮೇಲೆಯೇ ನಿಂತಿರುವಾಗ ಅದಕ್ಕೊಂದು ಪುಟ್ಟ ಮಾನವೀಯ ಸ್ಪರ್ಶ ಒದಗಿಸಿದ್ದು ಮಾದರಿ ನಡೆ.

ಕಂಪನಿ ಶುರುವಾಗಿ ಹತ್ತು ವರ್ಷಗಳಾದ ಮೇಲೆ ದೀಪಿಂದರ್‌ಗೆ ಈ ಉದ್ಯೋಗಿಗಳ ನೆನಪಾಯಿತೇ? ಇದು ಕಂಪನಿಯ ಮಾರುಕಟ್ಟೆ ತಂತ್ರ ಅನ್ನುತ್ತಾರೆ ಕೆಲ ನೆಟ್ಟಿಗರು. ಇರಬಹುದು ಅಂತಲೇ ಅಂದುಕೊಳ್ಳೋಣ. ಆದರೆ ಈ ನಡೆಯಿಂದ ಡೆಲಿವರಿ ಹುಡುಗರು ಅನುಭವಿಸುವ ಸಂಕಟದ ಅರಿವು ಇಡೀ ಜಗತ್ತಿಗೆ ಆಯಿತಲ್ಲ. ಮಾಲ್‌ಗಳ ಮುಖ್ಯಸ್ಥರು ಹಾಗೂ ಜನ ಒಂದಿಷ್ಟಾದರೂ ಮಾನವೀಯತೆ ತೋರಿಸಲು ಅನುಕೂಲವಾಯಿತಲ್ಲ!

ಅವರೇನೋ ತಡವಾಗಿಯಾದರೂ ತಮ್ಮ ಹುಡುಗರ ಬೆನ್ನಿನ ಚೀಲದ ಭಾರವನ್ನು ಹೊತ್ತು ಅವರ ಕಷ್ಟ ಅರ್ಥ ಮಾಡಿಕೊಂಡರು, ನಾವೂ ಕೊಂಚ ಮನುಷ್ಯತ್ವದಿಂದ ವರ್ತಿಸಿ ಆ ಹುಡುಗರ ಹೃದಯದ ಭಾರವನ್ನು ಕಡಿಮೆ ಮಾಡಲು ಇದು ಸುಸಮಯ.

ವಾಚಕರ ವಾಣಿ

ಹೆಚ್ಚುವರಿ ಕೆಲಸದ ಮೂಲಕ ಶ್ರದ್ಧಾಂಜಲಿ ಅರ್ಥಪೂರ್ಣ

ಎಸ್.ಎಂ.ಕೃಷ್ಣ ಅವರ ನಿಧನದ ಪ್ರಯುಕ್ತ ಬುಧವಾರ (ಡಿ. 11) ರಜೆ ಘೋಷಿಸಲಾಗಿದೆ. ಗಣ್ಯ ವ್ಯಕ್ತಿಗಳು ತೀರಿಕೊಂಡಾಗ ಸರ್ಕಾರಿ ಸಂಸ್ಥೆಗಳಿಗೆ, ಶಾಲಾ ಕಾಲೇಜುಗಳಿಗೆ ರಜೆ ಸಾರಿ ಶೋಕಾಚರಣೆ ಮಾಡುವ ಅಗತ್ಯವೇನಿದೆ? ಸರ್ಕಾರಿ ನೌಕರರು ಮತ್ತು ವಿದ್ಯಾರ್ಥಿಗಳು ರಜೆಯ ಮಜಾ ಉಡಾಯಿಸುತ್ತಾರೆಯೇ ವಿನಾ ಶೋಕಾಚರಣೆಯನ್ನು ಯಾರೂ ಮಾಡುವುದಿಲ್ಲ. ಇಷ್ಟಕ್ಕೂ ಸರ್ಕಾರಿ ನೌಕರರು ಮತ್ತು ವಿದ್ಯಾರ್ಥಿಗಳಿಗೆ ಮಾತ್ರ ಈ ರಜೆ ಅನ್ವಯಿಸುತ್ತದೆ. ರೈತರು, ಖಾಸಗಿ ಕ್ಷೇತ್ರದ ನೌಕರರು, ವಾಹನ ಚಾಲಕರು, ಕೂಲಿ ಕಾರ್ಮಿಕರು, ಪೊಲೀಸರಂತಹ ಅನೇಕರು ತಮ್ಮ ದಿನನಿತ್ಯದ ಕೆಲಸವನ್ನು ಮಾಡಲೇಬೇಕು.

ಕೆಲವು ದೇಶಗಳಲ್ಲಿ ಗಣ್ಯ ವ್ಯಕ್ತಿಗಳು ತೀರಿಕೊಂಡಾಗ ಕಪ್ಪುಬಣ್ಣದ ಪಟ್ಟಿ ಕಟ್ಟಿಕೊಂಡು, ಶೋಕಾಚರಣೆ ನಿಮಿತ್ತ ಒಂದು ತಾಸು ಹೆಚ್ಚು ಕೆಲಸ ಮಾಡುವ ಪದ್ಧತಿ ಇದೆ. ಈ ರೀತಿಯ ಶೋಕಾಚರಣೆಗೆ ಒಂದು ಅರ್ಥಪೂರ್ಣ ಉದ್ದೇಶವಿದೆ. ಇನ್ನು ಮುಂದಾದರೂ ಗಣ್ಯ ವ್ಯಕ್ತಿಗಳು ತೀರಿಕೊಂಡಾಗ ಸರ್ಕಾರಿ ರಜೆ ಘೋಷಿಸುವುದು ನಿಲ್ಲಲಿ. ಶೋಕಾಚರಣೆಯ ನೆಪದಲ್ಲಿ ರಜೆಯ ಮೋಜು ಮಾಡುವುದು ತೀರಿಕೊಂಡ ಗಣ್ಯರಿಗೆ ಮಾಡುವ ಅವಮಾನವಲ್ಲದೆ ಮತ್ತೇನಲ್ಲ. ಕೆಲವು ದೇಶಗಳಲ್ಲಿ ಇರುವಂತೆ ಹೆಚ್ಚುವರಿ ಕೆಲಸದ ಮೂಲಕ, ತೀರಿಕೊಂಡವರಿಗೆ ನಿಜಾರ್ಥದ ಶ್ರದ್ಧಾಂಜಲಿ ಸಲ್ಲಿಸುವ ಪರಂಪರೆ ಪ್ರಾರಂಭವಾಗಲಿ.

ಲಕ್ಷ್ಮೀಕಾಂತ್ ಕೊಟ್ಟಾರ ಚೌಕಿ, ಮಂಗಳೂರು

ಉದ್ಯಾನಗಳಲ್ಲಿ ಇರಲಿ ಅಂಗವಿಕಲಸ್ನೇಹಿ ಆಟಿಕೆ

ಬೆಂಗಳೂರಿನ ನವೀಕೃತ ಬಾಲಭವನದಲ್ಲಿ ಅಂಗವಿಕಲಸ್ನೇಹಿ ಉದ್ಯಾನ ನಿರ್ಮಿಸುವ ಮೂಲಕ ಅಂಗವಿಕಲ ಮಕ್ಕಳ ಆಟಕ್ಕೆ ಅನುಕೂಲ ಕಲ್ಪಿಸಿರುವ ವರದಿ (ಪ್ರ.ವಾ., ಡಿ. 10) ಓದಿ ಸಂತೋಷವಾಯಿತು. ಗಾಲಿ ಕುರ್ಚಿಯಲ್ಲಿ ಬರಬೇಕಾದ ಮಕ್ಕಳಿಗೂ ಆಟ ಆಡುವ ವ್ಯವಸ್ಥೆ ಮಾಡಿದ ಬಾಲಭವನದ ಅಧಿಕಾರಿಗಳು ಮತ್ತು ಅದಕ್ಕೆ ಬೆಂಬಲ ನೀಡಿದ ಮೈಂಡ್‌ಟ್ರೀ ಕಂಪನಿಯ ಅಧಿಕಾರಿಗಳು ಸ್ತುತ್ಯರ್ಹರು. ಬೆಂಗಳೂರಿನಲ್ಲಿರುವ ಉದ್ಯಾನಗಳಲ್ಲಿ ಮಕ್ಕಳು ಆಟವಾಡುವ ಸೌಲಭ್ಯವಿರುವೆಡೆ ಅಂಗವಿಕಲ ಮಕ್ಕಳಿಗೆ ಸಹಾಯವಾಗುವ ರೀತಿಯ ಆಟದ ವ್ಯವಸ್ಥೆ ಬಹಳ ಕಡಿಮೆ. ಈ ಮೊದಲು ಬಾಲಭವನದಲ್ಲಿದ್ದ ಮಕ್ಕಳ ರೈಲಿನಲ್ಲಿ ಸಂಚರಿಸುವುದನ್ನು ಬಿಟ್ಟು ಅಲ್ಲಿನ ಇತರ ಆಟಗಳಲ್ಲಿ ಅಂಗವಿಕಲ ಮಕ್ಕಳಿಗೆ ಆಡಲು ಅನುಕೂಲವಿರಲಿಲ್ಲ. ಅಂತಹ ಮಕ್ಕಳಿಗೆ ಆ ಆಟಗಳೆಲ್ಲಾ ಬರೀ ಆಸೆಗಣ್ಣಿನ ನೋಟಗಳಷ್ಟೇ ಆಗಿದ್ದವು. ಈಗಲೂ ಬೆಂಗಳೂರಿನ ಸದಾಶಿವನಗರದ ಮಕ್ಕಳ ಪಾರ್ಕಿನಲ್ಲಿ ಜಾರುಬಂಡಿಯನ್ನು ಆಸೆಗಣ್ಣಿನಿಂದ ನೋಡುವ ದೈಹಿಕ ಅನನುಕೂಲದ ಮಕ್ಕಳನ್ನು ನೋಡುವಾಗ ಮನಸ್ಸು ಕುಗ್ಗುತ್ತದೆ.

ಅಂಗವಿಕಲ ಮಕ್ಕಳಿಗೂ ಇತರ ಮಕ್ಕಳಿಗಿರುವಂತೆ ಆಟದ ಅವಕಾಶ ಕಲ್ಪಿಸುವುದು ನಾಗರಿಕ ಸಮಾಜದ ಕರ್ತವ್ಯ. ಅನೇಕ ಹೊರದೇಶಗಳಲ್ಲಿ ಅಂತಹ ಅನುಕೂಲ ಇದೆ. ನಮ್ಮ ದೇಶದಲ್ಲಿ ಆ ಬಗ್ಗೆ ಹೆಚ್ಚಿನ ಗಮನವಿಲ್ಲ. ರಾಜ್ಯದಾದ್ಯಂತ ಮಕ್ಕಳ ಉದ್ಯಾನಗಳನ್ನು ನವೀಕರಿಸುವಾಗ ಅಥವಾ ನೂತನವಾಗಿ ನಿರ್ಮಿಸುವಾಗ ಬಾಲಭವನದ ಅಂಗವಿಕಲಸ್ನೇಹಿ ಆಟಿಕೆ ಸೌಲಭ್ಯಗಳು ಮಾದರಿಯಾಗಲಿ.

ಎಸ್.ಆರ್.ವಿಜಯಶಂಕರ, ಬೆಂಗಳೂರು

ಹೊರನಾಡ ಕನ್ನಡಿಗರಿಗೂ ಬೇಕು ಅವಕಾಶ

ತೆಲಂಗಾಣ ಹಾಗೂ ಆಂಧ್ರಪ್ರದೇಶದ ಕೆಲವು ಜಿಲ್ಲೆಗಳಲ್ಲಿ ಈಗಲೂ ಸಾವಿರಾರು ಮಕ್ಕಳು ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. 1ರಿಂದ 10ನೇ ತರಗತಿಯವರೆಗೆ ಹೊರರಾಜ್ಯಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿ, ಉನ್ನತ ವ್ಯಾಸಂಗಕ್ಕಾಗಿ ಅಥವಾ ಉದ್ಯೋಗಾವಕಾಶಕ್ಕಾಗಿ ಕರ್ನಾಟಕಕ್ಕೆ ಬಂದಾಗ, ಅಂತಹ ಮಕ್ಕಳು ನಮ್ಮ ಸರ್ಕಾರದ ತಾರತಮ್ಯದ ಧೋರಣೆಯಿಂದ ಅನೇಕ ತೊಂದರೆಗಳನ್ನು ಅನುಭವಿಸುವಂತಾಗಿದೆ. ಅವರಿಗೆ ಉನ್ನತ ವ್ಯಾಸಂಗ ಮತ್ತು ಉದ್ಯೋಗದಲ್ಲಿ ಅವಕಾಶ ಕಲ್ಪಿಸಲು ಅನೇಕ ಬಾರಿ ಮನವಿ ಸಲ್ಲಿಸಲಾಗಿದ್ದರೂ ಯಾವುದೇ ಪ್ರಯೋಜನವಾಗಿಲ್ಲ.

ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆ, ಧರ್ಮಸಿಂಗ್, ಜೆ.ಎಚ್.ಪಟೇಲ್, ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರನ್ನು ಭೇಟಿಯಾಗಿ ಸಮಸ್ಯೆಗಳ ಪರಿಹಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಆದರೂ ಪರಿಹಾರ ದೊರೆತಿಲ್ಲ. ತಮ್ಮ ಗೋಳು ಕೇಳುವವರು ಯಾರೂ ಇಲ್ಲವೆಂಬುದು ಅಲ್ಲಿನ ಕನ್ನಡಿಗರ ಅಳಲಾಗಿದೆ. ಅವರು ತಮ್ಮ ಸಮಸ್ಯೆಯನ್ನು ಮತ್ತೊಮ್ಮೆ ಸರ್ಕಾರಕ್ಕೆ ತಿಳಿಸಲು ಮಂಡ್ಯದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನವು ಉತ್ತಮ ವೇದಿಕೆಯಾಗಿದೆ. ಹೀಗಾಗಿ, ಸಮ್ಮೇಳನದ ಯಾವುದಾದರೂ ಗೋಷ್ಠಿಯಲ್ಲಿ ಕನಿಷ್ಠ 5 ನಿಮಿಷವಾದರೂ ಮಾತನಾಡಲು ರಾಯಚೂರು ಜಿಲ್ಲೆಯ ಗಡಿ ಪ್ರದೇಶದ 'ಗಡಿನಾಡ ಕನ್ನಡ ಸಂಘ'ದವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕು.

ವೀರಹನುಮಾನ, ರಾಯಚೂರು

ಬೆಂಗಳೂರು ಚಲನಚಿತ್ರೋತ್ಸವ ಎಂದು?

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಈ ಮೊದಲು ನಿಯಮಿತವಾಗಿ ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ಆಯೋಜಿಸಲಾಗುತ್ತಿತ್ತು. ಹಿಂದಿನ ಐದು ವರ್ಷಗಳಿಂದ ನಿಗದಿತ ದಿನಾಂಕಗಳಿಲ್ಲದೆ ಮುಂದಿನ ವರ್ಷದ ಆವರ್ತಿ ಶುರುವಾಗುವ ಹೊತ್ತಿಗೆ ನಡೆಸಲಾಗುತ್ತಿದೆ. ಹಿಂದಿನ ಬಾರಿ ಫೆಬ್ರುವರಿಯ ಕೊನೆ ಹಾಗೂ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ನಡೆಸಲಾಗಿದೆ. ಪ್ರಥಮ ಕನ್ನಡ ಟಾಕಿ ಸಿನಿಮಾ 'ಸತಿ ಸುಲೋಚನ' ಫೆಬ್ರುವರಿ 3ರಂದು ಬಿಡುಗಡೆಯಾಗಿರುವುದರಿಂದ ಅದರ ನೆನಪಿನಲ್ಲಿ ಪ್ರತಿವರ್ಷವೂ ಫೆಬ್ರುವರಿ 3ರಿಂದ ಚಿತ್ರೋತ್ಸವವನ್ನು ಆಯೋಜಿಸಲಾಗುತ್ತದೆ ಎಂದು ಹೇಳಿಕೆ ನೀಡಲಾಗಿತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಚಲನಚಿತ್ರ ಅಕಾಡೆಮಿ ಹಾಗೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಸಹಯೋಗದಲ್ಲಿ ನಡೆಸಲಾಗುವ ಅಂತರರಾಷ್ಟ್ರೀಯ ಸಿನಿಮಾ ಉತ್ಸವದ ಪ್ರಸ್ತುತ ವರ್ಷದ ಆವೃತ್ತಿಯ ದಿನಾಂಕ, ಸಂಬಂಧಿತ ಸಮಿತಿಗಳ ಯೋಜನೆ ಮತ್ತು ಆಯ್ಕೆಯ ನಡಾವಳಿಗಳು ಆರಂಭಗೊಂಡಿರುವ ಕುರಿತು ಯಾವುದೇ ಸಮಾಚಾರವು ಸಾರ್ವಜನಿಕವಾಗಿ ಬಿತ್ತರವಾಗಿಲ್ಲ.

ಹೋದ ವರ್ಷ ನೀಡಿದ ಆಶ್ವಾಸನೆಯಂತೆ ಫೆಬ್ರುವರಿ ತಿಂಗಳಲ್ಲಿ ನಡೆಸುವುದಾದರೆ, ತಯಾರಿಗಳು ಎರಡು– ಮೂರು ತಿಂಗಳ ಮೊದಲೇ ಶುರುವಾಗಬೇಕಿರುತ್ತದೆ. ಕರ್ನಾಟಕದ ಸಿನಿಮಾಪ್ರೇಮಿಗಳಿಗೆ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವು ಜಾಗತಿಕ ಹಾಗೂ ಭಾರತದ ಉತ್ತಮ ಸಿನಿಮಾಗಳ ವೀಕ್ಷಣೆಗೆ ಬೆಳಕಿಂಡಿಯಾಗಿದೆ. ಹೀಗಾಗಿ, ಸಂಬಂಧಿಸಿದ ಸಂಸ್ಥೆಗಳು ನಡಾವಳಿಗಳನ್ನು ಪ್ರಾರಂಭಿಸಿ, ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಸಬೇಕು.

ಕೆ.ಫಣಿರಾಜ್, ಉಡುಪಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೃಷ್ಣ ಯುಗಾಂತ್ಯ

ಸಿಂಗಪುರವಾಗಲಿದೆ ಬೆಂಗಳೂರು ಎಂದಾಗ ನಕ್ಕರು...

• ಆರ್. ಮಂಜುನಾಥ್

ಬೆಂಗಳೂರಿನಲ್ಲಿ ಮೇಲ್ಸೇತುವೆ, ತೂಗುಸೇತುವೆಯಂತಹ ಅತ್ಯಾಧುನಿಕ ಸೌಕರ್ಯಗಳು ನಿರ್ಮಾಣವಾಗಲಿವೆ. ಬೆಂಗಳೂರು 'ಸಿಂಗಪುರ'ವಾಗಲಿದೆ. ವಿಶ್ವವೇ ನಮ್ಮ ನಗರದತ್ತ ಗಮನ ಕೇಂದ್ರೀಕರಿಸಲಿದೆ...

1999ರಲ್ಲಿ ಮುಖ್ಯಮಂತ್ರಿಯಾಗಿದ್ದ ಎಸ್.ಎಂ. ಕೃಷ್ಣ ಅವರು ಇಂತಹ ಮಾತುಗಳನ್ನಾಡಿದಾಗ ಅಂದು ಅದನ್ನು ನಂಬದ ಮನಸ್ಸುಗಳೇ ಹೆಚ್ಚು. ಆದರೆ, ಅಂದಿನ ಭದ್ರಬುನಾದಿಯೇ ಬೆಂಗಳೂರಿಗೆ ಸಿಲಿಕಾನ್ ವ್ಯಾಲಿ, ಹೈಟೆಕ್ ಸಿಟಿ ಎಂಬಂತಹ ಪ್ರಖ್ಯಾತಿಗಳು ಬರಲು ಕಾರಣ.

ಬೆಂಗಳೂರಿಗೆ ಮೂಲಸೌಕರ್ಯ ಒದಗಿಸುವತ್ತ ಹೆಚ್ಚಿನ ಆಸಕ್ತಿ ತೋರಿದ್ದು ಎಸ್.ಎಂ. ಕೃಷ್ಣ. ನಗರದ ಅಭಿವೃದ್ಧಿಗೆ ರೂಪು ರೇಷೆ, ಯೋಜನೆ ಅನುಷ್ಠಾನಕ್ಕೆ ವೇಗ ನೀಡಲೆಂದೆ ಬೆಂಗಳೂರು ಅಜೆಂಡಾ ಟಾಸ್ಕ್ ಫೋರ್ಸ್ (ಬಿಎಟಿಎಫ್) ಅನ್ನು ಇನ್ಫೊಸಿಸ್ ಸಿಇಒ ಆಗಿದ್ದ ನಂದನ್ ನೀಲೇಕಣಿ ನೇತೃತ್ವದಲ್ಲಿ ಸ್ಥಾಪಿಸಿದ್ದರು.

ಎಸ್.ಎಂ. ಕೃಷ್ಣ ಅವರ ಆಸಕ್ತಿ, ನೀತಿ–ನಿಯಮಗಳೇ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರು ಅಗ್ರಸ್ಥಾನ ಪಡೆಯಲು ಕಾರಣ. 1999–2000ರಲ್ಲಿ ₹100 ಕೋಟಿ ಮೌಲ್ಯದ ಸಾಫ್ಟ್‌ವೇರ್‌ಗಳನ್ನು ರಫ್ತು ಮಾಡುತ್ತಿದ್ದ ನಗರದಲ್ಲಿ 13 ಐಟಿ ಕಂಪನಿಗಳಷ್ಟೇ ಇದ್ದವು. 2001–02ರ ವೇಳೆಗೆ ಈ ಸಂಖ್ಯೆ 1032ಕ್ಕೆ ತಲುಪಿತು, ರಫ್ತು ಮೌಲ್ಯ ₹7,200 ಕೋಟಿಗೆ ಏರಿತು. 2004–05ರಲ್ಲಿ 1514 ಕಂಪನಿಗಳ ಸಾಫ್ಟ್‌ವೇರ್ ರಫ್ತು ಮೌಲ್ಯ ₹20,700 ಕೋಟಿ. ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಅಭಿವೃದ್ಧಿಗೆ ಹೆಚ್ಚಿನ ಅವಕಾಶ ಕಲ್ಪಿಸಲು ಪ್ರತ್ಯೇಕ ನೀತಿಯನ್ನು 2002ರಲ್ಲಿ ರೂಪಿಸಲಾಯಿತು. ಅಲ್ಲದೆ ರಾಷ್ಟ್ರ – ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಗಳು ತಮ್ಮ ವ್ಯಾಪ್ತಿ ವೃದ್ಧಿಸಿಕೊಳ್ಳಲು ಪ್ರಥಮ ಬಾರಿಗೆ 2002ರಲ್ಲಿ 'ಬೆಂಗಳೂರು ಐಟಿ ಡಾಟ್ ಕಾಮ್' ಸಮ್ಮೇಳನವನ್ನು ಆಯೋಜಿಸಲಾಯಿತು. ಇದೆಲ್ಲ ಐಟಿ–ಬಿಟಿ ಕ್ಷೇತ್ರದ ವೃದ್ಧಿಗೆ ಭದ್ರಬುನಾದಿಯಾಯಿತು.

ಅಂತರರಾಷ್ಟ್ರೀಯ ತಂತ್ರಜ್ಞಾನ ಪಾರ್ಕ್ (ಐಟಿಪಿಎಲ್), ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫಾರ್ಮೇಷನ್ ಟೆಕ್ನಾಲಜಿ– ಬೆಂಗಳೂರು (ಐಐಐಟಿಬಿ) ಸಂಸ್ಥೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ರೂಪಿಸಲು ಎಸ್.ಎಂ. ಕೃಷ್ಣ ಅವರ ದೂರದೃಷ್ಟಿಯೇ ಕಾರಣ.

ಆಡಳಿತದಲ್ಲಿ ತಂತ್ರಜ್ಞಾನ, ಗಣಕೀಕರಣ ವ್ಯವಸ್ಥೆ ಜಾರಿ ಮಾಡಲು ಎಸ್.ಎಂ. ಕೃಷ್ಣ ಅವರಿಗೆ ಅತಿಯಾದ ಆಸಕ್ತಿ ಇತ್ತು. ಸರ್ಕಾರಿ ಕಚೇರಿಗಳಲ್ಲಿ ನೌಕರರ ಪ್ರವೇಶಕ್ಕೆ 'ಸ್ಮಾರ್ಟ್ ಕಾರ್ಡ್' ಪರಿಚಯಿಸಿದ್ದ ಕೃಷ್ಣ ಅವರೇ ವಿಧಾನಸೌಧದ ತಮ್ಮ ಕಚೇರಿ ಪ್ರವೇಶಿಸಲು 'ಸ್ಮಾರ್ಟ್ ಕಾರ್ಡ್' ಬಳಸಿ ಎಲ್ಲರನ್ನೂ ಉತ್ತೇಜಿಸಿದ್ದರು. ಕಂದಾಯ ಇಲಾಖೆಯಲ್ಲಿ ಭೂಮಿ ದಾಖಲೆಗಳಿಗಾಗಿ, 'ಭೂಮಿ' ತಂತ್ರಾಂಶ, ಜಲಮಂಡಳಿಯ ಬಿಲ್ ಪಾವತಿಗೆ 'ಕಾವೇರಿ ಇ–ಕಾಂ ಕಿಯೋಸ್ಕ್', ಕಾವೇರಿ ನೀರಿನ ಮೀಟರ್ ರೀಡಿಂಗ್ ಮಾಡಿದ ಕೂಡಲೇ 'ಸ್ಪಾಟ್ ಬಿಲ್' ನೀಡುವುದು, ಬಿಲ್ ಪಾವತಿ ಮತ್ತು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು 'ಬೆಂಗಳೂರು ಒನ್', ರೈತರು– ಗ್ರಾಹಕರ ನಡುವಿನ ನೇರ ಮಾರಾಟಕ್ಕೆ ಯಲಹಂಕದಲ್ಲಿ ಪ್ರಥಮ 'ರೈತ ಸಂತೆ', 'ಕೃಷಿ ಮಾರಾಟ ವಾಹಿನಿ' ವೆಬ್‌ಸೈಟ್‌ಗಳು ಕೃಷ್ಣ ಅವರು ಬೆಂಗಳೂರಿಗೆ ನೀಡಿದ ಕೊಡುಗೆಗಳು. ಮೂತ್ರಪಿಂಡ ಸಂಬಂಧಿ ಕಾಯಿಲೆಗಳಿಗೆ ಅತ್ಯಾಧುನಿಕ ಚಿಕಿತ್ಸೆಯನ್ನು ಕಡಿಮೆ ದರದಲ್ಲಿ ಒದಗಿಸಲು ದೇಶದಲ್ಲೇ ವಿಶಿಷ್ಟವಾದ 'ಬೆಂಗಳೂರು ನೆಫ್ರೋಯೂರಾಲಜಿ ಸಂಸ್ಥೆ' ಆರಂಭವಾಗಿದ್ದೂ ಕೃಷ್ಣ ಕಾಲದಲ್ಲಿಯೇ.

ಬಿಡಿಎ ಪುನಶ್ಚೇತನ: ಕೃಷ್ಣ ಸಿಎಂ ಆದ ಆರಂಭ ದಿನಗಳಲ್ಲೇ ಮುಖ್ಯ ಕಾರ್ಯದರ್ಶಿಯವರ ನೇತೃತ್ವದ ಉನ್ನತಾಧಿಕಾರಿಗಳ ಸಮಿತಿ, 'ಬಿಡಿಎ ನೌಕರರಿಗೆ ವೇತನ ನೀಡಲೂ ಅಲ್ಲಿ ದುಡ್ಡಿಲ್ಲ, ಅದನ್ನು ಮುಚ್ಚಬೇಕು' ಎಂದು ಸಲಹೆ ನೀಡಿತ್ತು. ಅದನ್ನು ಸವಾಲಾಗಿ ಸ್ವೀಕರಿಸಿದ ಕೃಷ್ಣ ಅವರು ಜಯಕರ್ ಜರೋಮ್ ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತರನ್ನಾಗಿ ನೇಮಿಸಿದರು. ಅಲ್ಲಿಂದ ಕಡತಗಳು ಅನುಮೋದನೆಗೆ ನೇರವಾಗಿ ಮುಖ್ಯಮಂತ್ರಿಯವರಿಗೇ ಬರುವಂತೆ ನೋಡಿಕೊಂಡರು. ಬಿಡಿಎಗೆ ಪುನಶ್ಚೇತನ ನೀಡಿದ್ದಲ್ಲದೇ, ಅದರ ಆದಾಯ ಹೆಚ್ಚಳವಾಗುವಂತೆ ಮಾಡಿದರು.

ವಿಕಾಸ ಸೌಧ

ವಿಧಾನಸೌಧದ ಮಾದರಿಯಲ್ಲೇ ವಿಕಾಸ ಸೌಧ ನಿರ್ಮಾಣ ಕೃಷ್ಣ ಅವರ ಪರಿಕಲ್ಪನೆ. ₹146 ಕೋಟಿ ವೆಚ್ಚದ ಈ ಕಟ್ಟಡವನ್ನು 2000ದ ಮಾರ್ಚ್ 27ರ ತಮ್ಮ ಬಜೆಟ್ ಭಾಷಣದಲ್ಲಿ ವಿಷಯ ಪ್ರಸ್ತಾಪಿಸಿದ್ದರು. ಬಳಿಕ 2001ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿದ್ದರು. 7.5 ಎಕರೆ ಪ್ರದೇಶದಲ್ಲಿ 58,274 ಚದರ ಮೀಟರ್ ವಿಸ್ತೀರ್ಣದ ಭವನ ನಿರ್ಮಿಸಿದರು.

ಉದ್ಯೋಗ ಸೌಧ

ಕರ್ನಾಟಕ ಲೋಕಸೇವಾ ಆಯೋಗಕ್ಕೆ ವಿಧಾನಸೌಧದ ಮಾದರಿಯಲ್ಲಿ ಕಟ್ಟಡ ನಿರ್ಮಿಸಲು ಕೃಷ್ಣ ಅವರು ಶಂಕುಸ್ಥಾಪನೆ ನೆರವೇರಿಸಿದರು. ಅದಕ್ಕಾಗಿ ₹5 ಕೋಟಿ ಮಂಜೂರು ಮಾಡಿದ್ದರು. ನಂತರ ಒಟ್ಟು ₹16 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಯಿತು. ಅದಕ್ಕೆ ಉದ್ಯೋಗ ಸೌಧ ಎಂದು ನಾಮಕರಣ ಮಾಡಿದರು.

ಮುಖ್ಯಮಂತ್ರಿಯಾಗಿದ್ದ ಎಸ್‌.ಎಂ.ಕೃಷ್ಣ ಅವರು ವಿಕಾಸ ಸೌಧ ಕಾಮಗಾರಿಯನ್ನು ಪರಿಶೀಲನೆ ನಡೆಸಿದ ಸಂದರ್ಭ ಚಿತ್ರ: ಪ್ರಜಾವಾಣಿ ಆರ್ಕೈವ್ಸ್

ಆಡಳಿತ; ಆಹ್ಲಾದಕರ ಅನುಭವ

• ಎಚ್.ಬಿ. ದಿನೇಶ್

ಕೃಷ್ಣ ಅವರ ಆಡಳಿತದ ಅವಧಿಯನ್ನು ನೆನಪು ಮಾಡಿಕೊಂಡು ದಾಖಲಿಸುವುದು ಎಂದರೆ ಅದೊಂದು ಆಹ್ಲಾದಕರ ಅನುಭವ. 1999ರ ಅ. 11ರಂದು ಕರ್ನಾಟಕದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ದಿನದಂದೇ ಅವರು ರಾಜ್ಯದ ಸಮಗ್ರ ಅಭಿವೃದ್ಧಿಯ ಕುರಿತ ತಮ್ಮದೇ ಕನಸುಗಳನ್ನು ಒಳಗೊಂಡ ನೀಲಿ ನಕಾಶೆಯನ್ನು ಸಿದ್ಧಪಡಿಸಿಕೊಂಡರು. ಆಳವಾದ ಅಧ್ಯಯನ, ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ಗಳಿಸಿದ ಅಪಾರ ಅನುಭವಗಳು ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ನಿರ್ದಿಷ್ಟ ಯೋಜನೆಗಳನ್ನು ರೂಪಿಸಲು ಅವರಿಗೆ ಸಹಾಯಕವಾಗಿದ್ದವು. ಆಡಳಿತದಲ್ಲಿ ಸಾರ್ವಜನಿಕ ಸಹಭಾಗಿತ್ವ ಮತ್ತು ಅಧಿಕಾರಿಗಳನ್ನು ಚುರುಕುಗೊಳಿಸಬೇಕೆಂಬ ಅವರ ನಿರ್ಧಾರ ಆರಂಭದಿಂದಲೇ ಫಲ ಕಂಡವು.

ರಾಜಧಾನಿಯಲ್ಲಿ ಇರುವ ದಿನಗಳಂದು ಪ್ರತಿದಿನ 11 ಗಂಟೆಗೆ ವಿಧಾನ ಸೌಧದ ಕಚೇರಿಗೆ ಆಗಮಿಸಿ ತಮ್ಮ ಕೆಲಸ ಆರಂಭಿಸುತ್ತಿದ್ದರು. ವಿಧಾನ ಸೌಧದ ಕೆಂಗಲ್ ಹನುಮಂತಯ್ಯ ದ್ವಾರದ ಬಳಿ ಇದ್ದ ಸರ್ಕಾರಿ ನೌಕರರ ಹಾಜರಾತಿ ದಾಖಲಾತಿ ಯಂತ್ರದಲ್ಲಿ ತಮ್ಮ ಗುರುತಿನ ಕಾರ್ಡನ್ನು ಪಂಚ್ ಮಾಡುವ ಮೂಲಕ ತಮ್ಮ ಸಂಪುಟದ ಸಹೋದ್ಯೋಗಿಗಳಿಗೆ ಹಾಗೂ ನೌಕರರಿಗೆ ಹಾಜರಾತಿಯಲ್ಲಿ ಶಿಸ್ತು ತರಲು ಮಾದರಿಯಾದರು. ತಮ್ಮ ಆಡಳಿತದಲ್ಲಿ ಹೊಸತನ, ಹೊಸ ದಾರಿಯನ್ನು ತರಲು ಸದಾ ಆಲೋಚಿಸುತ್ತಿದ್ದ ಕೃಷ್ಣ ಅವರು ತಮ್ಮ ಶಿಸ್ತು, ಸಂಯಮ, ಜವಾಬ್ದಾರಿಯುತ ನಡವಳಿಕೆ ಹಾಗೂ ಸಮಯಪ್ರಜ್ಞೆ ಮೂಲಕವೇ ಆಡಳಿತ ಯಂತ್ರವನ್ನು ಬಿಗಿಗೊಳಿಸಿದ್ದರು. ಯಾವುದೇ ಸರ್ಕಾರಿ ಆದೇಶವನ್ನು ಹೊರಡಿಸದೇ ತಮ್ಮ ವ್ಯಕ್ತಿತ್ವದ ಮೂಲಕವೇ ಮಾದರಿ ಆಡಳಿತ ಅನುಷ್ಠಾನಗೊಳಿಸಿದ ಹೆಗ್ಗಳಿಕೆ ಅವರದು. ನಾಳೆ ಏನು ಮಾಡಬೇಕು ಎಂಬುದನ್ನು ಹಿಂದಿನ ದಿನ ತಾವೇ ನಿರ್ಧರಿಸಿ ನಮಗೆಲ್ಲರಿಗೂ ಸೋಜಿಗ ಮೂಡಿಸುತ್ತಿದ್ದರು. ಅವರ ಸಂಪುಟದ ಸಹೋದ್ಯೋಗಿಗಳಾಗಿದ್ದ ಕೆ.ಎಚ್. ರಂಗನಾಥ್, ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್, ಎಚ್.ಕೆ. ಪಾಟೀಲ ಮುಂತಾದ ಹಿರಿಯ ನಾಯಕರು ಸಹ ಅವರ ಪೂರ್ವಾನುಮತಿ ಪಡೆದೇ ಅವರನ್ನು ಭೇಟಿಯಾಗುತ್ತಿದ್ದುದು ಕೃಷ್ಣ ಅವರ ಶಿಸ್ತಿನ ಆಡಳಿತಕ್ಕೆ ನಿದರ್ಶನ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಕೃಷ್ಣ

ಸರ್ಕಾರದ ಎಲ್ಲಾ ಯೋಜನೆಗಳ ಮೇಲೆ ನಿಗಾ ವಹಿಸಲು ತಮ್ಮ ಸಚಿವಾಲಯದಲ್ಲೇ ಪರಿಶೀಲನಾ ತಂಡವನ್ನು ರಚಿಸಿದ್ದ ಕೃಷ್ಣ ಅವರು ಕೇಂದ್ರ ಸರ್ಕಾರದ ಅನುದಾನಿತ ಯೋಜನೆಗಳ ಬಗ್ಗೆ ಕಟ್ಟುನಿಟ್ಟಿನ ಆದೇಶ ನೀಡುತ್ತಿದ್ದರು. ಕೇಂದ್ರ ಸರ್ಕಾರದಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿದ ಅವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಬಾಂಧವ್ಯ ಸುಮಧುರವಾಗಿ ಇರಬೇಕು ಎಂಬ ಆಶಯವೂ ಇತ್ತು. ಅಂದು ಪ್ರಧಾನಿಯಾಗಿದ್ದ ವಾಜಪೇಯಿ, ಮಹಿಳಾ ಸಬಲೀಕರಣಕ್ಕಾಗಿ ಕೇಂದ್ರ ಬಿಡುಗಡೆ ಮಾಡಿದ್ದ ಅನುದಾನವನ್ನು ಕರ್ನಾಟಕ ಸರ್ಕಾರ ಸಮರ್ಪಕವಾಗಿ ಬಳಸಿಕೊಂಡಿಲ್ಲ ಎಂಬ ವಿಚಾರವನ್ನು ಅಂಕಿ ಅಂಶಗಳ ಸಮೇತ ಪ್ರಸ್ತಾಪಿಸಿ ಕೃಷ್ಣ ಅವರಿಗೆ ಪತ್ರ ಬರೆದಿದ್ದರು. ಆ ಪತ್ರದಲ್ಲಿನ ಕೆಲವು ಸಾಲುಗಳು ಮುಖ್ಯಮಂತ್ರಿಯವರ ಭಾವನೆಗಳನ್ನು ಗಾಸಿಗೊಳಿಸಿದ್ದವು. ಪತ್ರ ಓದಿದ ತಕ್ಷಣವೇ ಸಂಬಂಧಪಟ್ಟ ಸಚಿವರು ಹಾಗೂ ಅಧಿಕಾರಿಗಳ ಸಭೆ ಕರೆದ ಮುಖ್ಯಮಂತ್ರಿ, ಪ್ರಧಾನಮಂತ್ರಿಯವರ ಆಕ್ಷೇಪಗಳಿದ್ದ ಪತ್ರವನ್ನು ಸಭೆಯಲ್ಲಿ ತಾವೇ ಓದಿದ್ದರು. ಸಭೆಯಲ್ಲಿದ್ದ ಅಂದಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಮೋಟಮ್ಮ ಅವರನ್ನು ಉದ್ದೇಶಿಸಿ, ಈ ಅನುದಾನ ಬಳಕೆಗೆ ನಿರ್ದಿಷ್ಟ ಯೋಜನೆಯನ್ನು ರೂಪಿಸಿ ಮುಂದಿನ ಸಂಪುಟ ಸಭೆಯಲ್ಲಿ ಮಂಡಿಸುವಂತೆ ಸಲಹೆ ನೀಡಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಮೋಟಮ್ಮ ಅವರು ಒಂದು ವಾರದಲ್ಲಿ ಸ್ತ್ರೀಶಕ್ತಿ ಯೋಜನೆ ಸಿದ್ಧಪಡಿಸಿ ಸಂಪುಟ ಸಭೆಯಲ್ಲಿ ಮಂಡಿಸಿದರು. ಲಕ್ಷಾಂತರ ಮಹಿಳೆಯರಿಗೆ ಆರ್ಥಿಕ ಶಕ್ತಿ ನೀಡಿದ ಸ್ತ್ರೀಶಕ್ತಿ ಯೋಜನೆ ಕೃಷ್ಣ ಅವರ ಸರ್ಕಾರದ ಸಾಧನೆಗಳಲ್ಲಿ ಅತ್ಯಂತ ಪ್ರಮುಖವಾದದ್ದು. ಸ್ತ್ರೀಶಕ್ತಿ ಯೋಜನೆ ಆಂದೋಲನ ರೂಪ ಪಡೆದಿದ್ದು ಈಗ ಇತಿಹಾಸ.

ಲೇಖಕ: ನಿವೃತ್ತ ಜಂಟಿ ನಿರ್ದೇಶಕ, ವಾರ್ತಾ ಇಲಾಖೆ

ಜಾತಿಯ ಎಲ್ಲೆ ಮೀರಿ, ಸರ್ವರ ಪ್ರೀತಿಪಾತ್ರರಾಗಿ...

• ಕ್ಯಾಪ್ಟನ್ ಜಿ. ಆರ್. ಗೋಪಿನಾಥ್

ಎಸ್.ಎಂ.ಕೃಷ್ಣ ಅವರನ್ನು ನಾನು ಮೊದಲು ಭೇಟಿ ಮಾಡಿದ್ದು ಬೆಂಗಳೂರಿನ ಜಕ್ಕೂರು ವಾಯುನೆಲೆಯಲ್ಲಿ; ಡೆಕ್ಕನ್ ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸಲು ಬಂದಿದ್ದ ಅವರನ್ನು ನಾನು ಸ್ವಾಗತಿಸಿದ್ದೆ. ಅವರು ಬಲಿಷ್ಠ ಕೃಷಿ ಸಮುದಾಯವಾದ ಗೌಡರು ಅಥವಾ ಒಕ್ಕಲಿಗರ ಅತ್ಯಂತ ಗೌರವಾನ್ವಿತ ಧಾರ್ಮಿಕ ಮುಖಂಡರಾಗಿದ್ದ ಆದಿಚುಂಚನಗಿರಿ ಮಠದ ಬಾಲಗಂಗಾಧರನಾಥ ಸ್ವಾಮೀಜಿ ಅವರನ್ನು ಭೇಟಿ ಮಾಡಿ, ಅವರ ಆಶೀರ್ವಾದ ಪಡೆಯಲು ತೆರಳುತ್ತಿದ್ದರು.

'ಕ್ಯಾಪ್ಟನ್, ಈ ಪ್ರಯಾಣದಲ್ಲಿ ನೀವು ಏಕೆ ನನ್ನ ಜೊತೆಯಾಗಬಾರದು' ಎಂದು ಅವರು ನನ್ನನ್ನು ಪ್ರಶ್ನಿಸಿದರು. ನಾನು ಸಂತೋಷದಿಂದ ಆ 30 ನಿಮಿಷದ ಪ್ರಯಾಣದಲ್ಲಿ ಅವರ ಜೊತೆಯಾದೆ. ನಮ್ಮ ದೀರ್ಘ ಹಾಗೂ ಸ್ಮರಣೀಯವಾದ ಒಡನಾಟ ಹಾಗೆ ಆರಂಭವಾಗಿತ್ತು.

ಎಸ್.ಎಂ.ಕೃಷ್ಣ ಅವರ ಸುಸಂಸ್ಕೃತ ನಡವಳಿಕೆಯ ಅಡಿಯಲ್ಲಿ ರಾಜಕೀಯ ಜಾಣ್ಮೆ ಮತ್ತು ಚತುರತೆಗಳಿದ್ದವು. ಅವರ ರಾಜಕೀಯ ವೈರಿ ಆಗಿದ್ದ ದೇವೇಗೌಡ ಅವರು ನಿಜವಾದ ಮಣ್ಣಿನ ಮಗ ಮತ್ತು ರಾಜಕೀಯವಾಗಿ ಪ್ರಬಲವಾಗಿದ್ದ ಒಕ್ಕಲಿಗ ಸಮುದಾಯದ ಅಧಿಕೃತ ನಾಯಕರು ಎಂದು ನಂಬಲಾಗಿತ್ತು. ಅದೇ ಸಮುದಾಯದಿಂದ ಬಂದಿದ್ದ ಕೃಷ್ಣ ಅವರಂಥ ಇತರ ನಾಯಕರ ಬಗ್ಗೆ ಸಮುದಾಯದಲ್ಲಿ ಅಂಥ ಭಾವನೆಗಳು ಇರಲಿಲ್ಲ.

ಹಾಸನದಿಂದ ಬಂದಿದ್ದ ದೇವೇಗೌಡರಂತೆಯೇ ಒಕ್ಕಲಿಗರ ಪ್ರಾಬಲ್ಯದ ಮಂಡ್ಯ ಜಿಲ್ಲೆಯ ಸಣ್ಣ ಹಳ್ಳಿಯಿಂದ ಬಂದಿದ್ದ ಕೃಷ್ಣ ಅವರು ಕೂಡ ಒಕ್ಕಲಿಗ ಸಮುದಾಯದ ನಾಯಕರಾಗಿದ್ದರು. ಸಮುದಾಯದ ಹೆಮ್ಮೆ ಎನ್ನಿಸಿಕೊಳ್ಳುವ ತಮ್ಮ ಪ್ರಯತ್ನದಲ್ಲಿ ಅವರು ಬಹಳ ಮಟ್ಟಿಗೆ ಯಶಸ್ವಿಯೂ ಆದರು. ಆದರೆ, ತಮ್ಮ ಅಮೆರಿಕ ಶಿಕ್ಷಣ ಮತ್ತು ಬೆಂಗಳೂರನ್ನು ಜಾಗತಿಕ ಮಟ್ಟದ ಕಾಸ್ಮೊಪಾಲಿಟನ್ ನಗರವನ್ನಾಗಿ ಮತ್ತು ಮಾಹಿತಿ ತಂತ್ರಜ್ಞಾನದ ಕೇಂದ್ರವನ್ನಾಗಿ ರೂಪಿಸುವ ಅಸಾಧಾರಣ ದೂರದೃಷ್ಟಿಯಿಂದಾಗಿ ಅವರು ಜಾತಿಯ ಎಲ್ಲ ಸಂಕುಚಿತ ಗಡಿಗಳನ್ನು ಮೀರಿ ಸಮಾಜದ ಎಲ್ಲ ವರ್ಗಗಳಿಗೆ ಪ್ರೀತಿಪಾತ್ರರಾದರು.

ಅದೃಷ್ಟವಶಾತ್, ಕಡಿಮೆ ವೆಚ್ಚದ ವಿಮಾನಯಾನ ಸಂಸ್ಥೆಯ ನನ್ನ ಕನಸಿನ ಬೀಜಾಂಕುರವಾಗಿದ್ದು ಎಸ್.ಎಂ.ಕೃಷ್ಣ ಅವರೊಂದಿಗಿನ ನೇರ ಒಡನಾಟದಲ್ಲಿಯೇ. ಅವರು ಡೆಕ್ಕನ್ ಹೆಲಿಕಾಪ್ಟರ್‌ಗಳನ್ನು ಪದೇ ಪದೇ ಬಳಸುತ್ತಿದ್ದರು. ಒಂದು ದಿನ ಅವರು ನನಗೆ ಕರೆ ಮಾಡಿ, 'ನಾನು ಪಳನಿಗೆ ಹೋಗಬೇಕಿದೆ, ಚಾಪರ್‌ಗಳು ಹೆಚ್ಚು ಕಂಪಿಸುತ್ತವೆ ಮತ್ತು ವಿಪರೀತ ಶಬ್ದ ಮಾಡುತ್ತವೆ. ಹೆಚ್ಚು ಸಮಯವನ್ನೂ ತೆಗೆದುಕೊಳ್ಳುತ್ತವೆ. ನೀವು ವಿಮಾನದಲ್ಲಿ ನನ್ನನ್ನು ಅಲ್ಲಿಗೆ ಕರೆದೊಯ್ಯಲು ಸಾಧ್ಯವೇ' ಎಂದು ಕೇಳಿದರು. ಈ ಬಗ್ಗೆ ಹಲವು ಸಾಧ್ಯತೆಗಳನ್ನು ಪರಿಶೀಲಿಸಿದ ಬಳಿಕ ನಮ್ಮ ಬಳಿ ಬಂದ ವಿಮಾನ ಚಾಲಕ, ಪಳನಿಗೆ ಹತ್ತಿರದಲ್ಲಿರುವ ದಿಂಡಿಗಲ್‌ನಲ್ಲಿ, ಉಡುಪು ತಯಾರಿಕಾ ಕಾರ್ಖಾನೆಗೆ ಹೊಂದಿಕೊಂಡಂತೆ, ಒಂದು ವಿಮಾನ ನಿಲ್ದಾಣ ಇರುವುದನ್ನು ಪತ್ತೆ ಹಚ್ಚಿ ನನಗೆ ತಿಳಿಸಿದರು. ನಾನು ಕಾರ್ಖಾನೆಯ ಮಾಲೀಕರೊಂದಿಗೆ ಮಾತನಾಡಿದೆ.

ಆದಿಚುಂಚನಗಿರಿ ಮಠದ ಹಿಂದಿನ ಮಠಾಧಿಪತಿ ಬಾಲಗಂಗಾಧರನಾಥ ಸ್ವಾಮೀಜಿ ಅವರೊಂದಿಗೆ ಎಸ್‌.ಎಂ.ಕೃಷ್ಣ

ಕೃಷ್ಣ ಅವರು ದಿಂಡಿಗಲ್‌ವರೆಗೆ ವಿಮಾನದಲ್ಲಿ ಪ್ರಯಾಣಿಸಿ, ಅಲ್ಲಿಂದ ಪಳನಿ ದೇವಾಲಯಕ್ಕೆ ಭೇಟಿ ನೀಡಿದರು. ವಾಪಸ್ ಬಂದ ಬಳಿಕ ನನ್ನನ್ನು ಭೇಟಿ ಮಾಡಿದ ಅವರು, 'ಕ್ಯಾಪ್ಟನ್, ಕರ್ನಾಟಕದಲ್ಲಿರುವ ಸಣ್ಣ ಸಣ್ಣ ವಿಮಾನ ನಿಲ್ದಾಣಗಳ ನಡುವೆ ವಿಮಾನಯಾನ ಸಂಪರ್ಕ ಕಲ್ಪಿಸುವ ಬಗ್ಗೆ ನೀವು ಯಾಕೆ ಯೋಚಿಸಬಾರದು' ಎಂದು ಹೇಳಿದರು. ಇದು ನನ್ನನ್ನು ಹೊಸ ಆಲೋಚನೆಗೆ ಪ್ರೇರೇಪಿಸಿತು.

ಸಣ್ಣ ವಿಮಾನಗಳ ಕಾರ್ಯಾಚರಣೆ ಕಾರ್ಯಸಾಧ್ಯವಲ್ಲದಿರುವುದರಿಂದ ಏರ್ ಡೆಕ್ಕನ್ 48 ಆಸನಗಳ ವಿಮಾನಗಳ ಸೇವೆಯನ್ನು ಬೆಂಗಳೂರು–ಹುಬ್ಬಳ್ಳಿ, ಬೆಳಗಾವಿ ಮತ್ತು ಬಳ್ಳಾರಿಗೆ ಆರಂಭಿಸಿತ್ತು. ಇದನ್ನು ಎಸ್.ಎಂ.ಕೃಷ್ಣ ಅವರೇ ಉದ್ಘಾಟಿಸಿದರು. ಬಳಿಕ ಏರ್ ಡೆಕ್ಕನ್ ದೇಶದ ಇತರ ಸಣ್ಣ ನಗರಗಳಿಗೆ ವಿಮಾನಯಾನ ಸೇವೆ ವಿಸ್ತರಿಸಿತು.

ಏರ್ ಡೆಕ್ಕನ್ ವಿಮಾನ ಸೇವೆ ಆರಂಭವಾದ ಬಳಿಕ ನಾವು ದೊಡ್ಡ ದೊಡ್ಡ ವಿಮಾನಯಾನ ಕಂಪನಿಗಳ ವಿರುದ್ಧ ಹೋರಾಡಬೇಕಾಯಿತು. ಕಡಿಮೆ ವೆಚ್ಚದ ನಮ್ಮ ವಿಮಾನಯಾನ ಮಾದರಿಯು ತ್ವರಿತವಾಗಿ ಬೆಳವಣಿಗೆ ಕಂಡಿದ್ದರಿಂದ ದೊಡ್ಡ ಸಂಸ್ಥೆಗಳು ಬೆದರಿದವು. ಕಡಿಮೆ ವೆಚ್ಚದ ವಿಮಾನಯಾನ ಸುರಕ್ಷಿತವಲ್ಲ ಎಂಬ ನೆಪವನ್ನು ಒಡ್ಡಿ ಏರ್ ಡೆಕ್ಕನ್ ಸಂಸ್ಥೆಯನ್ನು ಮುಚ್ಚಲು ಅವುಗಳು ತಮ್ಮ ರಾಜಕೀಯ ಪ್ರಭಾವವನ್ನು ಬಳಸಿದವು. ಈ ವಿಚಾರವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿದ ಸಂಸದರು, ಸುರಕ್ಷತೆಯ ಪರಿಶೀಲನೆ ನಡೆಸಬೇಕು ಮತ್ತು ನಮ್ಮ ಕಾರ್ಯಾಚರಣೆಗಳನ್ನು ಅಮಾನತಿನಲ್ಲಿಡಬೇಕು ಎಂದು ಆಗ್ರಹಿಸಿದರು. ಏರ್ ಡೆಕ್ಕನ್‌ಗಿದ್ದ ಹಲವು ಪರವಾನಗಿಗಳು ಸ್ಥಗಿತಗೊಂಡವು.

ಎಸ್.ಎಂ.ಕೃಷ್ಣ ಅವರನ್ನು ನಾನು ಕೂಡಲೇ ಭೇಟಿಯಾಗಲು ಧಾವಿಸಿದೆ. 'ಕ್ಯಾಪ್ಟನ್, ನನಗೆ ಒಂದು ದಿನ ಕಾಲಾವಕಾಶ ಕೊಡಿ. ನಾನು ಯೋಚಿಸುವೆ' ಎಂದರು. ಮರುದಿನ, 'ನೀವು ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರನ್ನು ಭೇಟಿ ಮಾಡಿ. ಸೇನೆಯ ನಿವೃತ್ತ ಅಧಿಕಾರಿಯಾಗಿರುವ ಮತ್ತು ಉದ್ಯಮಿಯಾಗಿರುವ ನಿಮ್ಮ ಬಗ್ಗೆ ಅವರಿಗೆ ಮೆಚ್ಚುಗೆ ಇದೆ. ಈ ಸಚಿವರು ಅವರಿಗೆ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ನನ್ನ ಬದಲು ಜಾರ್ಜ್ ಅವರೇ ಅವರೊಂದಿಗೆ ಮಾತನಾಡುವುದು ಒಳ್ಳೆಯದು' ಎಂದು ನನಗೆ ಸಲಹೆ ನೀಡಿದರು.

'ಜಾರ್ಜ್ ಸಾಬ್' ಎಂದೇ ಎಲ್ಲರಿಂದಲೂ ಪ್ರೀತಿಯಿಂದ ಕರೆಸಿಕೊಳ್ಳುತ್ತಿದ್ದ ಫರ್ನಾಂಡಿಸ್ ಏರ್ ಡೆಕ್ಕನ್ ಪಾಲಿಗೆ ದೇವರೇ ಕಳುಹಿಸಿದ ವ್ಯಕ್ತಿಯಾದರು. ವಿಮಾನಯಾನ ಕ್ಷೇತ್ರದಲ್ಲಿ ಏರ್ ಡೆಕ್ಕನ್ ಮುಗಿಲೆತ್ತರಕ್ಕೆ ಹಾರಾಡಿತು. ಮಹಾಭಾರತ ಪುರಾಣದಲ್ಲಿ ದ್ರೌಪದಿಯ ರಕ್ಷಣೆಗೆ ಶ್ರೀಕೃಷ್ಣ ಬಂದಂತೆ, ನಮ್ಮಿಂದ ಯಾವ ಪ್ರತಿಫಲಾಪೇಕ್ಷೆಯನ್ನು ಇಟ್ಟುಕೊಳ್ಳದೇ ಈ ಕೃಷ್ಣ, ನನ್ನನ್ನು ಮತ್ತು ಏರ್ ಡೆಕ್ಕನ್ ಸಂಸ್ಥೆಯನ್ನು ರಕ್ಷಿಸಿದರು. ಅದಕ್ಕೂ ಮಿಗಿಲಾಗಿ, ಕೆಟ್ಟ ಮತ್ತು ಅತ್ಯಂತ ಭ್ರಷ್ಟವಾದ ರಾಜಕಾರಣದಲ್ಲಿ ಕೃಷ್ಣ ಅವರು ತಮ್ಮ ಸಭ್ಯ ನಡವಳಿಕೆಯಿಂದ ಅಸಾಧಾರಣ ವ್ಯಕ್ತಿಯಾಗಿ ಬೆಳೆದರು. ಬೆಂಗಳೂರನ್ನು ಮಾಹಿತಿ ತಂತ್ರಜ್ಞಾನ ಮಾತ್ರವಲ್ಲದೇ ಜೈವಿಕ ತಂತ್ರಜ್ಞಾನ ನಗರಿಯನ್ನಾಗಿ ಅಭಿವೃದ್ಧಿಪಡಿಸಿ, ನಯನಮನೋಹರ ಮತ್ತು ವೈಭವೋಪೇತವಾದ ಅಂತರರಾಷ್ಟ್ರೀಯ ನಿಲ್ದಾಣವನ್ನೂ ನೀಡಿ ರಾಜ್ಯ ರಾಜಧಾನಿಯ ಚಹರೆಯನ್ನೇ ಬದಲಾಯಿಸಿದರು.

ಕರ್ನಾಟಕದ ಟೆನಿಸ್ ಪ್ರವರ್ತಕ ಕೃಷ್ಣ

ಬೆಂಗಳೂರು: ಕರ್ನಾಟಕದ ರಾಜಕೀಯ ರಂಗದಲ್ಲಿ ಉನ್ನತ ಹುದ್ದೆಗೆ ಏರಿದ ರಾಜಕಾರಣಿಗಳಲ್ಲಿ ಕ್ರೀಡೆಯ ಬಗ್ಗೆ ಆಸಕ್ತಿ ತೋರಿದವರು ಬಹಳ ಕಡಿಮೆ. ಅಂತಹ ಅಪರೂಪದ ವ್ಯಕ್ತಿಗಳಲ್ಲಿ ಎಸ್.ಎಂ. ಕೃಷ್ಣ ಅವರೂ ಒಬ್ಬರು. ಅವರು ಅಪ್ಪಟ ಟೆನಿಸ್ ಪ್ರೇಮಿಯಾಗಿದ್ದರು.

'ಲವ್ ಗೇಮ್' ಎಂದೇ ಕರೆಯಲಾಗುವ ಟೆನಿಸ್ ಆಟವನ್ನು ಬಾಲ್ಯದಿಂದಲೂ ಆಡುತ್ತ ಬೆಳೆದವರು. ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವಾಗಲೂ ಟೆನಿಸ್ ಆಡುವುದನ್ನು ತಪ್ಪಿಸಿರಲಿಲ್ಲ ಎಂದು ಅವರ ಆಪ್ತರು ನೆನಪಿಸಿಕೊಳ್ಳುತ್ತಾರೆ.

ಅಷ್ಟೇ ಅಲ್ಲ. ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಅಧ್ಯಕ್ಷರಾಗಿದ್ದಾಗ ನೀಡಿದ ಕೊಡುಗೆಯೂ ದೊಡ್ಡದು. ರಾಜ್ಯದ ಮೂಲೆಮೂಲೆಗೂ ಟೆನಿಸ್ ತಲುಪಿಸಿದ ಶ್ರೇಯ ಅವರಿಗೆ ಸಲ್ಲುತ್ತದೆ. ಅವರು 1999–2020ರವರೆಗೂ ಕೆಎಸ್‌ಎಲ್‌ಟಿಎ ಅಧ್ಯಕ್ಷರಾಗಿದ್ದರು. ಈ ವೇಳೆ ಕೆಎಸ್‌ಎಲ್‌ಟಿಯ ಕೋರ್ಟ್ ಉನ್ನತ ದರ್ಜೆಗೇರಿತು.

'ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡೆಯ ಪ್ರೇಮಿ. ಅವರ ಇಚ್ಛಾಶಕ್ತಿಯಿಂದಾಗಿ ರಾಜ್ಯದಲ್ಲಿ ಟೆನಿಸ್ ಆಟಕ್ಕೆ ಬಹಳಷ್ಟು ಲಾಭವಾಯಿತು. 2002ರಲ್ಲಿ ಅಂತರರಾಷ್ಟ್ರೀಯ ಟೆನಿಸ್ ಗುಲ್ಬರ್ಗ (ಕಲಬುರಗಿ)ದಲ್ಲಿ ನಡೆಯಲು ಕಾರಣರಾದರು. ಅಲ್ಲಿ ಮೊದಲ ಬಾರಿಗೆ ಟೆನಿಸ್ ಕೋರ್ಟ್ ಸಮುಚ್ಚಯ ನಿರ್ಮಿಸಲಾಯಿತು. ನಂತರ ಐಟಿಎಫ್ ನಡೆಯಿತು. ಅಲ್ಲಿಂದ ಬೇರೆ ಜಿಲ್ಲೆಗಳಿಗೂ ಟೆನಿಸ್ ವಿಸ್ತರಿಸಿತು' ಎಂದು ಕೆಎಸ್‌ಎಲ್‌ಟಿಎ ಜಂಟಿ ಕಾರ್ಯದರ್ಶಿ ಸುನಿಲ್ ಯಜಮಾನ್ ಹೇಳಿದರು.

ಗುಂಡಣ್ಣ

ಹಣೆಬರಹಕ್ಕಿಂತ ಪ್ರಯತ್ನ ದೊಡ್ಡದು!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

85

ಈ ಜಗತ್ತಿನಲ್ಲಿ ನಾವು ಬೇಡಿದ್ದು ಸಿಗೋದಿಲ್ಲ. ನಾವು ನೀಡಿದ್ದು ಸಿಗತ್ತೈತಿ. ಇದನ್ನು ತಿಳಕೋಬೇಕು ಮನುಷ್ಯ. ಭೌತ ವಿಜ್ಞಾನಿ ನ್ಯೂಟನ್ ಚಲನೆಯ ಮೂರನೇ ನಿಯಮ ಹೇಳ್ತಾನ. 'ಪ್ರತಿ ಕ್ರಿಯೆಗೂ ಸಮನಾದ ಪ್ರತಿಕ್ರಿಯೆ ಇದೆ' ಅಂತಾನ ಅವ. ನೀವು ಒಂದು ಚೆಂಡು ತೆಗೆದು ಗೋಡೆಗೆ ಒಗೆದರ ಅದು ನೀವು ಒಗೆದ ವೇಗದಲ್ಲಿಯೇ ಮತ್ತೆ ವಾಪಸ್ ಬರತ್ತೈತಿ. ಅಂದರ ನಿಮ್ಮ ಕರ್ಮವೇ ನಿಮಗೆ ವಾಪಸು ಬರತ್ತೈತಿ. ಒಳ್ಳೇದು ಮಾಡಿದರೆ ಒಳ್ಳೇದು, ಕೆಟ್ಟದ್ದು ಮಾಡಿದರೆ ಕೆಟ್ಟದ್ದು ಬರತ್ತೈತಿ ಅಷ್ಟೆ.

ಮೂರು ಜನ ಕುಡುಕರಿದ್ದರಂತೆ. ಅವರಿಗೆ ತಿರುಪತಿಗೆ ಹೋಗಬೇಕು ಅನಿಸಿತಂತೆ. ಅವರು ಸೊಲ್ಲಾಪುರ ರೈಲ್ವೆ ನಿಲ್ದಾಣಕ್ಕೆ ಹೋದಾಗ ಎಲ್ಲ ಬೋಗಿಗಳೂ ಭರ್ತಿಯಾಗಿದ್ದವು. ಇದರಲ್ಲಿ ಹ್ಯಾಂಗ್ ಹತ್ತೋದು? ಅದರಲ್ಲಿ ಒಬ್ಬ 'ನೀ ನೋಡು ಎಲ್ಲರನ್ನು ಹ್ಯಾಂಗ್ ಎಬ್ಬಿಸ್ತೀನಿ' ಅಂದ. ಹಾಗೆ ಹೇಳಿದವನೇ, ರೈಲು ಬೋಗಿಯೊಳಗೆ ಹೋಗಿ 'ನಾನು ರೈಲ್ವೆ ಸುರಕ್ಷತಾ ವಿಭಾಗದವನು. ಈ ಬೋಗಿಯೊಳಗೆ ಹಾವು ಬಂದೈತಿ. ದಯವಿಟ್ಟು ಎಲ್ಲಾರು ಕೆಳಗೆ ಇಳೀಬೇಕು' ಅಂದ. ಹಾವು ಅಂತಾ ಕೇಳಿದ್ದೇ ತಡ ಜನರೆಲ್ಲಾ ಕೆಳಕ್ಕೆ ಇಳಿದರು. ಆಗ ಈ ಮೂವರು ಬೋಗಿಯೊಳಗೆ ಹೋಗಿ ಇನ್ನಷ್ಟು ಕುಡಿದರು. ಹಾಗೇ ಮಲಗಿಕೊಂಡರು. ಚೆನ್ನಾಗಿ ನಿದ್ದೆ ಬಂತು. ಬೆಳಿಗ್ಗೆ 'ಚಾಯ್ ಚಾಯ್' ಎಂಬ ಕೂಗು ಕೇಳಿ ಎಚ್ಚರಾತು. ಎದ್ದು ಚಾಯ್ ಮಾರೋನಿಗೆ ಇದು ಯಾವ ಸ್ಟೇಷನ್ ಅಂತಾ ಕೇಳಿದರು. 'ಇದು ಸೊಲ್ಲಾಪುರ ಸ್ಟೇಷನ್' ಅಂದ ಅವ. 'ರೈಲು ತಿರುಪತಿಗೆ ಹೋಗಲಿಲ್ಲೇನು' ಎಂದು ಕೇಳಿದರು ಇವರು. 'ಇಲ್ಲ ಈ ಬೋಗಿಲಿ ಹಾವು ಇತ್ತು ಅಂತ ಅದನ್ನು ಬಿಟ್ಟು ರೈಲು ಮುಂದೆ ಹೋಗೈತಿ' ಅಂದ ಚಾಯ್ ಬಾಯ್.

ಅಂದರ ನಾವು ಏನು ಮಾಡೇವಿ ಅದೇ ಸಿಗತ್ತೈತಿ ಜಗತ್ತಿನೊಳಗ. ನೀವು ನೆಲದ ಕಾನೂನಿನಿಂದ ತಪ್ಪಿಸಿಕೊಳ್ಳಬಹುದೇ ವಿನಾ ಕರ್ಮದ ಕಾನೂನಿನಿಂದ ತಪ್ಪಿಸಿಕೊಳ್ಳಲು ಆಗೋದಿಲ್ಲ.

'ಹೌದ್ರೀ, ಎಲ್ಲಾ ಹಣೆಬರಹ ಅಂತ ಅಂದ್ರ ನಾವು ಏನೂ ಮಾಡಬೇಕಾಗಿಲ್ಲವಲ್ಲ. ಸುಮ್ಮನೆ ಕುಳಿತುಬಿಡೋದು, ಹಣೆಬರಹದಲ್ಲಿ ಇದ್ದರೆ ಬರತ್ತೈತಿ. ಇಲ್ಲಾ ಅಂದರ ಇಲ್ಲ' ಅಂತ ನೀವು ಕೇಳಬಹುದು. ಅದು ಹಾಗಲ್ಲ. 12ನೇ ಶತಮಾನದಲ್ಲಿದ್ದ ಶರಣರು ಎಷ್ಟು ಜ್ಞಾನಿಗಳಿದ್ದರು! ಮನುಕುಲ ಹಣೆಬರಹವನ್ನು ನಂಬಿ ಬದುಕು ಕೆಡಿಸಿಕೊಳ್ಳಬಾರದು. ಹಣೆಬರಹಕ್ಕಿಂತ ದೊಡ್ಡದು ಏನಾದರೂ ಐತೇನು ಜಗತ್ತಿನಲ್ಲಿ ಅಂತ ಸುಮ್ಮನೆ ಕುಳಿತುಕೊಳ್ಳಬಾರದು. ಅದಕ್ಕೇ ಚನ್ನಬಸವಣ್ಣ ಹಣೆಬರಹ ಶ್ರೇಷ್ಠವೋ ಅಥವಾ ಮನುಷ್ಯ ಪ್ರಯತ್ನ ಶ್ರೇಷ್ಠವೋ ಅಂತ ಸಂಶೋಧನೆ ಮಾಡಿದರು.

'ಪ್ರಾರಬ್ಧ ಪ್ರಯತ್ನಗಳ ತಾರತಮ್ಯವನಿಲ್ಲಿ ಹೇಳಿಹೆ ಕೇಳಿರಯ್ಯಾ, ಪ್ರಯತ್ನದ ಹೆಚ್ಚು ಕುಂದಿನಂತೆ, ಇಂದಾಗಲಿ ಮುಂದಾಗಲಿ ಪ್ರಾರಬ್ಧವು ಫಲಪ್ರದವನೀವುದಲ್ಲವೆ? ವಿಶ್ವಾಮಿತ್ರನು ಕ್ಷತ್ರಿಯನಾದಡೆಯೂ, ತನ್ನ ತಪಃಪ್ರಭಾವದಿಂದ ಬ್ರಾಹ್ಮಣನಾಗಲಿಲ್ಲವೆ? ಮಾರ್ಕಂಡೇಯನು ಅತ್ಯುತ್ಕಟವಾದ ಶಿವಭಕ್ತಿಯಿಂದ ಚಿರಂಜೀವಿಯಾಗಲಿಲ್ಲವೆ? ರಾವಣ ಕೀಚಕಾದಿಗಳು ಪಾಪಾದಿಕ್ಯದಿಂದ ಹತಭಾಗ್ಯರಾಗಲಿಲ್ಲವೆ? ಅದು ಕಾರಣ-ತಾನು ಕೈಕೊಂಡ ಕಜ್ಜದಲ್ಲಿ ಪ್ರಯತ್ನ ಪ್ರಾರಬ್ಧವಾಗಿ ಫಲವೀವುದರಿಂದ ಪ್ರಾರಬ್ಧಕ್ಕಿಂತ ಪ್ರಯತ್ನವೇ ಮಿಗಿಲಾಗಿಪ್ಪುದು ಕಾಣಾ ಕೂಡಲಚೆನ್ನಸಂಗಮದೇವಾ' ಎಂದರು ಅವರು.

ಅಂದರ, ಪ್ರಾರಬ್ಧಕ್ಕಿಂತ ಪ್ರಯತ್ನವೇ ಮೇಲು. ಹಣೆಬರಹ ಅಂತ ಸುಮ್ಮನೆ ಕುಳಿತುಕೊಳ್ಳಬೇಡಿ. ಪ್ರಯತ್ನ ಬಹಳ ದೊಡ್ಡದು. ಮನುಷ್ಯ ಪ್ರಯತ್ನಶೀಲನಾಗಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಬುಧವಾರ ಡಿಸೆಂಬರ್ 11, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಏಕಾದಶಿ ಗಂ. 25-10 ನಕ್ಷತ್ರ: ರೇವತಿ ಗಂ. 11-48 ಯೋಗ: ವರಿಯಾನ್ ಗಂ. 18-47 ಕರಣ: ವಣಿಜ ಗಂ. 14-28, ವೃಶ್ಚಿಕ ಮಾಸದ 25 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 3.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 06-47 ಸೂರ್ಯಾಸ್ತ: 06-01
ಮುಸ್ಲಿಂ ದಿನಾಂಕ: 08 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 7, 2

ಮೇಷ: ನಿರ್ದಿಷ್ಟವಾದ ಒಂದು ಗುರಿಯ ಕಡೆಗೆ ತಲುಪುವ ಪ್ರಯತ್ನವನ್ನು ಮಾಡಿ. ಉದ್ಯೋಗ ನಿಮಿತ್ತ ವಿದೇಶ ಯಾನ ಮಾಡುವ ಅವಕಾಶ ಸಿಗುತ್ತದೆ. ಕೃಷಿಕರಿಗೆ ಸಂಪಾದನೆ ಹೆಚ್ಚಲಿದೆ.

ವೃಷಭ: ಗೊಂದಲದಿಂದ ಹೊರ ಬರಲು ಸತ್ಯದ ಮಾರ್ಗದಿಂದ ಅನುಕೂಲವಾಗುವುದು. ಹಿರಿಯರೊಡನೆ ವಾಗ್ವಾದ ನಡೆಯದಂತೆ ಜಾಗ್ರತೆ ವಹಿಸಿರಿ. ಏಕೆಂದರೆ ನಿಮ್ಮ ಯಶಸ್ಸಿಗೆ ಅವರ ಸಹಾಯ ಅಗತ್ಯವಾಗಿರುತ್ತದೆ.

ಮಿಥುನ: ಪ್ರಾಣಮಿತ್ರರ ಸಹಕಾರದಿಂದ ನಿಮ್ಮ ಜೀವನ ಮಟ್ಟದಲ್ಲಿ ಉನ್ನತ ಸ್ಥಾನವನ್ನು ಮುಟ್ಟುವುದಕ್ಕೆ ಸಾಧ್ಯವಾಗುವುದು. ದಿಟ್ಟತನದ ಜೊತೆಗೆ ಸ್ವಲ್ಪ ತಂತ್ರಗಾರಿಕೆ ತೋರಿದರೆ ಅಧಿಕಾರಗಳಿಸುವುದು ಕಷ್ಟವೇನಲ್ಲ.

ಕರ್ಕಾಟಕ: ಗುರಿ ಸಾಧಿಸಲು ಪ್ರಮುಖ ವ್ಯಕ್ತಿಗಳೊಂದಿಗಿನ ಭೇಟಿ ಮತ್ತು ಕೆಲ ಬದಲಾವಣೆಗಳು ಅನಿವಾರ್ಯ ಎನಿಸಲಿದೆ. ದಾಂಪತ್ಯದಲ್ಲಿ ಚರ್ಚೆಗಳಿಗೆ ಆಸ್ಪದ ನೀಡದಿರಿ. ಶ್ರಮಜೀವಿಗಳಿಗೆ ಉತ್ತಮ ಆದಾಯವಿರುವುದು.

ಸಿಂಹ: ಉದ್ಯೋಗದಲ್ಲಿ ಜವಾಬ್ದಾರಿಯುತವಾದ ಕಾರ್ಯವೈಖರಿಯಿಂದ ಸ್ಥಾನ-ಗೌರವಾದಿ ಸುಖ ಪ್ರಾಪ್ತಿಯಾಗಲಿದೆ. ಪಾರಂಪರಿಕವಾಗಿ ಬಂದಂತಹ ಹಿರಿಯರ ಆಸ್ತಿ ಸ್ವತ್ತುಗಳು ಇಂದು ನಿಮ್ಮ ಪಾಲಿಗೆ ಬರಲಿವೆ.

ಕನ್ಯಾ: ಅರೆ ಸರಕಾರಿ ಇಲಾಖೆಯ ಉದ್ಯೋಗಿಗಳಿಗೆ ಇನ್ನಷ್ಟು ಹೆಚ್ಚಿನ ಅನುಕೂಲಗಳಾಗಬಹುದು. ವ್ಯವಹಾರ ವಿಸ್ತರಣೆಗೆ ಸ್ನೇಹಿತರ ನೆರವು ಸಿಗಲಿದೆ. ರಾಸಾಯನಿಕ ಬಳಕೆಯ ವ್ಯತ್ಯಾಸದಿಂದ ರೈತರಿಗೆ ನಷ್ಟ ಸಂಭವಿಸುತ್ತದೆ.

ತುಲಾ: ಕಾಗದದ ವ್ಯಾಪಾರದಲ್ಲಿ ಮಂದಗತಿಯ ನಡೆ ಕಂಡರೂ ಅಭಿವೃದ್ಧಿ ಖಚಿತ. ಆರೋಗ್ಯಕ್ಕಾಗಿ ಆಹಾರ ಸೇವನೆ ವಿಧಾನ ಬದಲಾಯಿಸಿಕೊಳ್ಳಬೇಕಾಗುವುದು. ವ್ಯಾಪಾರ ವ್ಯವಹಾರಗಳಲ್ಲಿ ಚತುರ ನಡೆ ಇರುವುದು.

ವೃಶ್ಚಿಕ: ಪ್ರಭಾವಿ ವ್ಯಕ್ತಿಗಳ ಜೊತೆಗಿನ ಓಡಾಟ ಹೆಚ್ಚಿನ ಸ್ಥಾನಮಾನದ ಜೊತೆಯಲ್ಲಿ ಆಯಾಸವನ್ನೂ ಉಂಟುಮಾಡಲಿದೆ. ಮನೆ ಕಟ್ಟುವ ಕೆಲಸಗಳು ನಿರ್ವಿಘ್ನವಾಗಿ ಮುಂದುವರೆಯುವುದು. ಸಂತಾನದ ಸುದ್ದಿ ಆನಂದ ತರಲಿದೆ.

ಧನು: ಹಿತಶತ್ರುಗಳ ದ್ವೇಷ–ಅಸೂಯೆಯಿಂದ ಬರುತ್ತಿದ್ದ ಮನಃಕ್ಲೇಶವು ದೂರವಾಗುತ್ತದೆ. ದೇಹಾರೋಗ್ಯದ ವಿಚಾರದಲ್ಲಿ ಆಲಸ್ಯ ಮಾಡುವುದು ಸರಿಯಲ್ಲ. ಸೌಂದರ್ಯ ವರ್ಧಕಗಳಿಂದ ಅಲರ್ಜಿಯಾಗಬಹುದು.

ಮಕರ: ಸ್ವಉದ್ಯೋಗಿಗಳು ಕೈತಪ್ಪಿ ಹೋಗಿದ್ದ ಕೆಲಸಗಳನ್ನು ಮರಳಿ ಪಡೆದುಕೊಳ್ಳುವಲ್ಲಿ ಗೆಲುವು ಕಾಣುವಿರಿ. ಸ್ವ ಸಾಮರ್ಥ್ಯಕ್ಕೆ ಸರಿಯಾದ ಕೆಲಸವನ್ನು ಈ ದಿನ ಆರಿಸಿಕೊಳ್ಳಿರಿ. ಸಹೋದ್ಯೋಗಿಗಳ ಸಹಕಾರ ಉತ್ತಮವಾಗಿರುವುದು.

ಕುಂಭ: ಪಾರಮಾರ್ಥಿಕ, ನೈತಿಕ ಮೌಲ್ಯಗಳನ್ನು ಆಧರಿಸುವುದರಿಂದ ಎಲ್ಲವೂ ಸುಗಮವಾಗುವುದು. ಯೋಜಿತ ಕಾರ್ಯಗಳಿಗೆ ಕುಟುಂಬದವರಿಂದ ಉತ್ತಮ ಸಹಕಾರ ಸಿಗುವುದು. ಕೆಲಸಗಳಲ್ಲಿ ಬದಲಾವಣೆ ಸನ್ನಿಹಿತವಾಗಲಿದೆ.

ಮೀನ: ನಿಮ್ಮ ಕೆಲಸದ ಸಂಪೂರ್ಣತೆಗಾಗಿ ಕೆಲಸಗಾರರ ಜೊತೆ ಬಹಳ ಶಾಂತ ರೀತಿಯಿಂದ ವರ್ತಿಸುವುದು ಅನಿವಾರ್ಯವಾಗುವುದು. ಶುಭಕಾರ್ಯದ ಯೋಜನೆಗಾಗಿ ಹಿರಿಯರ ಆಗಮನ, ಮಾರ್ಗದರ್ಶನ ಸಿಗುವುದು.

ಪದಬಂಧ 5888

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹೆದರಬೇಡ ರಕ್ಷಿಸುತ್ತೇನೆಂದು ಧೈರ್ಯ ಕೊಡುವುದು (5)
3.ನಿಸರ್ಗದಲ್ಲೇ ಪುಸ್ತಕದ ಅಧ್ಯಾಯವನ್ನು ಹುಡುಕಿ! (2)
4.ಅಡಗಿಕೊಳ್ಳಲು ಸೂಕ್ತವಾದ ಕಾಡು! (3)
5.ಬೇಗುದಿ ಯಿಲ್ಲಿ ಉಲ್ಟಾ ಆಗಿದೆ (3)
7.ಏಳು ದಿನಗಳ ಅವಧಿ (2)
8.ರಭಸವಾಗಿ ಹರಿಯುತಿರುವ ದ್ರವ! (2)
10.ಮಣ ಭಾರದ ನಲ್ಲ ತಿರುಗಿದ್ದಾನಲ್ಲಾ! (3)
11.ಸುಗಮವಾಗಿ ಕಿತ್ತಿರುವ ಹೂವು (2)
13.ಕಾಕಾ ಎಚಿದು ಕೂಗುವ ಕಪ್ಪು ಬಣ್ಣದ ಹಕ್ಕಿ (2)
14.ಮಣಿ ಧರಿಸಿದ ಚಲುವೆ ಉಲ್ಟಾ ನಿಂತಿದ್ದಾಳಲ್ಲಾ! (3)
15.ಸಾಗಿಸುವಿಕೆಗೊಂದು ಪರ್ಯಾಯ ಪದ (3)
16.ದಾರಿ ಅಥವಾ ರಸ್ತೆ (2)
17.ಪ್ರಾಣವಾಯು ಇಲ್ಲಿದೆ (5)

ಮೇಲಿಂದ ಕೆಳಕ್ಕೆ

2.ಹೆದರಿಕೆಯನ್ನುಂಟುಮಾಡುವುದು (4)
3.ಸರದಲ್ಲೇ ವಿವರಗಳನ್ನೊಳಗೊಂಡುದುದನ್ನು ಹುಡುಕಿ! (4)
4.ಅಧಿಕಾರಯುತವಾಗಿ ಆಡುವ ಮಾತು (6)
6.ಸಾವನ್ನು ವಿಧಿಸುವ ಶಿಕ್ಷೆ (6)
7.ಪಿತ್ರಾರ್ಜಿತ ಹಕ್ಕು (3)
9.ರವೆಯಿಂದ ಮಾಡಿದ ಸಿಹಿತಿಂಡಿ (3)
12.ಮನಸ್ಸಿನ ಬಯಕೆ (4)
13.ಪಿತೂರಿ ಕೆಲಸ ನಡೆಯುವ ಸ್ಥಳ (4)



5887ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪವಾಸ 3.ಗುಪ್ತಲಿಪಿ
4.ಮೀಸಲು 5.ಅಪರೂಪ
7.ನವಮಿ 9.ನವಜಾತ
10.ಉಪವನ 11.ಬಿಸಿಲು
13.ನಸುನಗು 14.ಗಗನ
15.ಕಡುದಾಹ 16.ಸುಭಾಷಿಣಿ

ಮೇಲಿಂದ ಕೆಳಕ್ಕೆ:
2.ಸಮೀಪ 3.ಗುಲುನ
6.ಪರಾವಲಂಬಿ 8.ಮಿತವಚನ
12.ಉಗಹ 13.ನನಸು

ಸುಡೊಕು 6273

	7			4				9
	1		6		9			2
2		4		7		3		
7	8						5	
			4			6		7
6		5		8			2	
		7	2				9	
				1	7		3	6
9		1		5		2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6272 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,619
ಇಂದಿನ ಅಂತ್ಯ	24,610
▼	9
ದಿನದ ಕನಿಷ್ಠ	24,510

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹635
12 ಕ್ಕೆ	₹82
ಮೈಸೂರು	
100ಕ್ಕೆ	₹637

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1510 (1515)
ಸೋಯಾ (ರಿಫೈನ್ಡ್)	₹1300 (1310)
ಸೂರ್ಯಕಾಂತಿ (ರಿಫೈನ್ಡ್)	₹1370 (1380)
ಪಾಮೋಲಿನ್	₹1390 (1400)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹189
ಆರ್‌ಎಸ್‌ಎಸ್-5	₹184
ಗುಡ್ ಲಾಟ್	₹179

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹366-666
ದ್ವಿತಳಿ (ಬಿ.ವಿ)	₹255-769

5.97 ಕೋಟಿ ಪಡಿತರ ಚೀಟಿ ರದ್ದು: ಕೇಂದ್ರ

ನವದೆಹಲಿ (ಪಿಟಿಐ): ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವ್ಯಾಪ್ತಿಯಲ್ಲಿ 2013ರಿಂದ ಇಲ್ಲಿಯವರೆಗೆ 5.97 ಕೋಟಿ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ ಎಂದು ಕೇಂದ್ರ ಸರ್ಕಾರವು, ರಾಜ್ಯಸಭೆಗೆ ತಿಳಿಸಿದೆ.

2013ರಿಂದ ಕಡು ಬಡವರಿಗೆ ಪಡಿತರ ವಿತರಿಸಲು 'ಟಾರ್ಗೆಟೆಡ್ ಪಬ್ಲಿಕ್ ಡಿಸ್ಟ್ರಿಬ್ಯುಷನ್ ಸಿಸ್ಟಂ' (ಟಿಪಿಡಿಎಸ್) ಜಾರಿಗೊಂಡಿದೆ. ಇದರಡಿ ಡಿಜಿಟಲೀಕರಣ, ಆಧಾರ್ ಜೋಡಣೆ, ನಕಲಿ ಚೀಟಿಗಳ ಗುರುತಿಸುವಿಕೆ ಇತ್ಯಾದಿ ಮೂಲಕ ಇಷ್ಟು ಕಾರ್ಡ್‌ಗಳನ್ನು ರದ್ದುಪಡಿಸಲಾಗಿದೆ ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಖಾತೆಯ ರಾಜ್ಯ ಸಚಿವೆ ನಿಮುಬೇನ್ ಜಯಂತಿಭಾಯ್ ಬಮ್ಭಾನಿಯಾ ಲಿಖಿತ ಉತ್ತರದಲ್ಲಿ ಮಂಗಳವಾರ ತಿಳಿಸಿದ್ದಾರೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ (ಎನ್‌ಎಫ್‌ಎಸ್‌ಎ) ಈ ಯೋಜನೆ ಅನುಷ್ಠಾನಗೊಂಡಿದೆ. ಕೇಂದ್ರ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಜಂಟಿಯಾಗಿ ಜವಾಬ್ದಾರಿ ಹೊಂದಿವೆ ಎಂದು ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

31ನೇ ವರ್ಷದ ಪುಣ್ಯಸ್ಮರಣೆ

ಟಿ. ಕೆ. ಸ್ವಾಮಿ

ಅಬಕಾರಿ ಗುತ್ತಿಗೆದಾರರು ಮತ್ತು ಸಗಟು ಮದ್ಯ ಮಾರಾಟಗಾರರು

10-04-1942 - 11-12-1993

ನಿಮ್ಮ ಪ್ರೀತಿ, ವಾತ್ಸಲ್ಯ, ಆದರ್ಶಗಳ ನೆನಪೇ ನಮಗೆ ಸ್ಫೂರ್ತಿ, ಮಾರ್ಗದರ್ಶನ. ನಿಮ್ಮ ಸವಿನೆನಪು ನಮ್ಮ ಮನದಾಳದಲ್ಲಿ ಅವಿಸ್ಮರಣೀಯವಾಗಿದೆ.

ಸದಾ ಸ್ಮರಿಸುವ,
ಶ್ರೀಮತಿ ಪುಟ್ಟತಾಯಮ್ಮ ಅಂಡ್ ಫ್ಯಾಮಿಲಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

30 ವರ್ಷ ಕೆಳಗಿನ ಗಂಡಸು ಅಡಿಗೆ ಭಟ್ಟರು ಬೆಂಗಳೂರಿನ ಮನೆಗೆ ಬೇಕು. ಸಂಬಳ 36000 ವಸತಿ ಮತ್ತು ಊಟ ಉಚಿತ Call: 8431867722

Domestic Helpers / Housekeeping

ಬೆಂಗಳೂರಿನ ಕಲ್ಯಾಣ ನಗರದಲ್ಲಿರುವ ಆಸ್ಪತ್ರೆಗೆ ಅರ್ಜೆಂಟಾಗಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ 19300/- ಸಂಪರ್ಕಿಸಿ: ಹೇಮಾವತಿ- 9945779607 ಸಂದೀಪ- 9108946691, ಮಿತುನ್-9112959375

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000- 17,000, 8951315839, 9141634619

ಶ್ರೀಗಣೇಶ್ ಎಂಟರ್ ಪ್ರೈಸಸ್: ಮೇಸ್ತ್ರಿ ಕೆಲಸಕ್ಕೆ ಮನೆಕೆಲಸಕ್ಕೆ ಜನ ಬೇಕಾಗಿದ್ದಲ್ಲಿ ಕರೆಮಾಡಿ/ಮೇಸ್ತ್ರಿ ಕೆಲಸ, ಮನೆಕೆಲಸಕ್ಕೆ ಬೇಕಾದವರು ಕರೆಮಾಡಿ. 6363611815/ 9380661525

Teachers/ Professors

Wanted English Teacher
Qualification: BA/ MA BEd With optional English Salary -16,650 MDRS, KUPPALU, Kadur Tq, Chikkamagaluru. Contact: 9483367214

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ಪುಸ್ತಕ ಬರೆಯುವ ಹಾಗು ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಇದೆ. 9611874742, 9611574742.

Wanted

ಲಾಂಡ್ರಿಗೆ ಫ್ಯಾಕ್ಟರಿ ಹೆಲ್ಪರ್ಸ್ ಬೇಕಾಗಿದ್ದಾರೆ. ಸಂಬಳ: 15000+ ಊಟ+ವಸತಿ ಸೌಲಭ್ಯವಿರುತ್ತದೆ. ಸಮಯ: ಬೆಳಗ್ಗೆ: 7.00 ರಿಂದ ರಾತ್ರಿ: 7.00 ಗಂಟೆಯವರೆಗೆ ಸ್ಥಳ: ಬನ್ನೇರುಘಟ್ಟ ರಸ್ತೆ, ಬೆಂಗಳೂರು. ಸಂಪರ್ಕಿಸಿ: 8050666007

ವೈಯಕ್ತಿಕ

Change of Name

I ಸೈಯದ್ ಅಯಾಜ್ S/O ಸೈಯದ್ ಅಬುಬಕರ್ R/O 155 20 ನೇ ಮುಖ್ಯ II ಹಂತ JP ನಗರ, ಬೆಂಗಳೂರು 560078 ಅನ್ನು ಇನ್ನು ಮುಂದೆ ಸೈಯದ್ ಮೊಹಮ್ಮದ್ ಅಯಾಸ್ ಅಫಿಡವಿಟ್ SI 288/7 dt 15/7/24 ನೋಟರಿ T R ರಾಘವೇಂದ್ರ ರಾವ್ ಅವರ ಮುಂದೆ ಪ್ರಮಾಣ ಮಾಡಿದರು ಬ್ಲೋರ್ 78

ADMISSION CORNER

SVR College of Commerce and Management Studies

ADMISSIONS OPEN

MBA Master of Business Administration

PGCET Code: B375

Affiliated to Bangalore University and Approved by AICTE, New Delhi.

KEY HIGHLIGHTS
- 100% Placement Assistance
- Industrial Visit
- Outbound Tour
- University Ranks Achieved
- Value Added Certifications
- Hostel for Boys / Girls

www.svrinstitutions.com
HSR Layout 2nd Sector, Bangalore 560102
For Admission Contact: Ph: 9880230268

ಭವಿಷ್ಯ

Astrology

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಓಂಶ್ರೀ ಮಹಾಗಣಪತಿ ಜ್ಯೋತಿಷ್ಯಾಲಯ. ಪಂಡಿತ. ವೆಂಕಟೇಶ ರಾವ್ ಶಾಸ್ತ್ರೀಜೀ. ಕೇರಳದ ಪ್ರಸಿದ್ಧ ಜ್ಯೋತಿಷಿಗಳು. ಧನವಶಜನವಶ ಶತ್ರುನಾಶ ಸ್ತ್ರೀಪುರುಷ ವಶೀಕರಣ ಇನ್ನೂ ಹಲವಾರು ಸಮಸ್ಯೆಗಳಿಗೆ 2 ದಿನಗಳಲ್ಲಿ ಶಾಶ್ವತ ಪರಿಹಾರ. 9606064461

★ಭಾರತದ★ ಪ್ರಖ್ಯಾತ ಬುಡಬುಡಕಿ ಜನಾಂಗದ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀ.ದೇವಾನಂದರವರಿಂದ ನಿಮ್ಮೆಲ್ಲಾ ಸಂಕಷ್ಟಗಳಿಗೆ ಮುಕ್ತಿ,ಮನ್ಮೋಹಿನಿ ಮೂಡಿ ವಶೀಕರಣಗಳಿಗೆ.9353143216

ಪ್ರವಾಸ

Travel

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 22.12.2024 20.01.2025 ರಿಂದ 7 ದಿನಗಳ ತಮಿಳುನಾಡು ಕೇರಳ.23.12.2024 ರಿಂದ 7 ದಿನಗಳ ಶ್ರೀಶೈಲ,ಮಂತ್ರಾಲಯ ಹೈದ್ರಾಬಾದ್. 03.02.2025 13.02.2025 ರಿಂದ 17/11 ದಿನಗಳ ಗುಜರಾತ್,ರಾಜಸ್ಥಾನ್. 10.02.2025 ರಿಂದ 10 ದಿನಗಳ ಮಧ್ಯಪ್ರದೇಶ. 16.01.2025 ರಿಂದ 6 ದಿನಗಳ ದುಬೈ,ಅಬುದಾಬಿ. 04.02.2025 10.04.2025 ರಿಂದ 11/7 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 28.02.2025 ರಿಂದ 10 ದಿನಗಳ ವಿಯೆಟ್ನಾಂ ಕಾಂಬೋಡಿಯ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

6 ದಿನಗಳ ದುಬೈ. 6 ದಿನಗಳ ಬಾಲಿ. 6 ದಿನಗಳ ಶ್ರೀಲಂಕಾ. 7/11 ದಿನಗಳ ಸಿಂಗಪುರ್ ಮಲೇಷ್ಯಾ, ಥೈಲ್ಯಾಂಡ್. 7 ದಿನಗಳ ಜಪಾನ್. ಭಟ್ ಟ್ರಾವೆಲ್ 9844037295

ವ್ಯಾಪಾರ

Business to Business

Finance

LOAN AGAINST PROPERTY- MORTGAGE LOAN (All KHATA's) LOAN AMOUNT:- 60%- 75% of Market Value. Interest rate-9.5% onwards, Source: Banks and NBFC's. Call 9071013506 EKTAA LOANS.

EDUCATION
To Place your Classified Ads Contact: 9845114560

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಜಿಡಿಪಿ ಕುಸಿತಕ್ಕೆ ರೆಪೊ ದರ ಯಥಾಸ್ಥಿತಿ ಕಾರಣವಲ್ಲ: ಶಕ್ತಿಕಾಂತ ದಾಸ್

ಆರ್‌ಬಿಐ: ಹಣದುಬ್ಬರ ಸವಾಲು

ಮುಂಬೈ (ಪಿಟಿಐ): 'ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಕುಸಿತಕ್ಕೆ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿರುವುದು ಕಾರಣವಲ್ಲ. ಇದರ ಹಿಂದೆ ಹಲವು ಕಾರಣಗಳು ಬೆಸೆದುಕೊಂಡಿವೆ' ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ಗಮಿತ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ತಮ್ಮ ಅಧಿಕಾರಾವಧಿಯ ಕೊನೆಯ ದಿನವಾದ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸದ್ಯ ಚಿಲ್ಲರೆ ಹಣದುಬ್ಬರ ಏರಿಕೆಯ ಹಾದಿ ಹಿಡಿದಿದೆ. ಇದರ ನಿಯಂತ್ರಣದ ಮೂಲಕ ಸಮತೋಲನ ಕಾಯ್ದುಕೊಳ್ಳುವುದೇ ಆರ್‌ಬಿಐ ಮುಂದಿರುವ ಸವಾಲಾಗಿದೆ' ಎಂದರು.

ದಾಸ್ ಅವರ ಆರು ವರ್ಷದ ಅಧಿಕಾರಾವಧಿಯಲ್ಲಿ ಕೋವಿಡ್, ರಷ್ಯಾ–ಉಕ್ರೇನ್ ಯುದ್ಧ ಮತ್ತು ಪಶ್ಚಿಮ ಏಷ್ಯಾ ಬಿಕ್ಕಟ್ಟು ಸವಾಲಿನಿಂದ ಕೂಡಿತ್ತು. ದಾಸ್ ಅಧ್ಯಕ್ಷತೆಯಲ್ಲಿ ನಡೆದ ಆರ್‌ಬಿಐ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ಸತತ 11 ಬಾರಿ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ.

> ಕಳೆದ ಆರು ವರ್ಷದಲ್ಲಿ ಕೇಂದ್ರ ಹಣಕಾಸು ಸಚಿವಾಲಯ ಮತ್ತು ಆರ್‌ಬಿಐ ನಡುವೆ ಉತ್ತಮ ಸಹಕಾರ ಮತ್ತು ಸಮನ್ವಯವಿತ್ತು
>
> **ಶಕ್ತಿಕಾಂತ ದಾಸ್,** ಆರ್‌ಬಿಐನ ನಿರ್ಗಮಿತ ಗವರ್ನರ್

'ಭವಿಷ್ಯದ ಆರ್ಥಿಕತೆಯ ಮುನ್ನೋಟ ಹಾಗೂ ಜಾಗತಿಕ ಬಿಕ್ಕಟ್ಟಿನಿಂದಾಗಿ ಬಡ್ಡಿದರ ಪರಿಷ್ಕರಣೆಗೆ ಮುಂದಾಗಿಲ್ಲ' ಎಂದು ದಾಸ್ ಹೇಳಿದರು.

'ನಮ್ಮ ಸುತ್ತಲೂ ನಡೆಯುತ್ತಿರುವ ಆರ್ಥಿಕ ಚಟುವಟಿಕೆಗಳ ಬಗ್ಗೆ ಎಂಪಿಸಿ ಮತ್ತು ಆರ್‌ಬಿಐಗೆ ಮನದಟ್ಟಾಗಿದೆ. ಹಾಗಾಗಿ, ನಮ್ಮ ಆಯ್ಕೆ ಉತ್ತಮವಾಗಿದೆ' ಎಂದು ಸಮರ್ಥಿಸಿಕೊಂಡರು.

'ದೇಶದ ಆರ್ಥಿಕತೆ ಬೆಳವಣಿಗೆಯು ಚೇತರಿಕೆ ಹಾದಿಯಲ್ಲಿದೆ. ಜಾಗತಿಕ ಬಿಕ್ಕಟ್ಟಿನಿಂದ ಎದುರಾಗುವ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯ ಹೊಂದಿದೆ' ಎಂದರು.

'ನೂತನ ಗವರ್ನರ್ ಸಂಜಯ್ ಮಲ್ಹೋತ್ರಾ ಅವರಿಗೆ ಅಪಾರ ಅನುಭವವಿದೆ. ಕೇಂದ್ರೀಯ ಬ್ಯಾಂಕ್‌ಗೆ ಉತ್ತಮ ಕೊಡುಗೆ ನೀಡಲಿದ್ದಾರೆ' ಎಂದು ಹೇಳಿದರು.

ತ್ವರಿತಗತಿ ಹಾಗೂ ಸುಲಭವಾಗಿ ಸಾಲ ಸೌಲಭ್ಯ ಕಲ್ಪಿಸಲು ಆರ್‌ಬಿಐ ರೂಪಿಸಿರುವ ಡಿಜಿಟಲ್ ವೇದಿಕೆಯಾದ ಯುನಿಫೈಡ್ ಲೆಂಡಿಂಗ್ ಇಂಟರ್‌ಫೇಸ್ (ಯುಎಲ್‌ಐ) ದೇಶದಲ್ಲಿ ಪರಿವರ್ತನೆಗೆ ಕಾರಣವಾಗಲಿದೆ. ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿಯು (ಸಿಬಿಡಿಸಿ) ಭವಿಷ್ಯದ ಕರೆನ್ಸಿಯಾಗಲಿದೆ ಎಂದರು.

ಮಲ್ಹೋತ್ರಾ ಅಧಿಕಾರ ಸ್ವೀಕಾರ ಇಂದು

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ನೂತನ ಗವರ್ನರ್ ಆಗಿ ನೇಮಕಗೊಂಡಿರುವ ಸಂಜಯ್ ಮಲ್ಹೋತ್ರಾ ಅವರು, ಬುಧವಾರ ಅಧಿಕಾರ ಸ್ವೀಕರಿಸಲಿದ್ದಾರೆ.

'ದೇಶದ ಆರ್ಥಿಕತೆ ಬೆಳವಣಿಗೆಗೆ ಪೂರಕವಾಗಿ ಎಲ್ಲಾ ದೃಷ್ಟಿಕೋನಗಳನ್ನು ಅರ್ಥೈಸಿಕೊಂಡು ಕೆಲಸ ನಿರ್ವಹಿಸುತ್ತೇನೆ' ಎಂದು ಹೇಳಿದ್ದಾರೆ.

ಪ್ರಸ್ತುತ ಜಿಡಿಪಿ ಬೆಳವಣಿಗೆಯು ಕುಸಿದಿದೆ. ಚಿಲ್ಲರೆ ಹಣದುಬ್ಬರವು ಏರಿಕೆ ಪಥದಲ್ಲಿದೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಸಂಜಯ್ ಅವರು, ಆರ್‌ಬಿಐ ಸಾರಥ್ಯ ವಹಿಸಿಕೊಳ್ಳಲು ಅಣಿಯಾಗಿದ್ದಾರೆ.

₹3.16 ಲಕ್ಷ ಕೋಟಿ ಸಾಲ ಬಾಕಿ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ಅಂತ್ಯಕ್ಕೆ ದೇಶದ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇ 3.09ರಷ್ಟಿದ್ದು, ಒಟ್ಟು ₹3.16 ಲಕ್ಷ ಕೋಟಿ ಸಾಲ ಬಾಕಿ ಉಳಿದಿದೆ ಎಂದು ಕೇಂದ್ರ ಸರ್ಕಾರವು, ಮಂಗಳವಾರ ಸಂಸತ್‌ಗೆ ತಿಳಿಸಿದೆ.

ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು, ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಈ ಮಾಹಿತಿ ನೀಡಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ನೀಡಿರುವ ಮಾಹಿತಿ ಪ್ರಕಾರ ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ₹1.34 ಲಕ್ಷ ಕೋಟಿ ಸಾಲ ವಸೂಲಾಗಿಲ್ಲ. ಸರಾಸರಿ ಎನ್‌ಪಿಎ ಶೇ 1.86ರಷ್ಟಿದೆ ಎಂದು ವಿವರಿಸಿದ್ದಾರೆ.

ಪ್ರಸಕ್ತ ವರ್ಷದ ಮಾರ್ಚ್ ಅಂತ್ಯಕ್ಕೆ ಸಾರ್ವಜನಿಕ ಬ್ಯಾಂಕ್‌ಗಳಲ್ಲಿ ₹50 ಕೋಟಿಗೂ ಹೆಚ್ಚು ಸಾಲ ಬಾಕಿ ಉಳಿಸಿಕೊಂಡಿರುವ 580 ಸಾಲಗಾರರು ಇದ್ದಾರೆ ಎಂದು ಹೇಳಿದ್ದಾರೆ.

ಸಾಲ ಬಾಕಿ ಉಳಿಸಿಕೊಂಡಿರುವವರ ವಿರುದ್ಧ ಹಾಗೂ ವಸೂಲಾತಿಗೆ ಸರ್ಕಾರ ಯಾವ ಕ್ರಮಕೈಗೊಂಡಿದೆ ಎಂಬ ಪ್ರಶ್ನೆಗೆ ಉತ್ತರಿಸಿರುವ ಸಚಿವರು, ಸೆಪ್ಟೆಂಬರ್ ಅಂತ್ಯಕ್ಕೆ 1,068 ಕಾರ್ಪೊರೇಟ್ ದಿವಾಳಿ ಪ್ರಕ್ರಿಯೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ವಿವರಿಸಿದ್ದಾರೆ.

ಎಲ್ಲಾ ಬ್ಯಾಂಕ್‌ಗಳಿಂದ ವಸೂಲಾಗದ ಸಾಲದ ಮೊತ್ತ ₹11.45 ಲಕ್ಷ ಕೋಟಿ ಆಗಿದೆ. ಈ ಸಾಲವನ್ನು ರೈಟ್-ಆಫ್ ಮಾಡಲಾಗಿದೆ. ಅಂದರೆ ಈ ಸಾಲಗಳನ್ನು ಬ್ಯಾಂಕ್‌ಗಳು ತಮ್ಮ ಬ್ಯಾಲೆನ್ಸ್‌ಶೀಟ್‌ನಿಂದ ಹೊರಗಿಟ್ಟಿವೆ.

ಕರ್ನಾಟಕದ 1.62 ಕೋಟಿ ರೈತರ ಮೇಲೆ ಕೃಷಿ ಸಾಲದ ಋಣಭಾರ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಮಾರ್ಚ್ ಅಂತ್ಯದವರೆಗೆ ದೇಶದ ಒಟ್ಟು 18.74 ಕೋಟಿ ರೈತರು ಕೃಷಿ ಸಾಲದ ಋಣಭಾರ ಹೊಂದಿದ್ದಾರೆ ಎಂದು ಕೇಂದ್ರ ಸರ್ಕಾರವು, ಮಂಗಳವಾರ ಲೋಕಸಭೆಗೆ ತಿಳಿಸಿದೆ.

ತಮಿಳುನಾಡು 2.88 ಕೋಟಿ, ಉತ್ತರ ಪ್ರದೇಶ 1.88 ಕೋಟಿ ಮತ್ತು ಕರ್ನಾಟಕದಲ್ಲಿ 1.62 ಕೋಟಿ ರೈತರು ಬ್ಯಾಂಕ್‌ಗಳಿಂದ ಪಡೆದಿರುವ ಕೃಷಿ ಸಾಲವನ್ನು ಬಾಕಿ ಉಳಿಸಿಕೊಂಡಿದ್ದಾರೆ ಎಂದು ಕೇಂದ್ರ ಕೃಷಿ ಖಾತೆಯ ರಾಜ್ಯ ಸಚಿವ ರಾಮ್‌ನಾಥ್ ಠಾಕೂರ್ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

2019ರಿಂದ ಇಲ್ಲಿಯವರೆಗೆ ಕೇಂದ್ರ ಸರ್ಕಾರವು ಯಾವುದೇ ಕೃಷಿ ಸಾಲ ಮನ್ನಾ ಯೋಜನೆಯನ್ನು ಘೋಷಿಸಿಲ್ಲ. ಕೆಲವು ರಾಜ್ಯಗಳು ಸ್ವಯಂಪ್ರೇರಿತವಾಗಿ ಕೃಷಿ ಸಾಲ ಮನ್ನಾ ಯೋಜನೆ ಘೋಷಿಸಿವೆ ಎಂದು ತಿಳಿಸಿದ್ದಾರೆ.

ಯಾವುದೇ ರಾಜ್ಯಗಳು ರೈತರ ಪರಿಹಾರ ಕಾರ್ಯಕ್ರಮಕ್ಕೆ ಹೆಚ್ಚುವರಿ ನಿಧಿ ಕೋರಿ ಕೇಂದ್ರಕ್ಕೆ ಮನವಿ ಮಾಡಿಲ್ಲ ಎಂದು ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	45000-48500
ಸಾಗರ	
ಬಿಳಿಗೋಟು	21599-25499
ಚಾಲಿ	32809-34299
ಕೋಕ	23989-23989
ಕೆಂಪುಗೋಟು	26290-32899
ರಾಶಿ	42299-48909
ಸಿಪ್ಪೆಗೋಟು	9699-16819
ಶಿವಮೊಗ್ಗ	
ಬೆಟ್ಟೆ	44859-58009
ಗೊರಬಲು	17560-36699
ಹೊಸತು	30009-49899
ರಾಶಿ	32899-50159
ಸರಕು	45159-82509
ಸಿದ್ದಾಪುರ	
ಬಿಳಿಗೋಟು	24509-29000
ಚಾಲಿ	32459-38009
ಕೋಕ	20000-25699
ಕೆಂಪುಗೋಟು	16109-16109
ರಾಶಿ	42009-47969
ತಟ್ಟಿಬೆಟ್ಟೆ	27309-42099
ಕಾರ್ಕಳ	
ಹೊಸತು	25000-33500
ಹಳತು	30000-48500
ಶಿರಸಿ	
ಬೆಟ್ಟೆ	30199-37609
ಬಿಳಿಗೋಟು	22099-31600
ಚಾಲಿ	35151-39501
ಕೆಂಪುಗೋಟು	14009-20000
ರಾಶಿ	43208-46409
ಯಲ್ಲಾಪುರ	
ಅಪಿ	56899-60899
ಬಿಳಿಗೋಟು	14899-30800
ಚಾಲಿ	31769-39299
ಕೋಕ	4891-19499
ಕೆಂಪುಗೋಟು	14899-26899
ರಾಶಿ	38869-55859
ತಟ್ಟಿಬೆಟ್ಟೆ	28090-36000

ಆರ್ಥಿಕತೆ ಚೇತರಿಕೆ ನಿರೀಕ್ಷೆ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಕುಸಿತ ಹಾಗೂ ಚಿಲ್ಲರೆ ಹಣದುಬ್ಬರದ ಏರಿಕೆ ನಡುವೆಯೂ 2025ರಲ್ಲಿ ಭಾರತದ ಆರ್ಥಿಕತೆ ಬೆಳವಣಿಗೆಯು ಚೇತರಿಸಿಕೊಳ್ಳಲಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ರೇಟಿಂಗ್ ಸಂಸ್ಥೆ ಮಂಗಳವಾರ ತಿಳಿಸಿದೆ.

ನಗರ ಪ್ರದೇಶದಲ್ಲಿ ಗ್ರಾಹಕರ ಖರೀದಿ ಸಾಮರ್ಥ್ಯ ಹೆಚ್ಚಲಿದೆ. ಸೇವಾ ವಲಯದ ಬೆಳವಣಿಗೆಯು ಸ್ಥಿರವಾಗಿದೆ. ಮೂಲಸೌಕರ್ಯ ಕ್ಷೇತ್ರದಲ್ಲಿ ಹೂಡಿಕೆ ಹೆಚ್ಚಳವು ಇದಕ್ಕೆ ನೆರವಾಗಲಿದೆ ಎಂದು ಹೇಳಿದೆ. ಹಣದುಬ್ಬರದ ಒತ್ತಡ ಕಡಿಮೆಯಾಗುವುದರಿಂದ ಆರ್‌ಬಿಐ ರೆಪೊ ದರ ಕಡಿತಗೊಳಿಸುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 6.8ರಷ್ಟು ಮತ್ತು 2025–26ನೇ ಆರ್ಥಿಕ ವರ್ಷದಲ್ಲಿ ಶೇ 6.9ರಷ್ಟು ಪ್ರಗತಿ ಕಾಣಲಿದೆ ಎಂದು ಹೇಳಿದೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹23500
ಎಸಿ	₹11745
ಆರ್‌ಪಿ	₹19000
ಆರ್‌ಸಿ	₹10660

ಪಿಎಂ ವಿಶ್ವಕರ್ಮ: ಕುಶಲಕರ್ಮಿಗಳಿಗೆ ₹1,751 ಕೋಟಿ ಸಾಲ ವಿತರಣೆ

ನವದೆಹಲಿ (ಪಿಟಿಐ): ಪಿಎಂ ವಿಶ್ವಕರ್ಮ ಯೋಜನೆಯಡಿ 2.02 ಲಕ್ಷ ಖಾತೆ ತೆರೆಯಲಾಗಿದ್ದು, ಬ್ಯಾಂಕ್‌ಗಳಿಂದ ₹1,751 ಕೋಟಿ ಸಾಲ ವಿತರಿಸಲಾಗಿದೆ ಎಂದು ಕೇಂದ್ರ ಸರ್ಕಾರ, ಮಂಗಳವಾರ ರಾಜ್ಯಸಭೆಗೆ ತಿಳಿಸಿದೆ.

ಈ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ಸಾಲ ಸೌಲಭ್ಯ ವಿತರಣೆಗೆ ಎದುರಾಗಿದ್ದ ತೊಡಕುಗಳ ನಿವಾರಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು, ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ದೇಶದ ಸಾಂಪ್ರದಾಯಿಕ ಕಲೆಗಳಿಗೆ ಉತ್ತೇಜನ ನೀಡುವ ಮೂಲಕ ಕುಶಲಕರ್ಮಿಗಳ ಅಭ್ಯುದಯಕ್ಕೆ ಆರ್ಥಿಕ ನೆರವು ಕಲ್ಪಿಸಲು ಸರ್ಕಾರವು 2023ರ ಸೆಪ್ಟೆಂಬರ್‌ನಲ್ಲಿ ಯೋಜನೆಗೆ ಚಾಲನೆ ನೀಡಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶ ವ್ಯಾಪ್ತಿಯ 18 ವರ್ಗದ ಕುಶಲಕರ್ಮಿಗಳಿಗೆ ಯೋಜನೆಯಡಿ ಸೌಲಭ್ಯ ದೊರೆಯಲಿದೆ.

2023–24ರಿಂದ 2027–28ರವರೆಗೆ ಈ ಯೋಜನೆಗೆ ₹13 ಸಾವಿರ ಕೋಟಿ ಮೀಸಲಿಡಲಾಗಿದೆ.

ಮುಂಬೈ ಧಾರಣೆ

ಶೇಂಗಾ

10-12-2024

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9100-9200
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1525)
ಒಂದು ವಾರದ ಡೆಲಿವರಿ	1515 (1520)
ಪಾಮ್ ವಾರದ ಡೆಲಿವರಿ	1388 (1398)
ಸೂರ್ಯಕಾಂತಿ ಎಣ್ಣೆ ಕಚ್ಚಾ	1310 (1320)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹76,800 (76,400)
ಬೆಳ್ಳಿ ಕೆ.ಜಿ ₹92,700 (91,850)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸಂಕ್ಷಿಪ್ತ ಸುದ್ದಿ

ಭಾರತ– ಐರೋಪ್ಯ ಒಕ್ಕೂಟದ ವಿದೇಶಾಂಗ ನೀತಿ ಮಾತುಕತೆ ಶೀಘ್ರ

ನವದೆಹಲಿ (ಪಿಟಿಐ): ರಕ್ಷಣೆಗೆ ಸಂಬಂಧಿಸಿದ ಸಚಿವರ ಮಟ್ಟದ ಮೊಟ್ಟ ಮೊದಲ ವಿದೇಶಾಂಗ ನೀತಿ ಮಾತುಕತೆಯನ್ನು ಶೀಘ್ರವೇ ನಡೆಸಲು ಭಾರತ ಮತ್ತು ಐರೋಪ್ಯ ಒಕ್ಕೂಟ (ಇಯು) ಮಂಗಳವಾರ ಒಪ್ಪಿಗೆ ನೀಡಿವೆ.

ಹಿಂದೂ ಮಹಾಸಾಗರ-ಪೆಸಿಫಿಕ್ ಮತ್ತು ಅದರಾಚೆಗಿನ ಪ್ರಾದೇಶಿಕ-ರಾಜಕೀಯ ಬಿಕ್ಕಟ್ಟುಗಳು ಮತ್ತು ಚೀನಾದ ಪ್ರಾಬಲ್ಯ ಸೇರಿದಂತೆ ಹಲವು ನಿರ್ಣಾಯಕ ಸವಾಲುಗಳನ್ನು ಜಂಟಿಯಾಗಿ ಎದುರಿಸಲು ಈ ಸಂವಾದವನ್ನು ಆಯೋಜಿಸಲಾಗುತ್ತಿದೆ.

ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು 27 ರಾಷ್ಟ್ರಗಳ ಒಕ್ಕೂಟದ ವಿದೇಶಾಂಗ ವ್ಯವಹಾರಗಳ ಪ್ರತಿನಿಧಿ ಕಾಜಾ ಕಲ್ಲಾಸ್ ಅವರೊಂದಿಗಿನ ದೂರವಾಣಿ ಮಾತುಕತೆ ಸಂದರ್ಭದಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಭಾರತ ಮತ್ತು ಐರೋಪ್ಯ ಒಕ್ಕೂಟ ಶೃಂಗಸಭೆ ದೆಹಲಿಯಲ್ಲಿ ಮುಂದಿನ ತಿಂಗಳು ನಡೆಯಲಿದೆ.

ಬಾಂಗ್ಲಾ: ಹಿಂದೂಗಳ ಮೇಲಿನ ದೌರ್ಜನ್ಯಕ್ಕೆ ತಡೆಗೆ ಇಸ್ಕಾನ್ ಒತ್ತಾಯ

ಕೋಲ್ಕತ್ತ (ಪಿಟಿಐ): ಬಾಂಗ್ಲಾದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ, ಮಾನವ ಹಕ್ಕುಗಳ ಉಲ್ಲಂಘನೆ ಕಳವಳಕಾರಿಯಾಗಿದ್ದು, ವಿಶ್ವಸಂಸ್ಥೆಯ ಹೈಕಮಿಷನರ್ (ವಲಸಿಗರು) ಇತ್ತ ಗಮನಹರಿಸಬೇಕು ಎಂದು ಕೋಲ್ಕತ್ತದ ಇಸ್ಕಾನ್ ಕೇಂದ್ರ ಆಗ್ರಹಪಡಿಸಿದೆ.

ಬಾಂಗ್ಲಾದ ಮಧ್ಯಂತರ ಸರ್ಕಾರ ಗಲಭೆ, ದಾಂದಲೆ ನಡೆಸುತ್ತಿರುವ ಮೂಲಭೂತವಾದಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಅಲ್ಪಸಂಖ್ಯಾತರಲ್ಲಿ ಆತ್ಮವಿಶ್ವಾಸ ಮೂಡಿಸಬೇಕು ಎಂದು ಇಸ್ಕಾನ್ ಕೇಂದ್ರದ ವಕ್ತಾರ ರಾಧಾಮೋಹನ ದಾಸ್ ಒತ್ತಾಯಿಸಿದ್ದಾರೆ.

ಮಾನವ ಹಕ್ಕುಗಳ ದಿನ ಆಚರಣೆ ಸಂದರ್ಭದಲ್ಲಿ 'ಎಕ್ಸ್' ಮೂಲಕ ಈ ಒತ್ತಾಯ ಮಾಡಿರುವ ಅವರು, ಮಾನವಹಕ್ಕುಗಳ ರಕ್ಷಣೆ ಕುರಿತು ವಿಶ್ವಸಂಸ್ಥೆ ಎಚ್ಚೆತ್ತುಕೊಳ್ಳಬೇಕು. ಬಾಂಗ್ಲಾದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ಹೃದಯವಿದ್ರಾವಕವಾಗಿದೆ ಎಂದು ಹೇಳಿದ್ದಾರೆ. ಅಮೆರಿಕ, ಬ್ರಿಟನ್‌ನ ಸಂಸದರು ಈ ದೌರ್ಜನ್ಯದ ವಿರುದ್ಧ ಧ್ವನಿ ಎತ್ತಿದ್ದಾರೆ. ಆದರೆ, ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿ (ಯುಎನ್‌ಎಚ್‌ಸಿಆರ್) ಈ ಕುರಿತಂತೆ ಇನ್ನೂ ಪ್ರತಿಕ್ರಿಯೆ ನೀಡಬೇಕಾಗಿದೆ ಅಭಿಪ್ರಾಯಪಟ್ಟಿದ್ದಾರೆ.

ಅಮೆರಿಕ: ಹರ್ಮೀತ್ ಧಿಲ್ಲೋನ್ ನೇಮಕ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನ್ಯಾಯಾಂಗ ಇಲಾಖೆಯ ನಾಗರಿಕ ಹಕ್ಕುಗಳ ಸಹಾಯಕ ಅಟಾರ್ನಿ ಜನರಲ್ ಆಗಿ ಭಾರತ ಮೂಲದ ಹರ್ಮೀತ್ ಕೆ. ಧಿಲ್ಲೋನ್ ಅವರನ್ನು ನೇಮಿಸಿದ್ದಾರೆ.

ಸಿಖ್ ಸಮುದಾಯದ ಧಿಲ್ಲೋನ್, ಅಮೆರಿಕದ 4ನೇ ಸರ್ಕಿಟ್ ಕೋರ್ಟ್‌ನಲ್ಲಿ ನ್ಯಾಯಿಕ ಅಧಿಕಾರಿಯಾಗಿದ್ದರು. ಚಂಡೀಗಢದಲ್ಲಿ ಜನಿಸಿದ ಧಿಲ್ಲೋನ್ ಬಾಲ್ಯದಲ್ಲೇ ಹೆತ್ತವರ ಜೊತೆ ಅಮೆರಿಕಕ್ಕೆ ವಲಸೆ ಹೋಗಿ, ಅಲ್ಲಿಯೇ ನೆಲೆಸಿದ್ದಾರೆ.

ಜನರ ಪೀಡಿಸಿದವರ ಮಾಹಿತಿ ನೀಡಿದವರಿಗೆ ಬಹುಮಾನ: ಗೊಲಾನಿ

'ಅಸಾದ್ ಆಡಳಿತದ ಅಧಿಕಾರಿಗಳ ವಿರುದ್ಧ ಕ್ರಮ'



ಡಮಾಸ್ಕಸ್ (ಎಪಿ/ರಾಯಿಟರ್ಸ್/ಎಎಫ್‌ಪಿ): 'ದೇಶದಲ್ಲಿ ನಡೆದಿರುವ ಹಿಂಸಾಚಾರ, ಯುದ್ಧಾಪರಾಧಗಳಿಗೆ ಈ ಹಿಂದಿನ ಅಧ್ಯಕ್ಷ ಬಶರ್ ಅಲ್ ಅಸಾದ್ ಸರ್ಕಾರದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ, ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಬಂಡುಕೋರ ನಾಯಕ ಕಮಾಂಡರ್ ಅಬು ಮೊಹಮ್ಮದ್ ಅಲ್ ಗೊಲಾನಿ ಮಂಗಳವಾರ ಹೇಳಿದ್ದಾರೆ.

ಹೊಸ ಸರ್ಕಾರ ರಚನೆ, ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿ ಮಾತುಕತೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಅವರು ಈ ಮಾತು ಹೇಳಿದ್ದಾರೆ.

ಗೊಲಾನಿ ಅವರ ನಿಜವಾದ ಹೆಸರು ಅಹ್ಮದ್ ಅಲ್–ಶರಾ ಎಂದಾಗಿದ್ದು, ಸಿರಿಯಾದಲ್ಲಿನ ಈ ಬೆಳವಣಿಗೆ ನಂತರ ಅಲ್–ಶರಾ ಹೆಸರನ್ನೇ ಅವರು ಬಳಸುತ್ತಿದ್ದಾರೆ.

'ಸಿರಿಯಾ ಪ್ರಜೆಗಳಿಗೆ ಭಾರಿ ಚಿತ್ರಹಿಂಸೆ ನೀಡಲಾಗಿದೆ. ಇಂತಹ ಕೃತ್ಯಗಳಿಗಾಗಿ ಭದ್ರತೆ ಮತ್ತು ಸೇನೆಯ ಅಧಿಕಾರಿಗಳು, ಕ್ರಿಮಿನಲ್‌ಗಳನ್ನು ಹೊಣೆ ಮಾಡುವುದಕ್ಕೆ ನಾವು ಹಿಂಜರಿಯುವುದಿಲ್ಲ' ಎಂದು ಸಾಮಾಜಿಕ ಜಾಲತಾಣ ಟೆಲಿಗ್ರಾಮ್‌ನಲ್ಲಿ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಯುದ್ಧಾಪರಾಧಗಳಲ್ಲಿ ತೊಡಗಿದ್ದ ಸೇನೆಯ ಹಿರಿಯ ಅಧಿಕಾರಿಗಳ ಕುರಿತು ಮಾಹಿತಿ ನೀಡಿದವರಿಗೆ ಬಹುಮಾನ ನೀಡಲಾಗುವುದು' ಎಂದೂ ಗೊಲಾನಿ ಘೋಷಿಸಿದ್ದಾರೆ.

ಗೊಲಾನಿ ಅವರು ಪ್ರಧಾನಿ ಮೊಹಮ್ಮದ್ ಘಾಜಿ ಜಲಾಲಿ ಮತ್ತು ಉಪಾಧ್ಯಕ್ಷ ಫೈಸಲ್ ಮೆಕ್ದಾದ್ ಅವರನ್ನು ಸೋಮವಾರ ಭೇಟಿ ಮಾಡಿ, ಮಧ್ಯಂತರ ಸರ್ಕಾರ ರಚನೆ ಕುರಿತು ಚರ್ಚೆ ನಡೆಸಿದ್ದಾರೆ.

ಸಹಜಸ್ಥಿತಿ: ರಾಜಧಾನಿ ಡಮಾಸ್ಕಸ್‌ನಲ್ಲಿ ಜನಜೀವನ ಸಹಜಸ್ಥಿತಿಗೆ ಮರಳುತ್ತಿದೆ.

'ಇಸ್ರೇಲ್‌ನಿಂದ ವೈಮಾನಿಕ ದಾಳಿ'

ಸಿರಿಯಾ ಮೇಲೆ ಇಸ್ರೇಲ್ ಪಡೆಗಳು ಭಾರಿ ವೈಮಾನಿಕ ದಾಳಿ ನಡೆಸಿದ್ದು, ರಾಜಧಾನಿ ಡಮಾಸ್ಕಸ್‌ನಿಂದ 25 ಕಿ.ಮೀ. ಹತ್ತಿರದಲ್ಲಿ ದೇಶದೊಳಕ್ಕೆ ಮುನ್ನುಗ್ಗಿವೆ ಎಂದು ಹೇಳಲಾಗಿದೆ.

ಡಮಾಸ್ಕಸ್ ಮತ್ತು ಸಮೀಪದ ನಗರಗಳಲ್ಲಿ ರಾತ್ರಿಯಿಡೀ ಭಾರಿ ವೈಮಾನಿಕ ದಾಳಿ ನಡೆದಿದ್ದಾಗಿ ಅಸೋಸಿಯೇಟೆಡ್ ಪ್ರೆಸ್ ಸುದ್ದಿಸಂಸ್ಥೆ ಹೇಳಿದೆ.

ನಾಶವಾದ ಕ್ಷಿಪಣಿ ವಾಹಕಗಳು, ಹೆಲಿಕಾಪ್ಟರ್‌ಗಳು ಮತ್ತು ಯುದ್ಧವಿಮಾನಗಳ ಛಾಯಾಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

ಡಮಾಸ್ಕಸ್ ಅನ್ನು ಹಿಡಿತಕ್ಕೆ ತೆಗೆದುಕೊಂಡಿರುವ ಹಯಾತ್ ತಹ್ರೀರ್ ಅಲ್-ಶಾಮ್ (ಎಚ್‌ಟಿಎಸ್) ಸೇರಿದಂತೆ ಹೋರಾಟಗಾರರ ಗುಂಪುಗಳು, ಇಸ್ರೇಲ್ ನಡೆಸಿರುವ ಈ ದಾಳಿ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ.

ಬಫರ್ ವಲಯ ದಾಟಿ ಸಿರಿಯಾದ ಒಳಕ್ಕೆ ತನ್ನ ಸೇನಾಪಡೆಗಳು ಮುನ್ನುಗ್ಗಿವೆ ಎಂಬ ಆರೋಪವನ್ನು ಇಸ್ರೇಲ್ ತಳ್ಳಿಹಾಕಿದೆ. ಸಿರಿಯಾ ಅಧ್ಯಕ್ಷ ಬಶರ್ ಅಸಾದ್ ಅವರನ್ನು ಪದಚ್ಯುತಗೊಳಿಸಿದ ನಂತರ ಸಂಭವಿಸಬಹುದಾದ ಅಪಾಯ ತಡೆಯಲು ಕ್ರಮ ಕೈಗೊಳ್ಳಲಾಗಿದೆ ಎಂದು ಇಸ್ರೇಲ್ ಹೇಳಿದೆ.

ಅನುಭವಿ ಬ್ಯಾಟರ್ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿಗೆ ಲಯಕ್ಕೆ ಮರಳುವ ಸವಾಲು

ಕೆಂಪುಚೆಂಡು ಒಲಿಸಿಕೊಳ್ಳಲು ಅಭ್ಯಾಸ

ಭಾರತದ ತಂಡದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ

ಅಡಿಲೇಡ್ (ಪಿಟಿಐ): ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಸೋಲಿನ ಆಘಾತ ಅನುಭವಿಸಿರುವ ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಈಗ ಮತ್ತೆ ಕೆಂಪು ಚೆಂಡಿನತ್ತ ವಾಲಿದೆ.

ಟೆಸ್ಟ್ ಸರಣಿಯ 3ನೇ ಪಂದ್ಯವು ಇದೇ 14ರಿಂದ ಬ್ರಿಸ್ಬೇನ್‌ನಲ್ಲಿ ನಡೆಯಲಿದೆ. ಇದೂ ಸೇರಿದಂತೆ ಮೂರು ಪಂದ್ಯಗಳೂ ಹಗಲು ಹೊತ್ತಿನಲ್ಲಿ ನಡೆಯಲಿವೆ. ಆದ್ದರಿಂದ ಕೆಂಪು ಚೆಂಡಿನ ಆಟಕ್ಕೆ ಮರಳುವ ಅಭ್ಯಾಸವನ್ನು ತಂಡವು ಮಾಡುತ್ತಿದೆ.

'ಮುಂದೆ ಆಗಬೇಕಿರುವುದನ್ನು-ನೋಡುವ ಹೊತ್ತು ಇದು. ಬ್ರಿಸ್ಬೇನ್ ಟೆಸ್ಟ್‌ಗೆ ತಯಾರಿ ಆರಂಭವಾಗಿದೆ. ಅದೂ ಇಲ್ಲಿ ಅಡಿಲೇಡ್‌ನಲ್ಲಿ' ಎಂದು ಬಿಸಿಸಿಐ ಎಕ್ಸ್‌ನಲ್ಲಿ ಸಂದೇಶ ಹಾಕಿದೆ. ಅದರೊಂದಿಗೆ ಭಾರತ ತಂಡದ ಆಟಗಾರರು ಅಭ್ಯಾಸ ಮಾಡುತ್ತಿರುವ ವಿಡಿಯೊ ಕೂಡ ಹಾಕಿದೆ.

ಭಾರತ ತಂಡದ ನಾಯಕ ರೋಹಿತ್ ಅವರು ಫಾರ್ಮ್ ಕಳೆದುಕೊಂಡಿದ್ರ. ರನ್‌ಗಳ ಬರ ಎದುರಿಸುತ್ತಿದ್ದಾರೆ. ಕಳೆದ 12 ಇನಿಂಗ್ಸ್‌ಗಳಲ್ಲಿ ಅವರು 142 ರನ್‌ಗಳನ್ನು ಮಾತ್ರ ಗಳಿಸಿದ್ದಾರೆ. ಅದರಲ್ಲಿ ಒಂದು ಅರ್ಧಶತಕ ಇದೆ.

ರೋಹಿತ್ ಈ ಸರಣಿಯ ಮೊದಲ ಪಂದ್ಯದಲ್ಲಿ ಆಡಿರಲಿಲ್ಲ. ಪಿತೃತ್ವ ರಜೆ ಪಡೆದಿದ್ದರು. ಎರಡನೇ ಟೆಸ್ಟ್‌ನಲ್ಲಿ ತಂಡಕ್ಕೆ ಮರಳಿದ್ದರು. ಆದರೆ ಅವರು ಇನಿಂಗ್ಸ್ ಆರಂಭಿಸಿರಲಿಲ್ಲ. ಯಶಸ್ವಿ ಜೈಸ್ವಾಲ್ ಜೊತೆಗೆ ಕೆ.ಎಲ್. ರಾಹುಲ್ ಇನಿಂಗ್ಸ್ ಆರಂಭಿಸಿದ್ದರು. ರೋಹಿತ್ ಅವರು 6ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ್ದರು. ಆದರೆ ಎರಡೂ ಇನಿಂಗ್ಸ್‌ಗಳಲ್ಲಿ (3 ಮತ್ತು 6) ವಿಫಲರಾಗಿದ್ದರು.

ವಿರಾಟ್ ಕೊಹ್ಲಿ 16 ತಿಂಗಳುಗಳಿಂದ ಎದುರಿಸಿದ್ದ ಲಯದ ಕೊರತೆಯನ್ನು ಪರ್ತ್‌ನಲ್ಲಿ ಪರಿಹರಿಸಿಕೊಂಡಿದ್ದರು. ಅಲ್ಲಿ ಅವರು ಶತಕ ಗಳಿಸಿದ್ದರು. ಆದರೆ ಎರಡನೇ ಟೆಸ್ಟ್‌ನಲ್ಲಿ ಎರಡೂ ಇನಿಂಗ್ಸ್‌ಗಳಲ್ಲಿ ಲಯ ತಪ್ಪಿದರು. ಒಂದು ಸಲ ಸ್ಲಿಪ್ ಮತ್ತು ಇನ್ನೊಂದು ಸಲ ವಿಕೆಟ್‌ಕೀಪರ್‌ಗೆ ಕ್ಯಾಚ್ ಆದರು. ಅದರಿಂದಾಗಿ ಈ ಇಬ್ಬರೂ ಅನುಭವಿ ಬ್ಯಾಟರ್‌ಗಳು ನೆಟ್ಸ್ ನಲ್ಲಿ ಹೆಚ್ಚು ಹೊತ್ತು ಬ್ಯಾಟಿಂಗ್ ಮಾಡಿದರು.

ಇನ್ನೊಂದೆಡೆ; ಕೆ.ಎಲ್. ರಾಹುಲ್ ಅವರು ಹೆಚ್ಚು ರಕ್ಷಣಾತ್ಮಕವಾಗಿ ಆಡುವ ಅಭ್ಯಾಸ ಮಾಡಿದರು. ಆದರೆ ರಿಷಭ್ ಪಂತ್ ಕೆಲವು ಬೀಸು ಹೊಡೆತಗಳನ್ನು ಆಡಿದರು. ಆರಂಭಿಕ ಆಟಗಾರ ಯಶಸ್ವಿ ಮೊದಲ ಟೆಸ್ಟ್‌ನಲ್ಲಿ 161 ರನ್ ಹೊಡೆದಿದ್ದರು. ಅವರು ತಮ್ಮ ಆಕ್ರಮಣಶೀಲ ಶೈಲಿಯನ್ನೇ ಅಭ್ಯಾಸ ಮಾಡಿದರು.

ವೇಗಿ ಹರ್ಷಿತ್ ರಾಣಾ, ಆಕಾಶ್ ದೀಪ್, ಯಶ್ ದಯಾಳ್ ಮತ್ತು ಸ್ಪಿನ್ನರ್‌ಗಳಾದ ರವೀಂದ್ರ ಜಡೇಜ, ಆರ್. ಅಶ್ವಿನ್ ಮತ್ತು ವಾಷಿಂಗ್ಟನ್ ಸುಂದರ್ ಅವರು ಬೌಲಿಂಗ್ ಮಾಡಿದರು. ಅವರಲ್ಲದೇ ಥ್ರೋಡೌನ್ ಪರಿತಣತರು ಎಸೆತಗಳನ್ನು ಪ್ರಯೋಗಿಸಿದರು.

ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್ ಮತ್ತು ವೇಗದ ಬೌಲಿಂಗ್ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಸ್ವಲ್ಪ ನಿರಾಳವಾಗಿದ್ದರು. ಭಾರತ ತಂಡವು ಬುಧವಾರ ಬ್ರಿಸ್ಬೇನ್ ತಲುಪಲಿದೆ.

ಅಥ್ಲೆಟಿಕ್ಸ್: ಕರ್ನಾಟಕಕ್ಕೆ ಎರಡು ಚಿನ್ನ

ಪ್ರಜಾವಾಣಿ ವಾರ್ತೆ

18 ವರ್ಷದೊಳಗಿನ ಬಾಲಕರ 1000 ಮೀಟರ್ ಸ್ಪ್ರಿಂಟ್ ಮೆಡ್ಲೆ ರಿಲೆ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಕರ್ನಾಟಕದ ತಂಡ

ಬೆಂಗಳೂರು: ಕರ್ನಾಟಕದ ಸ್ಪರ್ಧಿಗಳು ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 39ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಎರಡು ಚಿನ್ನ ಮತ್ತು ಒಂದು ಬೆಳ್ಳಿ ಗೆದ್ದರು.

18 ವರ್ಷದೊಳಗಿನ ಬಾಲಕರ 1000 ಮೀಟರ್ ಸ್ಪ್ರಿಂಟ್ ಮೆಡ್ಲೆ ರಿಲೆ ಸ್ಪರ್ಧೆಯಲ್ಲಿ ಕರ್ನಾಟಕ ಚಿನ್ನದ ಸಾಧನೆ ಮಾಡಿತು. ಯಶಸ್ ಡಿ, ನಿತಿನ್ ಎ, ಚಿರಂತ್ ಪಿ ಮತ್ತು ಸೈಯದ್ ಶರೀಫ್ ಅವರನ್ನು ಒಳಗೊಂಡ ತಂಡವು 1 ನಿಮಿಷ 55 ಸೆಕೆಂಡ್‌ಗಳಲ್ಲಿ ಗುರಿ ತಲುಪಿತು. ರಾಜಸ್ಥಾನ ಮತ್ತು ಹರಿಯಾಣ ತಂಡಗಳು ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದವು.

16 ವರ್ಷದೊಳಗಿನ ಬಾಲಕರ 1000 ಮೀಟರ್ ಸ್ಪ್ರಿಂಟ್ ಮೆಡ್ಲೆ ರಿಲೆ ಸ್ಪರ್ಧೆಯಲ್ಲೂ ಕರ್ನಾಟಕ ಓಟಗಾರರು ಚಾಂಪಿಯನ್ ಆದರು. ಆಕಾಶ್ ಹುಕ್ಕೇರಿ, ಸ್ವಯಂ ಯೋಜಿಯ್ಯ ಎಸ್., ಪಿ. ಧನ್ವಿತ್ ಬಿಸಾಲ್ಕಾನ್, ಆಯುಷ್ ಪ್ರಾಂಜಲ್ ಅವರ ತಂಡವು 2 ನಿಮಿಷ 0.35 ಸೆಕೆಂಡ್‌ನಲ್ಲಿ ಗುರಿ ಮುಟ್ಟಿತು. ದೆಹಲಿ ತಂಡ ಬೆಳ್ಳಿ ಗೆದ್ದರೆ, ಮಹಾರಾಷ್ಟ್ರ ಕಂಚು ಜಯಿಸಿತು.

ಆಯುಷ್‌ಗೆ ಡಬಲ್ ಪದಕ: ಸ್ಪ್ರಿಂಟ್ ಮೆಡ್ಲೆ ರಿಲೆಯಲ್ಲಿ ಚಿನ್ನ ಗೆದ್ದ ತಂಡದಲ್ಲಿದ್ದ ಆಯುಷ್ ಪ್ರಾಂಜಲ್ ಅವರು 16 ವರ್ಷದೊಳಗಿನ ಬಾಲಕರ 600 ಮೀಟರ್ ಓಟದಲ್ಲಿ ಬೆಳ್ಳಿ ಪದಕ ಗೆದ್ದರು. ಆಯುಷ್ 1 ನಿಮಿಷ 22.10 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಉತ್ತರಾಖಂಡದ ಸೂರಜ್ ಸಿಂಗ್ (1 ನಿ.21.70ಸೆ) ಮತ್ತು ಒಡಿಶಾದ ಅನಿಸ್ಲಾಲ್ (1 ನಿ.22.50ಸೆ) ಕ್ರಮವಾಗಿ ಚಿನ್ನ ಮತ್ತು ಕಂಚು ಗೆದ್ದರು.

ಕರ್ನಾಟಕ ಕ್ರಿಕೆಟ್ ತಂಡಕ್ಕೆ ದಿಗ್ಗಜ ಪ್ರಸನ್ನ ಸಲಹೆ

'ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಳ್ಳಲಿ'

ಪ್ರಜಾವಾಣಿ ವಾರ್ತೆ



ಎರ್ರಪಳ್ಳಿ ಪ್ರಸನ್ನ

ಬೆಂಗಳೂರು: ಕ್ರಿಕೆಟ್ ಕ್ಷೇತ್ರದ ಶ್ರೇಷ್ಠ ಸ್ಪಿನ್ನರ್‌ಗಳಲ್ಲಿ ಒಬ್ಬರಾಗಿರುವ ಎರ್ರಪಳ್ಳಿ ಪ್ರಸನ್ನ ಅವರ ನಾಯಕತ್ವದಲ್ಲಿ ಕರ್ನಾಟಕ ತಂಡವು ಐವತ್ತು ವರ್ಷಗಳ ಹಿಂದೆ ಮೊದಲ ಸಲ ರಣಜಿ ಟ್ರೋಫಿ ಜಯಿಸಿತ್ತು.

ಆ ದಿನಗಳ ಕ್ರಿಕೆಟ್ ಕುರಿತು ಅವರು ಮಾತನಾಡಲು ಆರಂಭಿಸಿದರೆ ಹಲವು ಸ್ವಾರಸ್ಯಗಳನ್ನು ಹೇಳುತ್ತಲೇ ಹೋಗುತ್ತಾರೆ. ಈಗಿನ ಕ್ರಿಕೆಟ್ ಕುರಿತು ಹೆಮ್ಮೆ ವ್ಯಕ್ತಪಡಿಸುತ್ತಾರೆ. ಕಳೆದ ಒಂದು ದಶಕದಿಂದ ಕರ್ನಾಟಕ ತಂಡವು ರಣಜಿ ಟ್ರೋಫಿ ಜಯಿಸದಿರುವ ಕುರಿತು ಕೇಳಿದಾಗ ಕಾರಣಗಳ ಕುರಿತು 'ಪ್ರಜಾವಾಣಿ'ಯೊಂದಿಗೆ ಮಾತನಾಡಿದರು.

'ಈಚೆ ದೇಶದಲ್ಲಿ ಕರ್ನಾಟಕವು ಬಲಾಢ್ಯ ತಂಡಗಳಲ್ಲಿ ಒಂದು. ಯುವ ಆಟಗಾರರ ಗಳೂ ಅದೇ ರೀತಿಯಾಗಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಬೇರೆ ರಾಜ್ಯಗಳ ತಂಡಗಳೂ ವೃತ್ತಿಪರವಾಗಿ ಬೆಳೆಯುತ್ತಿವೆ. ಕ್ರಿಕೆಟ್ ವೇಗವಾಗಿ ಬದಲಾಗುತ್ತಿದೆ. ಕರ್ನಾಟಕ ಕೂಡ ಈ ಬದಲಾವಣೆಗಳಿಗೆ ತ್ವರಿತವಾಗಿ ಹೊಂದಿಕೊಳ್ಳುತ್ತದೆ.

ಈಗಿನ ತಂಡದಲ್ಲಿ ಪ್ರತಿಭಾನ್ವಿತ ಆಟಗಾರರು ಇದ್ದಾರೆ. ಎಲ್ಲ ಮಾದರಿಗಳಲ್ಲಿಯೂ ಆಡಬಲ್ಲ ಸಮರ್ಥರು. ಆದರೆ ಸ್ವಲ್ಪಮಟ್ಟಿಗೆ ಸ್ಪರ್ಧಾತ್ಮಕ ಮನೋಭಾವದ ಕೊರತೆ ಇದೆ. ಅವರ ಬೆನ್ನು ತಟ್ಟಬೇಕು. ಒಮ್ಮೆ ಅವರಲ್ಲಿ ಆತ್ಮವಿಶ್ವಾಸ ಮೂಡಿದರೆ ಉತ್ತಮ ಫಲಿತಾಂಶ ನೀಡಬಲ್ಲರು' ಎಂದು ಪ್ರಸನ್ನ ಅಭಿಪ್ರಾಯಪಡುತ್ತಾರೆ.

'ಕಳೆದ ಐದು ವರ್ಷಗಳಿಂದ ಕರ್ನಾಟಕ ತಂಡದಲ್ಲಿ ವಿಕೆಟ್ ಗಳಿಸಬಲ್ಲ ಸ್ಪಿನ್ನರ್‌ಗಳ ಕೊರತೆ ಎದ್ದು ಕಾಣುತ್ತಿದೆ. ಶ್ರೇಯಸ್ ಗೋಪಾಲ್ ಮತ್ತು ಕೆ.ಗೌತಮ್ ಅವರು ವಿಶ್ವಾಸಾರ್ಹರು. ಉತ್ತಮ ಬೌಲರ್‌ಗಳೂ ಹೌದು. ಆದರೆ ಈ ಹಿಂದೆ ಕರ್ನಾಟಕದಲ್ಲಿದ್ದ ಸ್ಪಿನ್ನರ್‌ಗಳಷ್ಟು ಪ್ರಭಾವಿಗಳಂತೆ ಕಾಣುತ್ತಿಲ್ಲ.

'ಕ್ರಿಕೆಟ್ ಪಂದ್ಯಗಳ ಚುಟುಕು ಮಾದರಿಯಿಂದಾಗಿ ಬೌಲರ್‌ಗಳು ಫ್ಲ್ಯಾಟ್ ಎಸೆತಗಳನ್ನು ರೂಢಿಸಿಕೊಳ್ಳುವ ಅನಿವಾರ್ಯತೆ ಇದೆ. ಸ್ಪಿನ್ ಎಂಬುದು ಕಲಾತ್ಮಕ ಮಾದರಿ. ಆದರೆ ಈಗ ಬ್ಯಾಟಿಂಗ್ ಶೈಲಿಯು ವೇಗವಾಗಿ ಬದಲಾಗಿರುವುದರ ಪರಿಣಾಮ ಸ್ಪಿನ್ನರ್ ಮೇಲೆ ಆಗಿದೆ.

ಸ್ಪಿನ್ ಬೌಲರ್‌ಗಳು ತಮ್ಮ ನೈಜ ಪ್ರತಿಭೆಯನ್ನು ಕಳೆದುಕೊಳ್ಳುತ್ತಿದ್ದಾರೆ. ನಕಾರಾತ್ಮಕ ಧೋರಣೆ ಬೆಳೆದು ಸುಧಾರಣೆಯ ಅವಕಾಶಗಳು ಕಡಿಮೆಯಾಗುತ್ತಿವೆ' ಎಂದರು.

'ಈ ಕಾಲದಲ್ಲಿ ನೀವು ಮತ್ತು ಬಿಷನ್ ಸಿಂಗ್ ಬೇಡಿಯವರು ಇದ್ದಿದ್ದರೆ ಯಾವ ರೀತಿ ಬೌಲಿಂಗ್ ಮಾಡುತ್ತಿದ್ದಿರಿ' ಎಂಬ ಪ್ರಶ್ನೆಗೆ ನಗುತ್ತ ಪ್ರತಿಕ್ರಿಯಿಸಿದ ಅವರು, 'ತುಂಬಾ ಉತ್ತಮವಾಗಿ ಆಡುತ್ತಿದ್ದೆವು. ಈಗಿನ ಬ್ಯಾಟರ್‌ಗಳಿಗೆ ನೆಟ್ಸ್‌ನಲ್ಲಿ ಬೌಲಿಂಗ್ ಹಾಕಿ, ಅವರ ಸಾಮರ್ಥ್ಯದ ಅಂದಾಜು ಮಾಡುತ್ತಿದ್ದೆವು. ಈಗಿನ ಬ್ಯಾಟರ್‌ಗಳು ಎಲ್ಲ ಎಸೆತಗಳನ್ನೂ ಬೀಸಿ ಹೊಡೆಯಲು ಹೋಗುತ್ತಾರೆ. ಇಂತಹ ಸಂದರ್ಭದಲ್ಲಿ ಬೌಲರ್ ತನ್ನ ಎಸೆತಗಳನ್ನು ಫ್ಲೈಟ್ ಮಾಡಿ, ಗಾಳಿಯಲ್ಲಿ ತೇಲಿಸಿ ಬ್ಯಾಟರ್‌ಗಳ ಕಣ್ಣುಪ್ಪಂತೆ ಮಾಡಬೇಕು' ಎಂದರು.

'ಟೆಸ್ಟ್ ಪಂದ್ಯ ಗೆಲ್ಲಬೇಕಾದರೆ 20 ವಿಕೆಟ್‌ಗಳನ್ನು ಗಳಿಸಬೇಕು. ಅದಕ್ಕಾಗಿ ಆ ರೀತಿಯ ಸಮರ್ಥ ಬೌಲರ್‌ಗಳನ್ನು ಸಿದ್ಧಗೊಳಿಸಬೇಕು. ನಮ್ಮಲ್ಲಿ ಉತ್ತಮ ವೇಗಿಗಳು ಇದ್ದಾರೆ. ಆದರೆ ಸ್ಪಿನ್ನರ್‌ಗಳನ್ನು ಸಿದ್ಧಗೊಳಿಸಬೇಕು ಮತ್ತು ಅವರ ಮೇಲೆ ವಿಶ್ವಾಸವಿಡಬೇಕು' ಎಂದರು.

ರಸ್ತೆ ಸೈಕ್ಲಿಂಗ್: ಕರ್ನಾಟಕಕ್ಕೆ ಸ್ವರ್ಣ

ನಿಖಿಲ್ ರೆಡ್ಡಿ

ಬೆಂಗಳೂರು: ಕರ್ನಾಟಕದ ಸೈಕ್ಲಿಸ್ಟ್‌ಗಳು ಒಡಿಶಾದ ಪುರಿಯಲ್ಲಿ ನಡೆಯುತ್ತಿರುವ 29ನೇ ರಾಷ್ಟ್ರೀಯ ರಸ್ತೆ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಒಂದು ಚಿನ್ನ ಸೇರಿದಂತೆ ಒಟ್ಟು ಐದು ಪದಕ ಜಯಿಸಿದರು.

14 ವರ್ಷದೊಳಗಿನ ಬಾಲಕರ ವಿಭಾಗದ 20 ಕಿಲೋಮೀಟರ್ ಟೀಮ್ ಟೈಮ್ ಟ್ರಯಲ್ಸ್ ಸ್ಪರ್ಧೆಯಲ್ಲಿ ಕರ್ನಾಟಕ ತಂಡವು ಚಿನ್ನ ಗೆದ್ದಿತು. ಈ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕಕ್ಕೆ ಒಲಿದ ಎರಡನೇ ಬಂಗಾರದ ಪದಕ ಇದಾಗಿದೆ. ತಂಡದಲ್ಲಿ ಸಂಗಮೇಶ ತೋಳಮಟ್ಟಿ, ವಿರೇಶ ಬೆಳಗಲಿ ಮತ್ತು ನಿಖಿಲ ರೆಡ್ಡಿ ತೇರಿನಗಡ್ಡಿ ಅವರಿದ್ದರು. ಸೋಮವಾರ 18 ವರ್ಷದೊಳಗಿನ ಬಾಲಕಿಯರ ತಂಡವು 40 ಕಿ.ಮೀ ಟಿಮ್ ಟೈಮ್ ಟ್ರಯಲ್ಸ್‌ನಲ್ಲಿ ಮೊದಲ ಸ್ಥಾನ ಪಡೆದಿತ್ತು.

23 ವರ್ಷದೊಳಗಿನ ಪುರುಷರ ವಿಭಾಗದ 120 ಕಿಲೋಮೀಟರ್ ರೋಡ್ ರೇಸ್ ನಲ್ಲಿ ಉದಯ ಗುಳೇದ ಬೆಳ್ಳಿ ಜಯಿಸಿದರು. 18 ವಯೋಮಾನದ ಬಾಲಕಿಯರ 60 ಕಿಲೋ ಮೀಟರ್ ರೋಡ್ ರೇಸನಲ್ಲಿ ಕೀರ್ತಿ ನಾಯಕ್ ಕಂಚಿನ ಪದಕ ಗೆದ್ದರು. ಇದೇ ವಯೋಮಾನದ ಬಾಲಕರ 40 ಕಿ.ಮೀ ಟೀಮ್ ಟೈಮ್ ಟ್ರಯಲ್ಸ್‌ನಲ್ಲಿ ಸುಜಲ್ ಜಾಧವ್, ಶ್ರೀನಿವಾಸ್ ರಜಪೂತ, ಮಲ್ಲಿಕಾರ್ಜುನ ಶಿರೋಳ ಮತ್ತು ಧನಂಜಯ ತಿಪ್ಪಣ್ಣವರ ಅವರಿದ್ದ ತಂಡವು ಬೆಳ್ಳಿ ಜಯಿಸಿತು.

14 ವರ್ಷದೊಳಗಿನ ಬಾಲಕಿಯರ 20 ಕಿ.ಮೀ ಟೀಮ್ ಟೈಮ್ ಟ್ರೈಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕವನ್ನು ಕರ್ನಾಟಕ ತಂಡವು ಪಡೆಯಿತು. ಈ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕವು ಇದುವರೆಗೆ ಒಟ್ಟು 2 ಚಿನ್ನ, 3 ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗಳಿಸಿದೆ ಎಂದು ಕರ್ನಾಟಕ ರಾಜ್ಯ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ಕಾರ್ಯದರ್ಶಿ ಶ್ರೀಶೈಲ ಕುರಣಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಹಾಕಿ: 18ರಂದು ಆಯ್ಕೆ ಟ್ರಯಲ್ಸ್

ಬೆಂಗಳೂರು: ಹಾಕಿ ಕರ್ನಾಟಕವು ಇದೇ 18ರಂದು ರಾಜ್ಯ ಸೀನಿಯರ್ ಪುರುಷರ ಹಾಕಿ ತಂಡಕ್ಕೆ ಆಟಗಾರರ ಆಯ್ಕೆಗೆ ಟ್ರಯಲ್ಸ್ ಏರ್ಪಡಿಸಿದೆ.

ಉತ್ತರಾಖಂಡದಲ್ಲಿ ಜನವರಿ 28ರಿಂದ ಫೆಬ್ರುವರಿ 14ರವರೆಗೆ 38ನೇ ರಾಷ್ಟ್ರೀಯ ಕ್ರೀಡಾಕೂಟ ನಡೆಯಲಿದೆ. ಶಾಂತಿನಗರದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಅರೇನಾದಲ್ಲಿ ಬೆಳಿಗ್ಗೆ 10ರಿಂದ ಟ್ರಯಲ್ಸ್ ಆಯೋಜಿಸಲಾಗಿದೆ ಎಂದು ಹಾಕಿ ಕರ್ನಾಟಕದ ಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳಾ ಕ್ರಿಕೆಟ್: ಕರ್ನಾಟಕಕ್ಕೆ ಸತತ ನಾಲ್ಕನೇ ಗೆಲುವು

ಬೆಂಗಳೂರು: ಬೌಲರ್‌ಗಳ ಪರಿಣಾಮಕಾರಿ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ ಸೀನಿಯರ್ ಮಹಿಳೆಯರ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಪುದುಚೇರಿ ತಂಡವನ್ನು ಮಂಗಳವಾರ ಮಣಿಸಿತು.

ಹರಿಯಾಣದ ಝಜ್ಜರ್‌ನ ಸೆಹ್ವಾಗ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪುದುಚೇರಿ 43.1 ಓವರ್‌ಗಳಲ್ಲಿ 99 ರನ್‌ಗಳಿಗೆ ಕುಸಿಯಿತು. ಕರ್ನಾಟಕದ ಅದಿತಿ ರಾಜೇಶ್ ಮೂರು ವಿಕೆಟ್ ಪಡೆದರೆ, ಸಹನಾ ಎಸ್.ಪವಾರ್ ಮತ್ತು ಅನನ್ಯಾ ಹೆಗ್ಡೆ ತಲಾ ಎರಡು ವಿಕೆಟ್ ಕಬಳಿಸಿದರು.

ಕರ್ನಾಟಕ ತಂಡವು 16 ಓವರ್‌ಗಳಲ್ಲಿ 3 ವಿಕೆಟ್‌ಗೆ 101 ರನ್‌ಗಳಿಸಿ ಜಯ ಸಾಧಿಸಿತು. ವೃಂದಾ ದಿನೇಶ್ 42 ರನ್ ಗಳಿಸಿದರು.

'ಇ' ಗುಂಪಿನಲ್ಲಿರುವ ಕರ್ನಾಟಕ ಆಡಿರುವ ನಾಲ್ಕೂ ಪಂದ್ಯಗಳನ್ನು ಗೆದ್ದು 16 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಶನಿವಾರ ಬಂಗಾಳ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ಪುದುಚೇರಿ: 43.1 ಓವರ್‌ಗಳಲ್ಲಿ 99 (ಸೋನಲ್ 22, ಯುವಶ್ರೀ 22; ಸಹನಾ ಎಸ್.ಪವಾರ್ 20ಕ್ಕೆ 2, ಅನನ್ಯಾ ಹೆಗ್ಡೆ 25ಕ್ಕೆ 2, ಅದಿತಿ ರಾಜೇಶ್ 12ಕ್ಕೆ 3). ಕರ್ನಾಟಕ: 16 ಓವರ್‌ಗಳಲ್ಲಿ 3 ವಿಕೆಟ್‌ಗೆ 101 (ಶುಭಾ ಸತೀಶ್ 25, ವೃಂದಾ ದಿನೇಶ್ 42; ಅಭಿರಾಮಿ ಆರ್ 29ಕ್ಕೆ 2).

ಭಾರತಕ್ಕೆ ಕ್ಲೀನ್‌ಸ್ವೀಪ್ ತಡೆಯುವ ಸವಾಲು

ಸ್ಮೃತಿ ಮಂದಾನ

ಪರ್ತ್ (ಪಿಟಿಐ): ಎರಡು ಪಂದ್ಯಗಳಲ್ಲಿ ಸೋತು ಸುಣ್ಣವಾಗಿರುವ ಭಾರತ ತಂಡ, ಮಹಿಳೆಯರ ಏಕದಿನ ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ಬುಧವಾರ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದ್ದು, ಕ್ಲೀನ್ ಸ್ವೀಪ್ ತಡೆಯುವ ಕಠಿಣ ಸವಾಲನ್ನು ಎದುರಿಸಿದೆ.

ಮುಂದಿನ ವರ್ಷ ನಿಗದಿಯಾಗಿರುವ ಏಕದಿನ ಮಹಿಳಾ ವಿಶ್ವಕಪ್‌ಗೆ ಮೊದಲು ತಂಡದಲ್ಲಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲೂ ಈ ಪಂದ್ಯವನ್ನು ಬಳಸಿಕೊಳ್ಳಲು ಅವಕಾಶವಿದೆ. ಹಾಲಿ ಹಾಗೂ ಏಳು ಬಾರಿಯ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ತಂಡದ ಎದುರು ಭಾತತ ತಂಡ ಬ್ಯಾಟಿಂಗ್, ಬೌಲಿಂಗ್ ಮತ್ತು ಕ್ಷೇತ್ರರಕ್ಷಣೆ– ಈ ಮೂರು ವಿಭಾಗಗಳಲ್ಲಿ ಪರದಾಡಿದೆ.

ಎರಡನೇ ಪಂದ್ಯದಲ್ಲಿ ಭಾರತ 122 ರನ್‌ಗಳ ದೊಡ್ಡ ಅಂತರದಿಂದ ಸೋತಿತ್ತು. ಆತಿಥೇಯರು 8 ವಿಕೆಟ್‌ಗೆ 371 ರನ್ ಗಳಿಸಿದ್ದು, ಈ ಮೊತ್ತವನ್ನು ಬೆನ್ನತ್ತುವಾಗ ಭಾರತದ ಬ್ಯಾಟರ್‌ಗಳಿಂದ ಅಲ್ಲಲ್ಲಿ ಉತ್ತಮ ಬ್ಯಾಟಿಂಗ್‌ನ ಝಲಕ್‌ಗಳು ಕಾಣಿಸಿದವು. ಪ್ರಮುಖ ಆಟಗಾರ್ತಿಯರಾದ– ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಸ್ಮೃತಿ ಮಂದಾನ ವಿಫಲರಾಗಿರುವುದು ತಂಡದಲ್ಲಿ ನಿರಾಸೆ ಮೂಡಿಸಿದೆ.

ಮಂದಾನ ಎರಡು ಪಂದ್ಯಗಳಿಂದ 17 ರನ್ ಗಳಿಸಿದ್ದಾರೆ. ಕೌರ್ ಎರಡು ಪಂದ್ಯಗಳಿಂದ ಗಳಿಸಿದ್ದು 27 ರನ್‌ಗಳನ್ನಷ್ಟೇ. ಅವರ ಬ್ಯಾಟಿಂಗ್ ಮತ್ತು ನಾಯಕತ್ವ ಎರಡರ ಮೇಲೂ ಆಯ್ಕೆಗಾರರು ಕಣ್ಣಿಟ್ಟಿದ್ದಾರೆ. ಈ ವರ್ಷದ ಆರಂಭದಲ್ಲಿ ಟಿ20 ವಿಶ್ವಕಪ್‌ನಲ್ಲೂ ಅವರ ನಾಯಕತ್ವದ ತಂಡ ಬಹುಬೇಗ ನಿರ್ಗಮಿಸಿತ್ತು.

ಪೂರ್ಣಾವಧಿ ನಾಯಕಿ ಅಲಿಸಾ ಹೀಲಿ ಅವರು ಗೈರಿನಲ್ಲಿ ತಹಿಲಾ ಮೆಕ್‌ಗ್ರಾತ್ ನೇತೃತ್ವದಲ್ಲಿ ತಂಡ ಉತ್ತಮ ಪ್ರದರ್ಶನ ನೀಡಿದೆ.

21 ವರ್ಷದ ಆಟಗಾರ್ತಿ ಜಾರ್ಜಿಯಾ ವೊಲ್ ಆರಂಭ ಆಟಗಾರ್ತಿಯಾಗಿ ಶತಕ ಬಾರಿಸಿ ತಮಗೆ ಕೊಟ್ಟ ಅವಕಾಶದಲ್ಲಿ ಮಿಂಚಿಸಿದ್ದಾರೆ. ಭಾರತದ ಕಡೆ ಪ್ರಿಯಾ ಮಿಶ್ರಾ ಎರಡು ವಿಕೆಟ್‌ಗಳನ್ನು ಪಡೆದು ಗಮನ ಸೆಳೆದಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 8.50
(ಭಾರತೀಯ ಕಾಲಮಾನ)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

'ಅದಾನಿಯನ್ನು ಭೇಟಿಯಾಗಿಲ್ಲ'

ಚೆನ್ನೈ (ಪಿಟಿಐ): 'ಉದ್ಯಮಿ ಗೌತಮ್ ಅದಾನಿಯನ್ನು ನಾನು ಎಂದೂ ಭೇಟಿಯಾಗಿಲ್ಲ' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೇಳಿದ್ದಾರೆ.

ಎಂ.ಕೆ.ಸ್ಟಾಲಿನ್

ಪಿಎಂಕೆಯ ನಾಯಕ ಜಿ.ಕೆ. ಮಣಿ ಅವರು ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಅವರು, 'ಅದಾನಿ ಜೊತೆಗೆ ನನಗೆ ಯಾವುದೇ ಸಂಬಂಧವಿಲ್ಲ. ಆದರೂ, ಅವರ ಜೊತೆ ಸಂಬಂಧವಿದೆ ಎಂದು ಬಿಜೆಪಿ ಹಾಗೂ ಪಿಎಂಕೆ ನನ್ನ ವಿರುದ್ಧ ತಪ್ಪು ಮಾಹಿತಿ ಹರಡುತ್ತಿವೆ. ಅದಾನಿ ವಿಚಾರವಾಗಿ, ಬಿಜೆಪಿ, ಪಿಎಂಕೆ ಪಕ್ಷವು ಜಂಟಿ ಸದನ ಸಮಿತಿ (ಜೆಪಿಸಿ) ತನಿಖೆಗೆ ಸಿದ್ಧವಿದೆಯೇ' ಎಂದು ಅವರು ಪ್ರಶ್ನಿಸಿದರು.

'ರಾಜ್ಯದ ವಿದ್ಯುತ್ ಸಚಿವ ಸೆಂಥಿಲ್ ಬಾಲಾಜಿ ಅವರು ಈ ಕುರಿತು ವಿವರವಾಗಿ ಮಾತನಾಡಿದ್ದಾರೆ. ಅದಾನಿ ಜೊತೆಗೆ ನನಗೆ ಯಾವುದೇ ಸಂಬಂಧವಿಲ್ಲ. ಜೆಪಿಸಿ ತನಿಖೆಗೆ ಸಿದ್ಧ ಇದ್ದೀರಾ' ಎಂದು ಮಣಿ ಅವರನ್ನು ಗುರಿಯಾಗಿರಿಸಿಕೊಂಡು ಸ್ಟಾಲಿನ್ ಕೇಳಿದರು.

ಲಂಚದ ಆರೋಪದ ಮೇಲೆ ಗೌತಮ್ ಅದಾನಿ ಹಾಗೂ ಅವರಿಗೆ ಸೇರಿದ ಕಂಪನಿಗಳ ಅಧಿಕಾರಿಗಳ ವಿರುದ್ಧ ಅಮೆರಿಕದ ನ್ಯಾಯಾಲಯದಲ್ಲಿ ಆರೋಪಪಟ್ಟಿ ದಾಖಲಾಗಿದ್ದು, ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳು ಜೆಪಿಸಿ ತನಿಖೆಗೆ ಪಟ್ಟುಹಿಡಿದಿವೆ.

ಗಾಡ್ಗೀಳ್‌ಗೆ ವಿಶ್ವಸಂಸ್ಥೆಯ ಗೌರವ

ಪಶ್ಚಿಮಘಟ್ಟಗಳ ಜೀವವೈವಿಧ್ಯ ಕುರಿತ ಸೇವೆಗೆ 'ಚಾಂಪಿಯನ್ಸ್ ಆಫ್ ದಿ ಅರ್ಥ್' ಪ್ರಶಸ್ತಿ

ನವದೆಹಲಿ (ಪಿಟಿಐ): ಪರಿಸರವಾದಿ ಮಾಧವ ಗಾಡ್ಗೀಳ್ ಅವರನ್ನು ವಿಶ್ವಸಂಸ್ಥೆಯು 'ಚಾಂಪಿಯನ್ಸ್ ಆಫ್ ದಿ ಅರ್ಥ್' ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಪ್ರಶಸ್ತಿಗೆ ಆಯ್ಕೆಯಾಗಿರುವ ಆರು ಸಾಧಕರಲ್ಲಿ ಗಾಡ್ಗೀಳ್ ಅವರೂ ಒಬ್ಬರಾಗಿದ್ದಾರೆ.



ಮಾಧವ ಗಾಡ್ಗೀಳ್

ಪಶ್ಚಿಮ ಘಟ್ಟಗಳ ಜೀವ ವೈವಿಧ್ಯ ಕುರಿತು ಮಾಧವ ಗಾಡ್ಗೀಳ್ ಅವರು ಮಾಡಿರುವ ಕಾರ್ಯಗಳನ್ನು ಪರಿಗಣಿಸಿ ವಿಶ್ವಸಂಸ್ಥೆಯು ತನ್ನ ಈ ಅತ್ಯುನ್ನತ ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡಿದೆ.

ಜನಸಂಖ್ಯಾ ಒತ್ತಡ, ಹವಾಮಾನ ಬದಲಾವಣೆ ಹಾಗೂ ಅಭಿವೃದ್ಧಿ ಚಟುವಟಿಕೆಯಿಂದ ಪಶ್ಚಿಮ ಘಟ್ಟಗಳಲ್ಲಿ ಆಗುತ್ತಿರುವ ಬದಲಾವಣೆ ಕುರಿತು ಅಧ್ಯಯನ ಮಾಡಲು ರಚಿಸಲಾಗಿದ್ದ ಸಮಿತಿಯ ಅಧ್ಯಕ್ಷರಾಗಿ ಗಾಡ್ಗೀಳ್ ಕೆಲಸ ಮಾಡಿದ್ದರು. 2011ರಲ್ಲಿ ಈ ಸಮಿತಿಯು ಪಶ್ಚಿಮ ಘಟ್ಟಗಳನ್ನು ಪರಿಸರ ಸೂಕ್ಷ್ಮ ಪ್ರದೇಶಗಳೆಂದು ಘೋಷಿಸಬೇಕು ಎಂದು ವರದಿ ಸಲ್ಲಿಸಿತ್ತು.

ಪ್ರಶಸ್ತಿಗೆ ಪರಿಗಣಿಸಿದವರ ಪಟ್ಟಿಯಲ್ಲಿ ಇದ್ದ ಭಾರತದ ಏಕೈಕ ವ್ಯಕ್ತಿ ಗಾಡ್ಗೀಳ್ ಅವರಾಗಿದ್ದರು.

'ಪಶ್ಚಿಮ ಘಟ್ಟದಲ್ಲಿನ ವಸ್ತುಸ್ಥಿತಿಯ ಕುರಿತು ಸಮಿತಿಯು ಪ್ರಾಮಾಣಿಕ ವರದಿಯನ್ನು ನೀಡಿತ್ತು. ಈ ರೀತಿ ವರದಿ ಸಲ್ಲಿಸುವವರೇ ಈಗ ಕಡಿಮೆಯಾಗಿದ್ದಾರೆ. ಈ ವರದಿಯನ್ನು ಆಧರಿಸಿ ಜನರೇ ವಿವೇಚನೆ ಮಾಡಿ, ಚರ್ಚೆ ನಡೆಸಿ ಕ್ರಮ ತೆಗೆದುಕೊಳ್ಳಬೇಕು. ನಾನು ವರದಿ ಬರೆಯುತ್ತಿರುವಾಗಲೂ, ಅಷ್ಟು ನೇರಾನೇರ ಬರೆಯಬೇಡಿ ಎಂದು ತಡೆಯಲು ಯತ್ನಿಸಿದವರೂ ಇದ್ದರು' ಎಂದು 82 ವರ್ಷ ವಯಸ್ಸಿನ ಗಾಡ್ಗೀಳ್ ಪ್ರತಿಕ್ರಿಯಿಸಿದರು.

'ಪಶ್ಚಿಮ ಘಟ್ಟ ಕುರಿತು ಸಮಿತಿಯು ಸಲ್ಲಿಸಿದ್ದ ವರದಿಯನ್ನು ಭಾರತದ ಎಲ್ಲ ಭಾಷೆಗಳಿಗೂ ಅನುವಾದ ಮಾಡಿಸಿ, ಜನರಿಗೆ ತಲುಪಿಸುವಂತೆ ಮನವಿ ಮಾಡಿದ್ದೆ. ಆದರೆ, ಅದು ನೆರವೇರಲಿಲ್ಲ. ಈಗ ಸಾಮಾಜಿಕ ಮಾಧ್ಯಮದಿಂದಾಗಿ ಜನರಿಗೆ ಯಾವುದು ಸರಿ, ಯಾವುದು ತಪ್ಪು ಎಂದು ವಿವೇಚಿಸಲು ಪೂರಕವಾದ ಮಾಹಿತಿ ಲಭ್ಯವಾಗುತ್ತಿದೆ. ಇದು ಸಂತೋಷದ ವಿಷಯ' ಎಂದರು.

2012ರ ಜುಲೈನಲ್ಲಿ ಪಶ್ಚಿಮ ಘಟ್ಟಗಳನ್ನು ಸಂರಕ್ಷಿತ ಪ್ರದೇಶ ಎಂದು ಯುನೆಸ್ಕೊ ಘೋಷಿಸಿತು. 2013ರಲ್ಲಿ ರಾಕೆಟ್ ವಿಜ್ಞಾನಿ ಕಸ್ತೂರಿರಂಗನ್ ಅಧ್ಯಕ್ಷತೆಯಲ್ಲಿ ಅಲ್ಲಿನ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸುವಂತೆ ಉನ್ನತ ಮಟ್ಟದ ಸಮಿತಿಯನ್ನು ರಚಿಸಿತ್ತು. ಪಶ್ಚಿಮ ಘಟ್ಟಗಳ ಸಂರಕ್ಷಣೆಗಾಗಿ ವಹಿಸಬೇಕಾದ ಕ್ರಮಗಳನ್ನು ಕುರಿತ ಐದು ಕರಡು ಅಧಿಸೂಚನೆಗಳನ್ನು 2014ರಿಂದ 2024ರವರೆಗೆ ಕೇಂದ್ರ ಸರ್ಕಾರವು ಹೊರಡಿಸಿದೆ.

ಇದಕ್ಕೆ ರಾಜ್ಯಗಳಿಂದ ತಕರಾರು ಸಲ್ಲಿಕೆಯಾಗಬೇಕಿದ್ದು, ಆನಂತರವಷ್ಟೆ ಅಂತಿಮ ಅಧಿಸೂಚನೆ ಹೊರಡಿಸುವುದು ಸಾಧ್ಯವಾಗಲಿದೆ.

ಮಹಾರಾಷ್ಟ್ರ: ಮತಪತ್ರ ಬಳಸಲು ಗ್ರಾಮಸಭೆ ನಿರ್ಣಯ

ಪುಣೆ (ಪಿಟಿಐ): ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಕೋಳೆವಾಡಿಯಲ್ಲಿ ನಡೆದ ಗ್ರಾಮಸಭೆಯು, ಮುಂಬರುವ ಎಲ್ಲ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರದ (ಇವಿಎಂ) ಬದಲು ಮತಪತ್ರಗಳನ್ನು ಬಳಸಲು ನಿರ್ಣಯ ಅಂಗೀಕರಿಸಿದೆ.

ಈ ಮೂಲಕ, ಚುನಾವಣೆಗಳಲ್ಲಿ ಇವಿಎಂ ಬಳಕೆಯನ್ನು ನಿರ್ಬಂಧಿಸಿ ನಿರ್ಣಯ ಕೈಗೊಂಡಿರುವ ಮಹಾರಾಷ್ಟ್ರದ ಎರಡನೇ ಗ್ರಾಮ ಎನಿಸಿದೆ.

ಕೋಳೆವಾಡಿ ಗ್ರಾಮ ಪಂಚಾಯಿತಿಯು, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಹಿರಿಯ ನಾಯಕ ಪೃಥ್ವಿರಾಜ್ ಚೌಹಾನ್ ಅವರು ಈ ಹಿಂದೆ ಪ್ರತಿನಿಧಿಸುತ್ತಿದ್ದ ಕರಡ್ ವಿಧಾನಸಭಾ ಕ್ಷೇತ್ರದಲ್ಲಿದೆ. ಅವರು ಈ ವರ್ಷ ನವೆಂಬರ್‌ನಲ್ಲಿ ನಡೆದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಅತುಲ್ ಭೋಸಲೆ ಎದುರು 39 ಸಾವಿರಕ್ಕೂ ಅಧಿಕ ಮತಗಳ ಅಂತರದಲ್ಲಿ ಪರಾಭವಗೊಂಡಿದ್ದರು.

ನಿರ್ಣಯದ ಪ್ರತಿ ಸಿಕ್ಕಿಲ್ಲ– ಜಿಲ್ಲಾಧಿಕಾರಿ: 'ಚುನಾವಣೆಗಳಲ್ಲಿ ಇವಿಎಂ ಬದಲು ಮತಪತ್ರ ಬಳಸುವಂತೆ ಗ್ರಾಮಸಭೆಯಲ್ಲಿ ಅಂಗೀಕರಿಸಲಾದ ನಿರ್ಣಯದ ಪ್ರತಿ ಜಿಲ್ಲಾಡಳಿತ ಕಚೇರಿಗೆ ಬಂದಿಲ್ಲ. ಹೀಗಾಗಿ, ಈ ಬಗ್ಗೆ ಈಗಲೇ ಮಾತನಾಡುವುದು ಸೂಕ್ತವಲ್ಲ. ನಿರ್ಣಯದ ಪ್ರತಿ ಸಿಕ್ಕ ಬಳಿಕ ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಸತಾರಾ ಜಿಲ್ಲಾಧಿಕಾರಿ ಜಿತೇಂದ್ರ ಡೂಡಿ ಪ್ರತಿಕ್ರಿಯಿಸಿದ್ದಾರೆ.

42 ಮಂದಿಗೆ ಗಾಯ, 22 ವಾಹನಗಳಿಗೆ ಹಾನಿ

ಬಸ್ ಹರಿದು ಏಳು ಮಂದಿ ಸಾವು

ಮುಂಬೈ (ಪಿಟಿಐ): ಮುಂಬೈನ ಪಶ್ಚಿಮ ಕುರ್ಲಾದಲ್ಲಿ, ಬೃಹನ್ ಮುಂಬೈ ವಿದ್ಯುತ್ ಸರಬರಾಜು ಮತ್ತು ಸಾರಿಗೆ ಸಂಸ್ಥೆಯ (ಬೆಸ್ಟ್) ಬಸ್‌ವೊಂದು ಚಾಲಕನ ನಿಯಂತ್ರಣ ತಪ್ಪಿ ಪಾದಚಾರಿಗಳ ಮೇಲೆ ಹರಿದು 7 ಮಂದಿ ಮೃತಪಟ್ಟಿದ್ದಾರೆ. ಬಸ್ ಹಲವು ವಾಹನಗಳಿಗೆ ಡಿಕ್ಕಿ ಹೊಡೆದಿದೆ ಎಂದು ಅಧಿಕಾರಿಗಳು ತಿಳಿಸಿದರು.

ಎಸ್.ಜಿ ಬಾರ್ವೆ ಮಾರ್ಗದಲ್ಲಿ ಸೋಮವಾರ ರಾತ್ರಿ 9.30ರ ಸುಮಾರಿಗೆ ಅವಘಡ ಸಂಭವಿಸಿದೆ. 42 ಮಂದಿ ಗಾಯಗೊಂಡಿದ್ದು, ಅವರನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಬಸ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿತ್ತೇ ಎಂಬ ಬಗ್ಗೆ ತಜ್ಞರು ಪರಿಶೀಲಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ದುರಂತದ ಬಗ್ಗೆ ಸಂತಾಪ ವ್ಯಕ್ತಪಡಿಸಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು, ಮೃತರ ಕುಟುಂಬಸ್ಥರಿಗೆ ತಲಾ ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ. ಗಾಯಾಳುಗಳ ವೈದ್ಯಕೀಯ ವೆಚ್ಚವನ್ನು 'ಬೆಸ್ಟ್' ಸಂಸ್ಥೆ ಮತ್ತು ಮುಂಬೈ ಮಹಾನಗರ ಪಾಲಿಕೆ ಭರಿಸಲಿವೆ ಎಂದು ತಿಳಿಸಿದ್ದಾರೆ.

ಚಾಲಕನ ಬಂಧನ: ಬಸ್ ಚಾಲಕ ಸಂಜಯ್ ಮೋರೆಯನ್ನು ಪೊಲೀಸರು ಬಂಧಿಸಿದ್ದಾರೆ. ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್ ಮತ್ತು ಮೋಟಾರ್ ವಾಹನಗಳ ಕಾಯ್ದೆ ಅಡಿಯಲ್ಲಿ ಮೋರೆ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕೆಲಸ ಆರಂಭಿಸಿದ ದಿನವೇ ಮೃತ್ಯು

ಮುಂಬೈ (ಪಿಟಿಐ): ದುರಂತದಲ್ಲಿ ಮೃತಪಟ್ಟ 20 ವರ್ಷದ ಅಫ್ರೀನ್ ಶಾ, ಸೋಮವಾರವಷ್ಟೇ ಖಾಸಗಿ ಕಂಪನಿಯಲ್ಲಿ ಕೆಲಸ ಆರಂಭಿಸಿದ್ದರು.

ಮೊದಲ ದಿನದ ಕೆಲಸ ಮುಗಿಸಿ ವಾಪಸ್ ಮನೆಗೆ ಬರುವ ಮುನ್ನ ಆಟೊರಿಕ್ಷಾ ಸಿಗುತ್ತಿಲ್ಲ ಎಂದು ತಂದೆ ಅಬ್ದುಲ್ ಸಲೀಂ ಶಾ ಅವರಿಗೆ ಕರೆ ಮಾಡಿದ್ದರು. ಅದೇ ಕೊನೆ ಮತ್ತೆ ತಂದೆ ಸಲೀಂ ಅವರೊಂದಿಗೆ ಮಾತನಾಡಲೇ ಇಲ್ಲ.

'ರಾತ್ರಿ 9.54ಕ್ಕೆ ಮಗಳ ಫೋನ್‌ನಿಂದಲೇ ಕರೆ ಬಂದಿತ್ತು. ಆದರೆ ಅದು ಭಾಬಾ ಆಸ್ಪತ್ರೆಯ ಸಿಬ್ಬಂದಿಯ ಕರೆಯಾಗಿತ್ತು' ಎಂದು ಸಲೀಂ ನೋವಿನಿಂದ ಹೇಳಿದರು.

ಬರ ಪರಿಹಾರ: ಚರ್ಚಿಸಿ ಬಗೆಹರಿಸಿಕೊಳ್ಳಿ

ಎನ್‌ಡಿಆರ್‌ಎಫ್ ನೆರವು: ಕೇಂದ್ರ, ಕರ್ನಾಟಕ ಸರ್ಕಾರಗಳಿಗೆ ಸುಪ್ರೀಂ ಸಲಹೆ

ನವದೆಹಲಿ (ಪಿಟಿಐ): ಬರ ಪರಿಸ್ಥಿತಿ ನಿರ್ವಹಣೆಗೆ ರಾಷ್ಟ್ರೀಯ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ (ಎನ್‌ಡಿಆರ್‌ಎಫ್) ಹಣ ಬಿಡುಗಡೆ ಕುರಿತ ವಿವಾದವನ್ನು ಕೇಂದ್ರ ಮತ್ತು ಕರ್ನಾಟಕ ಸರ್ಕಾರಗಳೇ ಬಗೆಹರಿಸಿಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರು, ಈ ಕುರಿತು ಪ್ರತಿಕ್ರಿಯೆ ದಾಖಲಿಸಲು ಕೆಲ ಸಮಯ ಬೇಕು ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ.ವಿಶ್ವನಾಥನ್ ಅವರಿದ್ದ ಪೀಠಕ್ಕೆ ತಿಳಿಸಿದರು.

'ನೀವೇ ಬಗೆಹರಿಸಿಕೊಳ್ಳಬೇಕು' ಎಂದು ಈ ಸಂದರ್ಭದಲ್ಲಿ ಪೀಠ ಅಭಿಪ್ರಾಯಪಟ್ಟಿತು.

ಎನ್‌ಡಿಆರ್‌ಎಫ್‌ನಿಂದ ಹಣ ಬಿಡುಗಡೆ ಕುರಿತು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದೆ.

'ಇದುವರೆಗೂ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ' ಎಂದು ಪೀಠ ಪ್ರಶ್ನಿಸಿತು. ಕರ್ನಾಟಕವನ್ನು ಪ್ರತಿನಿಧಿಸಿದ್ದ ವಕೀಲರು, 'ಕರ್ನಾಟಕವು ₹18,171 ಕೋಟಿ ಬಿಡುಗಡೆಗೆ ಮನವಿ ಸಲ್ಲಿಸಿದೆ. ಕೇಂದ್ರ ₹3,819 ಕೋಟಿ ಬಿಡುಗಡೆ ಮಾಡಿದೆ' ಎಂದರು.

ಈ ಕುರಿತ ವಿಚಾರಣೆಯನ್ನು ಪೀಠವು ಜನವರಿ ತಿಂಗಳಿಗೆ ಮುಂದೂಡಿತು. ಏಪ್ರಿಲ್ 29ರಂದು ವಿಚಾರಣೆ ವೇಳೆ ಕರ್ನಾಟಕದಲ್ಲಿ ಬರಪರಿಸ್ಥಿತಿ ನಿರ್ವಹಣೆಗೆ ಒಟ್ಟು ₹3,400 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿತ್ತು.

ಬರ ಪರಿಸ್ಥಿತಿ ನಿರ್ವಹಣೆಗೆ ಎನ್‌ಡಿಆರ್‌ಎಫ್‌ನಿಂದ ಪೂರ್ಣ ಆರ್ಥಿಕ ನೆರವು ಬಿಡುಗಡೆ ಮಾಡದ ಕೇಂದ್ರ ನಿಲುವು ಸಂವಿಧಾನದ ವಿಧಿ 14 ಮತ್ತು 21 ಅನ್ವಯ ರಾಜ್ಯದ ಜನರ ಮೂಲಭೂತ ಹಕ್ಕಿನ ಉಲ್ಲಂಘನೆ ಎಂದು ಕರ್ನಾಟಕ ತನ್ನ ಅರ್ಜಿಯಲ್ಲಿ ಪ್ರತಿಪಾದಿಸಿತ್ತು.

ರಾಜ್ಯದಲ್ಲಿ ಗಂಭೀರವಾದ ಬರ ಪರಿಸ್ಥಿತಿ ಇದೆ. 2023ರ ಮುಂಗಾರು ಹಂಗಾಮಿನಲ್ಲಿ ಜನರ ಬದುಕಿನ ಮೇಲೆ ಗಂಭೀರ ಪರಿಣಾಮವಾಗಿದೆ. 236 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳು ಬರಪೀಡಿತವಾಗಿವೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಿತ್ತು.

'196 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ಮುಂಗಾರು ಹಂಗಾಮಿನಲ್ಲಿ 48ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ನಷ್ಟ ಸಂಭವಿಸಿದ್ದು, ಒಟ್ಟಾರೆ ₹ 35,162 ಕೋಟಿ ನಷ್ಟ ಸಂಭವಿಸಿದೆ' ಎಂದು ವಕೀಲ ಡಿ.ಎಲ್.ಚಿದಾನಂದ ಸಲ್ಲಿಸಿದ್ದ ಅರ್ಜಿಯಲ್ಲಿ ತಿಳಿಸಲಾಗಿತ್ತು.

ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಹೇಳಿಕೆ

'ಮಮತಾ 'ಇಂಡಿಯಾ' ಮುನ್ನಡೆಸಲಿ'

ಪಟ್ನಾ (ಪಿಟಿಐ): ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ವಿಪಕ್ಷಗಳ ಒಕ್ಕೂಟ 'ಇಂಡಿಯಾ'ವನ್ನು ಮುನ್ನಡೆಸಬೇಕು ಎಂದು ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಮಂಗಳವಾರ ಹೇಳಿದರು.

ಬಿಹಾರ ವಿಧಾನಸಭೆ ಚುನಾವಣೆಗೆ ಒಂದು ವರ್ಷಕ್ಕೂ ಕಡಿಮೆ ಸಮಯ ಇರುವಾಗಲೇ ಕಾಂಗ್ರೆಸ್–ಆರ್‌ಜೆಡಿ ಮಧ್ಯೆ ಬಿರುಕು ಮೂಡಿರುವುದು ಈ ಮೂಲಕ ಬಹಿರಂಗವಾಗಿದೆ.

ಲಾಲು ಪ್ರಸಾದ್

ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಲಾಲು ಪ್ರಸಾದ್, 'ಹೌದು, ಮಮತಾ ಬ್ಯಾನರ್ಜಿ ಅವರು 'ಇಂಡಿಯಾ'ವನ್ನು ಮುನ್ನಡೆಸಬೇಕು. ಕಾಂಗ್ರೆಸ್‌ನ ನಿಲುವಿಗೆ ಮಹತ್ವ ಕೊಡಬೇಕಿಲ್ಲ. ಮಮತಾ ಅವರಿಗೆ ನಾಯಕತ್ವ ನೀಡಬೇಕು' ಎಂದರು.

ಬಿಹಾರದ ಕಾಂಗ್ರೆಸ್ ಉಸ್ತುವಾರಿ ಶಹನವಾಜ್ ಆಲಂ ಅವರು, 'ಮಹಾಗಟಬಂಧನ್' ಮೈತ್ರಿಯಲ್ಲಿ ಕಿರಿಯ ಸಹೋದರನ ಪಾತ್ರ ವಹಿಸುವ ಇರಾದೆ ಪಕ್ಷಕ್ಕೆ ಇಲ್ಲ ಎಂದು ಸೂಚ್ಯವಾಗಿ ಹೇಳಿದ ಬೆನ್ನಲ್ಲೇ ಲಾಲು ಅವರು ಈ ಹೇಳಿಕೆ ನೀಡಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಆಲಂ ಅವರು, 'ರಾಜಕೀಯದಲ್ಲಿ ಯಾರೂ ದೊಡ್ಡವರಲ್ಲ, ಯಾರೂ ಸಣ್ಣವರಲ್ಲ. ವಿಧಾನಸಭೆ ಚುನಾವಣೆಯಲ್ಲಿ ಪ್ರತಿಯೊಂದು ಪಕ್ಷವು ಸ್ಪರ್ಧಿಸುವ ಸೀಟುಗಳ ಸಂಖ್ಯೆಯು ಲೋಕಸಭೆ ಚುನಾವಣೆಯ ಸ್ಟ್ರೈಕ್ ರೇಟ್ ಸೇರಿದಂತೆ ಹಲವು ಅಂಶಗಳನ್ನು ಆಧರಿಸಿರುತ್ತದೆ' ಎಂದು ಹೇಳಿದ್ದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಆರ್‌ಜೆಡಿ ಪಕ್ಷವು ಸ್ಪರ್ಧಿಸಿದ್ದ 23 ಕ್ಷೇತ್ರಗಳ ಪೈಕಿ ನಾಲ್ಕರಲ್ಲಿ ಮಾತ್ರ ಗೆಲುವು ಪಡೆದಿತ್ತು.

'ಇಂಡಿಯಾ' ಮುಖಂಡರ ಮಾತುಗಳಿಗೆ ಪ್ರತಿಕ್ರಿಯೆ ಬೇಡ: ರಾಹುಲ್ ಸೂಚನೆ

ನವದೆಹಲಿ (ಪಿಟಿಐ): 'ಇಂಡಿಯಾ'ದ ಮಧ್ಯಮ ಹಾಗೂ ಕೆಳ ಹಂತಗಳ ಮುಖಂಡರು ಆಡುವ ಮಾತುಗಳಿಗೆ ಪ್ರತಿಕ್ರಿಯೆ ನೀಡದೆ ಇರುವಂತೆ ಕಾಂಗ್ರೆಸ್ಸಿನ ಲೋಕಸಭಾ ಸದಸ್ಯರಿಗೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು 'ಇಂಡಿಯಾ' ಮೈತ್ರಿಕೂಟದ ನಾಯಕತ್ವ ವಹಿಸಿಕೊಳ್ಳಬೇಕು ಎಂದು ಟಿಎಂಸಿ ಮುಖಂಡರು ಆಗ್ರಹಿಸುತ್ತಿರುವ ಸಂದರ್ಭದಲ್ಲಿ ರಾಹುಲ್ ಅವರು ಈ ಸೂಚನೆ ನೀಡಿದ್ದಾರೆ.

ಕಾಂಗ್ರೆಸ್ಸಿನ ಲೋಕಸಭಾ ಸದಸ್ಯರ ಜೊತೆ ಸಭೆ ನಡೆಸಿದ ರಾಹುಲ್ ಅವರು, ಕಲಾಪಕ್ಕೂ ಮೊದಲು ಪಕ್ಷ ನಡೆಸುವ ಪ್ರತಿಭಟನೆಗಳಲ್ಲಿ ಎಲ್ಲರೂ ಭಾಗಿಯಾಗಬೇಕು ಎಂದು ಸೂಚಿಸಿದರು. ಅದರಲ್ಲೂ ಮುಖ್ಯವಾಗಿ, ಕಾಂಗ್ರೆಸ್ ಅಧ್ಯಕ್ಷರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾಗ, ಸಂಸದರೆಲ್ಲ ಹಾಜರಿರಬೇಕು ಎಂದರು.

ಅದಾನಿ ವಿಚಾರವಾಗಿ ಕಾಂಗ್ರೆಸ್ ನಡೆಸಿರುವ ಪ್ರತಿಭಟನೆಯು ಸರ್ಕಾರದಲ್ಲಿ ಭೀತಿ ಸೃಷ್ಟಿಸಿದೆ. ಜನಪರವಾದ ಸಂಗತಿಗಳನ್ನು ಪ್ರಸ್ತಾಪಿಸುವುದನ್ನು ಕಾಂಗ್ರೆಸ್ಸಿಗರು ಮುಂದುವರಿಸಬೇಕು ಎಂದು ರಾಹುಲ್ ಸೂಚನೆ ನೀಡಿರುವುದಾಗಿ ಮೂಲಗಳು ಹೇಳಿವೆ.

ಆಟೊ ಚಾಲಕರಿಗೆ ₹10 ಲಕ್ಷ ವಿಮೆ: ಕೇಜ್ರಿವಾಲ್

ನವದೆಹಲಿ: ರಾಷ್ಟ್ರ ರಾಜಧಾನಿಯ ಆಟೊರಿಕ್ಷಾ ಚಾಲಕರಿಗೆ ₹10 ಲಕ್ಷ ವಿಮೆ ನೀಡುವುದಾಗಿ ಎಎಪಿ ಅಧ್ಯಕ್ಷ ಅರವಿಂದ ಕೇಜ್ರಿವಾಲ್ ಘೋಷಿಸಿದ್ದಾರೆ. ದೆಹಲಿ ವಿಧಾನಸಭಾ ಚುನಾವಣೆ ಹೊತ್ತಿನಲ್ಲೇ ಈ ಭರವಸೆ ನೀಡಿದ್ದಾರೆ.

ಕೊಂಡ್ಲಿ ಕ್ಷೇತ್ರದಲ್ಲಿ ಆಟೊ ಚಾಲಕರ ಕುಟುಂಬದವರೊಂದಿಗೆ ಭೋಜನ ಸೇವಿಸಿದ ಅವರು, ಆಟೊ ಚಾಲಕರ ಪುತ್ರಿಯರ ವಿವಾಹಕ್ಕೆ ₹1 ಲಕ್ಷ ನೆರವು ನೀಡುವುದಾಗಿಯೂ ಭರವಸೆ ನೀಡಿದರು. ಆಟೊ ಚಾಲಕರಿಗೆ ಸಮವಸ್ತ್ರ ಭತ್ಯೆಯಾಗಿ ವರ್ಷಕ್ಕೆ ಎರಡು ಬಾರಿ ₹2,500 ನೀಡಲಾಗುವುದು. ಅಲ್ಲದೆ, ಅವರ ಮಕ್ಕಳಿಗೆ ಉಚಿತ ತರಬೇತಿ ಮತ್ತು 'ಪೂಚೊ' ಆ್ಯಪ್‌ಗೆ ಮರುಚಾಲನೆ ನೀಡುವುದಾಗಿಯೂ ಕೇಜ್ರಿವಾಲ್ ಭರವಸೆ ಕೊಟ್ಟರು.

ನೋಂದಾಯಿತ ಆಟೊ ಚಾಲಕರ ಮೊಬೈಲ್ ಸಂಖ್ಯೆಗಳ ದತ್ತಾಂಶವನ್ನು ದೆಹಲಿ ಇಂಟಿಗ್ರೇಟೆಡ್ ಮಲ್ಟಿ-ಮಾಡೆಲ್ ಟ್ರಾನ್ಸಿಟ್ ಸಿಸ್ಟಮ್ ಅಭಿವೃದ್ಧಿಪಡಿಸಿದ್ದು, ಈ ಆ್ಯಪ್ ಮೂಲಕ ಆಟೊ ಚಾಲಕರ ಮೊಬೈಲ್ ಸಂಖ್ಯೆ ಪಡೆದು ಪ್ರಯಾಣವನ್ನು ಬುಕ್ ಮಾಡಬಹುದು.

'ಬಿಜೆಪಿಯೊಂದಿಗೆ ಚುನಾವಣಾ ಆಯೋಗ ಹೊಂದಾಣಿಕೆ'

ಚುನಾವಣಾ ಆಯೋಗವು 'ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಿದೆ' ಎಂದು ಎಎಪಿಯ ಹಿರಿಯ ನಾಯಕ ಸಂಜಯ್ ಸಿಂಗ್ ಆರೋಪಿಸಿದ್ದಾರೆ.

ಎಎಪಿ ಗೆಲುವಿಗೆ ಸಹಾಯವಾಗುತ್ತಿರುವ ಬೂತ್‌ಗಳಲ್ಲೇ ಸುಮಾರು 3,800 ಮತದಾರರ ಹೆಸರುಗಳನ್ನು ಅಳಿಸಿ ಹಾಕಲು ಅರ್ಜಿ ಸಲ್ಲಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಮತದಾರರ ಪಟ್ಟಿಯಿಂದ ಹಲವು ಮತದಾರರ ಹೆಸರುಗಳನ್ನು ಅಳಿಸಿ ಹಾಕಲಾಗಿದೆ ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಮತ್ತು ಪಕ್ಷದ ಇತರ ನಾಯಕರು ಸಹ ಆರೋಪಿಸಿದ್ದರು.

ಎಎಪಿಯ 10 ಶಾಸಕರ ಮೇಲೆ ಬಿಜೆಪಿ ಆರೋಪಪಟ್ಟಿ

ಸರಿಯಾಗಿ ಕಾರ್ಯನಿರ್ವಹಣೆ ಮಾಡದೆ ತಮ್ಮ ಕ್ಷೇತ್ರಗಳಲ್ಲಿ ಆಡಳಿತ ವಿರೋಧಿ ಅಲೆ ಎದುರಿಸುತ್ತಿದ್ದಾರೆ ಎಂದು ಎಎಪಿಯ 10 ಶಾಸಕರ ಮೇಲೆ ಬಿಜೆಪಿ ಆರೋಪ ಹೊರಿಸಿದೆ.

'ಎಎಪಿ ಸರ್ಕಾರದ ವೈಫಲ್ಯಗಳ ಪಟ್ಟಿಯನ್ನು ಬಿಡುಗಡೆ ಮಾಡಿ ಅವರವರ ಕ್ಷೇತ್ರಗಳಲ್ಲಿ ಜನರಿಗೆ ಹಂಚಲಾಗುತ್ತದೆ' ಬಿಜೆಪಿ ಆರೋಪಪಟ್ಟಿ ಸಮಿತಿಯ ನೇತೃತ್ವ ವಹಿಸಿರುವ ವಿಜೇಂದರ್ ಗುಪ್ತ ತಿಳಿಸಿದ್ದಾರೆ.

ವಿಶ್ವ ಚೆಸ್: ರೋಚಕ ಅಂತ್ಯದತ್ತ ಗುಕೇಶ್– ಲಿರೆನ್ ಹಣಾಹಣಿ

ನಿರ್ಣಾಯಕ ಹಂತ ತಲುಪಿದ ಫೈನಲ್

ಸಿಂಗಪುರ (ಪಿಟಿಐ): ಕೊನೆಯ ಹಂತದಲ್ಲಿ ದೊರೆತ ಒಂದು ಪಾಯಿಂಟ್‌ನ ಅಮೂಲ್ಯ ಮುನ್ನಡೆ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರ ಕೈತಪ್ಪಿರಬಹುದು. ಆದರೆ ಛಲದ ಆಟಕ್ಕೆ ಹೆಸರಾಗಿರುವ ಗುಕೇಶ್ ಬುಧವಾರ ನಡೆಯಲಿರುವ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ 13ನೇ ಪಂದ್ಯದಲ್ಲಿ ಚೀನಾದ ಡಿಂಗ್ ಲಿರೆನ್ ವಿರುದ್ಧ ಗೆಲುವಿಗೆ ತಮ್ಮೆಲ್ಲಾ ಸಾಮರ್ಥ್ಯ ಬಳಸುವುದು ಖಚಿತ.

ಗುಕೇಶ್

ಲಿರೆನ್

ನಿರೀಕ್ಷೆ ಮೀರಿ ಈ ವಿಶ್ವ ಚಾಂಪಿಯನ್‌ಷಿಪ್ ಫೈನಲ್ 12ನೇ ಪಂದ್ಯಗಳಾದರೂ ಸಮಬಲದಲ್ಲಿ ಸಾಗಿದೆ. 18 ವರ್ಷ ವಯಸ್ಸಿನ ಚಾಲೆಂಜರ್ ಗುಕೇಶ್ ಮತ್ತು 32 ವರ್ಷ ವಯಸ್ಸಿನ ಹಾಲಿ ಚಾಂಪಿಯನ್ ಲಿರೆನ್ ತಲಾ 6–6 ಅಂಕ ಕಲೆಹಾಕಿದ್ದಾರೆ. ಹೆಚ್ಚು ಸಮಯ ಮುನ್ನಡೆ ಉಳಿಸಿಕೊಳ್ಳುವಲ್ಲಿ ಇಬ್ಬರಲ್ಲಿ ಯಾರೂ ಯಶಸ್ವಿ ಆಗಿಲ್ಲ.

ಮೊದಲು 7.5 ಅಂಕ ತಲುಪಿದವರು ವಿಶ್ವ ಚಾಂಪಿಯನ್ ಆಗಲಿದ್ದಾರೆ.

ಮಂಗಳವಾರ ಚಾಂಪಿಯನ್‌ಷಿಪ್‌ನ ನಾಲ್ಕನೇ ವಿಶ್ರಾಂತಿ ದಿನವಾಗಿತ್ತು. ಇನ್ನೆರಡು ಪಂದ್ಯಗಳು ಉಳಿದಿವೆ. ಮೊದಲ ಪಂದ್ಯ ಲಿರೆನ್ ಗೆದ್ದರೂ, ಮೂರನೇ ಪಂದ್ಯದಲ್ಲೇ ಗುಕೇಶ್ ಸಮ ಮಾಡಿಕೊಂಡಿದ್ದರು. ನಂತರ 11ನೇ ಪಂದ್ಯದವರೆಗೆ ಸ್ಕೋರ್ ಸಮಬಲವಾಗಿತ್ತು. 11ನೇ ಪಂದ್ಯ ಗೆದ್ದ ಗುಕೇಶ್ ಗೆದ್ದು 6–5ರಲ್ಲಿ ಮಹತ್ವದ ಮುನ್ನಡೆ ಪಡೆದಾಗ ಅದನ್ನು ಉಳಿಸಿಕೊಳ್ಳ ಬಹುದೆಂದು ಕಾಣಿಸಿತ್ತು. ಆದರೆ ಮರು ಪಂದ್ಯದಲ್ಲೇ ಗೆದ್ದ ಲಿರೆನ್ ತಮ್ಮಲ್ಲಿನ್ನೂ ಚಾಂಪಿಯನ್ ಮಟ್ಟದ ಆಟ ಉಳಿದಿದೆ ಎಂಬುದನ್ನು ಸಾರಿದರು.

12ನೇ ಸುತ್ತಿನಲ್ಲಿ ಸೋತಿರುವುದು ಗುಕೇಶ್‌ಗೆ ಸ್ವಲ್ಪ ಆಘಾತ ಮೂಡಿಸಿದೆ. 13ನೇ ಪಂದ್ಯದಲ್ಲಿ ಬಿಳಿ ಕಾಯಿಗಳಲ್ಲಿ ಕೊನೆಯ ಬಾರಿ ಆಡುವ ಅವಕಾಶ ಪಡೆದಿರುವ ಗುಕೇಶ್ ಆಕ್ರಮಣದ ಆಟಕ್ಕೆ ಇಳಿಯಬಹುದು ಎನ್ನುವುದು ಹಲವು ಚೆಸ್ ಪರಿಣತರ ಭಾವನೆ.

ಸೋಮವಾರದ ಆ ಪಂದ್ಯದಲ್ಲಿ ಗುಕೇಶ್ ಮೊದಲ ಬಾರಿ ಹೊಸ ಯೋಜನೆಗೆ ಇಳಿದು ಕೈಸುಟ್ಟುಕೊಂಡರು. ಹಿಂದಿನ ಪಂದ್ಯ ಸೋತರೂ, ತಕ್ಷಣವೇ ಸಾವರಿಸಿಕೊಂಡು ಲಿರೆನ್ ಪಂದ್ಯ ಗೆದ್ದಿರುವುದು ಅವರ ಹೋರಾಟದ ಮನೋಭಾವಕ್ಕೆ ನಿದರ್ಶನ.

‘ಪೊಷಿಷನಲ್ ಚೆಸ್’ನಲ್ಲಿ ಲಿರೆನ್ ಮಿಂಚಿಸಿದರು. ಈ ಮಾದರಿಯಲ್ಲಿ (ಪೊಸಿಷನಲ್ ಚೆಸ್) ತಂತ್ರ ಹೆಣೆಯುವುದಕ್ಕಿಂತ ಹೆಚ್ಚಾಗಿ ಚೆಸ್ ಕಾಯಿಗಳ ಚಲನೆಗೆ (ಸ್ಪೇಸ್) ಸ್ಥಳಾವಕಾಶ ಕಲ್ಪಿಸುವುದು, ಕಾಲಾಳುಗಳ ಸಂರಚನೆ (ಪಾನ್ ಸ್ಟ್ರಕ್ಚರ್), ರಾಜನ ಸುರಕ್ಷತೆ ಇವುಗಳು ಪ್ರಮುಖವಾಗುತ್ತವೆ.

ರಷ್ಯಾದ ಅನತೋಲಿ ಕಾರ್ಪೋವ್ ಈ ರೀತಿಯ ಆಟಕ್ಕೆ ಹೆಸರುವಾಸಿಯಾಗಿದ್ದರು. 12ನೇ ಪಂದ್ಯದಲ್ಲಿ ಲಿರೆನ್ ಕರಾರುವಾಕ್ ನಡೆಗಳನ್ನಿರಿಸಿದರೆ, ಗುಕೇಶ್ ಈ ಹಿಂದಿನ ಪಂದ್ಯಗಳಲ್ಲಿ ಆಡಿದ ಆಟಗಾರನಂತೆ ಕಾಣಿಸಲಿಲ್ಲ.

ಲಿರೆನ್ ತಿರುಗಿಬಿದ್ದ ರೀತಿಗಿಂತ ಅವರು ಆಡಿದ ರೀತಿ ಮೆಚ್ಚುಗೆಗೆ ಪಾತ್ರವಾಯಿತು. ‘ಇದು ಗಮನಸೆಳೆಯುವಂಥ ಆಟ’ ಎಂದು ಐದು ಬಾರಿಯ ಚಾಂಪಿಯನ್ ವಿಶ್ವನಾಥನ್ ಆನಂದ್ ಬಣ್ಣಿಸಿದರು. ‘ಇತ್ತೀಚಿನ ದಿನಗಳಲ್ಲೇ ನಾನು ಆಡಿದ ಶ್ರೇಷ್ಠ ಆಟ ಇದಾಗಿತ್ತು’ ಎಂದು ಸ್ವತಃ ಲಿರೆನ್ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು.

ಎರಡು ಪಂದ್ಯ ಮಾತ್ರ ಇದ್ದು, ಫೈನಲ್ ಸಂಭವನೀಯ ಟೈಬ್ರೇಕರ್‌ಗೆ ಸಾಗುವಂತೆ ಕಾಣುತ್ತಿದೆ. ಈಗ ತಕ್ಕಡಿ ಲಿರೆನ್ ಕಡೆ ಸ್ವಲ್ಪ ಹೆಚ್ಚು ತೂಗುತ್ತಿದೆ ಎನ್ನುವ ಅಭಿಮತ ಅಮೆರಿಕದ ಅನುಭವಿ ಆಟಗಾರ ಹಿಕಾರು ನಕಾಮುರಾ ಮತ್ತು ವಿಶ್ವದ ಅಗ್ರ ಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರದು.14 ಪಂದ್ಯಗಳ ನಂತರವೂ ಸ್ಕೋರ್ ಸಮಬಲಗೊಂಡಲ್ಲಿ ಟೈಬ್ರೇಕ್ ಪಂದ್ಯ ಗಳನ್ನು ಆಡಲಾಗುವುದು. ಫೈನಲ್ ಹಣಾಹಣಿ ₹21 ಕೋಟಿ ಬಹುಮಾನ ಮೊತ್ತ ಹೊಂದಿದೆ.

ಪಂದ್ಯ ಆರಂಭ: ಮಧ್ಯಾಹ್ನ 2.30

ಹಾಕಿ: ಭಾರತಕ್ಕೆ ಇಂದು ಚೀನಾ ಸವಾಲು

ಮಸ್ಕತ್ (ಪಿಟಿಐ): ಗೆಲುವಿನ ಓಟ ಮುಂದುವರಿಸಿರುವ ಹಾಲಿ ಚಾಂಪಿಯನ್ ಭಾರತ ತಂಡವು ಬುಧವಾರ ಇಲ್ಲಿ ನಡೆಯುವ ಮಹಿಳಾ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಚೀನಾ ತಂಡವನ್ನು ಎದುರಿಸಲಿದೆ.

ಐದು ತಂಡಗಳಿರುವ ‘ಎ’ ಗುಂಪಿನಲ್ಲಿ ಭಾರತ 13–1 ಗೋಲುಗಳಿಂದ ಬಾಂಗ್ಲಾದೇಶ ತಂಡವನ್ನು ಮಣಿಸಿ ಶುಭಾರಂಭ ಮಾಡಿತ್ತು. ಎರಡನೇ ಪಂದ್ಯದಲ್ಲಿ 5–0 ಗೋಲುಗಳಿಂದ ಮಲೇಷ್ಯಾ ತಂಡವನ್ನು ಮಣಿಸಿ, ಇದೀಗ ಬಲಿಷ್ಠ ಚೀನಾದ ಸವಾಲನ್ನು ಎದುರಿಸಲು ಸಜ್ಜಾಗಿದೆ.

ಮೊದಲ ಪಂದ್ಯದಲ್ಲಿ ಭಾರತದ ಆಟಗಾರ್ತಿಯರು ಗೋಲಿನ ಸುರಿಮಳೆಗೈದಿದ್ದರು. ಮುಮ್ತಾಜ್ ಖಾನ್ ನಾಲ್ಕು ಗೋಲು ಗಳಿಸಿದ್ದರೆ, ಕನಿಕಾ ಸಿವಾಚ್ ಮತ್ತು ದೀಪಿಕಾ ಹ್ಯಾಟ್ರಿಕ್ ಸಾಧನೆ ಮಾಡಿದ್ದರು. ಎರಡನೇ ಪಂದ್ಯದಲ್ಲಿ ದೀಪಿಕಾ ಮತ್ತೆ ಪರಾಕ್ರಮ ಮೆರೆದು, ಹ್ಯಾಟ್ರಿಕ್ ಗೋಲು ಗಳಿಸಿದ್ದರು.ಚೀನಾ ತಂಡ ಆಡಿರುವ ಎರಡೂ ಪಂದ್ಯಗಳನ್ನು ಗೆದ್ದುಕೊಂಡಿದೆ. 19–0 ಯಿಂದ ಬಾಂಗ್ಲಾದೇಶದ ವಿರುದ್ಧ; 8–0ಯಿಂದ ಥಾಯ್ಲೆಂಡ್ ವಿರುದ್ಧ ಜಯ ಸಾಧಿಸಿ 6 ಅಂಕಗಳೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ಅಷ್ಟೇ ಅಂಕ ಹೊಂದಿರುವ ಭಾರತ ಎರಡನೇ ಸ್ಥಾನದಲ್ಲಿದೆ.

ಫಿಫಾ ವಿಶ್ವಕಪ್: ಆತಿಥ್ಯ ಇಂದು ನಿರ್ಧಾರ

ಲೂಸಾನ್ (ಎಎಫ್‌ಪಿ): 2030ರ ಫಿಫಾ ವಿಶ್ವಕಪ್ ಟೂರ್ನಿಯು ಮೊರಾಕೊ, ಸ್ಪೇನ್ ಮತ್ತು ಪೋರ್ಚುಗಲ್ ರಾಷ್ಟ್ರಗಳ ಜಂಟಿ ಆತಿಥ್ಯದಲ್ಲಿ ಹಾಗೂ 2034ರ ಟೂರ್ನಿಯು ಸೌದಿ ಅರೇಬಿಯಾದ ಆತಿಥ್ಯದಲ್ಲಿ ನಡೆಯುವುದು ಬಹುತೇಕ ಖಚಿತವಾಗಿದೆ. ಬುಧವಾರ ನಡೆಯುವ ಫಿಫಾ ಕಾಂಗ್ರೆಸ್‌ನ ವರ್ಚುವಲ್ ಸಭೆಯಲ್ಲಿ ಎರಡು ಆವೃತ್ತಿಗಳ ಆತಿಥ್ಯದ ಹಕ್ಕುಗಳು ಅಂತಿಮಗೊಳ್ಳಲಿದೆ.

ಸಾಮಾನ್ಯವಾಗಿ ಮತದಾನದ ಮೂಲಕ ಅದು ನಿರ್ಧಾರವಾಗುತ್ತದೆ. ಆದರೆ, ಯಾವುದೇ ಪ್ರತಿಸ್ಪರ್ಧಿ ಇಲ್ಲದ ಕಾರಣ ಫಿಫಾಗೆ ಸಲ್ಲಿಕೆಯಾಗಿರುವ ಏಕಮಾತ್ರ ಬಿಡ್‌ಗಳಿಗೆ ಅನುಮೋದನೆ ದೊರೆಯಲಿದೆ. ಉರುಗ್ವೆಯಲ್ಲಿ ಮೊದಲ ವಿಶ್ವಕಪ್ (1930) ನಡೆದು ನೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ 2030ರ ಟೂರ್ನಿಯ ತಲಾ ಒಂದು ಪಂದ್ಯಗಳು ಉರುಗ್ವೆ, ಅರ್ಜೆಂಟೀನಾ ಮತ್ತು ಪೆರುಗ್ವೆಯಲ್ಲಿ ಆಯೋಜನೆಗೊಳ್ಳಲಿವೆ.

ಚೀನಾ ಎದುರು ಸೋಲು; ಭಾರತಕ್ಕೆ ಆರನೇ ಸ್ಥಾನ

ನವದೆಹಲಿ (ಪಿಟಿಐ): ಆತಿಥೇಯ ಭಾರತ ತಂಡ, ಏಷ್ಯನ್ ಮಹಿಳಾ ಹ್ಯಾಂಡ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಚೀನಾ ಎದುರು 30–41ರಲ್ಲಿ ಸೋತು ಆರನೇ ಸ್ಥಾನ ಗಳಿಸಿತು. ಆದರೆ ಈ ಚಾಂಪಿಯನ್‌ಷಿಪ್ ಇತಿಹಾಸದಲ್ಲಿ ಭಾರತದ ಶ್ರೇಷ್ಠ ಸಾಧನೆಯೆನಿಸಿತು.

ಐದು ಮತ್ತು ಆರನೇ ಸ್ಥಾನ ನಿರ್ಧರಿಸಲು ನಡೆದ ಪಂದ್ಯದಲ್ಲಿ ಭಾರತ ತಂಡವು, ಹತ್ತು ಬಾರಿ ಬೆಳ್ಳಿ ಗೆದ್ದಿರುವ ಚೀನಾ ತಂಡಕ್ಕೆ ಮಣಿಯುವ ಮೊದಲು ಪ್ರಬಲ ಪೈಪೋಟಿ ನೀಡಿತು.

ಜಪಾನ್‌ಗೆ ಪ್ರಶಸ್ತಿ ಜಪಾನ್ ತಂಡ ತೀವ್ರ ಹೋರಾಟದ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ದಕ್ಷಿಣ ಕೊರಿಯಾಕ್ಕೆ ಆಘಾತ ನೀಡಿ ಪ್ರಶಸ್ತಿ ತನ್ನದಾಗಿಸಿಕೊಂಡಿತು. ವಿರಾಮದ ವೇಳೆ 9–12 ರಿಂದ ಹಿಂದೆ ಬಿದ್ದಿದ್ದ ಜಪಾನ್ ನಂತರ ಉತ್ತಮವಾಗಿ ಚೇತರಿಸಿ 25–24ರಲ್ಲಿ ಒಂದು ಗೋಲಿನ ರೋಚಕ ಜಯ ಪಡೆಯಿತು.

ದಕ್ಷಿಣ ಕೊರಿಯಾದ ಸತತ ಏಳು ಪ್ರಶಸ್ತಿಗಳ ಸರಪಣಿ ಮುರಿಯಿತು. ಜಪಾನ್ ಎರಡನೇ ಬಾರಿ ಚಾಂಪಿಯನ್ ಆಯಿತು.

ಇದಕ್ಕೆ ಮೊದಲು ಕಜಕಸ್ತಾನ ಎರಡನೇ ಬಾರಿ ಕಂಚಿನ ಪದಕ ಗೆದ್ದುಕೊಂಡಿತು. ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ 28–22 ರಿಂದ ಇರಾನ್ ತಂಡವನ್ನು ಸೋಲಿಸಿತು.

ಪ್ರೊ ಕಬಡ್ಡಿ: ಪಿಂಕ್ ಪ್ಯಾಂಥರ್ಸ್‌ಗೆ ಭರ್ಜರಿ ಗೆಲುವು

ಪುಣೆ (ಪಿಟಿಐ): ನಾಯಕ ಅರ್ಜುನ್ ದೇಶ್ವಾಲ್ (13 ಅಂಕ) ಅವರ ಸೂಪರ್ ಟೆನ್ ಸಾಹಸದಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ, ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಮಂಗಳವಾರ ಗುಜರಾತ್ ಜೈಂಟ್ಸ್ ತಂಡವನ್ನು 42–29 ಅಂಕಗಳಿಂದ ಸೋಲಿಸಿತು.

ಬಾಲೇವಾಡಿ ಕ್ರೀಡಾ ಕಾಂಪ್ಲೆಕ್ಸ್‌ನ ಬ್ಯಾಡ್ಮಿಂಟನ್ ಹಾಲ್‌ನಲ್ಲಿ ನಡೆಯುತ್ತಿರುವ ಲೀಗ್‌ನ ಈ ಪಂದ್ಯದಲ್ಲಿ ಜೈಪುರದ ತಂಡ ಪಂದ್ಯದುದ್ದಕ್ಕೂ ಮೇಲುಗೈ ಸಾಧಿಸಿದ್ದು ವಿರಾಮದ ವೇಳೆ 27–14ರಲ್ಲಿ 13 ಪಾಯಿಂಟ್‌ಗಳ ಮುನ್ನಡೆ ಕಟ್ಟಿಕೊಂಡಿತ್ತು.

ನಾಯಕನಿಗೆ ಬೆಂಬಲ ನೀಡಿದ ನೀರಜ್ ನರ್ವಾಲ್ ಎಂಟು ಪಾಯಿಂಟ್ಸ್ ಗಳಿಸಿದರು.

ಜೈಂಟ್ಸ್ ತಂಡದ ಪರ ರೇಡರ್‌ಗಳಾದ ಗುಮನ್ ಸಿಂಗ್ ಮತ್ತು ರಾಕೇಶ್ ತಲಾ 9 ಪಾಯಿಂಟ್ಸ್ ಕಲೆಹಾಕಿದರು.



ಪಾಯಿಂಟ್ ಗಳಿಸುವ ಯತ್ನದಲ್ಲಿ ಗುಜರಾತ್ ಜೈಂಟ್ಸ್ ತಂಡದ ರೇಡರ್

ಬುಲ್ಸ್‌ಗೆ 14ನೇ ಸೋಲು: ತಳದಲ್ಲಿರುವ ಎರಡು ತಂಡಗಳ ನಡುವೆ ನಡೆದ ದಿನದ ಎರಡನೇ ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ ತಂಡ ಸಾಂಘಿಕ ಆಟವಾಡಿ 44–29 ರಿಂದ ಕೊನೆಯ ಸ್ಥಾನದಲ್ಲಿರುವ ಬೆಂಗಳೂರು ಬುಲ್ಸ್ ತಂಡವನ್ನು ಸೋಲಿಸಿತು. ವಿರಾಮದ ವೇಳೆ ವಿಜೇತ ತಂಡದವರು 22–12 ರಲ್ಲಿ ಮುಂದಿದ್ದರು.

ವಾರಿಯರ್ಸ್ ಪರ ವಿಶ್ವಾಸ್ ಎಸ್ 14 ಅಂಕಗಳನ್ನು ಗಳಿಸಿದರೆ, ಪ್ರಣಯ್ ರಾಣೆ 9 ಅಂಕಗಳನ್ನು ಗಳಿಸಿದರು. ನಿತೇಶ್ ಕುಮಾರ್ ಮತ್ತು ಫಜಲ್ ಅತ್ರಾಚಲಿ ತಲಾ ಏಳು ಪಾಯಿಂಟ್ಸ್ ತಂದುಕೊಟ್ಟರು.

ಬುಲ್ಸ್ ಪರ ಪ್ರದೀಪ್ ನರ್ವಾಲ್ ಮಾತ್ರ ಏಕಾಂಗಿಯಾಗಿ ಹೋರಾಟ ತೋರಿ 14 ಪಾಯಿಂಟ್ಸ್ ಗಳಿಸಿದರು. ಇದು ಬುಲ್ಸ್ ತಂಡಕ್ಕೆ 17 ಪಂದ್ಯಗಳಲ್ಲಿ 14ನೇ ಸೋಲು ಆಗಿದೆ.

ಅದು ಉಳಿದ ಮೂರರಲ್ಲಿ ಎರಡು ಗೆದ್ದು ಒಂದು ಟೈ ಮಾಡಿಕೊಂಡಿದೆ. 11ನೇ ಸ್ಥಾನದಲ್ಲಿದ್ದ ವಾರಿಯರ್ಸ್ ಈ ಗೆಲುವಿನೊಡನೆ ಒಂದು ಸ್ಥಾನ ಮೇಲೇರಿತು. ಇದು 17 ಪಂದ್ಯಗಳಲ್ಲಿ ಐದನೇ ಗೆಲುವು.

ಸೆಮಿ ಪ್ರವೇಶದ ಛಲದಲ್ಲಿ ಶ್ರೇಯಸ್ ಬಳಗ

ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್: ಕ್ವಾರ್ಟರ್ ಫೈನಲ್ಸ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪಂದ್ಯಗಳು ಬುಧವಾರ ಬೆಂಗಳೂರಿನಲ್ಲಿ ನಡೆಯಲಿವೆ.

ಆಲೂರಿನಲ್ಲಿರುವ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಎರಡು ಮತ್ತು ಇನ್ನುಳಿದ ಎರಡು ಪಂದ್ಯಗಳು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿವೆ.

ಭಾರತ ತಂಡದ ಆಟಗಾರರಾದ ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ಅಜಿಂಕ್ಯ ರಹಾನೆ, ಶಿವಂ ದುಬೆ, ಶಾರ್ದೂಲ್ ಠಾಕೂರ್ ಅವರು ಇರುವ ಮುಂಬೈ ತಂಡವು ಆಲೂರಿನ ಕ್ರೀಡಾಂಗಣದಲ್ಲಿ ವಿದರ್ಭ ತಂಡವನ್ನು ಎದುರಿಸಲಿದೆ.

ಶ್ರೇಯಸ್ ಅಯ್ಯರ್

ವಿದರ್ಭ ತಂಡದಲ್ಲಿ ಕರ್ನಾಟಕದ ಕರುಣ್ ನಾಯರ್ ಅವರು ಆಡುತ್ತಿದ್ದಾರೆ. ವೇಗಿ ಉಮೇಶ್ ಯಾದವ್, ಜಿತೇಶ್ ಶರ್ಮಾ, ಶುಭಂ ದುಬೆ ಅವರು ತಂಡದಲ್ಲಿರುವ ಪ್ರಮುಖರಾಗಿದ್ದಾರೆ.

ಇದೇ ಕ್ರೀಡಾಂಗಣದಲ್ಲಿ ನಡೆಯುವ ಇನ್ನೊಂದು ಪಂದ್ಯದಲ್ಲಿ ಮಧ್ಯಪ್ರದೇಶ ಹಾಗೂ ಸೌರಾಷ್ಟ್ರ ಮುಖಾಮುಖಿಯಾಗಲಿವೆ. ಕಳೆದ ಬಾರಿಯ ರನ್ನರ್ಸ್ ಅಪ್ ಬರೋಡಾ ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬಂಗಾಳ ಎದುರು ಆಡಲಿದೆ.ಇನ್ನೊಂದು ಪಂದ್ಯದಲ್ಲಿ ದೆಹಲಿ ಮತ್ತು ಉತ್ತರಪ್ರದೇಶ ತಂಡಗಳು ಸೆಣಸಲಿವೆ.

ಇಂದಿನ ಕ್ವಾರ್ಟರ್ ಫೈನಲ್ ಪಂದ್ಯಗಳು
ಮಧ್ಯಪ್ರದೇಶ–ಸೌರಾಷ್ಟ್ರ (ಬೆಳಿಗ್ಗೆ 9, ಆಲೂರು ಕ್ರೀಡಾಂಗಣ)
ಮುಂಬೈ–ವಿದರ್ಭ (ಮಧ್ಯಾಹ್ನ 1.30, ಆಲೂರು ಕ್ರೀಡಾಂಗಣ)
ಬರೋಡಾ–ಬಂಗಾಳ (ಬೆಳಿಗ್ಗೆ 11, ಚಿನ್ನಸ್ವಾಮಿ ಕ್ರೀಡಾಂಗಣ)
ದೆಹಲಿ–ಉತ್ತರ ಪ್ರದೇಶ (ಸಂಜೆ 4.30, ಚಿನ್ನಸ್ವಾಮಿ ಕ್ರೀಡಾಂಗಣ)
ನೇರಪ್ರಸಾರ: ಬಿಸಿಸಿಐ.ಟಿವಿ